ಗುರುವಾರ, ಸೆಪ್ಟೆಂಬರ್ 30, 2021 | ಬೆಂಗಳೂರು | ₹ 6.00 | ಸಂಪುಟ 74 | ಸಂಚಿಕೆ 272 | ಪುಟ 14

www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸ್ಪರ್ಧಾ ವಾಣಿ

12ನೇ ತರಗತಿಯ ನಂತರ ಸರ್ಕಾರಿ ಹುದ್ದೆಗಳನ್ನು ಸೇರಬಯಸುವವರು ಯಾವ ಯಾವ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಹಾಜರಾಗಬಹುದು?



ಆಳ-ಅಗಲ

ಚಿತ್ರೋದ್ಯಮ: ಕೋವಿಡ್ ನೆರಳಲ್ಲಿ ನಿರೀಕ್ಷೆಯ ಚುಂಗು

ಕೆಟಿಪಿಪಿ ಕಾಯ್ದೆ ಉಲ್ಲಂಘನೆ 5

ಸಿಧು ಹಟ, ಪಕ್ಷ ಸರ್ವೋಚ್ಚ ಎಂದ ಚನ್ನಿ 6

ಸೆನ್ಸೆಕ್ಸ್ ▼	ನಿಫ್ಟಿ ▼	₹/$ ▼
59,413	17,711	74.14

ಪೂರ್ವ ಪ್ರಾಥಮಿಕದಿಂದ 8ನೇ ತರಗತಿವರೆಗೆ ಬಿಸಿಯೂಟ

‘ಪಿಎಂ ಪೋಷಣ್’ಗೆ ಅಸ್ತು

ನವದೆಹಲಿ (ಪಿಟಿಐ): ದೇಶದಾದ್ಯಂತ ಸರ್ಕಾರಿ ಹಾಗೂ ಅನುದಾನಿತ ಪೂರ್ವ ಪ್ರಾಥಮಿಕ, ಪ್ರಾಥಮಿಕ ಶಾಲೆಗಳ ಮಕ್ಕಳಿಗೆ ಬಿಸಿಯೂಟ ಒದಗಿಸುವ ‘ಪ್ರಧಾನ ಮಂತ್ರಿ ಪೋಷಣ್ ಶಕ್ತಿ ನಿರ್ಮಾಣ್’ ಯೋಜನೆಗೆ ಕೇಂದ್ರ ಸಚಿವ ಸಂಪುಟ ಬುಧವಾರ ಅನುಮೋದನೆ ನೀಡಿದೆ.

ಪ್ರಧಾನಿ ನರೇಂದ್ರ ಮೋದಿ ಅಧ್ಯಕ್ಷತೆಯಲ್ಲಿ ನಡೆದ ಆರ್ಥಿಕ ವ್ಯವಹಾರಗಳ ಮೇಲಿನ ಸಂಪುಟ ಸಮಿತಿ (ಸಿಸಿಇಎ) ಸಭೆಯಲ್ಲಿ ಈ ಅನುಮೋದನೆ ನೀಡಲಾಯಿತು.

‘ಪ್ರಸ್ತುತ ಜಾರಿಯಲ್ಲಿರುವ ಮಧ್ಯಾಹ್ನದ ಬಿಸಿಯೂಟ ಯೋಜನೆಯನ್ನು ‘ಪ್ರಧಾನ ಮಂತ್ರಿ ಪೋಷಣ್ ಶಕ್ತಿ ನಿರ್ಮಾಣ್’ ಯೋಜನೆಯಲ್ಲಿ ವಿಲೀನಗೊಳಿಸಲಾಗುವುದು. 2021–22ರಿಂದ 2025–26 ವರೆಗೆ ಇದು ಜಾರಿಯಲ್ಲಿರುವುದು’ ಎಂದು ಕೇಂದ್ರ ಮಾಹಿತಿ ಮತ್ತು ಪ್ರಸಾರ ಸಚಿವ ಅನುರಾಗ್ ಠಾಕೂರ್ ಅವರು ಸಭೆ ಬಳಿಕ ತಿಳಿಸಿದರು.

‘ದೇಶದ 11.20 ಲಕ್ಷ ಶಾಲೆಗಳ 11.80 ಕೋಟಿ ಮಕ್ಕಳಿಗೆ ಈ ಯೋಜನೆಯ ಲಾಭ ಸಿಗಲಿದೆ’ ಎಂದು ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ತಿಳಿಸಿದರು.

ಮಕ್ಕಳಿಗೆ ಪೌಷ್ಟಿಕ ಆಹಾರ ನೀಡುವ ಕಾರ್ಯದಲ್ಲಿ ಸಮುದಾಯದ ಪಾಲ್ಗೊಳ್ಳುವಿಕೆಯನ್ನು ಉತ್ತೇಜಿಸುವುದು ಸೇರಿದಂತೆ ಹಲವಾರು ಹೊಸ ಅಂಶಗಳನ್ನು ಯೋಜನೆ ಒಳಗೊಂಡಿದೆ. ಹಬ್ಬ ಹಾಗೂ ವಿಶೇಷ ದಿನಗಳಂದು ಜನರು ಶಾಲಾ ಮಕ್ಕಳಿಗೆ ವೈವಿಧ್ಯವಾದ ಊಟ ನೀಡಲು ಅವಕಾಶ ನೀಡುವ ವಿಶೇಷ ಕಾರ್ಯಕ್ರಮವನ್ನು ಈ ಯೋಜನೆ ಒಳಗೊಂಡಿದೆ.

ಶಾಲೆಗಳಲ್ಲಿರುವ ಕೈತೋಟಗಳಲ್ಲಿ ಬೆಳೆದ ತರಕಾರಿ, ಬೆಳೆಗಳನ್ನು ಬಳಸಿ ಮಧ್ಯಾಹ್ನದ ಬಿಸಿಯೂಟ ತಯಾರಿಸುವುದು, ಸಾಂಪ್ರದಾಯಿಕ ಅಡುಗೆ ಸ್ಪರ್ಧೆ ಆಯೋಜನೆಯನ್ನು ಪ್ರೋತ್ಸಾಹಿಸಲಾಗುತ್ತದೆ. ಯೋಜನೆ ಅನುಷ್ಠಾನದಲ್ಲಿ ಕೃಷಿಕರ ಸಂಘಟನೆಗಳು (ಎಫ್‌ಪಿಒ) ಹಾಗೂ ಮಹಿಳಾ ಸ್ವಸಹಾಯ ಸಂಘಗಳನ್ನು ಸಹ ತೊಡಗಿಸಲಾಗುತ್ತದೆ.

‘ಒಟ್ಟು ₹ 1,30,794.90 ಕೋಟಿ ವೆಚ್ಚದಲ್ಲಿ ಈ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತದೆ’ ಎಂದು ಕೇಂದ್ರ ಸರ್ಕಾರದ ಪ್ರಕಟಣೆ ತಿಳಿಸಿದೆ.

‘ಈ ಯೋಜನೆಗೆ 5 ವರ್ಷಗಳಲ್ಲಿ ಕೇಂದ್ರವು ₹54,061.73 ಕೋಟಿ ನೀಡಲಿದ್ದರೆ, ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳು ₹31,733.17 ಕೋಟಿ ಭರಿಸಬೇಕು. ಆಹಾರ ಧಾನ್ಯಗಳಿಗೆ ತಗಲುವ ಹೆಚ್ಚುವರಿ ವೆಚ್ಚ ₹45,000 ಕೋಟಿಯನ್ನು ಕೇಂದ್ರವೇ ಭರಿಸಲಿದೆ’ ಎಂದೂ ಕೇಂದ್ರ ತಿಳಿಸಿದೆ.

ಮುಖ್ಯಾಂಶಗಳು

- ಸರ್ಕಾರಿ, ಅನುದಾನಿತ ಶಾಲೆಗಳ ಬಿಸಿಯೂಟಕ್ಕೆ ಹೊಸ ರೂಪ
- ಪೌಷ್ಟಿಕ ಆಹಾರ ಪೂರೈಕೆಯಲ್ಲಿ ಸಮುದಾಯ ಪಾಲ್ಗೊಳ್ಳುವಿಕೆಗೆ ಉತ್ತೇಜನ

ಅಂಕಿ-ಅಂಶಗಳು

11.20 ಲಕ್ಷ ಶಾಲೆಗಳಲ್ಲಿ ಯೋಜನೆ

11.80 ಕೋಟಿ ಮಕ್ಕಳಿಗೆ ಬಿಸಿಯೂಟ

‘ಬಿ.ಇ ಶುಲ್ಕ ಹೆಚ್ಚಳವಿಲ್ಲ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ಕಾರಣದಿಂದ ಪ್ರಸಕ್ತ ಶೈಕ್ಷಣಿಕ ವರ್ಷದಲ್ಲಿ ಖಾಸಗಿ ಎಂಜಿನಿಯರಿಂಗ್ ಕಾಲೇಜುಗಳ ಶುಲ್ಕದಲ್ಲಿ ಯಥಾಸ್ಥಿತಿ ಕಾಯ್ದುಕೊಳ್ಳಲು ಸರ್ಕಾರ ನಿರ್ಧರಿಸಿದ್ದು, ಶೇ 30 ರಷ್ಟು ಶುಲ್ಕ ಹೆಚ್ಚಿಸಬೇಕೆಂಬ ಆಡಳಿತ ಮಂಡಳಿಗಳ ಬೇಡಿಕೆಗೂ ಒಪ್ಪಿಗೆ ನೀಡಿಲ್ಲ.

ಅಲ್ಲದೆ, ವಿಶ್ವವಿದ್ಯಾಲಯ ಶುಲ್ಕ, ಇತರ ಶುಲ್ಕ, ಬೋಧನಾ ಶುಲ್ಕ ಸೇರಿದಂತೆ ಕೆಲವು ಬಗೆಯ ಶುಲ್ಕಗಳನ್ನು ಆಯಾ ಕಾಲೇಜುಗಳಲ್ಲಿ ಪಾವತಿಸಲು ಅವಕಾಶ ಇತ್ತು. ಇನ್ನು ಮುಂದೆ ಎಲ್ಲ ಶುಲ್ಕಗಳನ್ನೂ ಕರ್ನಾಟಕ ಪರೀಕ್ಷಾ ಪ್ರಾಧಿಕಾರದ (ಕೆಇಎ) ಮೂಲಕವೇ ಪಾವತಿಸಬೇಕು. ಕಾಲೇಜುಗಳಲ್ಲಿ ಹಾಸ್ಟೆಲ್ ಮತ್ತು ಸಾರಿಗೆ ವ್ಯವಸ್ಥೆಯ ಶುಲ್ಕವನ್ನು ಮಾತ್ರ ನೇರವಾಗಿ ಪಡೆಯಲು ಅವಕಾಶ ನೀಡಲಾಗಿದೆ.

ಕರ್ನಾಟಕ ಅನುದಾನರಹಿತ ಖಾಸಗಿ ಎಂಜಿನಿಯರಿಂಗ್ ಕಾಲೇಜುಗಳ ಸಂಘ (ಕುಪೇಕಾ) ಹಾಗೂ ಕರ್ನಾಟಕ ಧಾರ್ಮಿಕ ಮತ್ತು ಭಾಷಾ ಅಲ್ಪಸಂಖ್ಯಾತರ ವೃತ್ತಿಪರ ಕಾಲೇಜುಗಳ ಸಂಘದ (ಕೆಆರ್‌ಎಲ್‌ಎಂಪಿಸಿಎ) ಪ್ರತಿನಿಧಿಗಳ ಜತೆ ಬುಧವಾರ ಸಭೆ ನಡೆಸಿದ ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್. ಅಶ್ವತ್ಥ ನಾರಾಯಣ, ಬಳಿಕ ಸುದ್ದಿಗಾರರಿಗೆ ಈ ವಿಷಯ ತಿಳಿಸಿದರು.

5ನೇ ಪುಟ ನೋಡಿ

ಕಾಂಗ್ರೆಸ್: ಮತ್ತೆ ಜಿ–23 ದನಿ

ಸಿಡಬ್ಲ್ಯುಸಿ ಸಭೆ ಕರೆಯಲು ಆಜಾದ್, ಕಪಿಲ್ ಸಿಬಲ್ ಆಗ್ರಹ

ಪ್ರಜಾವಾಣಿ ವಾರ್ತೆ

ನವದೆಹಲಿ: ಪಂಜಾಬ್ ಕಾಂಗ್ರೆಸ್‌ನಲ್ಲಿನ ಬಿಕ್ಕಟ್ಟಿನ ಬೆನ್ನಲ್ಲೇ ಪಕ್ಷದ ಹಿರಿಯ ಮುಖಂಡರಾದ ಗುಲಾಂ ನಬಿ ಆಜಾದ್ ಮತ್ತು ಕಪಿಲ್ ಸಿಬಲ್ ಅವರು ಪಕ್ಷದ ನಾಯಕತ್ವವನ್ನು ಪ್ರಶ್ನಿಸಿದ್ದಾರೆ. ಸಮಸ್ಯೆಗಳನ್ನು ಬಗೆಹರಿಸಲು ತಕ್ಷಣವೇ ಪಕ್ಷದ ಕಾರ್ಯಕಾರಿ ಸಮಿತಿ ಸಭೆಯನ್ನು ಕರೆಯಬೇಕು ಎಂದು ಆಜಾದ್ ಆಗ್ರಹಿಸಿದ್ದಾರೆ.

ಆಜಾದ್ ಅವರು ಈ ಸಂಬಂಧ ಪಕ್ಷದ ಮಧ್ಯಂತರ ಅಧ್ಯಕ್ಷೆ ಸೋನಿಯಾ ಗಾಂಧಿ ಅವರಿಗೆ ಪತ್ರ ಬರೆದಿದ್ದಾರೆ. ಪಕ್ಷದ ಈಗಿನ ಸ್ಥಿತಿಗೆ ಕಾರಣಗಳೇನು ಎಂಬುದನ್ನು ಬಹಿರಂಗವಾಗಿ ಚರ್ಚಿಸಲು ಸಾಧ್ಯವಿಲ್ಲ. ಸಿಡಬ್ಲ್ಯುಸಿ ಸಭೆ ಕರೆದರೆ, ಅಲ್ಲಿ ಈ ಪ್ರಶ್ನೆಗಳನ್ನು ಎತ್ತಬಹುದು ಎಂದು ಕಪಿಲ್ ಸಿಬಲ್ ಹೇಳಿದ್ದಾರೆ.


‘ಪಕ್ಷದ ನಾಯಕರ ಆಪ್ತರೆನಿಸಿಕೊಂಡವರು ಈಗ ಪಕ್ಷ ತೊರೆದಿದ್ದಾರೆ. ನಾಯಕರಿಂದ ಅಂತರ ಕಾಯ್ದುಕೊಂಡಿದ್ದವರು ಇನ್ನೂ ಪಕ್ಷದಲ್ಲೇ ಇದ್ದೇವೆ. ಪಕ್ಷ ಮತ್ತು ಪಕ್ಷದ ಸಿದ್ಧಾಂತಗಳನ್ನು ತೊರೆದು, ಬೇರೆಲ್ಲೋ ಹೋಗುವವರು ನಾವಲ್ಲ. ಸುಶ್ಮಿತಾ ದೇವ್, ಜಿತಿನ್ ಪ್ರಸಾದ, ಜ್ಯೋತಿರಾದಿತ್ಯ ಸಿಂಧಿಯಾ ಅವರೆಲ್ಲಾ ಪಕ್ಷವನ್ನು ತೊರೆದದ್ದು ಏಕೆ ಎಂಬ ಪ್ರಶ್ನೆಯನ್ನು ಎತ್ತಬೇಕಿದೆ’ ಎಂದು ಸಿಬಲ್ ಹೇಳಿದ್ದಾರೆ.

> **ನಾವು 23 ಮಂದಿ ಜಿ ಹುಜೂರ್ ಎನ್ನುವವರಲ್ಲ. ನಮ್ಮ ನಡೆ ಸ್ಪಷ್ಟವಾಗಿದೆ. ನಮ್ಮ ಬೇಡಿಕೆಗಳನ್ನು ಮತ್ತೆ ಮತ್ತೆ ಮುಂದಿಡುತ್ತಲೇ ಇರುತ್ತೇವೆ**
> **ಕಪಿಲ್ ಸಿಬಲ್,** ಕಾಂಗ್ರೆಸ್ ನಾಯಕ

> **ಪಕ್ಷ ಕುಸಿಯುತ್ತಿರುವುದನ್ನು ನೋಡಲು ಸಾಧ್ಯವಾಗುತ್ತಿಲ್ಲ. ನಾವು ಪಕ್ಷದಲ್ಲಿನ ಪ್ರತಿಯೊಬ್ಬರ ದೃಷ್ಟಿಕೋನವನ್ನೂ ಪರಿಶೀಲಿಸಬೇಕಿದೆ**
> **ಗುಲಾಂ ನಬಿ ಆಜಾದ್**
> ಕಾಂಗ್ರೆಸ್ ನಾಯಕ

6ನೇ ಪುಟ ನೋಡಿ

ಪಂಡಿತ್ ವೆಂಕಟೇಶಕುಮಾರಗೆ ‘ರಾಜಗುರು’ ಪ್ರಶಸ್ತಿ



ಧಾರವಾಡ: ಪಂ.ಬಸವರಾಜ ರಾಜಗುರು ರಾಷ್ಟ್ರೀಯ ಸ್ಮಾರಕ ಟ್ರಸ್ಟ್ ನೀಡುವ ‘ರಾಜಗುರು’ ಪ್ರಶಸ್ತಿಯು ಹಿಂದೂಸ್ತಾನಿ ಗಾಯಕ ಪಂಡಿತ್ ಎಂ.ವೆಂಕಟೇಶಕುಮಾರ ಅವರಿಗೆ ಲಭಿಸಿದೆ.

ರಾಜಗುರು ಅವರ 101ನೇ ಜನ್ಮದಿನ ಸಂದರ್ಭದಲ್ಲಿ ನೀಡಲಾಗುತ್ತಿರುವ ಈ ಪ್ರಶಸ್ತಿಯು ₹1 ಲಕ್ಷ ನಗದು ಹಾಗೂ ಸ್ಮರಣಿಕೆಯನ್ನು ಒಳಗೊಂಡಿದೆ. ಇವರೊಂದಿಗೆ ಯುವ ಪ್ರಶಸ್ತಿಯು ವಿಜಯಪುರದ ಯುವ ಗಾಯಕಿ ಕೃತಿಕಾ ಜಂಗಿನಮಠ ಹಾಗೂ ಕೋಲ್ಕತ್ತಾದ ತಬಲಾ ವಾದಕಿ ರಿಂಪಾ ಶಿವಾ ಅವರಿಗೆ ಲಭಿಸಿದೆ. ಈ ಪ್ರಶಸ್ತಿಯು ತಲಾ ₹25 ಸಾವಿರ ನಗದು ಹಾಗೂ ಸ್ಮರಣಿಕೆ ಒಳಗೊಂಡಿದೆ.

ಪ್ರಶಸ್ತಿ ಪ್ರದಾನ ಸಮಾರಂಭವು ಅ.4ರಂದು ನಗರದ ಸೃಜನಾ ರಂಗಮಂದಿರದಲ್ಲಿ ನಡೆಯಲಿದೆ ಎಂದು ಟ್ರಸ್ಟ್ ಪ್ರಕಟಣೆ ತಿಳಿಸಿದೆ.

ಕುತೂಹಲ ಕೆರಳಿಸಿದ ಅಮರಿಂದರ್ ನಡೆ

ನವದೆಹಲಿ (ಪಿಟಿಐ): ಪಂಜಾಬ್ ಮಾಜಿ ಮುಖ್ಯಮಂತ್ರಿ ಕ್ಯಾಪ್ಟನ್ ಅಮರಿಂದರ್ ಸಿಂಗ್ ಅವರು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರನ್ನು ಬುಧವಾರ ದೆಹಲಿಯಲ್ಲಿ ಭೇಟಿಯಾದರು. ಅಮರಿಂದರ್ ಅವರು ಬಿಜೆಪಿ ಸೇರಲಿದ್ದಾರೆಯೇ ಅಥವಾ ಸ್ವಂತ ಪಕ್ಷ ಕಟ್ಟಿ ಬಿಜೆಪಿಗೆ ನೆರವಾಗಲಿದ್ದಾರೆಯೇ ಎಂಬ ಚರ್ಚೆ ಇದರಿಂದಾಗಿ ಗರಿಗೆದರಿದೆ. ಶಾ ಜತೆಗಿನ ಭೇಟಿಯ ಬಳಿಕ ಅಮರಿಂದರ್ ಅವರು ಅಜ್ಞಾತ ಸ್ಥಳಕ್ಕೆ ತೆರಳಿದ್ದಾರೆ ಎಂದು ತಿಳಿದು ಬಂದಿದೆ.

ವಿವರ ಪುಟ 06

ಒಳ ಪುಟಗಳು



ಚಿನಕುರಳಿ

ಪ್ರಕಾಶ್ ಶೆಟ್ಟಿ



ಡಾ.ಶಿವರಾಮ ಕಾರಂತ ಬಡಾವಣೆ ನಿರ್ಮಾಣ

ಭೂಸ್ವಾಧೀನ: ವರದಿಗೆ ಸೂಚನೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಡಾ.ಶಿವರಾಮ ಕಾರಂತ ಬಡಾವಣೆಗಾಗಿ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲು ಕೈಗೊಂಡ ಕ್ರಮಗಳ ಕುರಿತು 2 ವಾರಗಳಲ್ಲಿ ವರದಿ ಸಲ್ಲಿಸುವಂತೆ ರಾಜ್ಯ ಸರ್ಕಾರ ಮತ್ತು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ)ಗಳಿಗೆ ಸುಪ್ರೀಂ ಕೋರ್ಟ್ ನಿರ್ದೇಶನ ನೀಡಿದೆ.

ಬಡಾವಣೆಯನ್ನು ರೂಪಿಸಲು ಗುರುತಿಸಲಾದ ಭೂಮಿಯ ಕೆಲವು ಭಾಗದ ಸ್ವಾಧೀನಕ್ಕೆ ಅಧಿಸೂಚನೆ ಹೊರಡಿಸಲಾಗಿಲ್ಲ ಎಂದು 2021ರ ಆಗಸ್ಟ್ 30ರಂದು ಬಿಡಿಎ ಸಲ್ಲಿಸಿರುವ ಯೋಜನೆಯ ವರದಿಯಲ್ಲಿ ತಿಳಿಸಲಾಗಿದೆ. ಇದರಿಂದಾಗಿ ಬಡಾವಣೆಯ ಅಭಿವೃದ್ಧಿ ಹಾಗೂ ಸಂಪರ್ಕಕ್ಕೆ ಅಡ್ಡಿ ಉಂಟಾಗಲಿದೆ ಎಂದು ಬುಧವಾರ ಪ್ರಕರಣದ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಸ್. ಅಬ್ದುಲ್ ನಜೀರ್ ನೇತೃತ್ವದ ಪೀಠ ಹೇಳಿದೆ.

ಮುಂದಿನ ವಿಚಾರಣೆ ವೇಳೆ ವೈಯಕ್ತಿಕವಾಗಿ ಹಾಜರಿರುವಂತೆ ಬಿಡಿಎ ಆಯುಕ್ತರಿಗೆ ಸೂಚಿಸಿದ ಪೀಠವು, ಬಡಾವಣೆಯ ಸ್ವಾಧೀನ ಪ್ರಕ್ರಿಯೆಯಿಂದ ಹೊರತಾದ ಭೂಮಿಯ ಸಂಪೂರ್ಣ ವಿವರವನ್ನು 2 ವಾರಗಳಲ್ಲಿ ಸಲ್ಲಿಸಬೇಕು,



ಈ ಭೂಮಿಯ ಸ್ವಾಧೀನ ಪ್ರಕ್ರಿಯೆಗಾಗಿ ರಾಜ್ಯ ಸರ್ಕಾರಕ್ಕೆ ಪ್ರಸ್ತಾವನೆ ಕಳುಹಿಸಬೇಕು ಎಂದು ತಾಕೀತು ಮಾಡಿದೆ.

ಸ್ವಾಧೀನ ಪ್ರಕ್ರಿಯೆಯಿಂದ ಹೊರತಾಗಿರುವ ಜಮೀನಿನ ವಿವರವನ್ನು ಬಿಡಿಎದಿಂದ ಸ್ವೀಕರಿಸಿದ 4 ವಾರಗಳೊಳಗೆ, ಭೂಸ್ವಾಧೀನ ಪ್ರಕ್ರಿಯೆಗಾಗಿ ಪ್ರಾಥಮಿಕ ಅಧಿಸೂಚನೆ ಹೊರಡಿಸುವಂತೆಯೂ ಇದೇ ವೇಳೆ ರಾಜ್ಯ ಸರ್ಕಾರಕ್ಕೆ ನಿರ್ದೇಶನ ನೀಡಿದ ಪೀಠ, ಪೆರಿಫೆರಲ್ ವರ್ತುಲ ರಸ್ತೆಯ ಸಂಪೂರ್ಣ ಮಾಹಿತಿ ಸಲ್ಲಿಸುವಂತೆ ಬಿಡಿಎ ಆಯುಕ್ತರಿಗೆ ಹೇಳಿದೆ.

ಇದೇ ಜಮೀನಿನ ಸ್ವಲ್ಪ ಭಾಗವನ್ನು ಪೆರಿಫೆರಲ್ ವರ್ತುಲ ರಸ್ತೆ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಳ್ಳಲು ರಾಜ್ಯ ಸರ್ಕಾರವು 2013ರ ಸೆಪ್ಟೆಂಬರ್ 20ರಂದು ಅಧಿಸೂಚನೆ ಹೊರಡಿಸಿದ್ದರೂ, ಇದುವರೆಗೆ ಅಭಿವೃದ್ಧಿ ಕಾರ್ಯ ಆರಂಭವಾಗಿಲ್ಲ. ಕಾಮಗಾರಿ ನಡೆಯದ್ದರಿಂದ ಸಮರ್ಪಕ ಪರಿಹಾರ ಪಡೆಯುವುದಕ್ಕೆ ಅಡ್ಡಿಯಾಗಿದೆ ಎಂದು ದೂರಿ ಜಮೀನಿನ ಮಾಲೀಕರು ಸಲ್ಲಿಸಿರುವ ಮೇಲ್ಮನವಿಯ ಕುರಿತೂ ಪೀಠ ಗಮನಹರಿಸಿತು.

ಪೆರಿಫೆರಲ್ ವರ್ತುಲ ರಸ್ತೆಯ ನಿರ್ಮಾಣವು ಭಾರಿ ವೆಚ್ಚದ ಯೋಜನೆ ಆಗಿರುವುದರಿಂದ, ಪ್ರಾಧಿಕಾರದ ಮಂಡಳಿ ಸಭೆಯಲ್ಲಿ ಚರ್ಚೆ ನಡೆಸಿ ನಿರ್ಧಾರ ಕೈಗೊಳ್ಳಬೇಕು. ಈ ಸಂಬಂಧ ನಿಯಮಿತವಾಗಿ ಮಂಡಳಿ ಸಭೆಗಳನ್ನು ನಡೆಸಬೇಕು ಎಂದೂ ನ್ಯಾಯಮೂರ್ತಿ ಸಂಜೀವ್ ಖನ್ನಾ ಅವರನ್ನೊಳಗೊಂಡ ನ್ಯಾಯಪೀಠ ಬಿಡಿಎಗೆ ಸೂಚಿಸಿದೆ.

ಅಧಿಕಾರಿ ವರ್ಗಾವಣೆ ಕ್ರಮಕ್ಕೆ ಆಕ್ರೋಶ


ನವದೆಹಲಿ: ಡಾ.ಶಿವರಾಮ ಕಾರಂತ ಬಡಾವಣೆಯ ಕಾಮಗಾರಿ ಪೂರ್ಣಗೊಳ್ಳುವವರೆಗೆ ಬಿಡಿಎ ಅಧಿಕಾರಿಗಳನ್ನು ವರ್ಗಾವಣೆ ಮಾಡದಂತೆ ನೀಡಲಾದ ನಿರ್ದೇಶನ ಪಾಲಿಸದಿರುವುದಕ್ಕೆ ನ್ಯಾಯಪೀಠವು ಸರ್ಕಾರದ ವಿರುದ್ಧ ತೀವ್ರ ಕಿಡಿಕಾರಿತು.

'ಸುಪ್ರೀಂ ಕೋರ್ಟ್ ಮೇಲ್ವಿಚಾರಣೆಯಲ್ಲೇ ಬಡಾವಣೆಯ ಅಭಿವೃದ್ಧಿ ಕೆಲಸ- ಕಾರ್ಯಗಳು ನಡೆಯಲಿ. ಕಾಮಗಾರಿ ಪೂರ್ಣಗೊಳ್ಳುವವರೆಗೆ ಸಂಬಂಧಿಸಿದ ಅಧಿಕಾರಿಗಳನ್ನು ವರ್ಗಾವಣೆ ಮಾಡಕೂಡದು' ಎಂದು ನ್ಯಾಯಪೀಠವು ಆಗಸ್ಟ್ 19ರಂದು ಆದೇಶಿಸಿತ್ತು.

ಆದರೆ, ಅದನ್ನು ಧಿಕ್ಕರಿಸಿದ್ದ ರಾಜ್ಯ ಸರ್ಕಾರ, ಬಿಡಿಎ ಎಂಜಿನಿಯರಿಂಗ್ ಸದಸ್ಯ ಡಾ.ಎಚ್.ಆರ್. ಶಾಂತರಾಜಣ್ಣ ಅವರನ್ನು ಗೋರೂರಿನ ಹೇಮಾವತಿ ಯೋಜನಾ ವಲಯದ ಮುಖ್ಯ ಎಂಜಿನಿಯರ್ ಹುದ್ದೆಗೆ ವರ್ಗಾವಣೆ ಮಾಡಿ ಆಗಸ್ಟ್ 30ರಂದು ಆದೇಶಿಸಿತ್ತು.

ಈ ಕ್ರಮದ ಕುರಿತು ವಿಚಾರಣೆ ವೇಳೆ ನ್ಯಾಯಪೀಠವು ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದರಿಂದ ಮಧ್ಯ ಪ್ರವೇಶಿಸಿದ ಅಡ್ವೋಕೇಟ್ ಜನರಲ್ ಪ್ರಭುಲಿಂಗ ನಾವದಗಿ, ಸರ್ಕಾರದಿಂದ ಆಗಿರುವ ತಪ್ಪನ್ನು ಸರಿಪಡಿಸುವುದಾಗಿ ಹೇಳಿದರಲ್ಲದೆ, ಅಧಿಕಾರಿಯನ್ನು ಒಂದು ದಿನದೊಳಗೆ ಮೂಲ ಸ್ಥಾನಕ್ಕೆ ಮರು ವರ್ಗಾವಣೆ ಮಾಡಲಾಗುವುದು ಎಂದು ನ್ಯಾಯಾಪೀಠಕ್ಕೆ ಭರವಸೆ ನೀಡಿದರು.

'ಕಾಳಿಂಗ ನಾವಡ ಪ್ರಶಸ್ತಿ'ಗೆ ಶಂಕರ ಭಾಗವತ ಆಯ್ಕೆ



ಬೆಂಗಳೂರು: ಕಲಾಕದಂಬ ಆರ್ಟ್ ಸೆಂಟರ್ ನೀಡುವ 'ಕಾಳಿಂಗ ನಾವಡ ಪ್ರಶಸ್ತಿ'ಗೆ ಮದ್ದಳೆ ಕಲಾವಿದ ಶಂಕರ ಭಾಗವತ ಯಲ್ಲಾಪುರ ಆಯ್ಕೆಯಾಗಿದ್ದಾರೆ.

ಅಂಬರೀಷ್ ಭಟ್, ದೇವರಾಜ ಕರಬ, ವಿಶ್ವನಾಥ ಉರಾಳ, ಮಮತಾ ಆರ್.ಕೆ., ಮುರಳೀಧರ ನಾವಡ ಅವರ ಉಪಸ್ಥಿತಿಯಲ್ಲಿ ಪ್ರಶಸ್ತಿಗೆ ಸಾಧಕರನ್ನು ಆಯ್ಕೆ ಮಾಡಲಾಗಿದೆ. ಸಂಸ್ಥೆಯು 11 ವರ್ಷಗಳಿಂದ ಯಕ್ಷಲೋಕದ ಹಿಮ್ಮೇಳ ಕಲಾವಿದರೊಬ್ಬರಿಗೆ ಈ ಪ್ರಶಸ್ತಿಯನ್ನು ನೀಡುತ್ತಾ ಬಂದಿದೆ. ಪ್ರಶಸ್ತಿಯು ₹ 10 ಸಾವಿರ ನಗದು ಹಾಗೂ ಬೆಳ್ಳಿತಟ್ಟೆಯನ್ನು ಒಳಗೊಂಡಿದೆ.

ಅ.31ರಂದು ಬೆಂಗಳೂರಿನ ಗವಿಪುರದಲ್ಲಿರುವ ಉದಯಭಾನು ಕಲಾಮಂದಿರದಲ್ಲಿ ಪ್ರಶಸ್ತಿ ಪ್ರದಾನ ಸಮಾರಂಭ ಹಮ್ಮಿಕೊಳ್ಳಲಾಗಿದೆ ಎಂದು ಸಂಸ್ಥೆಯ ನಿರ್ದೇಶಕ ರಾಧಾಕೃಷ್ಣ ಉರಾಳ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

'ದೇಶಕ್ಕೆ ಬಿಜೆಪಿ ದೊಡ್ಡ ಗಂಡಾಂತರ'

ಪ್ರಜಾವಾಣಿ ವಾರ್ತೆ

ಯಲಹಂಕ: ಪ್ರಸ್ತುತ ಭಾರತಕ್ಕೆ ಅಪಾಯಕಾರಿಯಾಗಿ ಪರಿಣಮಿಸಿರುವ ಬಿಜೆಪಿಯನ್ನು ಬೇರುಸಮೇತ ಕಿತ್ತೊಗೆಯುವ ಮೂಲಕ ದೇಶವನ್ನು ದೊಡ್ಡ ಗಂಡಾಂತರದಿಂದ ಪಾರುಮಾಡಬೇಕಾದ ಅನಿವಾರ್ಯತೆ ಎದುರಾಗಿದೆ ಎಂದು ಶಾಸಕ ಕೃಷ್ಣಬೈರೇಗೌಡ ಹೇಳಿದರು.

ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯ ಯಲಹಂಕ ವಿಧಾನಸಭಾ ಕ್ಷೇತ್ರದ ವತಿಯಿಂದ ಸೋಲದೇವನಹಳ್ಳಿಯಲ್ಲಿ ಆಯೋಜಿಸಿದ್ದ 'ಗಾಂಧಿ ನಡಿಗೆ' ಕಾರ್ಯಾಗಾರದಲ್ಲಿ ಮಾತನಾಡಿ, 'ಈ ದೇಶಕ್ಕೆ ಮಾರಕವಾಗಿರುವ ಬಿಜೆಪಿಯಿಂದ ದೇಶವನ್ನು ರಕ್ಷಿಸಿಕೊಳ್ಳಬೇಕಾದರೆ ಕಾಂಗ್ರೆಸ್ ಪಕ್ಷವನ್ನು ಅಧಿಕಾರಕ್ಕೆ ತರುವುದೊಂದೇ ಪರಿಹಾರ' ಎಂದರು.

ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್. ರಾಮಲಿಂಗಾರೆಡ್ಡಿ ಮಾತನಾಡಿ, 'ಸುಳ್ಳುಗಳನ್ನು ಹೇಳುವ ಮೂಲಕ ಬಿಜೆಪಿ ಅಧಿಕಾರ ಹಿಡಿಯಿತು. ಪ್ರಧಾನಿ ನರೇಂದ್ರ ಮೋದಿಯವರು ತಮ್ಮ ಹೆಸರು ಹೇಳುವುದನ್ನು ಬಿಟ್ಟರೆ, ಅವರ ಉಳಿದ ಮಾತುಗಳೆಲ್ಲವೂ ಸುಳ್ಳೇ ಆಗಿರುತ್ತವೆ' ಎಂದರು.



ಗಾಂಧಿನಡಿಗೆ ಕಾರ್ಯಾಗಾರವನ್ನು ಎಂ.ವೀರಪ್ಪ ಮೊಯಿಲಿ ಉದ್ಘಾಟಿಸಿದರು. ಕೃಷ್ಣಬೈರೇಗೌಡ, ಸಲೀಂ ಅಹಮದ್, ಡಾ.ಎಲ್.ಹನುಮಂತಯ್ಯ, ರಾಜಕುಮಾರ್, ಗೋಪಾಲಕೃಷ್ಣ, ಕೇಶವ ರಾಜಣ್ಣ, ವೈ.ಆರ್.ಶ್ರೀಧರ್ ಇತರರು ಇದ್ದರು

ಕಾಂಗ್ರೆಸ್ ಮುಖಂಡ ಎಂ.ವೀರಪ್ಪ ಮೊಯಿಲಿ ಮಾತನಾಡಿ, 'ರೈತರಿಗೆ ಮಾರಕವಾಗಿರುವ ಕೃಷಿ ಕಾಯಿದೆಗಳನ್ನು ರದ್ದುಗೊಳಿಸಬೇಕೆಂದು ದೆಹಲಿಯಲ್ಲಿ 10 ತಿಂಗಳಿಂದ ರೈತರು ಪ್ರತಿಭಟನೆ ನಡೆಸುತ್ತಿದ್ದು, ಸುಮಾರು 250 ಮಂದಿ ಸತ್ತಿದ್ದಾರೆ. ಆದರೆ, ಪ್ರಧಾನಿ ನರೇಂದ್ರ ಮೋದಿಯವರು ಅವರನ್ನು ಕರೆಸಿ ಮಾತನಾಡದೆ ಅಥವಾ ಬೇಡಿಕೆಗಳಿಗೆ ಮನ್ನಣೆ ನೀಡದೆ ಸರ್ವಾಧಿಕಾರಿ ಧೋರಣೆ ಅನುಸರಿಸುತ್ತಿದ್ದಾರೆ. ಇಡೀ ರೈತಸಮುದಾಯವನ್ನೇ ದೊಡ್ಡ ಕಂಪನಿಗಳಿಗೆ ಮಾರಾಟಮಾಡುವ ಹುನ್ನಾರ ನಡೆಸಿದ್ದಾರೆ' ಎಂದು ಅವರು ದೂರಿದರು.

ಕೆಪಿಸಿಸಿ ಕಾರ್ಯಾಧ್ಯಕ್ಷ ಸಲೀಂ ಅಹಮ್ಮದ್, ರಾಜ್ಯಸಭಾ ಸದಸ್ಯ ಎಲ್. ಹನುಮಂತಯ್ಯ, ವಿಧಾನಪರಿಷತ್ ಸದಸ್ಯ ಎಂ.ನಾರಾಯಣಸ್ವಾಮಿ, ಕೆಪಿಸಿಸಿ ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ಪುಷ್ಪಾ ಅಮರನಾಥ್, ಕಾಂಗ್ರೆಸ್ ಮುಖಂಡರಾದ ಗೋಪಾಲಕೃಷ್ಣ, ಕೇಶವ ರಾಜಣ್ಣ, ರಾಜಕುಮಾರ್ ಮತ್ತಿತರರು ಇದ್ದರು.

ಹೆಡ್ ಕಾನ್‌ಸ್ಟೆಬಲ್‌ಗೆ 4 ವರ್ಷ ಜೈಲು

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಬೆಂಗಳೂರು: ಪ್ರಕರಣವೊಂದರಲ್ಲಿ ಬಂಧಿತರಾಗಿದ್ದ ಆರೋಪಿಯ ದ್ವಿಚಕ್ರ ವಾಹನ ಬಿಡುಗಡೆಗೆ ₹ 10,000 ಲಂಚ ಪಡೆದ ಆರೋಪದ ಪ್ರಕರಣದಲ್ಲಿ ನಗರದ ಬಾಗಲಗುಂಟೆ ಪೊಲೀಸ್ ಠಾಣೆಯ ಹೆಡ್ ಕಾನ್‌ಸ್ಟೆಬಲ್ ಮಂಜಣ್ಣ ಎಂ.ಕೆ. ದೋಷಿ ಎಂದು ಸಾರಿರುವ ಭ್ರಷ್ಟಾಚಾರ ನಿಯಂತ್ರಣ ಕಾಯ್ದೆ ಪ್ರಕರಣಗಳ ವಿಶೇಷ ನ್ಯಾಯಾಲಯ, ಅಪರಾಧಿಗೆ ನಾಲ್ಕು ವರ್ಷ ಜೈಲು ಶಿಕ್ಷೆ ಮತ್ತು ₹ 1 ಲಕ್ಷ ದಂಡ ವಿಧಿಸಿದೆ.

2017ರ ಜುಲೈ ತಿಂಗಳಿನಲ್ಲಿ ಬಾಗಲಗುಂಟೆ ಠಾಣೆಯಲ್ಲಿ ದಾಖಲಾಗಿದ್ದ ಪ್ರಕರಣವೊಂದರಲ್ಲಿ ವ್ಯಕ್ತಿಯೊಬ್ಬರನ್ನು ಬಂಧಿಸಲಾಗಿತ್ತು. ಅವರ ಬೈಕ್ ಅನ್ನೂ ಪೊಲೀಸರು ವಶಪಡಿಸಿಕೊಂಡಿದ್ದರು. ನ್ಯಾಯಾಲಯದಿಂದ ಜಾಮೀನು ಪಡೆದು ಬಿಡುಗಡೆಯಾಗಿದ್ದ ಆ ವ್ಯಕ್ತಿ, ತಮ್ಮ ಬೈಕ್ ಮರಳಿಸುವಂತೆ ಪೊಲೀಸರನ್ನು ಸಂಪರ್ಕಿಸಿದ್ದರು.

ಬೈಕ್ ನೀಡಲು ₹ 20,000 ಲಂಚ ಕೊಡುವಂತೆ ಹೆಡ್ ಕಾನ್‌ಸ್ಟೆಬಲ್ ಮಂಜಣ್ಣ ಬೇಡಿಕೆ ಇಟ್ಟಿದ್ದರು. ಈ ಕುರಿತು ಬೈಕ್ ಮಾಲೀಕ ಎಸಿಬಿ ಬೆಂಗಳೂರು ನಗರ ಘಟಕಕ್ಕೆ ದೂರು ನೀಡಿದ್ದರು. 2017ರ ಜುಲೈ 15ರಂದು ದೂರುದಾರರಿಂದ ₹ 10,000 ಲಂಚ ಪಡೆಯುತ್ತಿದ್ದ ಹೆಡ್ ಕಾನ್‌ಸ್ಟೆಬಲ್ ಬಂಧಿಸಿದ್ದ ಎಸಿಬಿ ಅಧಿಕಾರಿಗಳು, 2018ರಲ್ಲಿ ನ್ಯಾಯಾಲಯಕ್ಕೆ ಆರೋಪಪಟ್ಟಿ ಸಲ್ಲಿಸಿದ್ದರು.

ಮೂರು ವರ್ಷಗಳಿಂದಲೂ ನ್ಯಾಯಾಲಯದಲ್ಲಿ ವಿಚಾರಣೆ ನಡೆಯುತ್ತಿತ್ತು. ಬುಧವಾರ ಪ್ರಕರಣದ ವಿಚಾರಣೆಯನ್ನು ಪೂರ್ಣಗೊಳಿಸಿದ ವಿಶೇಷ ನ್ಯಾಯಾಲಯದ ನ್ಯಾಯಾಧೀಶರು, 'ಮಂಜಣ್ಣ ದೋಷಿ' ಎಂದು ಸಾರಿದರು. ಅಪರಾಧಿಗೆ ನಾಲ್ಕು ವರ್ಷಗಳ ಜೈಲು ಶಿಕ್ಷೆ ಮತ್ತು ₹ 1 ಲಕ್ಷ ದಂಡ ವಿಧಿಸಿ ಆದೇಶ ಹೊರಡಿಸಿದರು.

ಮಧುಕರ್ ಅಂಗೂರ್ ವಿರುದ್ಧದ ಪ್ರಕರಣ

₹19.43 ಕೋಟಿ ಆಸ್ತಿ ಮುಟ್ಟುಗೋಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಲಯನ್ಸ್ ವಿಶ್ವವಿದ್ಯಾಲಯದ ಮಾಜಿ ಕುಲಪತಿ ಮಧುಕರ್ ಅಂಗೂರ್ ವಿರುದ್ಧ ಅಕ್ರಮ ಹಣ ವರ್ಗಾವಣೆ ಆರೋಪದಡಿ ದಾಖಲಿಸಿರುವ ಪ್ರಕರಣದಲ್ಲಿ ಆರೋಪಿಗಳಿಗೆ ಸೇರಿದ ₹ 19.43 ಕೋಟಿ ಮೌಲ್ಯದ ಆಸ್ತಿಗಳನ್ನು ಜಾರಿ ನಿರ್ದೇಶನಾಲಯ (ಇ.ಡಿ) ಮುಟ್ಟುಗೋಲು ಹಾಕಿಕೊಂಡಿದೆ.

ಮಧುಕರ್ ಜಿ. ಅಂಗೂರ್, ಪ್ರಿಯಾಂಕಾ ಎಂ. ಅಂಗೂರ್, ರವಿಕುಮಾರ್ ಕೆ., ಶೃತಿ ಮತ್ತು ಪಾವನಾ ದಿಬ್ಬೂರು ಎಂಬುವವರ ಹೆಸರಿನಲ್ಲಿರುವ ಒಂದು ಬ್ಯಾಂಕ್ ಖಾತೆ, ಆರು ಫ್ಲ್ಯಾಟ್‌ಗಳು ಮತ್ತು ಎರಡು ಜಮೀನುಗಳನ್ನು 'ಅಕ್ರಮ ಹಣ ವರ್ಗಾವಣೆ ತಡೆ ಕಾಯ್ದೆ-2002'ರ ಅಡಿಯಲ್ಲಿ ಮುಟ್ಟುಗೋಲು ಹಾಕಿಕೊಳ್ಳಲಾಗಿದೆ ಎಂದು ಇ.ಡಿ ತಿಳಿಸಿದೆ.

ವಂಚನೆ ಆರೋಪದಡಿ ಮಧುಕರ್ ಅಂಗೂರ್ ಮತ್ತು ಇತರರ ವಿರುದ್ಧ ಬೆಂಗಳೂರಿನ ವಿವಿಧ ಪೊಲೀಸ್ ಠಾಣೆಗಳಲ್ಲಿ ಎಫ್‌ಐಆರ್‌ಗಳನ್ನು ದಾಖಲಿಸಲಾಗಿತ್ತು. ಅವುಗಳ ಆಧಾರದಲ್ಲಿ ಅಕ್ರಮ ಹಣ ವರ್ಗಾವಣೆ ತಡೆ ಕಾಯ್ದೆಯಡಿ ಪ್ರಕರಣ ದಾಖಲಿಸಿದ್ದ ಜಾರಿ ನಿರ್ದೇಶನಾಲಯ ತನಿಖೆ ಆರಂಭಿಸಿತ್ತು.

'ಮಧುಕರ್ ಅಂಗೂರ್ ಮತ್ತು ಇತರರು ಶ್ರೀವಾರಿ ಎಜುಕೇಷನಲ್ ಸರ್ವೀಸಸ್ ಎಂಬ ಸಂಸ್ಥೆಯ ಹೆಸರಿನಲ್ಲಿ ಖಾಸಗಿಯಾಗಿ ತೆರೆದಿದ್ದ ಬ್ಯಾಂಕ್ ಖಾತೆಗೆ ಶುಲ್ಕದ ಹಣ ಪಾವತಿಸುವಂತೆ ವಿದ್ಯಾರ್ಥಿಗಳ ಪೋಷಕರಿಗೆ ಸೂಚಿಸುತ್ತಿದ್ದರು. 2016 ಮತ್ತು 2017ರಲ್ಲಿ ಈ ರೀತಿ 4,500 ವಿದ್ಯಾರ್ಥಿಗಳಿಂದ ₹ 107 ಕೋಟಿ ಸಂಗ್ರಹಿಸಿದ್ದರು. ನಂತರ ಈ ಮೊತ್ತವನ್ನು ತಮ್ಮ ವೈಯಕ್ತಿಕ ಖಾತೆಗಳಿಗೆ ವರ್ಗಾವಣೆ ಮಾಡಿಕೊಂಡಿರುವುದು ತನಿಖೆಯಲ್ಲಿ ಪತ್ತೆಯಾಗಿದೆ' ಎಂದು ಇ.ಡಿ ತಿಳಿಸಿದೆ.

ಶ್ರೀವಾರಿ ಎಜುಕೇಷನಲ್ ಸರ್ವೀಸಸ್ ಬ್ಯಾಂಕ್ ಖಾತೆಯಿಂದ ಮಧುಕರ್ ಅಂಗೂರ್, ಪ್ರಿಯಾಂಕಾ ಅಂಗೂರ್, ರವಿಕುಮಾರ್ ಮತ್ತು ಶ್ರುತಿ ಅವರ ಖಾತೆಗಳಿಗೆ ಬೃಹತ್ ಪ್ರಮಾಣದ ಹಣ ವರ್ಗಾವಣೆ ಮಾಡಲಾಗಿದೆ. ಅಲ್ಲಿಂದ ಹಣ ಪಡೆದಿರುವ ಆರೋಪಿಗಳು ತಮ್ಮ ವೈಯಕ್ತಿಕ ಉದ್ದೇಶಗಳಿಗೆ ಬಳಸಿರುವುದು ಕಂಡುಬಂದಿದೆ ಎಂದು ತನಿಖಾ ಸಂಸ್ಥೆ ಹೇಳಿದೆ.

25 ಎಎಲ್‌ಎಚ್ ಹೆಲಿಕಾಪ್ಟರ್ ಖರೀದಿಗೆ ಒಪ್ಪಿಗೆ

ಪ್ರಜಾವಾಣಿ ವಾರ್ತೆ

ನವದೆಹಲಿ: ₹3,850 ಕೋಟಿ ವೆಚ್ಚದಲ್ಲಿ ಎಚ್‌ಎಎಲ್‌ನಿಂದ 25 ಎಎಲ್‌ಎಚ್ ಮಾರ್ಕ್-3 ಹೆಲಿಕಾಪ್ಟರ್‌ಗಳ ಖರೀದಿಗೆ ಕೇಂದ್ರ ಸರ್ಕಾರ ಬುಧವಾರ ಒಪ್ಪಿಗೆ ನೀಡಿದೆ.

ಹೆಲಿಕಾಪ್ಟರ್‌ಗಳು, ಶಸ್ತ್ರಾಸ್ತ್ರಗಳು, ರಾಕೆಟ್‌ಗಳು ಹಾಗೂ ಮಿಲಿಟರಿ ಹಾರ್ಡ್‌ವೇರ್ ಸೇರಿದಂತೆ ಒಟ್ಟು ₹13,165 ಕೋಟಿ ವೆಚ್ಚದಲ್ಲಿ ರಕ್ಷಣಾ ಸಾಮಗ್ರಿಗಳ ಖರೀದಿಗೆ ರಕ್ಷಣಾ ಖರೀದಿ ಮಂಡಳಿ (ಡಿಎಸಿ) ಸಭೆಯಲ್ಲಿ ಅನುಮೋದನೆ ನೀಡಲಾಯಿತು. ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅಧ್ಯಕ್ಷತೆಯಲ್ಲಿ ಡಿಎಸಿ ಸಭೆ ನಡೆಯಿತು.

ಮಹಾರಾಣಿ ಕ್ಲಸ್ಟರ್ ವಿಶ್ವವಿದ್ಯಾಲಯ

ಮಾಧ್ಯಮಗಳಿಗೆ ಹೇಳಿಕೆ ನೀಡದಂತೆ ನಿರ್ಬಂಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಹಾರಾಣಿ ಕ್ಲಸ್ಟರ್ ವಿಶ್ವವಿದ್ಯಾಲಯಕ್ಕೆ ಸಂಬಂಧಿಸಿದಂತೆ ಮುದ್ರಣ ಹಾಗೂ ವಿದ್ಯುನ್ಮಾನ ಮಾಧ್ಯಮಗಳಿಗೆ ಯಾವುದೇ ರೀತಿಯ ಹೇಳಿಕೆಗಳನ್ನು ನೀಡದಂತೆ ಸೂಚಿಸಲಾಗಿದೆ.

ಮಹಾರಾಣಿ ಕ್ಲಸ್ಟರ್ ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಪ್ರಾಂಶುಪಾಲರು, ಶಾಲೆಗಳ ನಿರ್ದೇಶಕರು, ಬೋಧಕ, ಬೋಧಕೇತರ ಸಿಬ್ಬಂದಿಗಳಿಗೆ ಈ ಸೂಚನೆ ನೀಡಲಾಗಿದೆ. ಸರ್ಕಾರ ಹೊರಡಿಸಿರುವ ಆದೇಶದಂತೆ ಈ ನಿರ್ದೇಶನ ನೀಡಲಾಗಿದೆ ಎಂದು ಕುಲಸಚಿವರು ಸುತ್ತೋಲೆಯಲ್ಲಿ ತಿಳಿಸಿದ್ದಾರೆ.

ವಿಶ್ವವಿದ್ಯಾಲಯ ವ್ಯಾಪ್ತಿಯ ಸಿಬ್ಬಂದಿ ಈ ಸೂಚನೆಯನ್ನು ಉಲ್ಲಂಘಿಸಿದರೆ ಅಂತವರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

2019ರ ಬಳಿಕ 10 ಕಟ್ಟಡ ನೆಲಸಮ: ಬಿಬಿಎಂಪಿ ಆಯುಕ್ತ ಗೌರವ ಗುಪ್ತ

ಶಿಥಿಲಾವಸ್ಥೆ ಕಟ್ಟಡಗಳ ಮರು ಸಮೀಕ್ಷೆಗೆ 15 ದಿನಗಳ ಗಡುವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲಕ್ಕಸಂದ್ರದಲ್ಲಿ ಬಹು ಮಹಡಿ ಕಟ್ಟಡ ಕುಸಿತ ಹಾಗೂ ಬೆಂಗಳೂರು ಹಾಲು ಒಕ್ಕೂಟದ (ಬಮೂಲ್) ಆವರಣದಲ್ಲಿದ್ದ ಎರಡು ಅಂತಸ್ತುಗಳ ಕಟ್ಟಡ ಭಾಗಶಃ ಕುಸಿದ ಘಟನೆಗಳಿಂದ ಎಚ್ಚೆತ್ತುಕೊಂಡಿರುವ ಬಿಬಿಎಂಪಿಯು ಶಿಥಿಲಾವಸ್ಥೆಯಲ್ಲಿರುವ ಕಟ್ಟಡಗಳ ಸಮಗ್ರ ಸಮೀಕ್ಷೆ ನಡೆಸಲು ಮುಂದಾಗಿದೆ. ಸಮೀಕ್ಷೆಯನ್ನು 15 ದಿನಗಳಲ್ಲಿ ಪೂರ್ಣಗೊಳಿಸುವಂತೆ ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ ಗಡುವು ನಿಗದಿಪಡಿಸಿದ್ದಾರೆ.

ಬಿಬಿಎಂಪಿ ವ್ಯಾಪ್ತಿಯಲ್ಲಿ ಶಿಥಿಲಾವಸ್ಥೆ ಕಟ್ಟಡಗಳ ಬಗ್ಗೆ 2019ರಲ್ಲಿ ಸಮೀಕ್ಷೆ ನಡೆಸಲಾಗಿತ್ತು. 185 ಕಟ್ಟಡಗಳು ಶಿಥಿಲಾವಸ್ಥೆಯಲ್ಲಿರುವುದು ಸಮೀಕ್ಷೆಯಲ್ಲಿ ಕಂಡುಬಂದಿತ್ತು. ಅವುಗಳಲ್ಲಿ ಬೀಳುವ ಹಂತದಲ್ಲಿದ್ದ 10 ಕಟ್ಟಡಗಳನ್ನು ನೆಲ ಸಮ ಮಾಡಲಾಗಿತ್ತು. ಬಿಬಿಎಂಪಿ ವ್ಯಾಪ್ತಿಯಲ್ಲಿ ಶಿಥಿಲಾವಸ್ಥೆಯಲ್ಲಿರುವ ಕಟ್ಟಡಗಳ ಮರು ಸಮೀಕ್ಷೆ ನಡೆಸಲು ಯೋಜನಾ ವಿಭಾಗದ ವಿಶೇಷ ಆಯುಕ್ತರ ನೇತೃತ್ವದಲ್ಲಿ ಸಮಿತಿ ರಚಿಸುವಂತೆ ಮುಖ್ಯ ಆಯುಕ್ತರು ಸೂಚನೆ ನೀಡಿದ್ದಾರೆ.

ಬಿಬಿಎಂಪಿ ವ್ಯಾಪ್ತಿಯಲ್ಲಿ ಶಿಥಿಲಾವಸ್ಥೆಯಲ್ಲಿರುವ ಕಟ್ಟಡಗಳನ್ನು ಸಮೀಕ್ಷೆ ಕೈಗೊಳ್ಳುವ ಕುರಿತು ಮುಖ್ಯ ಆಯುಕ್ತರು ಎಲ್ಲ ವಲಯದ ಅಧಿಕಾರಿಗಳ ಜೊತೆ ವರ್ಚುವಲ್ ರೂಪದಲ್ಲಿ ಬುಧವಾರ ಸಭೆ ನಡೆಸಿದರು. 'ದುರ್ಬಲ ಕಟ್ಟಡಗಳ ಬಗ್ಗೆ ಸಮಿತಿಯು ಮರು ಸಮೀಕ್ಷೆ ನಡೆಸಬೇಕು. ಶಿಥಿಲಾವಸ್ಥೆಗೊಂಡಿರುವ ಕಟ್ಟಡಗಳು ಎಷ್ಟಿವೆ ಎಂಬ ಕುರಿತು 15 ದಿನಗಳಲ್ಲಿ ನಿಖರ ವರದಿ ನೀಡಬೇಕು' ಎಂದೂ ಎಲ್ಲ ವಲಯಗಳ ಜಂಟಿ ಆಯುಕ್ತರು ಹಾಗೂ ಮುಖ್ಯ ಎಂಜಿನಿಯರ್‌ಗಳಿಗೆ ನಿರ್ದೇಶನ ನೀಡಿದರು.

'ಬೀಳುವ ಸ್ಥಿತಿಯಲ್ಲಿರುವ ಕಟ್ಟಡಗಳ ವಿವರಗಳನ್ನು ಮರು ಪರಿಶೀಲಿಸಲು ಆಯಾ ವಲಯಗಳಲ್ಲಿ ಸಂಬಂಧಪಟ್ಟ ಎಂಜಿನಿಯರ್‌ಗಳು ಸ್ಥಳಕ್ಕೆ ಖುದ್ದಾಗಿ ಭೇಟಿ ನೀಡುವ ಮೂಲಕ ನಿಖರ ಮಾಹಿತಿ ನೀಡಬೇಕು. ಶಿಥಿಲಾವಸ್ಥೆಯಲ್ಲಿರುವ ಕಟ್ಟಡಗಳನ್ನು ನೆಲಸಮ ಮಾಡಲು 15 ದಿನಗಳಲ್ಲಿ ವಲಯವಾರು ಗುತ್ತಿಗೆದಾರರನ್ನು ನೇಮಿಸಬೇಕು' ಎಂದೂ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದರು.

2019ರ ಸಮೀಕ್ಷೆಯಲ್ಲಿ ಗುರುತಿಸಲಾದ ಶಿಥಿಲಾವಸ್ಥೆಯ ಕಟ್ಟಡಗಳಲ್ಲಿ ಎಷ್ಟಕ್ಕೆ ನೋಟಿಸ್ ನೀಡಲಾಗಿದೆ, ಎಷ್ಟು ಕಟ್ಟಡಗಳನ್ನು ನೆಲಸಮ ಮಾಡಲಾಗಿದೆ ಎಂಬುದರ ಬಗ್ಗೆ ಆಯುಕ್ತರು ಎಂಟೂ ವಲಯಗಳಿಂದ ಮಾಹಿತಿ ಪಡೆದರು. ಇನ್ನಷ್ಟೇ ನೆಲಸಮ ಮಾಡಬೇಕಿರುವ 175 ಶಿಥಿಲಾವಸ್ಥೆಯ ಕಟ್ಟಡಗಳ ಮಾಲೀಕರಿಗೆ ಶೀಘ್ರವೇ ನೋಟಿಸ್ ನೀಡಬೇಕು ಎಂದು ವಲಯ ಆಯುಕ್ತರು ಹಾಗೂ ಜಂಟಿ ಆಯುಕ್ತರಿಗೆ ಸೂಚಿಸಿದರು.

ಎಲ್ಲ ವಲಯ ಆಯುಕ್ತರು, ಜಂಟಿ ಆಯುಕ್ತರು, ಎಂಜಿನಿಯರಿಂಗ್ ವಿಭಾಗದ ಮುಖ್ಯಸ್ಥರು, ಎಲ್ಲ ವಲಯಗಳ ಮುಖ್ಯ ಎಂಜಿನಿಯರ್‌ಗಳು, ವಿಭಾಗೀಯ ಕಾರ್ಯಪಾಲಕ ಎಂಜಿನಿಯರ್‌ಗಳು ಉಪಸ್ಥಿತರಿದ್ದರು.

'ಪಟ್ಟಿಯಲ್ಲಿರಲಿಲ್ಲ ಕುಸಿದ ಕಟ್ಟಡಗಳು'

'ಕಳೆದ ಎರಡು ದಿನಗಳಲ್ಲಿ ಕುಸಿದ ಕಟ್ಟಡಗಳು 2019ರಲ್ಲಿ ನಡೆಸಲಾದ ಶಿಥಿಲ ಕಟ್ಟಡಗಳ ಪಟ್ಟಿಯಲ್ಲಿ ಇರಲಿಲ್ಲ. ಅನೇಕ ಶಿಥಿಲ ಕಟ್ಟಡಗಳು ಬಿಟ್ಟು ಹೋಗಿದ್ದವು. ಹಾಗಾಗಿ ಹಿಂದಿನ ಸಮೀಕ್ಷೆ ಬಹುಶಃ ಸಮರ್ಪಕವಾಗಿರಲಿಲ್ಲ. ಹಾಗಾಗಿ ತುರ್ತಾಗಿ ಹೊಸ ಸಮೀಕ್ಷೆ ನಡೆಸುವಂತೆ ಸೂಚನೆ ನೀಡಿದ್ದೇನೆ' ಎಂದು ಗೌರವ್ ಗುಪ್ತ ತಿಳಿಸಿದರು.

'ತಾಂತ್ರಿಕ ಸಂಸ್ಥೆಯನ್ನು ವಲಯಮಟ್ಟದಲ್ಲಿ ಗೊತ್ತುಪಡಿಸಿ ಅದರ ಮೂಲಕ ಶಿಥಿಲ ಕಟ್ಟಡಗಳ ಸಮೀಕ್ಷೆ ಕೈಗೊಳ್ಳಲಾಗುತ್ತದೆ. ಬಿಬಿಎಂಪಿಯ ಕಾರ್ಯಪಾಲಕ ಎಂಜಿನಿಯರ್‌ಗಳು ಹಾಗೂ ಸಹಾಯಕ ಕಾರ್ಯಪಾಲಕ ಎಂಜಿನಿಯರ್‌ಗಳು ಸಮೀಕ್ಷೆಯಲ್ಲಿ ಕೈಜೋಡಿಸಲಿದ್ದಾರೆ' ಎಂದರು.

'ಶಿಥಿಲಗೊಂಡ ಸರ್ಕಾರಿ ಕಟ್ಟಡಗಳೂ ಸಮೀಕ್ಷೆ ವ್ಯಾಪ್ತಿಗೆ'

'2019ರಲ್ಲಿ ನಡೆಸಲಾದ ಶಿಥಿಲಗೊಂಡ ಕಟ್ಟಡಗಳ ಸಮೀಕ್ಷೆಯಲ್ಲಿ ಸರ್ಕಾರಿ ಸಂಸ್ಥೆಗಳ ಕಟ್ಟಡಗಳನ್ನು ಪರಿಗಣಿಸಿರಲಿಲ್ಲ. ಸರ್ಕಾರಿ ಕಟ್ಟಡಗಳು ಕುಸಿತದ ಭೀತಿ ಎದುರಿಸುತ್ತಿರುವುದು ಮೇಲ್ನೋಟಕ್ಕೆ ಕಂಡುಬಂದರೆ ಈ ಬಾರಿ ಅವುಗಳ ಸಮೀಕ್ಷೆಯನ್ನೂ ಕೈಗೊಳ್ಳಲಾಗುವುದು' ಎಂದು ಮುಖ್ಯ ಆಯುಕ್ತರು ತಿಳಿಸಿದರು.

ಬಿಬಿಎಂಪಿ ವ್ಯಾಪ್ತಿಯ ಶಿಥಿಲ ಕಟ್ಟಡಗಳ ವಿವರ

(2019ರ ಸಮೀಕ್ಷೆ ಪ್ರಕಾರ)

ವಲಯ	ಶಿಥಿಲ ಕಟ್ಟಡಗಳು	ನೆಲಸಮ ಮಾಡಿರುವುದು
ದಕ್ಷಿಣ	33	8
ಪೂರ್ವ	46	0
ಪಶ್ಚಿಮ	34	0
ಮಹದೇವಪುರ	3	0
ಯಲಹಂಕ	60	0
ದಾಸರಹಳ್ಳಿ	8	01
ಆರ್‌.ಆರ್‌.ನಗರ	01	01
ಬೊಮ್ಮನಹಳ್ಳಿ	0	0



ಬಹುರೂಪಿ ಬುಕ್ ಹೌಸ್ ನಗರದಲ್ಲಿ ಆಯೋಜಿಸಿದ ಕಾರ್ಯಕ್ರಮದಲ್ಲಿ 'ಕತೆ ಡಬ್ಬಿ' ಕಥಾಸಂಕಲನವನ್ನು ರಿಷಿ ಹಾಗೂ ಜೋಗಿ ಬಿಡುಗಡೆ ಮಾಡಿದರು. ರಂಜನಿ ರಾಘವನ್ ಹಾಗೂ ಚಲನಚಿತ್ರ ನಿರ್ದೇಶಕ ಜಯತೀರ್ಥ ಇದ್ದರು
–ಪ್ರಜಾವಾಣಿ ಚಿತ್ರ

'₹ 5 ಲಕ್ಷ ಪರಿಹಾರ ಕೊಡಿ'

ಬೆಂಗಳೂರು: 'ವಿಕೋಪಗಳಿಂದ ಮೃತಪಟ್ಟ ಎಲ್ಲರಿಗೂ ಪರಿಹಾರ ನೀಡಬೇಕು ಎಂಬ ಪ್ರಕೃತಿ ವಿಕೋಪ ನಿಯಮಗಳನ್ನು ತಿರುಚಿರುವ ಸರ್ಕಾರದ ಕ್ರಮ ಸರಿಯಲ್ಲ' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

'ರಾಜ್ಯ ಸರ್ಕಾರವು ಷರತ್ತುರಹಿತವಾಗಿ ಪ್ರಕೃತಿ ವಿಕೋಪ ನಿಯಮಗಳಡಿ ನೀಡುವ ಪರಿಹಾರದಂತೆ, ಕೋವಿಡ್‌ನಿಂದ ಮೃತಪಟ್ಟ ಎಲ್ಲ ವಾರಸುದಾರರಿಗೂ ₹ 5 ಲಕ್ಷ ಪರಿಹಾರ ಕಡ್ಡಾಯವಾಗಿ ನೀಡಬೇಕು' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರನ್ನು ಸಿದ್ದರಾಮಯ್ಯ ಆಗ್ರಹಿಸಿದ್ದಾರೆ.

'ಕೋವಿಡ್ ಎರಡೂ ಅಲೆಗಳಿಂದ ರಾಜ್ಯದಲ್ಲಿ ಕನಿಷ್ಠ 4 ಲಕ್ಷ ಜನ ಮರಣ ಹೊಂದಿದ್ದಾರೆ. ಕೆಲವು ಕುಟುಂಬಗಳು ದುಡಿಯುವ ಸದಸ್ಯರನ್ನು ಕಳೆದುಕೊಂಡು ಅನಾಥವಾಗಿವೆ. ತಂದೆ–ತಾಯಿಯನ್ನು ಕಳೆದುಕೊಂಡ ಮಕ್ಕಳು ದಿಕ್ಕು ತೋಚದೆ ಕೂತಿದ್ದಾರೆ. ದುಡಿವ ಮಕ್ಕಳನ್ನು ಕಳೆದುಕೊಂಡ ವೃದ್ಧ ತಂದೆ ತಾಯಿ ತಬ್ಬಲಿಗಳಾಗಿದ್ದಾರೆ. ಅಸಹಾಯಕರು ಸಣ್ಣ ಮಟ್ಟದ ಬದುಕು ಕಟ್ಟಿಕೊಳ್ಳಬೇಕಾದರೆ ನೊಂದ ಜನರ ಸಂಕಷ್ಟಕ್ಕೆ ಸರ್ಕಾರ ಸ್ಪಂದಿಸಬೇಕು' ಎಂದಿದ್ದಾರೆ.

'ಕೋವಿಡ್‌ನಿಂದ ಮೃತಪಟ್ಟವರ ಕುಟುಂಬಗಳಿಗೆ ಪರಿಹಾರ ನೀಡುವುದರಿಂದ ತಪ್ಪಿಸಿಕೊಳ್ಳುವ ಉದ್ದೇಶದಿಂದಲೇ ಕೇಂದ್ರ, ರಾಜ್ಯ ಸರ್ಕಾರ ಪ್ರಕೃತಿ ವಿಕೋಪಕ್ಕೆ ಸಂಬಂಧಿಸಿದ ಸಾಮಾನ್ಯ ನಿಯಮಗಳನ್ನು ತಿರುಚಿ ನೊಂದ ಜನರಿಗೆ ದ್ರೋಹ ಎಸಗುತ್ತಿದೆ' ಎಂದೂ ಸಿದ್ದರಾಮಯ್ಯ ಹೇಳಿದ್ದಾರೆ.

ಪುಸ್ತಕದತ್ತ ಯುವಜನರನ್ನು ಸೆಳೆಯಬೇಕು: ನಟ ರಿಷಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಾಮಾಜಿಕ ಜಾಲ ತಾಣಗಳಿಂದಾಗಿ ಯುವಜನರು ಪುಸ್ತಕಗಳ ಓದುವಿಕೆಯಿಂದ ದೂರವಾಗುತ್ತಿದ್ದಾರೆ. ಈ ವರ್ಗವನ್ನು ಮತ್ತೆ ಓದುವಿಕೆಗೆ ಕರೆತರುವ ಪ್ರಯತ್ನ ಆಗಬೇಕು' ಎಂದು ಚಲನಚಿತ್ರ ನಟ ರಿಷಿ ತಿಳಿಸಿದರು.

ಬಹುರೂಪಿ ಬುಕ್ ಹೌಸ್ ನಗರದಲ್ಲಿ ಬುಧವಾರ ಆಯೋಜಿಸಿದ ಕಾರ್ಯಕ್ರಮದಲ್ಲಿ ಕಿರುತೆರೆ ಕಲಾವಿದೆ ರಂಜನಿ ರಾಘವನ್ ಅವರ 'ಕತೆ ಡಬ್ಬಿ' ಕಥಾಸಂಕಲನವನ್ನು ಬಿಡುಗಡೆಮಾಡಿ, ಅವರು ಮಾತನಾಡಿದರು.

'ಯುವಜನರ ಆಸಕ್ತಿ ಬದಲಾಗಿದ್ದು, ಪುಸ್ತಕಗಳನ್ನು ಓದುವವರ ಸಂಖ್ಯೆ ಕಡಿಮೆಯಾಗಿದೆ. 'ಸೆಲೆಬ್ರಿಟಿ'ಗಳು ಬರವಣಿಗೆಯಲ್ಲಿ ತೊಡಗಿಕೊಂಡಲ್ಲಿ ಅವರನ್ನು ಅನುಸರಿಸುವವರೂ ಪುಸ್ತಕಗಳನ್ನು ಓದಲು ತೊಡಗುವ ಸಾಧ್ಯತೆಗಳಿರುತ್ತವೆ. ಹಾಗಾಗಿ, ವಿವಿಧ ಕ್ಷೇತ್ರಗಳ ಗಣ್ಯರು ತಮ್ಮ ಅನುಭವಗಳನ್ನು ಅಕ್ಷರ ರೂಪದಲ್ಲಿ ಕಟ್ಟಿಕೊಡುವ ಪ್ರಯತ್ನ ಮಾಡಬೇಕು' ಎಂದರು.

ಲೇಖಕ ಜೋಗಿ, '20ರಿಂದ 30 ವರ್ಷದ ಅವಧಿಯು ನಮ್ಮನ್ನು ಪೂರ್ಣವಾಗಿ ಒಪ್ಪಿಸಿಕೊಂಡು, ಬೆಳವಣಿಗೆ ಹೊಂದುವ ಕಾಲವಾಗಿದೆ. ಯುವಜನರು ಯಾವುದೇ ಪುಸ್ತಕವನ್ನು ಟೀಕೆ, ವಿಮರ್ಶೆ ಮಾಡಲು ಹೋಗಬಾರದು. ಓದಿದ ಕೃತಿಯನ್ನು ನಮ್ಮದನ್ನಾಗಿ ಪಡೆದುಕೊಳ್ಳುತ್ತಾ ಹೋಗಬೇಕು' ಎಂದು ಹೇಳಿದರು.

ಲೇಖಕಿ ರಂಜನಿ ರಾಘವನ್, 'ಮುಂದಿನ ದಿನಗಳಲ್ಲಿ ಕಾದಂಬರಿ ಬರೆಯಬೇಕು ಅಂದುಕೊಂಡಿದ್ದೇನೆ' ಎಂದು ಹೇಳಿದರು.

ಆಗಾಗ ಸಾಬೂನಿನಿಂದ ಕೈ ತೊಳೆಯುತ್ತಿರಿ





ಬದಲಾದ ಜೀವನಶೈಲಿ, ವ್ಯಸನಗಳೇ ಪ್ರಮುಖ ಕಾರಣ • ನಗರದ ಹೃದ್ರೋಗ ತಜ್ಞರ ಕಳವಳ

‘ಯುವಜನರಲ್ಲಿ ಹೆಚ್ಚುತ್ತಿದೆ ಹೃದಯಾಘಾತ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಬದಲಾದ ಜೀವನಶೈಲಿ, ಧೂಮಪಾನದಂತಹ ವ್ಯಸನಗಳಿಂದ ಇತ್ತೀಚಿನ ವರ್ಷಗಳಲ್ಲಿ 45 ವರ್ಷದೊಳಗಿನವರೂ ಹೆಚ್ಚಾಗಿ ಹೃದಯಾಘಾತಕ್ಕೆ ಒಳಗಾಗುತ್ತಿದ್ದಾರೆ’ ಎಂದು ನಗರದ ಹೃದ್ರೋಗ ತಜ್ಞರು ಕಳವಳ ವ್ಯಕ್ತಪಡಿಸಿದರು.

ವಿಶ್ವ ಹೃದಯ ದಿನದ ಅಂಗವಾಗಿ ‘ಪ್ರಜಾವಾಣಿ’ ಮತ್ತು ‘ಡೆಕ್ಕನ್ ಹೆರಾಲ್ಡ್’ ಮಣಿಪಾಲ್ ಆಸ್ಪತ್ರೆಯ ಸಹಯೋಗದಲ್ಲಿ ಬುಧವಾರ ಆಯೋಜಿಸಿದ ವೆಬಿನಾರ್‌ನಲ್ಲಿ ‘ಯುವಕರು ಏಕೆ ಹೃದಯಾಘಾತಕ್ಕೆ ಒಳಗಾಗುತ್ತಾರೆ’ ಎಂಬ ವಿಷಯ ಕುರಿತು ವೈದ್ಯರು ಮಾತನಾಡಿದರು.

ವೈಟ್‌ಫೀಲ್ಡ್‌ನ ಮಣಿಪಾಲ್ ಆಸ್ಪತ್ರೆಯ ಡಾ. ಪ್ರದೀಪ್ ಹಾರನಹಳ್ಳಿ, ‘ಬದಲಾದ ಜೀವನ ಶೈಲಿಯಿಂದ ಹೃದಯದ ಆರೋಗ್ಯವು ಕ್ಷೀಣಿಸುತ್ತಿದೆ. ಹೃದಯದ ರಕ್ತನಾಳಗಳಲ್ಲಿ ರಕ್ತವು ಹೆಪ್ಪುಗಟ್ಟಿದಾಗ ಹೃದಯಾಘಾತ ಸಂಭವಿಸುತ್ತದೆ. ಅಧಿಕ ರಕ್ತದೊತ್ತಡ, ಮಧುಮೇಹ, ಸ್ಥೂಲಕಾಯ, ಧೂಮಪಾನ, ಮಾದಕ ವಸ್ತು ಸೇವನೆ, ಒತ್ತಡದ ಜೀವನ, ವಾಯು ಮಾಲಿನ್ಯ ಸೇರಿದಂತೆ ವಿವಿಧ ಕಾರಣಗಳಿಂದ ಹೃದಯಾಘಾತ ಸಂಭವಿಸುತ್ತಿದೆ. ಅನುವಂಶೀಯತೆಯಿಂದಲೂ ಕೆಲವರಿಗೆ ಹೃದಯಾಘಾತವಾಗುತ್ತದೆ’ ಎಂದರು.

ಧೂಮಪಾನ ಅಪಾಯ: ಹೆಬ್ಬಾಳದ ಕೊಲಂಬಿಯಾ ಏಷ್ಯಾ ಆಸ್ಪತ್ರೆಯ ಡಾ.ಎಸ್.ಸುನಿಲ್‌ಕುಮಾರ್, ‘ಹೃದಯಾಘಾತಕ್ಕೆ ಒಳಗಾಗುತ್ತಿರುವ ಯುವಜನರಲ್ಲಿ ಶೇ 60 ರಷ್ಟು ಮಂದಿ ಧೂಮಪಾನ ವ್ಯಸನಿಗಳಾಗಿರುತ್ತಾರೆ ಎನ್ನುವುದು ಸಂಶೋಧನೆಗಳಿಂದ ತಿಳಿದುಬಂದಿದೆ. ಹೃದಯ ಕಾಯಿಲೆಗಳ ಬಗ್ಗೆ ಜನ ಎಚ್ಚರದಿಂದ ಇರಬೇಕು. ಧೂಮಪಾನ, ಮಾದಕ ವಸ್ತುಗಳ ಸೇವನೆಯಿಂದಾಗಿ ಕೆಲವರಿಗೆ ಚಿಕ್ಕ ವಯಸ್ಸಿನಲ್ಲಿಯೇ ಹೃದಯಾಘಾತವಾಗುತ್ತಿದೆ’ ಎಂದು ಹೇಳಿದರು.

ನಿಯಮಿತ ಪರೀಕ್ಷೆ ಅಗತ್ಯ

‘ಎದೆಯ ಮಧ್ಯಭಾಗದಲ್ಲಿ ಅತಿಯಾದ ನೋವು, ಕೆಲವೊಮ್ಮೆ ಎದೆಯುರಿ, ಸುಸ್ತು, ಅತಿಯಾಗಿ ಬೆವರುವುದು, ಉಸಿರಾಟದ ತೊಂದರೆ, ತಲೆಸುತ್ತುವಿಕೆ, ಜ್ಞಾನ ತಪ್ಪುವುದು ಹೃದಯಾಘಾತದ ಪ್ರಮುಖ ಲಕ್ಷಣಗಳಾಗಿವೆ. ತಕ್ಷಣದಲ್ಲಿ ಚಿಕಿತ್ಸೆ ದೊರೆಯದೆ ಇದ್ದರೆ ಸಾವು ಸಂಭವಿಸುವ ಸಾಧ್ಯತೆ ಇರುತ್ತದೆ. ನಿಯಮಿತವಾಗಿ ರಕ್ತದಲ್ಲಿನ ಕೊಲೆಸ್ಟ್ರಾಲ್ ಮಟ್ಟ, ಇಸಿಜಿ, ಇಕೋ, ಟಿಎಂಟಿ ಪರೀಕ್ಷೆ ಮಾಡಿಸಿಕೊಳ್ಳಬೇಕು’ ಎಂದು ಯಶವಂತಪುರದ ಕೊಲಂಬಿಯಾ ಏಷ್ಯಾ ರೆಫರಲ್ ಆಸ್ಪತ್ರೆಯ ಡಾ. ಕಾರ್ತಿಕ್ ವಾಸುದೇವನ್ ಹೇಳಿದರು.

ವಿಕ್ರಂ ಆಸ್ಪತ್ರೆಯ ವೈದ್ಯ ಡಾ. ಸುನಿಲ್ ದ್ವಿವೇದಿ, ‘ಹೃದಯಾಘಾತವನ್ನು ಲಘುವಾಗಿ ಪರಿಗಣಿಸಬಾರದು. ಹೃದಯಾಘಾತದ ಲಕ್ಷಣಗಳು ಕಾಣಿಸಿಕೊಂಡಾಗ ಆಸ್ಪಿರಿನ್ ಮಾತ್ರೆ ನೀಡಬೇಕು. ಕೂಡಲೇ 108ಕ್ಕೆ ಕರೆ ಮಾಡಿ, ಚಿಕಿತ್ಸೆಗೆ ಹತ್ತಿರದ ಆಸ್ಪತ್ರೆಗೆ ಕರೆದೊಯ್ಯಬೇಕು. ಹೃದಯಾಘಾತ ಸಂಭವಿಸಿದ ಒಂದು ಗಂಟೆ ನಿರ್ಣಾಯಕವಾಗಿರುತ್ತದೆ. ಹೃದಯದ ಆರೋಗ್ಯ ಕಾಪಾಡಿಕೊಳ್ಳಲು ಉತ್ತಮವಾದ ಜೀವನ ವಿಧಾನವನ್ನು ಅಳವಡಿಸಿಕೊಳ್ಳಬೇಕು. ವ್ಯಾಯಾಮವನ್ನು ನಿಯಮಿತವಾಗಿ ಮಾಡಬೇಕು’ ಎಂದು ಸಲಹೆ ನೀಡಿದರು.

ಲೈವ್‌ಅಲ್ಟ್‌ಲೈಫ್‌ನ ಸ್ಥಾಪಕ ಹಾಗೂ ಮುಖ್ಯ ಕಾರ್ಯನಿರ್ವಹಣಾಧಿಕಾರಿ ವಿವೇಕ್ ಸುಬ್ರಹ್ಮಣ್ಯಂ ಕಾರ್ಯಕ್ರಮವನ್ನು ನಿರ್ವಹಣೆ ಮಾಡಿದರು.

ಆರೋಗ್ಯಕ್ಕಾಗಿ ಪ್ರತಿನಿತ್ಯ ನಡೆಯುವೆ: ಬೊಮ್ಮಾಯಿ ಪ್ರತಿಜ್ಞೆ

ಬೆಂಗಳೂರು: ‘ದೈಹಿಕ ಆರೋಗ್ಯವನ್ನು ಕಾಪಾಡಿಕೊಳ್ಳಲು ಪ್ರತಿನಿತ್ಯ ನಿಯಮಿತವಾಗಿ ನಡೆಯುವ ಅಭ್ಯಾಸವನ್ನು ರೂಢಿಸಿಕೊಳ್ಳುತ್ತೇನೆ’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಪ್ರತಿಜ್ಞೆ ಕೈಗೊಂಡರು.

ವಿಶ್ವ ಹೃದಯ ದಿನದ ಅಂಗವಾಗಿ ಆರೋಗ್ಯ ಇಲಾಖೆಯು ನಗರದಲ್ಲಿ ಬುಧವಾರ ಹಮ್ಮಿಕೊಂಡ ವಾಕಥಾನ್ ಉದ್ಘಾಟಿಸಿ, ಮಾತನಾಡಿದರು.

‘ಹೃದಯ ನಿರಂತರವಾಗಿ ಮಿಡಿಯುತ್ತಿರುತ್ತದೆ. ಇದರಿಂದಾಗಿ ಅದಕ್ಕೆ ಸಾಕಷ್ಟು ಒತ್ತಡಗಳಿರುತ್ತವೆ. ಈ ಒತ್ತಡ ಹೋಗಲಾಡಿಸಲು ದೈಹಿಕ ಹಾಗೂ ಮಾನಸಿಕ ಆರೋಗ್ಯವನ್ನು ಕಾಪಾಡಿಕೊಳ್ಳಬೇಕು. ಹೀಗಾಗಿ, ಪ್ರತಿಯೊಬ್ಬರೂ ಬೆಳಿಗ್ಗೆ ಕನಿಷ್ಠ ಅರ್ಧ ಗಂಟೆಯಾದರೂ ನಿಯಮಿತವಾಗಿ ನಡೆಯುವ ಅಭ್ಯಾಸ ರೂಢಿಸಿಕೊಳ್ಳಬೇಕು’ ಎಂದು ಮನವಿ ಮಾಡಿಕೊಂಡರು.

ಹೃದಯ ಆರೋಗ್ಯ ಜಾಗೃತಿ: ನಗರದ ವಿವಿಧ ಖಾಸಗಿ ಆಸ್ಪತ್ರೆಗಳು ಹಾಗೂ ವೈದ್ಯಕೀಯ ಸಂಸ್ಥೆಗಳು ಬುಧವಾರ ಜಾಗೃತಿ ಜಾಥಾ, ಉಚಿತ ಆರೋಗ್ಯ ತಪಾಸಣಾ ಶಿಬಿರ ಹಾಗೂ ವೆಬಿನಾರ್‌ಗಳನ್ನು ಆಯೋಜಿಸಿದ್ದವು.

ಹೃದಯ ಸಮಸ್ಯೆಗಳಿಂದ ಬಳಲುತ್ತಿರುವ ಮಕ್ಕಳಿಗೆ ನೆರವು ಕಲ್ಪಿಸಲು ಆಸ್ಟರ್ ಆರ್‌ವಿ ಆಸ್ಪತ್ರೆಯು ಹಮ್ಮಿಕೊಂಡಿದ್ದ ‘ಹೃದಯದಿಂದ ಹೃದಯಕ್ಕೆ’ ಅಭಿಯಾನಕ್ಕೆ ಚಾಲನೆ ನೀಡಲಾಯಿತು. ಈ ಅಭಿಯಾನದ ಭಾಗವಾಗಿ ನಡಿಗೆ ಸ್ಪರ್ಧೆ ಆಯೋಜಿಸಲಾಗಿತ್ತು.



ವಿಶ್ವ ಹೃದಯ ದಿನದ ಅಂಗವಾಗಿ ಆರೋಗ್ಯ ಇಲಾಖೆಯು ನಗರದಲ್ಲಿ ಬುಧವಾರ ಹಮ್ಮಿಕೊಂಡ ಕಾರ್ಯಕ್ರಮದಲ್ಲಿ ಹೃದಯದ ಆರೋಗ್ಯದ ಬಗ್ಗೆ ಪ್ರತಿಜ್ಞೆ ಕೈಗೊಳ್ಳಲಾಯಿತು. ರಾಷ್ಟ್ರೀಯ ಆರೋಗ್ಯ ಅಭಿಯಾನದ ನಿರ್ದೇಶಕಿ ಅರುಂಧತಿ ಚಂದ್ರಶೇಖರ್, ಬೆಂಗಳೂರು ನಗರ ಜಿಲ್ಲಾಧಿಕಾರಿ ಜೆ. ಮಂಜುನಾಥ್, ಸಂಸದ ಪಿ.ಸಿ. ಮೋಹನ್, ಬಸವರಾಜ ಬೊಮ್ಮಾಯಿ, ಆರೋಗ್ಯ ಸಚಿವ ಡಾ.ಕೆ. ಸುಧಾಕರ್ ಇದ್ದರು.

ಮೊಬೈಲ್ ವಾಹನಕ್ಕೆ ಚಾಲನೆ

ವಿಶ್ವ ಹೃದಯ ದಿನದ ಅಂಗವಾಗಿ ಹೃದಯ ಸಮಸ್ಯೆಗಳ ತಪಾಸಣೆಗೆ ಫೋರ್ಟಿಸ್ ಆಸ್ಪತ್ರೆಯು ‘ರೂಟ್ ನಂ-15’ ಶೀರ್ಷಿಕೆಯಡಿ ಮೊಬೈಲ್ ವಾಹನವನ್ನು ಪರಿಚಯಿಸಿದ್ದು, ಇದಕ್ಕೆ ಹೃದ್ರೋಗ ತಜ್ಞ ಡಾ. ವಿವೇಕ್ ಜವಳಿ ಚಾಲನೆ ನೀಡಿದರು.

‘ಪ್ರತಿ ವರ್ಷ ವಿಶ್ವದಲ್ಲಿ 2 ಕೋಟಿಗೂ ಅಧಿಕ ಮಂದಿ ಹೃದಯಾಘಾತದಿಂದ ಮೃತಪಡುತ್ತಿದ್ದಾರೆ. ಇದರಲ್ಲಿ ಶೇ 60 ರಷ್ಟು ಮರಣಗಳು ದೇಶದಲ್ಲಿಯೇ ಸಂಭವಿಸುತ್ತಿವೆ. ಬಹುತೇಕರಿಗೆ ಹೃದಯಾಘಾತದ ಬಗ್ಗೆ ಅರಿವಿನ ಕೊರತೆಯಿದೆ. ಇದರಿಂದಾಗಿ ಹೃದಯ ಪರೀಕ್ಷೆ ಮಾಡಿಸಿಕೊಳ್ಳುವ ಗೋಜಿಗೆ ಹೋಗುವುದಿಲ್ಲ. ಹೀಗಾಗಿ, ಹೃದಯಾಘಾತದ ಪ್ರಮಾಣ ಹೆಚ್ಚಳವಾಗುತ್ತಿದೆ’ ಎಂದು ಡಾ. ವಿವೇಕ್ ಜವಳಿ ಕಳವಳ ವ್ಯಕ್ತಪಡಿಸಿದರು.

‘ಅ.8ರವರೆಗೆ ಈ ಅಭಿಯಾನ ನಡೆಯಲಿದ್ದು, ಪ್ರತಿ ದಿನ ಒಂದು ಗಂಟೆ ನಡೆಯಲು ಜನರನ್ನು ಪ್ರೋತ್ಸಾಹಿಸುವುದು ಯೋಜನೆಯ ಉದ್ದೇಶಗಳಲ್ಲಿ ಒಂದಾಗಿದೆ. ಅಭಿಯಾನದಲ್ಲಿ ಭಾಗವಹಿಸುವವರು ನಡೆಯುವ ಪ್ರತಿ 10 ಸಾವಿರ ಹೆಜ್ಜೆಗಳಿಗೆ ಆಸ್ಟರ್ ಸ್ವಯಂಸೇವಕರು ₹ 100 ಮಗುವಿನ ಹೃದಯ ಶಸಚಿಕಿತ್ಸೆಗೆ ಕೊಡುಗೆ ನೀಡಲಿದ್ದಾರೆ’ ಎಂದು ಆಸ್ಪತ್ರೆ ತಿಳಿಸಿದೆ.

ನಗರದ ಸಕ್ರಾ ವರ್ಲ್ಡ್ ಆಸ್ಪತ್ರೆಯು ‘ನಿಮ್ಮ ಹೃದಯವನ್ನು ಕೇಳಿ, ಹೃದಯವನ್ನು ಆರೋಗ್ಯವಾಗಿರಿಸಿ’ ಕಾರ್ಯಕ್ರಮ ಆಯೋಜಿಸಿತ್ತು. ಇದೇ ವೇಳೆ ಜಪಾನ್ ತಂತ್ರಜ್ಞಾನ ಆಧಾರಿತ ಹೃದಯ ಚಿಕಿತ್ಸಾಲಯಕ್ಕೆ ಶಾಸಕ ಅರವಿಂದ ಲಿಂಬಾವಳಿ ಚಾಲನೆ ನೀಡಿದರು.

ಸುದ್ದಿ 2 ನಿಮಿಷ

ನ್ಯೂಯಾರ್ಕ್ ವಿ.ವಿ ಜತೆ ಒಪ್ಪಂದ

ಮೈಸೂರು: ‘ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯವು ನ್ಯೂಯಾರ್ಕ್ ವಿಶ್ವವಿದ್ಯಾಲಯದೊಂದಿಗೆ ಒಡಂಬಡಿಕೆ ಮಾಡಿಕೊಳ್ಳುತ್ತಿದ್ದು, ಮುಕ್ತ ವಿ.ವಿಯ ಸಾವಿರ ವಿದ್ಯಾರ್ಥಿಗಳಿಗೆ ಕೌಶಲ ಅಭಿವೃದ್ಧಿಯ ತರಬೇತಿ ನೀಡಲಿದೆ’ ಎಂದು ಕುಲಪತಿ ಪ್ರೊ.ಎಸ್. ವಿದ್ಯಾಶಂಕರ್ ಹೇಳಿದರು.

ನಗರದಲ್ಲಿ ಬುಧವಾರ ವಿಶ್ವವಿದ್ಯಾಲಯದ ಕಲಿಕಾರ್ಥಿ ಸಹಾಯ ಕೇಂದ್ರಗಳ ಸಂಯೋಜನಾಧಿಕಾರಿಗಳ ಸಭೆಯನ್ನು ಉದ್ಘಾಟಿಸಿ ಮಾತನಾಡಿದ ಅವರು, ‘ನ್ಯೂಯಾರ್ಕ್‌ನಲ್ಲಿ ₹ 40 ಸಾವಿರಕ್ಕೆ ನೀಡಲಾಗುವ ಕೌಶಲ ತರಬೇತಿಯನ್ನು ಮೇಕ್ ಇನ್ ಇಂಡಿಯ ಕಾರ್ಯಕ್ರಮದಡಿ ₹ 2 ಸಾವಿರಕ್ಕೆ ನೀಡಲು ವಿಶ್ವವಿದ್ಯಾಲಯ ಮುಂದೆ ಬಂದಿದೆ. ಸೆಂಟರ್ ಆಫ್ ಎಕ್ಸಲೆನ್ಸ್ ಅನ್ನೂ ಮುಕ್ತ ವಿ.ವಿ ಆವರಣದಲ್ಲಿ ನಿರ್ಮಿಸಲಿದೆ. ಇಲ್ಲಿನ ಶಿಕ್ಷಕರಿಗೆ ಅಲ್ಲಿ ಒಂದು ತಿಂಗಳು ತರಬೇತಿ ನೀಡಲಾಗುವುದು. ಮುಂದಿನ ದಿನಗಳಲ್ಲಿ ಇಡೀ ರಾಜ್ಯದಲ್ಲಿ ಕೌಶಲ ಅಭಿವೃದ್ಧಿ ಕಾರ್ಯಕ್ರಮವನ್ನು ಆಯೋಜಿಸಲಾಗುವುದು’ ಎಂದು ತಿಳಿಸಿದರು.

‘ಮುಕ್ತ ವಿ.ವಿಯಲ್ಲಿ ಪ್ರವೇಶ ಪ್ರಕ್ರಿಯೆ ಆನ್‌ಲೈನ್ ಮೂಲಕವೇ ನಡೆಯುತ್ತಿದೆ. ಸ್ವಯಂ ಕಲಿಕಾ ಪರಿಕರಗಳನ್ನು ಡಿಜಿಟಲ್ ರೂಪದಲ್ಲಿ ನೀಡಲಾಗುವುದು. ಎಂಬಿಎ ಪದವಿ ವಿದ್ಯಾರ್ಥಿಗಳಿಗೆ ಟ್ಯಾಬ್ ನೀಡುವ ಚಿಂತನೆಯೂ ನಡೆದಿದೆ. ‘ಸ್ವಯಂ’ ವೇದಿಕೆ ಮೂಲಕ ಆನ್‌ಲೈನ್ ಶಿಕ್ಷಣ ನೀಡಲಾಗುವುದು. ಜನವರಿಯಿಂದ ಪ್ರವೇಶಾವಕಾಶ ನೀಡಲಿದ್ದು, ಈ ಬಾರಿ ವಿದ್ಯಾರ್ಥಿಗಳ ನೋಂದಣಿ ಒಂದು ಲಕ್ಷ ದಾಟಬೇಕು ಎಂಬ ಗುರಿ ಇದೆ. ಶಿಕ್ಷಣದ ಅವಶ್ಯಕತೆ ಕುರಿತು ಹಳ್ಳಿಗಳಲ್ಲೂ ಮನದಟ್ಟು ಮಾಡಲಾಗುವುದು’ ಎಂದರು.



ಬ್ಯಾಂಕ್‌ಗೆ ವಂಚನೆ; ಜೈಲು ಶಿಕ್ಷೆ

ಬೆಂಗಳೂರು: ಆಟೊ ಖರೀದಿಸಲೆಂದು ಕಾರ್ಪೋರೇಷನ್ ಬ್ಯಾಂಕ್‌ನಿಂದ ₹ 1.27 ಲಕ್ಷ ಸಾಲ ಪಡೆದು ವಂಚಿಸಿದ್ದ ಪ್ರಕರಣದಲ್ಲಿ ನಯಾಜ್ ಪಾಷಾ ಎಂಬಾತನಿಗೆ 3 ವರ್ಷ ಜೈಲು ಶಿಕ್ಷೆ ವಿಧಿಸಿ ನಗರದ 11ನೇ ಎಸಿಎಂಎಂ ನ್ಯಾಯಾಲಯ ಆದೇಶ ಹೊರಡಿಸಿದೆ.

ಪುಲಿಕೇಶಿನಗರ ಠಾಣೆಯಲ್ಲಿ 2012ರಲ್ಲಿ ದಾಖಲಾಗಿದ್ದ ಪ್ರಕರಣದ ವಿಚಾರಣೆಯನ್ನು ನ್ಯಾಯಾಧೀಶ ಮಲಕಾರಿ ರಾಮಪ್ಪ ಒಡೆಯರ್ ನಡೆಸಿದ್ದರು. ಹಿರಿಯ ಸಹಾಯಕ ಪಬ್ಲಿಕ್ ಪ್ರಾಸಿಕ್ಯೂಟರ್ ಸವಿತಾ ರತನ್ ವಾದಿಸಿದ್ದರು.

ಆಟೊ ಖರೀದಿಸಲು ನಯಾಜ್ ಪಾಷಾ, ಕೋಲ್ಸ್ ರಸ್ತೆಯಲ್ಲಿರುವ ಕಾರ್ಪೋರೇಷನ್ ಬ್ಯಾಂಕ್‌ನಲ್ಲಿ 2012ರ ನವೆಂಬರ್ 3ರಂದು ₹ 1.27 ಲಕ್ಷ ಸಾಲ ಪಡೆದಿದ್ದರು. ಸಾಲದ ಹಣದಲ್ಲಿ ಆಟೊ ಖರೀದಿಸಿದ್ದ ಅಪರಾಧಿ, ಒಪ್ಪಂದದಂತೆ ಬ್ಯಾಂಕ್ ಹೆಸರಿನಲ್ಲಿ ಆಟೊ ನೋಂದಣಿ ಮಾಡಿಸಿರಲಿಲ್ಲ. ಎರಡು ತಿಂಗಳು ಆಟೊ ಬಳಸಿದ್ದ ಅಪರಾಧಿ, ಅದೇ ಆಟೊವನ್ನು ಬೇರೆಯವರಿಗೆ ಮಾರಿದ್ದ. ಸಾಲದ ಕಂತನ್ನೂ ಪಾವತಿಸಿರಲಿಲ್ಲ. ನೋಟಿಸ್ ನೀಡಿದರೂ ಪ್ರತಿಕ್ರಿಯೆ ನೀಡಿರಲಿಲ್ಲ.

ಬ್ಯಾಂಕ್ ಅಧಿಕಾರಿಗಳು ಸಾಲ ವಸೂಲಿಗೆ ಹೋದಾಗ, ಆಟೊ ಇಲ್ಲದಿರುವುದು ಗೊತ್ತಾಗಿತ್ತು. ಬ್ಯಾಂಕ್ ಅಧಿಕಾರಿಗಳು, ವಂಚನೆ ಆರೋಪದಡಿ ನಯಾಜ್ ಪಾಷಾ ವಿರುದ್ಧ ಪುಲಿಕೇಶಿನಗರ ಠಾಣೆಗೆ ದೂರು ನೀಡಿದ್ದರು.

ನಗರದಲ್ಲಿ ಇಂದು

ಉಪನ್ಯಾಸ: ಪ್ರೊ.ಸಿ. ರಾಜಗೋಪಾಲನ್ ಸಂಸ್ಮರಣಾ ಉಪನ್ಯಾಸ ಸರಣಿ: ಉದ್ಘಾಟನೆ: ಕೆ.ಆರ್. ವೇಣುಗೋಪಾಲ್, ಉಪನ್ಯಾಸ: ಪ್ರೊ.ವೈ.ನಾರಾಯಣ ಚೆಟ್ಟಿ, ಆಯೋಜನೆ: ಬೆಂಗಳೂರು ವಿಶ್ವವಿದ್ಯಾಲಯ, ಸ್ಥಳ: ಪ್ರೊ. ವೆಂಕಟಗಿರಿಗೌಡ ಸಭಾಂಗಣ, ಬೆಂಗಳೂರು ವಿಶ್ವವಿದ್ಯಾಯ, ಬೆಳಿಗ್ಗೆ 10

‘ಬದಲಾದ ಉದ್ಯೋಗ ಪರ್ವ’ ವಿಚಾರ ಸಂಕಿರಣ: ಚಾಲನೆ: ಮುರುಗೇಶ್ ನಿರಾಣಿ, ಆಶಯ ನುಡಿ: ವಿ. ಸುನೀಲ್ ಕುಮಾರ್, ಶಿವರಾಮ್ ಹೆಬ್ಬಾರ್, ಅಧ್ಯಕ್ಷತೆ: ಟಿ.ಎಸ್. ನಾಗಾಭರಣ, ವಿಷಯ ಮಂಡನೆ: ಎಲ್. ಹನುಮಂತಯ್ಯ, ಎಚ್.ಎಸ್. ಜಯಕುಮಾರ್, ರಾ.ನಂ. ಚಂದ್ರಶೇಖರ, ಪ್ರೊ. ಚಂದ್ರಕಾಂತ್, ಟಿ.ಜಿ. ಶ್ರೀನಿಧಿ, ಆಯೋಜನೆ: ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಸ್ಥಳ: ಭಾರತ್ ಸ್ಕೌಟ್ಸ್ ಆ್ಯಂಡ್ ಗೈಡ್ಸ್, ಅರಮನೆ ರಸ್ತೆ, ಬೆಳಿಗ್ಗೆ 10

ವಸ್ತ್ರಾಭರಣ: ಕರಕುಶಲ ವಸ್ತು, ಕೈಮಗ್ಗ ವಸ್ತ್ರಗಳು ಮತ್ತು ಆಭರಣಗಳ ಪ್ರದರ್ಶನ, ಸ್ಥಳ: ಚಿತ್ರಕಲಾ ಪರಿಷತ್ತು, ಬೆಳಿಗ್ಗೆ 11

ಹಿರಿಯ ಲೇಖಕಿಯರ ಸಾಹಿತ್ಯ ಮಂಥನ: ಡಾ. ಸಾರಾ ಅಬೂಬಕ್ಕರ್ ಅವರ ಕೃತಿಗಳ ವಿಚಾರ ಸಂಕಿರಣ, ಪ್ರಬಂಧ ಮಂಡನೆ: ದೇವಿಕಾ ನಾಗೇಶ್, ಬಿ.ಎಂ. ರೋಹಿಣಿ, ಅಧ್ಯಕ್ಷತೆ: ವನಮಾಲಾ ಸಂಪನ್ನಕುಮಾರ್, ಉಪಸ್ಥಿತಿ: ಡಾ. ಸಾರಾ ಅಬೂಬಕ್ಕರ್, ಆಯೋಜನೆ: ಕರ್ನಾಟಕ ಲೇಖಕಿಯರ ಸಂಘ, ಸಂಜೆ 5 (ಆನ್‌ಲೈನ್ ಕಾರ್ಯಕ್ರಮ)



ವನಮಾಲಾ

ವಿಡಿಯೊ ಚಿತ್ರೀಕರಿಸಿ ₹ 5 ಲಕ್ಷಕ್ಕೆ ಬೇಡಿಕೆ

ಬೆಂಗಳೂರು: ಪ್ರೇಮಿಗಳ ವಿಡಿಯೊವನ್ನು ಮೊಬೈಲ್‌ನಲ್ಲಿ ಚಿತ್ರೀಕರಿಸಿಕೊಂಡು ₹ 5 ಲಕ್ಷಕ್ಕೆ ಬೇಡಿಕೆ ಇಟ್ಟಿದ್ದ ಐವರು ಆರೋಪಿಗಳನ್ನು ಬೆಂಗಳೂರು ಗ್ರಾಮಾಂತರ ಪೊಲೀಸರು ಬಂಧಿಸಿದ್ದಾರೆ.

‘ಹಂದೇನಹಳ್ಳಿ ಬಡಾವಣೆಯ ಸಲ್ಮಾನ್ ಖಾನ್, ನವಾಜ್ ಪಾಷಾ, ಆಸಿಫ್, ರಿಹಾದ್, ಲಿಯಾಕತ್ ಪಾಷಾ ಬಂಧಿತರು. ಸೆ. 25ರಂದು ನಡೆಸಿದ್ದ ಘಟನೆ ಬಗ್ಗೆ ಸಂತ್ರಸ್ತರು ದೂರು ನೀಡಿದ್ದರು.’ ಎಂದು ಪೊಲೀಸ್ ಮೂಲಗಳು ಹೇಳಿವೆ.

ಬಿಬಿಎಂಪಿ ಆರೋಗ್ಯ ತಪಾಸಣಾ ಶಿಬಿರ ಉದ್ಘಾಟಿಸಿದ ಡಾ.ಮಂಜುನಾಥ್

ಪೌರಕಾರ್ಮಿಕರಿಗೆ ಉಚಿತ ತಪಾಸಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಬಿಬಿಎಂಪಿ ವ್ಯಾಪ್ತಿಯಲ್ಲಿ ಸ್ವಚ್ಛತಾ ಕಾರ್ಯದಲ್ಲಿ ತೊಡಗಿರುವ 45 ವರ್ಷ ದಾಟಿದ ಎಲ್ಲ ಪೌರಕಾರ್ಮಿಕರಿಗೆ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಯಲ್ಲಿ ಹಂತ-ಹಂತವಾಗಿ ಹೃದಯ ತಪಾಸಣೆ ಮಾಡಲು ನಿರ್ಧರಿಸಿದ್ದೇವೆ. ಇದಕ್ಕಾಗಿ, ವಾರದಲ್ಲಿ ನಿರ್ದಿಷ್ಟ ದಿನವನ್ನು ನಿಗದಿಪಡಿಸಲಿದ್ದೇವೆ’ ಎಂದು ಸಂಸ್ಥೆಯ ನಿರ್ದೇಶಕ ಡಾ. ಸಿ.ಎನ್.ಮಂಜುನಾಥ್ ತಿಳಿಸಿದರು.

ಬಿಬಿಎಂಪಿಯು ವಿಶ್ವ ಹೃದಯ ದಿನಾಚರಣೆಯ ಅಂಗವಾಗಿ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಯ ಜೊತೆ ಸೇರಿ ಡಾ.ಬಾಬು ಜಗಜೀವನ್ ರಾಂ ಸಾರ್ವಜನಿಕ ಆಸ್ಪತ್ರೆಯಲ್ಲಿ ಹೃದಯ, ಮಧುಮೇಹ ಮತ್ತು ಕ್ಯಾನ್ಸರ್ ಹಾಗೂ ಇತರ ಆರೋಗ್ಯ ಸಮಸ್ಯೆಗಳ ಪತ್ತೆ ಸಲುವಾಗಿ ರಾಷ್ಟ್ರೀಯ ನಗರ ಆರೋಗ್ಯ ಅಭಿಯಾನದಡಿ ಬುಧವಾರ ಏರ್ಪಡಿಸಿದ್ದ ‘ಉಚಿತ ಆರೋಗ್ಯ ತಪಾಸಣಾ ಶಿಬಿರ' ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

‘25ರಿಂದ 40 ವರ್ಷ ವಯಸ್ಸಿನವರಲ್ಲೂ ಹೃದಯ ಕಾಯಿಲೆ ಕಂಡುಬರುತ್ತಿದೆ. ಶೇ 4 ರಷ್ಟು ಮಂದಿಯಲ್ಲಿ ಹೃದಯ ಕಾಯಿಲೆ ಕಾಣಿಸುತ್ತಿತ್ತು. ಈ ಪ್ರಮಾಣವು ಈಗ ಶೇ 8ಕ್ಕೆ ಏರಿಕೆಯಾಗಿದೆ. ಧೂಮಪಾನ ಹಾಗೂ ತಂಬಾಕು ಸೇವನೆ ಹೃದಯದ ಕಾಯಿಲೆಗೆ ಮುಖ್ಯ ಕಾರಣ. ಹೃದಯದ ರಕ್ಷಣೆ, ಕಾಯಿಲೆ ಬರದಂತೆ ಮುನ್ನೆಚ್ಚರಿಕೆ ವಹಿಸುವ ಬಗ್ಗೆ ಜಾಗೃತಿ ಮೂಡಿಸುವುದೇ ವಿಶ್ವ ಹೃದಯ ದಿನದ ಮೂಲ ಉದ್ದೇಶ. ಅಧಿಕ ರಕ್ತದೊತ್ತಡ, ಮಧುಮೇಹ, ಕೊಬ್ಬಿನಾಂಶ, ಶರೀರದ ತೂಕ, ಸೊಂಟದ ಸುತ್ತಳತೆ, ಅತಿ ಆಸೆ ಹಾಗೂ ಅತಿ ಒತ್ತಡಗಳನ್ನು ಕಡಿಮೆ ಮಾಡಿಕೊಂಡರೆ ಹೃದ್ರೋಗದಿಂದ ಪಾರಾಗಬಹುದು’ ಎಂದರು.

‘ಜಯದೇವ ಹೃದ್ರೋಗ ಸಂಸ್ಥೆಯು ನಾಲ್ಕು ವರ್ಷಗಳಿಂದ ಬಿಬಿಎಂಪಿಯ ಪ್ರತಿ ವಾರ್ಡ್‌ನ ತಲಾ ನಾಲ್ಕು ಕಡುಬಡವರಿಗೆ ಉಚಿತವಾಗಿ ಹೃದಯ ಶಸ್ತ್ರಚಿಕಿತ್ಸೆ ನಡೆಸುತ್ತಿದೆ’ ಎಂದರು.

ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ, ‘ನಿತ್ಯ ವಾಯುವಿಹಾರ, ಹಿತಮಿತವಾದ ಆಹಾರ ಸೇವನೆಯಿಂದ ಹೃದಯವನ್ನು ಜೋಪಾನ ಮಾಡಬಹುದು. ಹೃದಯ ಆರೈಕೆ ಕುರಿತು ವೈದ್ಯರ ಸಲಹೆಗಳನ್ನು ಪಾಲಿಸಬೇಕು’ ಎಂದರು.

ಬಿಬಿಎಂಪಿಯ ವಿಶೇಷ ಆಯುಕ್ತ (ಆರೋಗ್ಯ) ಡಿ.ರಂದೀಪ್, ಜಂಟಿ ಆಯುಕ್ತ (ಕಸ ವಿಲೇವಾರಿ) ಸರ್ಫರಾಜ್ ಖಾನ್ ಹಾಗೂ ವಿಶೇಷ ಆಯುಕ್ತ (ಕಸ ವಿಲೇವಾರಿ) ಹರೀಶ್ ಕುಮಾರ್, ಮುಖ್ಯ ಆರೋಗ್ಯಾಧಿಕಾರಿಗಳಾದ ಡಾ.ವಿಜಯೇಂದ್ರ, ಡಾ.ನಿರ್ಮಲಾ ಬುಗ್ಗಿ ಮತ್ತಿತರರು ಭಾಗವಹಿಸಿದರು.



ಆರೋಗ್ಯ ಶಿಬಿರದಲ್ಲಿ ಮಹಿಳೆಯೊಬ್ಬರ ರಕ್ತದೊತ್ತಡವನ್ನು ಆರೋಗ್ಯ ಸಿಬ್ಬಂದಿ ಬುಧವಾರ ಪರಿಶೀಲಿಸಿದರು

ಮೂವರಲ್ಲಿ ಹೃದ್ರೋಗ ಪತ್ತೆ

ಶಿಬಿರದಲ್ಲಿ 51 ಪುರುಷರು ಹಾಗೂ 139 ಮಹಿಳೆಯರ ಆರೋಗ್ಯ ತಪಾಸಣೆ ಮಾಡಲಾಯಿತು. ಇವರಲ್ಲಿ ಮೂವರು ಹೃದ್ರೋಗ ಹೊಂದಿರುವುದು ಕಂಡುಬಂದಿದೆ. ಜಯದೇವ ಹೃದ್ರೋಗ ಆಸ್ಪತ್ರೆಯಲ್ಲಿ ಹೆಚ್ಚಿನ ತಪಾಸಣೆಗೆ ಒಳಗಾಗುವಂತೆ 12 ಮಂದಿಗೆ ಶಿಫಾರಸು ಮಾಡಲಾಯಿತು.

ಡ್ರಗ್ಸ್: ಸಿನಿಮಾ ಸಹ ನಟ ಬಂಧನ

ಅಪರಾಧ ಸುದ್ದಿ

ಬೆಂಗಳೂರು: ಡ್ರಗ್ಸ್ ಮಾರುತ್ತಿದ್ದ ಆರೋಪದಡಿ ಸಿನಿಮಾ ಸಹ ನಟ ಚೆಕ್ವುಮೆ ಮಾಲ್ವಿನ್ (45) ಎಂಬಾತನನ್ನು ಕಾಡುಗೊಂಡನಹಳ್ಳಿ (ಕೆ.ಜಿ.ಹಳ್ಳಿ) ಪೊಲೀಸರು ಬಂಧಿಸಿದ್ದಾರೆ.

‘ನೈಜೀರಿಯಾ ಪ್ರಜೆಯಾದ ಚೆಕ್ವುಮೆ, ನಗರದಲ್ಲಿ ನೆಲೆಸಿ ಸಿನಿಮಾಗಳಲ್ಲಿ ಅಭಿನಯಿಸುತ್ತಿದ್ದ. ಅಕ್ರಮವಾಗಿ ಹಣ ಸಂಪಾದಿಸಲು ಡ್ರಗ್ಸ್ ಮಾರಾಟಕ್ಕೆ ಇಳಿದಿದ್ದ. ಆತನನ್ನು ಬಂಧಿಸಿ ₹ 8 ಲಕ್ಷ ಮೌಲ್ಯದ 15 ಗ್ರಾಂ ಎಂಡಿಎಂಎ, ಹಶೀಷ್ ಹಾಗೂ ₹ 2,500 ನಗದು ಜಪ್ತಿ ಮಾಡಲಾಗಿದೆ’ ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

‘ಎಚ್‌ಬಿಆರ್ ಲೇಔಟ್‌ಗೆ ಬಂದಿದ್ದ ಆರೋಪಿ ಚೆಕ್ವುಮೆ, ಮಾದಕ ವಸ್ತು ಮಾರಲು ಯತ್ನಿಸಿದ್ದ. ಈ ಬಗ್ಗೆ ಮಾಹಿತಿ ಬರುತ್ತಿದ್ದಂತೆ ದಾಳಿ ನಡೆಸಿ ಆತನನ್ನು ಸೆರೆ ಹಿಡಿಯಲಾಯಿತು.’ ಎಂದರು.

ವೈದ್ಯಕೀಯ ವೀಸಾದಡಿ ಭಾರತಕ್ಕೆ ಬಂದಿದ್ದ: ‘ನೈಜೀರಿಯಾದ ಅಬುಜಾದಲ್ಲಿರುವ ನ್ಯೂಯಾರ್ಕ್ ಫಿಲ್ಮ್ ಅಕಾಡೆಮಿಯಲ್ಲಿ 6 ತಿಂಗಳು ತರಬೇತಿ ಪಡೆದಿದ್ದ ಆರೋಪಿ, ಸ್ಥಳೀಯ ಸಿನಿಮಾಗಳಲ್ಲಿ ಅಭಿನಯಿಸಿದ್ದ’ ಎಂದರು.

‘ವೈದ್ಯಕೀಯ ವೀಸಾದಡಿ ನೈಜೀರಿಯಾದಿಂದ ಭಾರತಕ್ಕೆ ಕೆಲ ವರ್ಷಗಳ ಹಿಂದೆ ಬಂದಿದ್ದ ಆರೋಪಿ, 2 ತಿಂಗಳು ಮುಂಬೈನಲ್ಲಿ ನೆಲೆಸಿದ್ದ. ಅಲ್ಲಿಯ ನ್ಯೂಯಾರ್ಕ್ ಫಿಲ್ಮ್ ಅಕಾಡೆಮಿಯಲ್ಲಿ (ಎನ್‌ವೈಎಫ್‌ಎ) ಎರಡನೇ ಬಾರಿ ನಟನೆಯ ತರಬೇತಿ ಪಡೆದಿದ್ದ. ಬಳಿಕ ಬೆಂಗಳೂರಿಗೆ ಬಂದು ಉಳಿದುಕೊಂಡಿದ್ದ.’

‘ಕನ್ನಡ, ತಮಿಳು, ತೆಲುಗು, ಮಲಯಾಳಂ ಹಾಗೂ ಹಿಂದಿ ಸಿನಿಮಾ ಕ್ಷೇತ್ರಗಳಲ್ಲಿ ಆರೋಪಿ ತೊಡಗಿಸಿಕೊಂಡಿದ್ದ. ವಿಶ್ವರೂಪಂ, ಸಿಂಗಂ, ಅಣ್ಣಾಬಾಂಡ್, ದಿಲ್‌ವಾಲೆ, ಜಂಬೂ ಸವಾರಿ, ಪರಮಾತ್ಮ ಸೇರಿ 20ಕ್ಕೂ ಹೆಚ್ಚು ಸಿನಿಮಾಗಳಲ್ಲಿ ಅಭಿನಯಿಸಿದ್ದ’ ಎಂದರು.

ಡ್ರಗ್ಸ್ ಮಾರಾಟವೇ ವೃತ್ತಿ: ‘ಸಿನಿಮಾ ಅಭಿನಯದಿಂದ ಬಂದ ಹಣ ಆರೋಪಿಗೆ ಸಾಕಾಗುತ್ತಿರಲಿಲ್ಲ. ಹೀಗಾಗಿ, ಡ್ರಗ್ಸ್ ಮಾರಾಟ ಮಾಡಿ ಹಣ ಸಂಪಾದಿಸಲು ಆರೋಪಿ ಮುಂದಾಗಿದ್ದ. ದಿನಗಳು ಕಳೆದಂತೆ ಡ್ರಗ್ಸ್ ಮಾರಾಟವನ್ನೇ ವೃತ್ತಿ ಮಾಡಿಕೊಂಡಿದ್ದ’ ಎಂದೂ ಅಧಿಕಾರಿ ವಿವರಿಸಿದರು.

‘ಸಿಂಗಂ’ನಲ್ಲೂ ಪಾತ್ರ

‘ನಟ ಸೂರ್ಯ ಅಭಿನಯದ ‘ಸಿಂಗಂ’ ತಮಿಳು ಸಿನಿಮಾದಲ್ಲೂ ಆರೋಪಿ ಚೆಕ್ವುಮೆ ಮಾಲ್ವಿನ್ ಅಭಿನಯಿಸಿದ್ದಾನೆ. ಡ್ರಗ್ಸ್ ಪೆಡ್ಲರ್ ಪಾತ್ರದಲ್ಲಿ ನಟ ಡ್ಯಾನಿ ಕಾಣಿಸಿಕೊಂಡಿದ್ದರು. ಅವರ ಸಹಚರನಾಗಿ ಚೆಕ್ವುಮೆ ನಟಿಸಿದ್ದ’ ಎಂದೂ ಪೊಲೀಸ್ ಅಧಿಕಾರಿ ಹೇಳಿದರು.



ಚೆಕ್ವುಮೆ ಮಾಲ್ವಿನ್

ತಾಯಿಯಿಂದಲೇ ಕೂಸಿನ ಹತ್ಯೆ

ಬೆಂಗಳೂರು: ಬ್ಯಾಡರಹಳ್ಳಿ ಠಾಣೆ ವ್ಯಾಪ್ತಿಯಲ್ಲಿ ಒಂದೇ ಕುಟುಂಬದ ಐವರು ಮೃತಪಟ್ಟ ಪ್ರಕರಣ ತನಿಖೆಯನ್ನು ಪೊಲೀಸರು ಚುರುಕುಗೊಳಿಸಿದ್ದು, ಒಂಬತ್ತು ತಿಂಗಳ ಮಗುವನ್ನು ತಾಯಿಯೇ ಕೊಂದಿರುವ ಸಂಗತಿ ಹೊರಬಿದ್ದಿದೆ.

ತಿಗಳರಪಾಳ್ಯದ ಐಷಾರಾಮಿ ಮನೆಯೊಂದರಲ್ಲಿ ಭಾರತಿ (51), ಅವರ ಮಕ್ಕಳಾದ ಸಿಂಚನಾ (34), ಸಿಂಧುರಾಣಿ (33) ಹಾಗೂ ಮಧುಸಾಗರ್ (25) ಅವರ ಮೃತದೇಹಗಳು ನೇಣು ಬಿಗಿದುಕೊಂಡ ಸ್ಥಿತಿಯಲ್ಲಿ ಪತ್ತೆಯಾಗಿದ್ದವು. ಸಿಂಧೂರಾಣಿ ಅವರ ಒಂಬತ್ತು ತಿಂಗಳ ಮಗು ಮೃತಪಟ್ಟ ಸ್ಥಿತಿಯಲ್ಲಿ ಮನೆಯ ಮಂಚದ ಮೇಲೆ ಪತ್ತೆಯಾಗಿತ್ತು.

ಒಂಬತ್ತು ತಿಂಗಳ ಮಗುವಿನ ಮರಣೋತ್ತರ ಪರೀಕ್ಷೆ ವರದಿ ಇದೀಗ ಪೊಲೀಸರ ಕೈ ಸೇರಿದೆ.

‘ಮಗುವಿನದ್ದು ಅಸಹಜ ಸಾವಲ್ಲ, ಕೊಲೆ' ಎಂಬುದಾಗಿ ವರದಿಯಲ್ಲಿ ಉಲ್ಲೇಖಿಸಲಾಗಿದೆ. ಆತ್ಮಹತ್ಯೆಗೂ ಮುನ್ನ ತಾಯಿ ಸಿಂಧುರಾಣಿ ಅವರೇ, ಬಟ್ಟೆಯಿಂದ ಕತ್ತು ಬಿಗಿದು ಮಗುವನ್ನು ಕೊಂದಿರುವ ಅನುಮಾನ ದಟ್ಟವಾಗಿದೆ. ಇದಕ್ಕೆ ಸಂಬಂಧಪಟ್ಟ ಪುರಾವೆಗಳನ್ನು ಸಂಗ್ರಹಿಸಲಾಗುತ್ತಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

ಸ್ಕ್ರೀನ್‌ಶಾಟ್ ಪತ್ತೆ: ‘ಮೃತ ಮಧುಸಾಗರ್ ಅವರ ಲ್ಯಾಪ್‌ಟಾಪ್‌ನಲ್ಲಿ ಅವರ ತಂದೆ ಶಂಕರ್, ಮಹಿಳೆಯರ ಜೊತೆ ವಾಟ್ಸ್‌ಆ್ಯಪ್‌ನಲ್ಲಿ ಚಾಟಿಂಗ್ ಮಾಡಿದ್ದ ಸ್ಕ್ರೀನ್‌ಶಾಟ್‌ಗಳೂ ಲಭ್ಯವಾಗಿವೆ.’ ಎಂದೂ ಮೂಲಗಳು ತಿಳಿಸಿವೆ.

ಕ್ರಿಕೆಟ್ ಬೆಟ್ಟಿಂಗ್: ನಾಲ್ಕು ಕಡೆ ಸಿಸಿಬಿ ದಾಳಿ

ಬೆಂಗಳೂರು: ಕ್ರಿಕೆಟ್ ಬೆಟ್ಟಿಂಗ್ ನಡೆಸುತ್ತಿದ್ದ ನಗರದ ನಾಲ್ಕು ಸ್ಥಳಗಳ ಮೇಲೆ ಸಿಸಿಬಿ ಪೊಲೀಸರು ದಾಳಿ ಮಾಡಿದ್ದು, ಐವರನ್ನು ಬಂಧಿಸಿದ್ದಾರೆ.

‘ಐಪಿಎಲ್ ಕ್ರಿಕೆಟ್ ಪಂದ್ಯಾವಳಿಗಳು ಆರಂಭವಾಗುತ್ತಿದ್ದಂತೆ ಹಲವರು ಬೆಟ್ಟಿಂಗ್ ದಂಧೆಯಲ್ಲಿ ತೊಡಗಿದ್ದಾರೆ. ಅವರ ಮೇಲೆ ನಿಗಾ ಇರಿಸಿ ಕಾರ್ಯಾಚರಣೆ ನಡೆಸಲಾಗುತ್ತಿದೆ’ ಎಂದು ಸಿಸಿಬಿ ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

‘ಹೈಗ್ರೌಂಡ್ಸ್, ಶೇಷಾದ್ರಿಪುರ, ಉಪ್ಪಾರಪೇಟೆ, ಜ್ಞಾನಭಾರತಿ ಠಾಣೆ ವ್ಯಾಪ್ತಿಯಲ್ಲಿ ಕಾರ್ಯಾಚರಣೆ ನಡೆಸಲಾಯಿತು. ಐವರು ಆರೋಪಿಗಳಿಂದ ₹ 5 ಲಕ್ಷ ನಗದು ಜಪ್ತಿ ಮಾಡಲಾಗಿದೆ’ ಎಂದರು.

‘ರಾಯಲ್ ಚಾಲೆಂಜರ್ಸ್ ಬೆಂಗಳೂರು ಹಾಗೂ ಮುಂಬೈ ಇಂಡಿಯನ್ಸ್ ತಂಡಗಳ ನಡುವಿನ ಕ್ರಿಕೆಟ್ ಪಂದ್ಯದ ವೇಳೆ ಆರೋಪಿಗಳು ಬೆಟ್ಟಿಂಗ್ ನಡೆಸುತ್ತಿದ್ದರು.’ ಎಂದರು.

ಎಂಜಿನಿಯರಿಂಗ್ ಕೌಶಲಗಳಿಗೆ ಖ್ಯಾತಿ: ಯುದ್ಧ ಕಾರ್ಯಾಚರಣೆಗಳಲ್ಲೂ ಮಹತ್ವದ ಪಾತ್ರ

ಎಂಇಜಿ 241ನೇ ಸಂಸ್ಥಾಪನಾ ದಿನಾಚರಣೆ ಇಂದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸೇನೆಯ ಕಾರ್ಯಾಚರಣೆಗಳಲ್ಲಿ ಮಹತ್ವದ ಪಾತ್ರ ವಹಿಸಿರುವ ಮದ್ರಾಸ್ ಎಂಜಿನಿಯರಿಂಗ್ ಗ್ರೂಪ್ (ಎಂಇಜಿ) ಆ್ಯಂಡ್ ಸೆಂಟರ್‌ನ 241ನೇ ಸಂಸ್ಥಾಪನಾ ದಿನವನ್ನು ಗುರುವಾರ ಆಚರಿಸಲಾಗುತ್ತಿದೆ.

1780ರ ಸೆಪ್ಟೆಂಬರ್ 30ರಂದು ಬ್ರಿಟಿಷರು ಎರಡು ಪ್ರಮುಖ ಸೇನಾ 'ಕಂಪನಿ'ಗಳನ್ನು ಸ್ಥಾಪಿಸಿದರು. ಈ ದಿನವನ್ನೇ ಸ್ಥಾಪನಾ ದಿನವನ್ನಾಗಿ ಆಚರಿಸಲಾಗುತ್ತಿದೆ. 'ಮದ್ರಾಸ್ ಸ್ಯಾಪರ್ಸ್ ಅಧಿಕಾರಿಗಳ ಸಂಘ'ದ (ಎಂಎಸ್‌ಒಎ) ಸ್ಥಾಪನಾ ದಿನವನ್ನಾಗಿಯೂ ಈ ದಿನವನ್ನು ಆಚರಿಸಲಾಗುತ್ತಿದೆ. ಪ್ರತಿವರ್ಷ ಕರ್ತವ್ಯದಲ್ಲಿರುವವರು ಮತ್ತು ನಿವೃತ್ತರು ಹಾಗೂ ಅವರ ಕುಟುಂಬದವರು ಸೇರಿ ಈ ದಿನವನ್ನು ಆಚರಿಸುತ್ತಿದ್ದರು. ಕೋವಿಡ್–19 ಕಾರಣಕ್ಕೆ ಈ ಬಾರಿ ಸರಳವಾಗಿ ಆಚರಿಸಲಾಗುತ್ತಿದೆ.

ಎಂಇಜಿ, ಭಾರತೀಯ ಸೇನೆಯ 'ಕಾರ್ಪ್ಸ್ ಆಫ್ ಎಂಜಿನಿಯರ್'ನ ಘಟಕವಾಗಿದೆ. ಮೂರು 'ಕಾರ್ಪ್ಸ್ ಆಫ್ ಎಂಜಿನಿಯರ್'ಗಳಲ್ಲೇ ಇದು ಅತ್ಯಂತ ಹಳೆಯದಾಗಿದೆ. 10 ಮೀಟರ್ ಸೇತುವೆಯನ್ನು 30 ನಿಮಿಷಗಳಲ್ಲಿ ನಿರ್ಮಿಸುವ ಕೌಶಲವನ್ನು ಇಲ್ಲಿಯ ಯೋಧರು ಹೊಂದಿದ್ದಾರೆ. ಎಂಇಜಿಯನ್ನು ಅನೌಪಚಾರಿಕವಾಗಿ 'ಮದ್ರಾಸ್ ಸ್ಯಾಪರ್ಸ್' ಎಂದು ಸಹ ಕರೆಯಲಾಗುತ್ತದೆ.

ಸಂಸ್ಥಾಪನಾ ದಿನದ ಅಂಗವಾಗಿ ಸುದ್ದಿಗಾರರ ಜತೆ ಮಾತನಾಡಿದ ಎಂಇಜಿಯ ಕಮಾಂಡಂಟ್ ಬ್ರಿಗೇಡಿಯರ್ ಟಿಪಿಎಸ್ ವಧ್ವಾ, 'ಎಂಜಿನಿಯರಿಂಗ್ ಕೌಶಲಗಳಿಗೆ ಖ್ಯಾತಿ ಪಡೆದಿರುವ ಎಂಇಜಿ, ತನ್ನ ಸ್ಥಾಪನೆಯ ದಿನಗಳಿಂದಲೂ ಯುದ್ಧದಲ್ಲೂ ಕ್ರಿಯಾಶೀಲವಾಗಿ ಭಾಗವಹಿಸಿದೆ. ಮೊದಲ ಮತ್ತು ಎರಡನೇ ವಿಶ್ವ ಯುದ್ಧ ಸೇರಿದಂತೆ ಜಗತ್ತಿನಾದ್ಯಂತ ನಡೆದ ಹಲವು ಯುದ್ಧಗಳಲ್ಲಿ ನಮ್ಮ ಯೋಧರು ಭಾಗವಹಿಸಿದ್ದಾರೆ. 1780ರಲ್ಲಿ ನಡೆದ ಮೈಸೂರು ಯುದ್ಧದ ಸಂದರ್ಭದಲ್ಲೂ ಎಂಇಜಿ ಬ್ರಿಟಿಷ್ ಸೇನೆಯ ಭಾಗವಾಗಿತ್ತು' ಎಂದು ವಿವರಿಸಿದರು.



ಹಲಸೂರು ಕೆರೆಯಲ್ಲಿ 'ರೋವಿಂಗ್' ಅಭ್ಯಾಸದಲ್ಲಿ ತೊಡಗಿದ್ದ ಎಂಇಜಿ ಯೋಧರು.



ಎಂಇಜಿ ಕೇಂದ್ರದ 241ನೇ ಸಂಸ್ಥಾಪನಾ ದಿನದ ಅಂಗವಾಗಿ ಬುಧವಾರ 241ನೇ ಬ್ಯಾಚ್‌ನ ಪ್ರಶಿಕ್ಷಣಾರ್ಥಿಗಳಿಂದ ಆಕರ್ಷಕ ಪಥಸಂಚಲನ ನಡೆಯಿತು. ಪ್ರಜಾವಾಣಿ ಚಿತ್ರಗಳು/ರಂಜು ಪಿ.

'ಬೆಂಗಳೂರು ಕೇಂದ್ರದಲ್ಲಿ ಅತ್ಯುತ್ತಮ ಯೋಧರನ್ನು ರೂಪಿಸಲಾಗುತ್ತಿದೆ. ಧೈರ್ಯ ಮತ್ತು ಶೌರ್ಯಕ್ಕೆ ಯೋಧರು ಖ್ಯಾತಿಯಾಗಿದ್ದಾರೆ. ಯುದ್ಧದ ಸಂದರ್ಭಗಳಲ್ಲಿ ಅಗತ್ಯವಿರುವ ಮೂಲಸೌಕರ್ಯಗಳನ್ನು ಕಲ್ಪಿಸುವಲ್ಲಿ ಎಂಜಿನಿಯರಿಂಗ್ ಕೌಶಲಗಳನ್ನು ಎಂಇಜಿ ಪ್ರದರ್ಶಿಸಿದೆ. ಮುಖ್ಯವಾಗಿ, ವಿವಿಧ ಕ್ಷೇತ್ರಗಳಲ್ಲಿ ಪರಿಣತಿ ಹೊಂದಲು ಯೋಧರಿಗೆ ತರಬೇತಿ ನೀಡಲಾಗುತ್ತಿದೆ. ಇದರಿಂದ, ಸೇನೆಯಿಂದ ನಿವೃತ್ತಿ ಪಡೆದ ಬಳಿಕವೂ ಉದ್ಯೋಗ ಪಡೆಯಲು ಸಹಾಯವಾಗುತ್ತದೆ' ಎಂದು ವಿವರಿಸಿದರು.

'ಇಲ್ಲಿ ಸೇರುವ ಪ್ರಶಿಕ್ಷಣಾರ್ಥಿಗಳಿಗೆ ಹಂತ ಹಂತವಾಗಿ ಎರಡು ವರ್ಷಗಳ ಕಾಲ ತರಬೇತಿ ನೀಡಲಾಗುತ್ತದೆ. ಮೂಲ ತರಬೇತಿ ಪಡೆದ ಬಳಿಕ 'ಸ್ಯಾಪರ್ಸ್' ಆಗುತ್ತಾರೆ. ಕಾರ್ಪೆಂಟರ್, ಎಲೆಕ್ಟ್ರಿಷಿಯನ್ ಸೇರಿದಂತೆ ಒಟ್ಟು 14 ವಿಭಾಗಗಳಲ್ಲಿ ಕೌಶಲ ವೃದ್ಧಿಸುವ ತರಬೇತಿಗಳನ್ನು ನೀಡಲಾಗುತ್ತದೆ. ಕಾಲಕ್ಕೆ ತಕ್ಕಂತೆ ಅತ್ಯಾಧುನಿಕ ತಂತ್ರಜ್ಞಾನಗಳ ಬಗ್ಗೆಯೂ ತರಬೇತಿ ನೀಡಲಾಗುತ್ತದೆ' ಎಂದು ವಿವರಿಸಿದರು.

'ಪ್ರತಿ ವರ್ಷ ಸುಮಾರು 1,500 ಸ್ಯಾಪರ್ಸ್‌ಗಳಿಗೆ ತರಬೇತಿ ನೀಡಲಾಗುತ್ತಿದೆ. ಆದರೆ, ಕೋವಿಡ್–19ನಿಂದಾಗಿ 15 ತಿಂಗಳು ಕಾಲ ತರಬೇತಿಗೆ ಅಡ್ಡಿಯಾಯಿತು' ಎಂದು ತಿಳಿಸಿದರು.

ವಸ್ತು ಸಂಗ್ರಹಾಲಯ

ಎಂಇಜಿಯ ಇತಿಹಾಸ ಮತ್ತು ಯಶೋಗಾಥೆಯನ್ನು ಬಿಂಬಿಸುವ ವಸ್ತು ಸಂಗ್ರಹಾಲಯವನ್ನು ಇಲ್ಲಿನ ಕೇಂದ್ರದಲ್ಲಿ ಸ್ಥಾಪಿಸಲಾಗಿದೆ.

1979ರಲ್ಲಿ ಸ್ಥಾಪನೆಯಾದ ಈ ವಸ್ತು ಸಂಗ್ರಹಾಲಯದಲ್ಲಿ ಯೋಧರು ಬಳಸುತ್ತಿದ್ದ ಸಮವಸ್ತ್ರಗಳು, ಶಸ್ತ್ರಾಸ್ತ್ರಗಳು, ವಿವಿಧ ಶೌರ್ಯ ಪದಕಗಳು ಹಾಗೂ ಕ್ರೀಡಾ ಕ್ಷೇತ್ರದಲ್ಲಿ ಪಡೆದ ಪದಕಗಳನ್ನು ಇರಿಸಲಾಗಿದೆ. ಸೇತುವೆಗಳ ನಿರ್ಮಾಣದ ಮಾದರಿಗಳು, ಸೇನಾ ಅಧಿಕಾರಿಗಳು ವಹಿಸಿದ ಪಾತ್ರದ ವಿವರಗಳು ಇಲ್ಲಿವೆ.

ಕ್ರೀಡಾ ಕ್ಷೇತ್ರದಲ್ಲೂ ಅಪಾರ ಸಾಧನೆ

ಕ್ರೀಡಾ ಕ್ಷೇತ್ರದಲ್ಲೂ ಎಂಇಜಿ ಯೋಧರು ತಮ್ಮದೇ ಆದ ಛಾಪು ಮೂಡಿಸಿದ್ದಾರೆ. ಎಂಇಜಿಯ ಐವರು ದ್ರೋಣಾಚಾರ್ಯ ಪ್ರಶಸ್ತಿ, ಹತ್ತು ಮಂದಿ ಅರ್ಜುನ ಪ್ರಶಸ್ತಿ ಮತ್ತು ಒಬ್ಬರು ಪದ್ಮಶ್ರೀ ಪ್ರಶಸ್ತಿ ಪಡೆದಿದ್ದಾರೆ. ಜತೆಗೆ, 14 ಮಂದಿ ಒಲಿಂಪಿಕ್ಸ್ ಕ್ರೀಡಾಕೂಟದಲ್ಲಿ ಭಾಗವಹಿಸಿದ್ದಾರೆ.

ರೋಯಿಂಗ್ ಮತ್ತು ಸೇಲಿಂಗ್‌ನಲ್ಲಿ ಎಂಇಜಿ ಯೋಧರು ಅಪಾರ ಸಾಧನೆ ಮಾಡಿದ್ದಾರೆ. ವಿಷ್ಣು ಸರವಣನ್ ಅವರು ಟೋಕಿಯೊದಲ್ಲಿ ನಡೆದ ಒಲಿಂಪಿಕ್ಸ್ ಕ್ರೀಡಾಕೂಟದಲ್ಲೂ ಭಾಗಹಿಸಿದ್ದರು.

ಗಣರಾಜ್ಯೋತ್ಸವ ಪಥಸಂಚಲನದಲ್ಲಿ 9 ಬಾರಿ ಪದಕ

ದೆಹಲಿಯಲ್ಲಿ ನಡೆಯುವ ಗಣರಾಜ್ಯೋತ್ಸವ ದಿನದ ಪಥಸಂಚಲನದಲ್ಲಿ ಭಾಗವಹಿಸುತ್ತಿರುವ ಎಂಇಜಿ ಯೋಧರು ಇದುವರೆಗೆ ಒಂಬತ್ತು ಬಾರಿ ಪದಕ ಪಡೆದಿದ್ದಾರೆ.

ನಾಲ್ಕು ಬಾರಿ ಗೋವಿಂದಸ್ವಾಮಿ ಅವರ ನೇತೃತ್ವದಲ್ಲಿ ಪದಕ ಪಡೆದಿರುವ ಕಾರಣ, ಇಲ್ಲಿ ಪಥಸಂಚಲನ ನಡೆಸುವ ಮೈದಾನಕ್ಕೆ 'ಗೋವಿಂದಸ್ವಾಮಿ ಡ್ರಿಲ್ ಸ್ಕ್ವೈರ್' ಎಂದು ನಾಮಕಾರಣ ಮಾಡಲಾಗಿದೆ.

'ಗಣರಾಜ್ಯೋತ್ಸವ ಪಥಸಂಚಲನಕ್ಕಾಗಿ 200 ಯೋಧರ ತಂಡವನ್ನು ರಚಿಸಿ ಆರು ತಿಂಗಳ ಕಾಲ ಪ್ರತಿನಿತ್ಯ ಅಭ್ಯಾಸ ಕೈಗೊಳ್ಳಲಾಗುತ್ತದೆ. ವಿವಿಧ ಘಟಕಗಳ ಯೋಧರಲ್ಲಿ ಇದರಲ್ಲಿ ಪಾಲ್ಗೊಳ್ಳುತ್ತಾರೆ' ಎಂದು ಸುಬೇದಾರ್ ಪಿ.ಪಿ. ಅಖಿಲೇಶ್ ವಿವರಿಸಿದರು. ರಾಷ್ಟ್ರೀಯ ಭದ್ರತಾ ತಂಡಕ್ಕೂ (ಎನ್‌ಎಸ್‌ಜಿ) ಆಯ್ಕೆಯಾಗಿದ್ದ ಅಖಿಲೇಶ್ ಅವರು, ಮುಂಬೈನ ತಾಜ್ ಹೋಟೆಲ್‌ನಲ್ಲಿ ಉಗ್ರರ ವಿರುದ್ಧ ನಡೆಸಿದ ಕಾರ್ಯಾಚರಣೆಯಲ್ಲಿ ಮೇಜರ್ ಸಂದೀಪ್ ಉನ್ನಿಕೃಷ್ಣನ್ ಜತೆ ಭಾಗವಹಿಸಿದ್ದರು.

'ಮಂಕಿಹೌಸ್'

ಎಂಇಜಿ ಕೇಂದ್ರದಲ್ಲಿ 'ಮಂಕಿಹೌಸ್' ಎನ್ನುವ ಕಟ್ಟಡ ಸಹ ಇದೆ.

ಪುರಾತನ ಶೈಲಿಯ ಈ ಕಟ್ಟಡದಲ್ಲಿ ಮೊದಲು ಮಂಗಗಳು ವಾಸಿಸುತ್ತಿದ್ದರಿಂದ ಇದೇ ಹೆಸರಿನಿಂದ ಕರೆಯಲಾಗುತ್ತಿದೆ. ಈಗ ಈ ಕಟ್ಟಡದಲ್ಲಿ ಎಂಇಜಿ ಕಮಾಂಡಂಟ್ ಅವರ ಕಚೇರಿ ಇದೆ.



ಕುಂದುಕೊರತೆ ಜನದನಿ

ನಿಮ್ಮ ಪ್ರದೇಶದಲ್ಲಿ ಜಲಮಂಡಳಿ ಸಮರ್ಪಕವಾಗಿ ನೀರು ಪೂರೈಸುತ್ತಿಲ್ಲವೇ? ನೀವು ಓಡಾಡುವ ರಸ್ತೆಯಲ್ಲಿ ಗುಂಡಿ ಬಿದ್ದಿದೆಯೇ? ಕಸ ರಾಶಿ ಬಿದ್ದಿದೆಯೇ ಅಥವಾ ನಿತ್ಯ ವಿಹಾರಕ್ಕೆ ಹೋಗುವ ಉದ್ಯಾನ ಪಾಳುಬಿದ್ದಿದೆಯೇ? ಬಸ್‌ಗಳು ಬರುತ್ತಿಲ್ಲವೇ? ಸಮಸ್ಯೆಗಳು ತಾಂಡವವಾಡುತ್ತಿವೆಯೇ?...

ನಿಮ್ಮ ಅಹವಾಲುಗಳಿಗೆ 'ಪ್ರಜಾವಾಣಿ' ಧ್ವನಿಯಾಗಲಿದೆ. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ), ಜಲಮಂಡಳಿ, ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ (ಬಿಎಂಟಿಸಿ), ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿಗೆ (ಬೆಸ್ಕಾಂ) ಸಂಬಂಧಿಸಿದ ಕುಂದು ಕೊರತೆಗಳನ್ನು 150 ಪದಗಳ ಮಿತಿಯಲ್ಲಿ ಬರೆದು ಕಳುಹಿಸಿ. ಸಮಸ್ಯೆಯ ಗಂಭೀರತೆಯನ್ನು ಬಿಂಬಿಸುವ ಚಿತ್ರವೂ ಇರಲಿ. ನಿಮ್ಮ ಕುಂದುಕೊರತೆಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ.

ನಿಮ್ಮ ಅಹವಾಲುಗಳನ್ನು ಇ ಮೇಲ್ ಮಾಡಬೇಕಾದ ವಿಳಾಸ: peoplesproblem@prajavani.co.in.

ಸಮಸ್ಯೆಗಳ ಕುರಿತ ಬರಹಗಳನ್ನು ವಾಟ್ಸ್ ಆ್ಯಪ್ (**9606038256**) ಸಹ ಮಾಡಬಹುದು.


ಬಾಲವನ ಪ್ರಶಸ್ತಿಗೆ ಕೆ.ಪಿ.ರಾವ್ ಆಯ್ಕೆ

ಪ್ರಜಾವಾಣಿ ವಾರ್ತೆ

ಪುತ್ತೂರು: ಪುತ್ತೂರಿನ ಡಾ. ಶಿವರಾಮ ಕಾರಂತ ಬಾಲವನ ಪ್ರಶಸ್ತಿಗೆ ಕಂಪ್ಯೂಟರ್ ವಿಜ್ಞಾನಿ ಕಿನ್ನಿಕಂಬಳ ಪದ್ಮನಾಭ ರಾವ್ (ಕೆ.ಪಿ. ರಾವ್) ಅವರನ್ನು ಆಯ್ಕೆ ಮಾಡಲಾಗಿದೆ. ಪ್ರಶಸ್ತಿಯು ₹25 ಸಾವಿರ ನಗದು, ಸ್ಮರಣಿಕೆ ಮತ್ತು ಸನ್ಮಾನ ಪತ್ರ ಒಳಗೊಂಡಿದೆ.

ಡಾ. ಶಿವರಾಮ ಕಾರಂತರ ಜನ್ಮದಿನವಾದ ಅ.10ರಂದು, ಪುತ್ತೂರಿನ ಕಾರಂತ ಬಾಲವನದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ಪುತ್ತೂರು ಉಪ ವಿಭಾಗಾಧಿಕಾರಿ ಡಾ. ಯತೀಶ್ ಉಳ್ಳಾಲ್ ತಿಳಿಸಿದರು.

ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಕಂಪ್ಯೂಟರ್, ಟ್ಯಾಬ್ಲೆಟ್, ಮೊಬೈಲ್‌ಗಳಲ್ಲಿ ಬಳಸುವ ಕನ್ನಡ ಕೀಲಿಮಣೆಯು ಕೆ.ಪಿ. ರಾವ್ ಅವರು ಅಭಿವೃದ್ಧಿಪಡಿಸಿದ ವಿನ್ಯಾಸವನ್ನು ಅವಲಂಬಿಸಿದೆ. ತಮ್ಮ ಸಂಶೋಧನೆಗಾಗಿ ಪೇಟೆಂಟ್ ಕೂಡ ಪಡೆಯದೆ ಅದನ್ನು ಕನ್ನಡಕ್ಕಾಗಿ ಸಮರ್ಪಿಸಿದ ಕೆ.ಪಿ. ರಾವ್ ಅವರಿಗೆ ಅರ್ಹವಾಗಿಯೇ ಈ ಪ್ರಶಸ್ತಿ ಸಲ್ಲುತ್ತದೆ' ಎಂದರು.



ಕೆ.ಪಿ. ರಾವ್

'ಅ.10ರಂದು ನಡೆಯುವ ಕಾರ್ಯಕ್ರಮದಲ್ಲಿ 'ಬಾಲವದಲ್ಲಿ ಭಾರ್ಗವ' ಕೃತಿ ಬಿಡುಗಡೆಗೊಳ್ಳಲಿದೆ. ಪುತ್ತೂರಿನ ಪತ್ರಕರ್ತ ಬಿ.ಟಿ. ರಂಜನ್ ಅವರಿಗೆ ಪತ್ರಿಕೋದ್ಯಮ ಜೀವಮಾನದ ಸಾಧನೆಗಾಗಿ ವಿಶೇಷ ಪ್ರಶಸ್ತಿ ನೀಡಲಾಗುವುದು' ಎಂದರು.

ಶಿವರಾಮ ಕಾರಂತರ ಬಾಲವನದ ವಿಶೇಷ ಕರ್ತವ್ಯಾಧಿಕಾರಿ ಡಾ. ಸುಂದರ್ ಕೇನಾಜೆ ಇದ್ದರು.

ಪಡಿತರ ಕಳ್ಳಸಾಗಣೆ: ಗುತ್ತಿಗೆ ಅಮಾನತು

ಪ್ರಜಾವಾಣಿ ವಾರ್ತೆ

ವರದಿ ಫಲಶ್ರುತಿ

ಬೆಂಗಳೂರು: ಭಾರತೀಯ ಆಹಾರ ನಿಗಮದ (ಎಫ್‌ಸಿಐ) ಉಗ್ರಾಣದಿಂದಲೇ ಪಡಿತರ ಧಾನ್ಯವನ್ನು ಕಾಳಸಂತೆಗೆ ಕೊಂಡೊಯ್ದ ಪ್ರಕರಣದಲ್ಲಿ ಭಾಗಿಯಾದ ಆರೋಪ ಎದುರಿಸುತ್ತಿರುವ ಕೆ.ಎಸ್. ವಿಶ್ವನಾಥ್ ಒಡೆತನದ ವಿನಾಯಕ್ ಟ್ರಾನ್ಸ್‌ಪೋರ್ಟ್ ಸಂಸ್ಥೆಗೆ ಬೆಂಗಳೂರು ನಗರ ಜಿಲ್ಲೆಯಲ್ಲಿ ಪಡಿತರ ಧಾನ್ಯಗಳ ಸಗಟು ಸಾಗಾಣಿಕೆ ನೀಡಿದ್ದ ಗುತ್ತಿಗೆಯನ್ನು ಅಮಾನತು ಮಾಡಿ ಬುಧವಾರ ಆದೇಶ ಹೊರಡಿಸಲಾಗಿದೆ.

ವೈಟ್‌ಫೀಲ್ಡ್‌ನಲ್ಲಿರುವ ಎಫ್‌ಸಿಐ ಉಗ್ರಾಣದಿಂದ ಕರ್ನಾಟಕ ಆಹಾರ ಮತ್ತು ನಾಗರಿಕ ಪೂರೈಕೆ ನಿಗಮದ ಬೊಮ್ಮನಹಳ್ಳಿಯ ಸಗಟು ಗೋದಾಮಿಗೆ ಸಾಗಿಸಬೇಕಿದ್ದ ಪಡಿತರ ಅಕ್ಕಿಯನ್ನು ಅಕ್ರಮವಾಗಿ ಮಂಡ್ಯಕ್ಕೆ ಕದ್ದೊಯ್ದಿರುವ ಆರೋಪದ ಮೇಲೆ ವಿಶ್ವನಾಥ್ ಸೇರಿದಂತೆ ಹಲವರ ವಿರುದ್ಧ ಮಂಡ್ಯ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಿಸಲಾಗಿದೆ. ಈ ಕುರಿತು 'ಪ್ರಜಾವಾಣಿ' ಬುಧವಾರದ ಸಂಚಿಕೆಯಲ್ಲಿ 'ಪಡಿತರಕ್ಕೆ ಕನ್ನ ಹಾಕಿದ ಸಾಗಣೆ ಗುತ್ತಿಗೆದಾರ' ಎಂಬ ಶೀರ್ಷಿಕೆಯಡಿ ವರದಿ ಪ್ರಕಟಿಸಿತ್ತು.

ಗುತ್ತಿಗೆದಾರರ ವಿರುದ್ಧವೇ ಪಡಿತರ ಕಳ್ಳಸಾಗಣೆ ಆರೋಪದಡಿ ಎಫ್‌ಐಆರ್ ದಾಖಲಾಗಿರುವ ಕುರಿತು ಆಹಾರ ಮತ್ತು ನಾಗರಿಕ ಪೂರೈಕೆ ಇಲಾಖೆ ಅಧಿಕಾರಿಗಳು ಬೆಂಗಳೂರು ನಗರ ಜಿಲ್ಲಾಧಿಕಾರಿಗೆ ಬುಧವಾರ ವರದಿ ಸಲ್ಲಿಸಿದ್ದರು. ಕೆ.ಎಸ್. ವಿಶ್ವನಾಥ್ ಒಡೆತನದ ವಿನಾಯಕ ಟ್ರಾನ್ಸ್‌ಪೋರ್ಟ್ ಸಂಸ್ಥೆಗೆ ಬೆಂಗಳೂರು ನಗರ ಜಿಲ್ಲೆಯಲ್ಲಿ ಪಡಿತರ ಧಾನ್ಯಗಳ ಸಗಟು ಸಾಗಣೆಗೆ ನೀಡಿದ್ದ ಗುತ್ತಿಗೆಯನ್ನು ಅಮಾನತುಗೊಳಿಸಿ ಜಿಲ್ಲಾಧಿಕಾರಿ ಜೆ. ಮಂಜುನಾಥ್ ಆದೇಶ ಹೊರಡಿಸಿದ್ದಾರೆ. ವಿನಾಯಕ ಟ್ರಾನ್ಸ್‌ಪೋರ್ಟ್ ಸಂಸ್ಥೆಗೆ ನೀಡಿದ್ದ ಸಾಗಾಣಿಕೆ ಕೆಲಸವನ್ನು ಬೆಂಗಳೂರು ಪೂರ್ವ ಟಿಎಪಿಸಿಎಂಎಸ್ ಹಾಗೂ ಕಿರಣ್ ಟ್ರಾನ್ಸ್‌ಪೋರ್ಟ್‌ಗೆ ವಹಿಸಲಾಗಿದೆ.

'ವಿನಾಯಕ ಟ್ರಾನ್ಸ್‌ಪೋರ್ಟ್ ಸಂಸ್ಥೆ ಬೆಂಗಳೂರು ನಗರ, ಚಿಕ್ಕಬಳ್ಳಾಪುರ ಮತ್ತು ಚಿತ್ರದುರ್ಗ ಜಿಲ್ಲೆಗಳಲ್ಲಿ ಪಡಿತರ ಧಾನ್ಯಗಳ ಸಗಟು ಸಾಗಾಣಿಕೆ ಗುತ್ತಿಗೆ ಹೊಂದಿದೆ. ಪಡಿತರ ಕಳ್ಳಸಾಗಣೆಯಲ್ಲಿ ಭಾಗಿಯಾಗಿರುವ ಸಂಸ್ಥೆಯನ್ನು ಕಪ್ಪುಪಟ್ಟಿಗೆ ಸೇರಿಸುವಂತೆ ಆಹಾರ ಇಲಾಖೆ ಆಯುಕ್ತರಿಗೆ ಪ್ರಸ್ತಾವ ಸಲ್ಲಿಸಲು ಸಿದ್ಧತೆ ಮಾಡಲಾಗುತ್ತಿದೆ' ಎಂದು ಇಲಾಖೆಯ ಮೂಲಗಳು ತಿಳಿಸಿವೆ.

ಕೋವಿಡ್: 29.75 ಲಕ್ಷಕ್ಕೆ ಏರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಕೋವಿಡ್ ಹೊಸ ಪ್ರಕರಣಗಳ ಸಂಖ್ಯೆ ಹನ್ನೊಂದು ದಿನಗಳಿಂದ ಸಾವಿರದ ಗಡಿಯೊಳಗೆ ಇದ್ದು, 539 ಮಂದಿ ಕೋವಿಡ್ ಪೀಡಿತರಾಗಿರುವುದು ಬುಧವಾರ ದೃಢಪಟ್ಟಿದೆ. ಈವರೆಗೆ ಸೋಂಕಿತರಾದವರ ಒಟ್ಟು ಸಂಖ್ಯೆ 29.75 ಲಕ್ಷ ದಾಟಿದೆ.


ಒಂದು ದಿನದ ಅವಧಿಯಲ್ಲಿ 1.11 ಲಕ್ಷ ಮಾದರಿಗಳನ್ನು ಪರೀಕ್ಷೆ ಮಾಡಲಾಗಿದೆ. ಸೋಂಕು ದೃಢ ಪ್ರಮಾಣವು ಶೇ 0.48 ರಷ್ಟು ವರದಿಯಾಗಿದೆ. 10 ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳ ಸಂಖ್ಯೆ ಎರಡಂಕಿ, 15 ಜಿಲ್ಲೆಗಳಲ್ಲಿ ಒಂದಂಕಿಯಲ್ಲಿದೆ. ಚಿಕ್ಕಬಳ್ಳಾಪುರ, ರಾಯಚೂರು, ವಿಜಯಪುರ ಹಾಗೂ ಯಾದಗಿರಿಯಲ್ಲಿ ಹೊಸ ಪ್ರಕರಣ ವರದಿಯಾಗಿಲ್ಲ.


ಕೇರಳಕ್ಕೆ ಹೊಂದಿಕೊಂಡಿರುವ ಗಡಿ ಜಿಲ್ಲೆಗಳಾದ ದಕ್ಷಿಣ ಕನ್ನಡದಲ್ಲಿ 75, ಕೊಡಗಿನಲ್ಲಿ 36 ಹಾಗೂ ಮೈಸೂರಿನಲ್ಲಿ 31 ಪ್ರಕರಣಗಳು ಪತ್ತೆಯಾಗಿವೆ. ಬೆಂಗಳೂರಿನಲ್ಲಿ 239 ಮಂದಿ ಸೋಂಕಿತರಾಗಿದ್ದಾರೆ. ಉಳಿದ ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳು 50ರ ಗಡಿಯೊಳಗೆ ಇವೆ.

ಸೋಂಕಿತರಲ್ಲಿ 591 ಮಂದಿ ಚೇತರಿಸಿಕೊಂಡಿದ್ದಾರೆ. ಗುಣಮುಖರಾದವರ ಒಟ್ಟು ಸಂಖ್ಯೆ 29.24 ಲಕ್ಷ ದಾಟಿದೆ. ಕೋವಿಡ್ ಸಕ್ರಿಯ ಪ್ರಕರಣಗಳ ಸಂಖ್ಯೆ 12,565ಕ್ಕೆ ಏರಿಕೆಯಾಗಿದೆ.

ಕೋವಿಡ್ ಪೀಡಿತರಲ್ಲಿ 17 ಮಂದಿ ಮೃತಪಟ್ಟಿರುವುದು ದೃಢಪಟ್ಟಿದೆ. 9 ಜಿಲ್ಲೆಗಳಲ್ಲಿ ಹೊಸದಾಗಿ ಮರಣ ಪ್ರಕರಣಗಳು ವರದಿಯಾಗಿವೆ. ಬೆಂಗಳೂರಿನಲ್ಲಿ 7, ದಕ್ಷಿಣ ಕನ್ನಡದಲ್ಲಿ 3, ಬೆಂಗಳೂರು ಗ್ರಾಮಾಂತರ, ದಾವಣಗೆರೆ, ಧಾರವಾಡ, ಗದಗ, ಹಾಸನ, ಹಾವೇರಿ ಹಾಗೂ ಕೊಪ್ಪಳದಲ್ಲಿ ತಲಾ ಒಬ್ಬರು ಸಾವಿಗೀಡಾಗಿದ್ದಾರೆ.

ಮರಣ ಪ್ರಮಾಣ ದರವು ಶೇ 3.15 ರಷ್ಟು ವರದಿಯಾಗಿದೆ. ಕೋವಿಡ್‌ನಿಂದ ಮೃತಪಟ್ಟವರ ಒಟ್ಟು ಸಂಖ್ಯೆ 37,780ಕ್ಕೆ ತಲುಪಿದೆ.





ವಕೀಲನ ಅಪಹರಣ; ಕಲಾವಿದರ ಬಂಧನ

ಬೆಂಗಳೂರು: ಕಂಪನಿಯೊಂದರಲ್ಲಿ ಹೂಡಿಕೆ ಮಾಡಿದ್ದ ಹಣ ವಾಪಸು ಬರಲಿಲ್ಲವೆಂಬ ಕಾರಣಕ್ಕೆ, ಕಂಪನಿಯ ಕಾನೂನು ಸಲಹೆಗಾರರಾಗಿದ್ದ ವಕೀಲನನ್ನೇ ಅಪಹರಿಸಿದ್ದ ಆರೋಪದಡಿ ಸಿನಿಮಾ ಸಾಹಸ ಕಲಾವಿದರು ಸೇರಿ 9 ಮಂದಿಯನ್ನು ಅನ್ನಪೂರ್ಣೇಶ್ವರಿನಗರ ಪೊಲೀಸರು ಬಂಧಿಸಿದ್ದಾರೆ.

'ತಿಗಳರಪಾಳ್ಯದ ಸಿದ್ದೇಶ್ (31), ಡಾಲರ್ಸ್ ಕಾಲೊನಿಯ ವಿಜಯ ಕುಮಾರ್ (33) ಮತ್ತು ಸಿನಿಮಾ ಸಾಹಸ ಕಲಾವಿದರಾಗಿದ್ದ ಬೊಮ್ಮನಹಳ್ಳಿಯ ಎಸ್. ಸಂಜಯ್ ಅಲಿಯಾಸ್ ಸಂಜು (27), ಶಾಂತಿಪ್ರಿಯ ಲೇಔಟ್‌ನ ನೆಲ್ಸನ್ (23), ಕತ್ರಿಗುಪ್ಪೆಯ ಯುಗಾನಂದ್ (22), ಬೆಟ್ಟಹಳ್ಳಿ ಲೇಔಟ್‌ನ ನರೇಶ್ (30), ಅರುಣ್ ಕುಮಾರ್ (29), ನ್ಯೂ ಗುಡ್ಡದಹಳ್ಳಿಯ ಯುವರಾಜ್ (31) ಹಾಗೂ ಅಶೋಕ (31) ಬಂಧಿತರು. ಕೃತ್ಯಕ್ಕೆ ಬಳಸಿದ್ದ ಎರಡು ಕಾರು, ಮೊಬೈಲ್‌ಗಳನ್ನು ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

'ನಾಗರಬಾವಿ ನಿವಾಸಿಯಾದ ವಕೀಲ ಅಭಯ್ ಕುಲಕರ್ಣಿ ಅವರನ್ನು ಅಪಹರಿಸಲಾಗಿತ್ತು. ಈ ಬಗ್ಗೆ ಪ್ರಕರಣ ದಾಖಲಾಗಿತ್ತು. ಅಂದ್ರಹಳ್ಳಿ ಬಳಿ ಆರೋಪಿಗಳು ಸಿಕ್ಕಿಬಿದ್ದರು . ಸದ್ಯ ನ್ಯಾಯಾಂಗ ಬಂಧನದಲ್ಲಿ ಇದ್ದಾರೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಹಣದ ಬಗ್ಗೆ ಮಾತನಾಡಲೆಂದು ಅಭಯ್ ಅವರನ್ನು ಸೆ. 20ರಂದು ಕರೆಸಿಕೊಂಡಿದ್ದ ಆರೋಪಿ ಸಿದ್ದೇಶ್, ತನ್ನ ಸ್ನೇಹಿತರ ಜೊತೆ ಸೇರಿ ಅಪಹರಣ ಮಾಡಿ ಅಕ್ರಮ ಬಂಧನದಲ್ಲಿಟ್ಟಿದ್ದ.'

'ಅಭಯ್ ಸಹೋದರನಿಗೆ ಕರೆ ಮಾಡಿದ್ದ ಆರೋಪಿಗಳು, '₹10 ಲಕ್ಷ ಕೊಟ್ಟರಷ್ಟೇ ಬಿಡುಗಡೆ ಮಾಡುತ್ತೇವೆ. ಇಲ್ಲದಿದ್ದರೆ, ಜೀವ ಸಹಿತ ಬಿಡುವುದಿಲ್ಲ' ಎಂದಿದ್ದರು. ಸಹೋದರ ದೂರು ನೀಡಿದ್ದರು' ಎಂದೂ ಮೂಲಗಳು ಹೇಳಿವೆ.

'ಭರ್ಜರಿ' ಸೇರಿ ಹಲವು ಸಿನಿಮಾಗಳಲ್ಲಿ ಸಾಹಸ ಕಲಾವಿದರಾಗಿ ನಟಿಸಿದ್ದವರು ಅಪಹರಣದಲ್ಲಿ ಭಾಗಿಯಾಗಿದ್ದಾರೆ' ಎಂದೂ ಮೂಲಗಳು ತಿಳಿಸಿವೆ.

ಮಲ್ಲೇಶ್ವರದ ರೈಲ್ವೆ ಜಮೀನಿಗೆ ಟಿಡಿಆರ್‌ಸಿ ಪಡೆದ ಆರೋಪ

'ಮಂತ್ರಿ'ಗೆ ಮಧ್ಯಂತರ ನಿರೀಕ್ಷಣಾ 'ಜಾಮೀನು

ಪ್ರಜಾವಾಣಿ ವಾರ್ತೆ

ಬೆಂಗಳೂರು: ರೈಲ್ವೆ ಇಲಾಖೆಗೆ ಸೇರಿದ ಜಮೀನಿಗೆ ಅಕ್ರಮವಾಗಿ ಅಭಿವೃದ್ಧಿ ಹಕ್ಕುಗಳ ವರ್ಗಾವಣೆ ಪ್ರಮಾಣಪತ್ರ (ಟಿಡಿಆರ್‌ಸಿ) ಪಡೆದ ಆರೋಪಕ್ಕೆ ಸಂಬಂಧಿಸಿದ ಪ್ರಕರಣದಲ್ಲಿ ಹಮಾರಾ ಶೆಲ್ಟರ್ಸ್ ಪ್ರೈವೇಟ್ ಲಿಮಿಟೆಡ್‌ನ ನಿರ್ದೇಶಕ ಸುಶೀಲ್ ಮಂತ್ರಿ ಅವರಿಗೆ ಭ್ರಷ್ಟಾಚಾರ ನಿಯಂತ್ರಣ ಕಾಯ್ದೆ ಪ್ರಕರಣಗಳ ವಿಶೇಷ ನ್ಯಾಯಾಲಯ 15 ದಿನಗಳ ಅವಧಿಗೆ ಮಧ್ಯಂತರ ನಿರೀಕ್ಷಣಾ ಜಾಮೀನು ಮಂಜೂರು ಮಾಡಿದೆ.

ಮಲ್ಲೇಶ್ವರದಲ್ಲಿರುವ ರೈಲ್ವೆ ಜಮೀನಿಗೂ ಅಕ್ರಮವಾಗಿ ಟಿಡಿಆರ್‌ಸಿ ಪಡೆದ ಆರೋಪದಡಿ ಬಿಬಿಎಂಪಿಯ ನಿವೃತ್ತ ಮುಖ್ಯ ಎಂಜಿನಿಯರ್ ರಾಮೇಗೌಡ, ಸುಶೀಲ್ ಮಂತ್ರಿ, ಹಮಾರಾ ಶೆಲ್ಟರ್ಸ್‌ನ ವಿ.ಎಸ್. ಕುಮಾರ್ ಮತ್ತು ಬಿಬಿಎಂಪಿ ಅಧಿಕಾರಿಗಳ ವಿರುದ್ಧ ಭ್ರಷ್ಟಾಚಾರ ನಿಗ್ರಹ ದಳ 2019ರಲ್ಲಿ ಪ್ರಕರಣ ದಾಖಲಿಸಿತ್ತು. ಈ ಪ್ರಕರಣದಲ್ಲಿ ನಿರಂತರವಾಗಿ ವಿಚಾರಣೆಗೆ ಕರೆಯುತ್ತಿರುವ ಎಸಿಬಿ ಅಧಿಕಾರಿಗಳು ತಮ್ಮನ್ನು ಬಂಧಿಸುವ ಸಾಧ್ಯತೆ ಇದೆ ಎಂದು ಆತಂಕಗೊಂಡಿರುವ ಸುಶೀಲ್ ಮಂತ್ರಿ ನಿರೀಕ್ಷಣಾ ಜಾಮೀನು ಕೋರಿ ವಿಶೇಷ ನ್ಯಾಯಾಲಯಕ್ಕೆ ಸೋಮವಾರ ಅರ್ಜಿ ಸಲ್ಲಿಸಿದ್ದಾರೆ.

ಅರ್ಜಿಯ ವಿಚಾರಣೆ ನಡೆಸಿರುವ ನ್ಯಾಯಾಲಯ, ಅಕ್ಟೋಬರ್ 13ರವರೆಗೂ ಮಧ್ಯಂತರ ನಿರೀಕ್ಷಣಾ ಜಾಮೀನು ಮಂಜೂರು ಮಾಡಿ ಮಂಗಳವಾರ ಆದೇಶ ಹೊರಡಿಸಿದೆ. ಪ್ರಕರಣದ ವಿಚಾರಣೆಯನ್ನು ಅಕ್ಟೋಬರ್ 5ಕ್ಕೆ ಮುಂದೂಡಿರುವ ನ್ಯಾಯಾಧೀಶ ಲಕ್ಷ್ಮೀನಾರಾಯಣ ಭಟ್ ಕೆ. ಅವರು, ಸುಶೀಲ್ ಮಂತ್ರಿಯವರ ಅರ್ಜಿಗೆ ಸಂಬಂಧಿಸಿದಂತೆ ಆಕ್ಷೇಪಣೆ ಸಲ್ಲಿಸುವಂತೆ ಎಸಿಬಿ ಪರ ಪಬ್ಲಿಕ್ ಪ್ರಾಸಿಕ್ಯೂಟರ್‌ಗೆ ನಿರ್ದೇಶನ ನೀಡಿದ್ದಾರೆ.

'ಅ. 13ಕ್ಕೂ ಮೊದಲು ಸುಶೀಲ್ ಮಂತ್ರಿಯವರ ಬಂಧನದ ಪ್ರಶ್ನೆ ಉದ್ಭವಿಸಿದಲ್ಲಿ ₹ 2 ಲಕ್ಷ ಮೌಲ್ಯದ ಬಾಂಡ್ ಹಾಗೂ ಒಬ್ಬ ವ್ಯಕ್ತಿಯ ವೈಯಕ್ತಿಕ ಭದ್ರತೆ ಪಡೆದು ಬಿಡುಗಡೆ ಮಾಡಬೇಕು' ಎಂದು ನ್ಯಾಯಾಲಯ ಆದೇಶದಲ್ಲಿ ತಿಳಿಸಿದೆ.

2018ರ ಆಗಸ್ಟ್ 20ರಂದು ತಮ್ಮ ವಿರುದ್ಧ ಎಸಿಬಿ ಅಧಿಕಾರಿಗಳು ಎಫ್‌ಐಆರ್ ದಾಖಲಿಸಿದ್ದರು. ತಾವು ಅಮಾಯಕರಾಗಿದ್ದು, ಯಾವುದೇ ತಪ್ಪು ಮಾಡಿಲ್ಲ. ಆದರೆ, ಎಸಿಬಿ ಪೊಲೀಸರು ಪದೇ ಪದೇ ವಿಚಾರಣೆಗೆ ಹಾಜರಾಗುವಂತೆ ಸೂಚನೆ ನೀಡುತ್ತಿದ್ದಾರೆ. ತಮ್ಮನ್ನು ಬಂಧಿಸುವ ಅಪಾಯವಿದೆ ಎಂದು ಸುಶೀಲ್ ಮಂತ್ರಿ ಅರ್ಜಿಯಲ್ಲಿ ಉಲ್ಲೇಖಿಸಿದ್ದರು.

ಗಲಭೆ: ಯತ್ನಾಳ ಸೇರಿ 134 ಆರೋಪಿಗಳು ಖುಲಾಸೆ

ಪ್ರಜಾವಾಣಿ ವಾರ್ತೆ

ವಿಜಯಪುರ: ನಗರದಲ್ಲಿ 2014 ಮೇ 26 ರಂದು ನಡೆದಿದ್ದ ಗಲಭೆಗೆ ಸಂಬಂಧಿಸಿದಂತೆ ಶಾಸಕ ಬಸವನಗೌಡ ಪಾಟೀಲ ಯತ್ನಾಳ ಹಾಗೂ ಎರಡು ಕೋಮಿಗೆ ಸೇರಿದ ಎಲ್ಲ ಆರೋಪಿಗಳನ್ನು ಬೆಂಗಳೂರಿನ ಜನ ಪ್ರತಿನಿಧಿಗಳ ವಿಶೇಷ ನ್ಯಾಯಾಲಯ ಬುಧವಾರ ಖುಲಾಸೆ ಮಾಡಿ, ಅಂತಿಮ ತೀರ್ಪು ನೀಡಿದೆ.

ನರೇಂದ್ರ ಮೋದಿ ಅವರು ಮೊದಲ ಬಾರಿಗೆ ಪ್ರಧಾನಿಯಾಗಿ ಪ್ರಮಾಣ ವಚನ ಸ್ವೀಕರಿಸಿದ್ದ ವೇಳೆ ನಗರದಲ್ಲಿ ನಡೆದ ವಿಜಯೋತ್ಸವದ ಸಂದರ್ಭದಲ್ಲಿ ನಡೆದಿದ್ದ ದಾಂದಲೆ ಬಳಿಕ ಕೋಮು ಸಂಘರ್ಷದ ರೂಪ ಪಡೆದುಕೊಂಡಿತ್ತು. ಎರಡು ಕೋಮುಗಳ ಮಧ್ಯೆ ಕಲ್ಲು ತೂರಾಟ ನಡೆದು, ಬೈಕ್ ಹಾಗೂ ಇತರೆ ವಾಹನಗಳಿಗೆ ಬೆಂಕಿ ಹಚ್ಚಲಾಗಿತ್ತು. ಈ ಸಂಬಂಧ ನಗರದ ಗಾಂಧಿಚೌಕ್ ಪೊಲೀಸರು, ಶಾಸಕ ಯತ್ನಾಳ ಸೇರಿದಂತೆ 134 ಜನರ ವಿರುದ್ಧ 29 ಪ್ರಕರಣ ದಾಖಲಿಸಿಕೊಂಡಿದ್ದರು.

ಕೋವಿಡ್ ಕಾರಣದಿಂದ ವಿಜಯಪುರ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳ ಕಚೇರಿ ಬಳಿ ಇರುವ ಚಿಂತನ ಸಭಾಂಗಣವನ್ನೇ ವಿಶೇಷ ನ್ಯಾಯಾಲಯವಾಗಿ ಪರಿವರ್ತನೆ ಮಾಡಿ, ವಿಡಿಯೋ ಕಾನ್ಫರೆನ್ಸ್ ಮೂಲಕ ಬುಧವಾರ ಆರೋಪಿಗಳ ಅಂತಿಮ ವಿಚಾರಣೆ ನಡೆಸಲಾಯಿತು.

ಏಳು ವರ್ಷಗಳ ಕಾಲ ಸುದೀರ್ಘ ವಿಚಾರಣೆ ಬಳಿಕ ಜನ ಪ್ರತಿನಿಧಿಗಳ ವಿಶೇಷ ನ್ಯಾಯಾಲಯ, ಎಲ್ಲ ಆರೋಪಿಗಳು ನಿರಪರಾಧಿಗಳು ಎಂದು ತೀರ್ಪು ನೀಡಿತು.

ಶಾಸಕ ಯತ್ನಾಳ ಹಾಗೂ ಇತರೆ ಎಲ್ಲ ಆರೋಪಿಗಳು ಹಾಜರಾಗಿದ್ದರು. ನ್ಯಾಯಾಲಯದ ತೀರ್ಪು ಸ್ವಾಗತ ಮಾಡಿದ ಯತ್ನಾಳ, 'ಕೆಲ ಕಿಡಿಗೇಡಿಗಳಿಂದ ನಡೆದ ಗಲಾಟೆಯಲ್ಲಿ ಅಮಾಯಕರು ಕಷ್ಟ ಅನುಭವಿಸುವಂತಾಗಿತ್ತು. ನ್ಯಾಯಾಲಯದ ತೀರ್ಪಿನಿಂದ ಎಲ್ಲರಿಗೂ ಸಂತಸವಾಗಿದೆ' ಎಂದರು.

ಕಲಾಸಿಪಾಳ್ಯದಲ್ಲಿ ಬೆಂಕಿ ಅವಘಡ

ಬೆಂಗಳೂರು: ಕಲಾಸಿಪಾಳ್ಯ ಠಾಣೆ ವ್ಯಾಪ್ತಿಯಲ್ಲಿರುವ ರಾಜಶ್ರೀ ಎಲೆಕ್ಟ್ರಾನಿಕ್ಸ್ ಮಳಿಗೆಯಲ್ಲಿ ಮಂಗಳವಾರ ರಾತ್ರಿ ಬೆಂಕಿ ಅವಘಡ ಸಂಭವಿಸಿದೆ.

'ಬಹುಮಹಡಿ ಕಟ್ಟಡದ ಕೆಳ ಹಾಗೂ ಮೊದಲ ಮಹಡಿಯಲ್ಲಿ ಮಳಿಗೆ ಇತ್ತು. ಎಲ್ಲ ಬಗೆಯ ಎಲೆಕ್ಟ್ರಾನಿಕ್ಸ್ ಉತ್ಪನ್ನಗಳನ್ನು ಮಾರಲಾಗುತ್ತಿತ್ತು. ರಾತ್ರಿ ಏಕಾಏಕಿ ಬೆಂಕಿ ಕಾಣಿಸಿಕೊಂಡು, ಮಳಿಗೆಯಲ್ಲಿದ್ದ ವಸ್ತುಗಳು ಸಂಪೂರ್ಣ ಸುಟ್ಟಿವೆ' ಎಂದು ಪೊಲೀಸರು ಹೇಳಿದರು.

'ಬೆಂಕಿ ಕಾಣಿಸುತ್ತಿದ್ದಂತೆ ಅಕ್ಕಪಕ್ಕದ ನಿವಾಸಿಗಳು, ಪೊಲೀಸ್ ಠಾಣೆ ಹಾಗೂ ಅಗ್ನಿಶಾಮಕ ದಳಕ್ಕೆ ಮಾಹಿತಿ ನೀಡಿದ್ದರು. ಸ್ಥಳಕ್ಕ ಬಂದ ದಳದ ಸಿಬ್ಬಂದಿ, ಎರಡು ಗಂಟೆ ಕಾರ್ಯಾಚರಣೆ ನಡೆಸಿ ಬೆಂಕಿ ನಂದಿಸಿದರು. ಎಲೆಕ್ಟ್ರಾನಿಕ್ಸ್ ವಸ್ತುಗಳು, ಪೀಠೋಪಕರಣಗಳೆಲ್ಲವೂ ಸುಟ್ಟು ಹೋಗಿವೆ. ಹಾನಿ ಪ್ರಮಾಣದ ಬಗ್ಗೆ ಮಾಲೀಕರಿಂದ ಮಾಹಿತಿ ಪಡೆಯಬೇಕಿದೆ' ಎಂದರು.

'ವಿದ್ಯುತ್ ಶಾರ್ಟ್ ಸರ್ಕಿಟ್‌ನಿಂದ ಬೆಂಕಿ ಹೊತ್ತಿರುವ ಅನುಮಾನವಿದೆ. ಅವಶೇಷಗಳ ಮಾದರಿ ಸಂಗ್ರಹಿಸಿ ತಪಾಸಣೆಗಾಗಿ ವಿಧಿವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಲಾಗಿದೆ' ಎಂದರು.

ಪಾಲಿಕೆ ಮಾಜಿ ಸದಸ್ಯೆ ಕೊಲೆ ಪ್ರಕರಣ

'ಪತಿ ಕುಟುಂಬ ಕಡೆಗಣಿಸಿದ್ದೇ ಹತ್ಯೆಗೆ ಕಾರಣ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಾಲಿಕೆಯ ಛಲವಾದಿಪಾಳ್ಯ ವಾರ್ಡ್‌ನ ಮಾಜಿ ಸದಸ್ಯೆ ರೇಖಾ ಕದಿರೇಶ್ ಹತ್ಯೆ ಪ್ರಕರಣದ ತನಿಖೆ ಪೂರ್ಣಗೊಳಿಸಿರುವ ಕಾಟನ್‌ಪೇಟೆ ಪೊಲೀಸರು, ನಗರದ 31ನೇ ಎಸಿಎಂಎಂ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದ್ದಾರೆ.

ಅಂಜನಪ್ಪ ಗಾರ್ಡನ್ ನಿವಾಸಿ ರೇಖಾ ಅವರನ್ನು ಜೂನ್ 24ರಂದು ಕಚೇರಿ ಎದುರೇ ಮಾರಕಾಸ್ತ್ರಗಳಿಂದ ಹೊಡೆದು ಕೊಲೆ ಮಾಡಲಾಗಿತ್ತು.

ಆರೋಪಿಗಳಾದ ಪೀಟರ್ (46), ಸೂರ್ಯ ಅಲಿಯಾಸ್ ಸೂರಜ್ (20), ಸ್ಟೀಫನ್ (21), ಪುರುಷೋತ್ತಮ (22), ಅಜಯ್ (21), ಅರುಣ್‌ಕುಮಾರ್ (36), ಮಾಲಾ (60) ಹಾಗೂ ಸೆಲ್ವರಾಜ್ ಅಲಿಯಾಸ್ ಕ್ಯಾಪ್ಟನ್ (36) ಅವರನ್ನು ಬಂಧಿಸಲಾಗಿತ್ತು.

ಇವರೆಲ್ಲರ ವಿರುದ್ಧ ಇದೀಗ 780 ಪುಟಗಳ ಆರೋಪ ಪಟ್ಟಿ ಸಲ್ಲಿಕೆಯಾಗಿದೆ. 55 ಸಾಕ್ಷ್ಯದಾರರ ಹೇಳಿಕೆ ಹಾಗೂ ಪುರಾವೆಗಳನ್ನು ಪಟ್ಟಿಯಲ್ಲಿ ದಾಖಲಿಸಲಾಗಿದೆ.



ರೇಖಾ ಕದಿರೇಶ್

ಪತಿ ಕುಟುಂಬದವರಿಂದಲೇ ಸಂಚು: 'ರೇಖಾ ಪತಿ ಕದಿರೇಶ್ ಅವರನ್ನು 2018ರಲ್ಲಿ ಕೊಲೆ ಮಾಡಲಾಗಿತ್ತು. ಇದಾದ ನಂತರ ಪ್ರತ್ಯೇಕವಾಗಿ ವಾಸವಿದ್ದ ರೇಖಾ, ಪತಿ ಕುಟುಂಬವನ್ನು ರಾಜಕೀಯವಾಗಿ ಕಡೆಗಣಿಸಿದ್ದರು. ಇದು ಕದಿರೇಶ್ ಅಕ್ಕ ಮಾಲಾ ಹಾಗೂ ಸಂಬಂಧಿಕರನ್ನು ಕೆರಳಿಸಿತ್ತು' ಎಂಬ ಸಂಗತಿಯನ್ನು ಪಟ್ಟಿಯಲ್ಲಿ ಉಲ್ಲೇಖಿಸಲಾಗಿದೆ.

'ಆರೋಪಿ ಪೀಟರ್, ಕದಿರೇಶ್ ಜೊತೆ ಓಡಾಡಿಕೊಂಡಿದ್ದ. ಕದಿರೇಶ್ ಕೊಲೆಯಾದ ನಂತರ, ರೇಖಾ ಅವರ ಅಂಗರಕ್ಷಕನಾಗಿ ಸುತ್ತಾಡುತ್ತಿದ್ದ. ಆತನನ್ನು ದೂರವಿಡಲು ರೇಖಾ ಯತ್ನಿಸುತ್ತಿದ್ದರು. ಇದರಿಂದ ಪೀಟರ್ ಸಿಟ್ಟಾಗಿದ್ದ.'

'ಪೀಟರ್‌ನನ್ನು ಸಂಪರ್ಕಿಸಿದ್ದ ಮಾಲಾ ಹಾಗೂ ಅವರ ಮಗ ಅರುಣ್‌ಕುಮಾರ್, ರೇಖಾ ಹತ್ಯೆಗೆ ಸಂಚು ರೂಪಿಸಿದ್ದರು.

'ನನ್ನ ಅಣ್ಣನ ಕೈಯಲ್ಲಿದ್ದ ರಾಜಕೀಯ ಶಕ್ತಿಯನ್ನು ರೇಖಾ ತನ್ನದಾಗಿಸಿಕೊಳ್ಳುತ್ತಿದ್ದಾಳೆ. ಆಕೆಯೊಬ್ಬಳೇ ಬೆಳೆಯುತ್ತಿದ್ದಾಳೆ. ಆ ರಾಜಕೀಯ ಶಕ್ತಿ ನಮ್ಮ ಕೈಗೆ ಬರಬೇಕು. ಹೀಗಾಗಿ, ರೇಖಾ ಕೊಲೆ ಮಾಡೋಣ' ಎಂದು ಮಾಲಾ ಹೇಳಿದ್ದಳು. ಅದಕ್ಕೆ ಇತರೆ ಆರೋಪಿಗಳು ಒಪ್ಪಿದ್ದರು.'

'ಕೋವಿಡ್ ಸಂದರ್ಭದಲ್ಲಿ ಕ್ಷೇತ್ರದ ಜನರಿಗೆ ರೇಖಾ ಉಚಿತವಾಗಿ ಊಟ ವಿತರಿಸುತ್ತಿದ್ದರು. ಊಟ ವಿತರಿಸಲೆಂದು ಕಚೇರಿಗೆ ಬಂದಿದ್ದ ವೇಳೆಯಲ್ಲೇ ಆರೋಪಿಗಳು ದಾಳಿ ಮಾಡಿ ರೇಖಾ ಅವರನ್ನು ಕೊಂದು ಪರಾರಿಯಾಗಿದ್ದರು' ಎಂಬ ಮಾಹಿತಿಯೂ ಪಟ್ಟಿಯಲ್ಲಿದೆ.

ಜಾಮೀನು ಅರ್ಜಿ ತಿರಸ್ಕೃತ: ದೋಷಾರೋಪ ಪಟ್ಟಿ ಸಲ್ಲಿಕೆಯಾಗುತ್ತಿದ್ದಂತೆ ಆರೋಪಿಗಳಾದ ಮಾಲಾ ಹಾಗೂ ಸೆಲ್ವರಾಜ್ ಅಲಿಯಾಸ್ ಕ್ಯಾಪ್ಟನ್ ಜಾಮೀನು ಕೋರಿ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು. ಅರ್ಜಿಯನ್ನು ಹೈಕೋರ್ಟ್ ತಿರಸ್ಕರಿಸಿದೆ.

ಗೃಹ ಇಲಾಖೆಯಲ್ಲಿ ಕೆಲಸದ ಆಮಿಷ; ₹1.61 ಕೋಟಿ ವಂಚನೆ ಆರೋಪ

ಸಚಿವಾಲಯದ 'ಎಸ್‌ಡಿಎ' ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗೃಹ ಇಲಾಖೆಯಲ್ಲಿ ಸಹಾಯಕ ಹುದ್ದೆ ಕೊಡಿಸುವ ಆಮಿಷವೊಡ್ಡಿ 55 ಅಭ್ಯರ್ಥಿಗಳಿಂದ ₹ 1.61 ಕೋಟಿ ಹಣ ಪಡೆದು ನಕಲಿ ನೇಮಕಾತಿ ಆದೇಶ ಪ್ರತಿ ನೀಡಿ ವಂಚಿಸಿದ್ದ ಆರೋಪದಡಿ ಸಚಿವಾಲಯದ ಎಸ್‌ಡಿಎ ಸೇರಿ ಇಬ್ಬರನ್ನು ಪೊಲೀಸರು ಬಂಧಿಸಿದ್ದಾರೆ.

'ಅಭಿಯೋಜನಾ ಇಲಾಖೆಯ ದ್ವಿತೀಯ ದರ್ಜೆ ಸಹಾಯಕಿ (ಎಸ್‌ಡಿಎ) ಶ್ರೀಲೇಖ, ಅವರ ಸ್ನೇಹಿತ ಮೋಹನ್ ಅಲಿಯಾಸ್ ಸಂಪತ್‌ಕುಮಾರ್ ಬಂಧಿತರು. ಇನ್ನೊಬ್ಬ ಆರೋಪಿ ರಾಧಾ ಉಮೇಶ್ ಎಂಬುವರು ತಲೆಮರೆಸಿಕೊಂಡಿದ್ದು, ಅವರನ್ನು ಪತ್ತೆ ಮಾಡಿ ವಿಚಾರಣೆ ನಡೆಸಬೇಕಿದೆ. ಆರೋಪಿ ಸಂಪತ್‌ಕುಮಾರ್, ಈ ಹಿಂದೆ ವಿಕಾಸಸೌಧದಲ್ಲಿ ಗುತ್ತಿಗೆ ಆಧಾರದಲ್ಲಿ ಸಹಾಯಕನಾಗಿ ಕೆಲಸ ಮಾಡುತ್ತಿದ್ದರು. ಕೆಲಸ ಬಿಟ್ಟ ನಂತರ, ಶ್ರೀಲೇಖ ಜೊತೆ ಒಡನಾಟವಿಟ್ಟುಕೊಂಡಿದ್ದರು' ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

'ಕುಮಾರಸ್ವಾಮಿ ಲೇಔಟ್ ನಿವಾಸಿ ಕೆ.ಜಿ. ಮಂಜುನಾಥ್ ಎಂಬುವರು ವಂಚನೆ ಬಗ್ಗೆ ದೂರು ನೀಡಿದ್ದರು. ಅದರನ್ವಯ ಆರೋಪಿಗಳ ವಿರುದ್ಧ ಸೆ. 25 ರಂದು ಎಫ್‌ಐಆರ್ ದಾಖಲಿಸಿಕೊಳ್ಳಲಾಗಿತ್ತು. ತನಿಖೆ ಕೈಗೊಂಡಾಗ ಆರೋಪಿಗಳು ಸಿಕ್ಕಿಬಿದ್ದರು' ಎಂದೂ ತಿಳಿಸಿದರು.

ಕೆಪಿಸಿಸಿ ಹೆಸರಿನಲ್ಲಿ ಪರಿಚಯ: 'ದೂರುದಾರ ಮಂಜುನಾಥ್ ಅವರನ್ನು 2019ರ ಮಾರ್ಚ್‌ನಲ್ಲಿ ಪರಿಚಯಿಸಿಕೊಂಡಿದ್ದ ರಾಧಾ ಉಮೇಶ್, ತಾವು ಕೆಪಿಸಿಸಿ ಕಾರ್ಮಿಕ ವಿಭಾಗದ ಉಪಾಧ್ಯಕ್ಷರೆಂದು ಹೇಳಿಕೊಂಡಿದ್ದರು. ವಿಧಾನಸೌಧದಲ್ಲಿ ಹಿರಿಯ ಅಧಿಕಾರಿಗಳ ಪರಿಚಯ ತಮಗಿದ್ದು, ಅವರ ಮೂಲಕ ಸರ್ಕಾರಿ ಕೆಲಸಗಳನ್ನು ಮಾಡಿಸಿಕೊಂಡಿರುವುದಾಗಿ ತಿಳಿಸಿದ್ದರು. ಈ ಸಂಗತಿ ದೂರಿನಲ್ಲಿದೆ' ಎಂದು ಪೊಲೀಸ್ ಅಧಿಕಾರಿ ಹೇಳಿದರು.

'ಕೆಲಸವಿಲ್ಲದ ತಮ್ಮನಿಗೆ ದಿನಗೂಲಿ ನೌಕರರನ್ನು ಪೂರೈಸುವ ಏಜೆನ್ಸಿ ಕೊಡಿಸುವಂತೆ ಮಂಜುನಾಥ್ ಕೋರಿದ್ದರು. ಅವರಿಂದ ₹ 15 ಲಕ್ಷ ಪಡೆದಿದ್ದ ರಾಧಾ, ಯಾವುದೇ ಏಜೆನ್ಸಿ ಕೊಡಿಸಿರಲಿಲ್ಲ. ಆ ಬಗ್ಗೆ ದೂರುದಾರ ವಿಚಾರಿಸಿದಾಗ, ಹಣವನ್ನು ಶ್ರೀಲೇಖ ಅವರಿಗೆ ಕೊಟ್ಟಿರುವುದಾಗಿ ಹೇಳಿದ್ದರು. ಆರೋಪಿ ಶ್ರೀಲೇಖ ಅವರನ್ನು ದೂರುದಾರರಿಗೆ ಪರಿಚಯ ಸಹ ಮಾಡಿಸಿದ್ದರು' ಎಂದೂ ತಿಳಿಸಿದರು.

'ಏಜೆನ್ಸಿ ಕೊಡಿಸುವುದು ತಡವಾಗುವುದಾಗಿ ಹೇಳಿದ್ದ ಶ್ರೀಲೇಖ, ತ್ವರಿತವಾಗಿ ಸರ್ಕಾರಿ ಉದ್ಯೋಗ ಕೊಡಿಸುವ ಭರವಸೆ ನೀಡಿದ್ದರು. 'ಗೃಹ ಇಲಾಖೆಯಲ್ಲಿ ಕಿರಿಯ ಸಹಾಯಕ, ಹಿರಿಯ ಸಹಾಯಕ ಮತ್ತು ಅಧೀಕ್ಷಕ ಹುದ್ದೆಗಳು ಖಾಲಿ ಇವೆ. ನಿಮ್ಮ ತಮ್ಮನಿಗೆ ಒಂದು ಹುದ್ದೆ ಕೊಡಿಸುತ್ತೇನೆ. ಬೇರೆ ಯಾರಿಗಾದರೂ ಕೆಲಸ ಬೇಕಿದ್ದರೆ ಹಣ ಕೊಡಿಸಿ, ಅವರಿಗೂ ಸರ್ಕಾರಿ ಕೆಲಸ ಸಿಗುತ್ತದೆ' ಎಂಬುದಾಗಿ ಶ್ರೀಲೇಖ ತಿಳಿಸಿದ್ದರು. ಮಾತು ನಂಬಿದ್ದ ದೂರುದಾರ, ಸಂಬಂಧಿಕರು ಹಾಗೂ ಸ್ನೇಹಿತರಿಂದ ಹಂತ ಹಂತವಾಗಿ ₹ 1.61 ಕೋಟಿ ಹಣವನ್ನು ಆರೋಪಿಗಳಿಗೆ ಕೊಡಿಸಿದ್ದರು. ಈ ಅಂಶವೂ ದೂರಿನಲ್ಲಿದೆ' ಎಂದೂ ಅಧಿಕಾರಿ ವಿವರಿಸಿದರು.

ನಕಲಿ ನೇಮಕಾತಿ ಆದೇಶ ಪ್ರತಿ: 'ಹಣ ಪಡೆದಿದ್ದ ಆರೋಪಿಗಳು, ನಕಲಿ ನೇಮಕಾತಿ ಆದೇಶ ಪ್ರತಿ ತಯಾರಿಸಿ ಕೆಲ ಅಭ್ಯರ್ಥಿಗಳಿಗೆ ನೀಡಿದ್ದರು. ಕೆಲಸಕ್ಕೆ ಹಾಜರಾಗಲು ಸಚಿವಾಲಯಕ್ಕೆ ಅಭ್ಯರ್ಥಿಗಳು ಹೋದಾಗ, ಆದೇಶ ಪ್ರತಿ ನಕಲಿ ಎಂಬುದು ಗೊತ್ತಾಗಿತ್ತು' ಎಂದೂ ಪೊಲೀಸ್ ಅಧಿಕಾರಿ ತಿಳಿಸಿದರು.

'ಸಾಲ ತೀರಿಸಿ, ಆಭರಣ ಖರೀದಿ'

'ಕೆಲಸದ ಆಮಿಷವೊಡ್ಡಿ ಹಣ ಪಡೆದಿದ್ದ ಶ್ರೀಲೇಖ, ತಾವು ಮಾಡಿಕೊಂಡಿದ್ದ ₹ 5 ಲಕ್ಷ ಸಾಲ ತೀರಿಸಿದ್ದರು. ಉಳಿದ ಹಣದಲ್ಲಿ ಚಿನ್ನಾಭರಣ ಹಾಗೂ ದ್ವಿಚಕ್ರ ವಾಹನ ಖರೀದಿಸಿದ್ದರು. ಕೃತ್ಯಕ್ಕೆ ಸಹಕರಿಸಿದ್ದ ಸ್ನೇಹಿತ ಸಂಪತ್‌ಕುಮಾರ್ ಅವರಿಗೂ ಹಣ ನೀಡಿದ್ದರು. ಈ ಬಗ್ಗೆ ಆರೋಪಿಗಳು ತಪ್ಪೊಪ್ಪಿಕೊಂಡಿದ್ದಾರೆ' ಎಂದು ಪೊಲೀಸ್ ಅಧಿಕಾರಿ ಹೇಳಿದರು.

ರೈತ ಮಹಿಳೆಯನ್ನು ತಳ್ಳಿದ್ದ ಪಿಎಸ್‌ಐ ಗಂಗಮ್ಮಗೆ ವರ್ಗಾವಣೆ ಶಿಕ್ಷೆ

ಶೇಂಗಾ ಬೀಜಕ್ಕಾಗಿ ನೂಕಾಟ

ಪ್ರಜಾವಾಣಿ ವಾರ್ತೆ

ಕಲಬುರ್ಗಿ: ಹಿಂಗಾರು ಹಂಗಾಮಿಗೆ ಭೂಮಿ ಸಜ್ಜುಗೊಳ್ಳುತ್ತಿದ್ದಂತೆಯೇ ಕಲಬುರ್ಗಿ ಹಾಗೂ ಯಾದಗಿರಿ ಜಿಲ್ಲೆಗಳಲ್ಲಿ ಶೇಂಗಾ ಬೀಜಕ್ಕೆ ಬೇಡಿಕೆ ಹೆಚ್ಚಾಗಿದೆ. ಆದರೆ, ಒಬ್ಬ ರೈತರಿಗೆ ಗರಿಷ್ಠ ಒಂದೂವರೆ ಕ್ವಿಂಟಲ್ ಮಾತ್ರ ಬೀಜ ನೀಡುವ ಸರ್ಕಾರದ ಧೋರಣೆ ರೈತರನ್ನು ರೊಚ್ಚಿಗೆಬ್ಬಿಸಿದೆ.

ಜಿಲ್ಲೆಯಲ್ಲಿ ಅತಿವೃಷ್ಟಿಯಿಂದಾಗಿ ಬೆಳೆ ನಷ್ಟವಾಗಿದ್ದು, ಕೊಳೆತು ಹೋದ ಬೆಳೆಯನ್ನು ನಾಶ ಮಾಡಿ ಭೂಮಿಯನ್ನು ಹದಗೊಳಿಸಿ ರೈತರು ಹಿಂಗಾರು ಬಿತ್ತನೆಗೆ ಅಣಿಯಾಗುತ್ತಿದ್ದಾರೆ. ಹೀಗಾಗಿ, ಬೀಜಕ್ಕೆ ಬೇಡಿಕೆ ಹೆಚ್ಚಾಗಿದೆ.



ಯಾದಗಿರಿ ಜಿಲ್ಲೆ ಯರಗೋಳ ಗ್ರಾಮದಲ್ಲಿ ರೈತ ಸಂಪರ್ಕ ಕೇಂದ್ರದಲ್ಲಿ ಶೇಂಗಾ ಬೀಜ ಪಡೆಯಲು ಮುಗಿಬಿದ್ದ ರೈತರು

ಕಲಬುರ್ಗಿ ಜಿಲ್ಲೆ ಚಿತ್ತಾಪುರ ತಾಲ್ಲೂಕಿನ ನಾಲವಾರ ಹೋಬಳಿ, ಸೇಡಂ ತಾಲ್ಲೂಕಿನ ಮುಧೋಳ ಹಾಗೂ ಅಡಕಿ ಹೋಬಳಿಗಳಲ್ಲಿ ಹೆಚ್ಚಾಗಿ ಶೇಂಗಾ ಬಿತ್ತನೆ ಮಾಡುತ್ತಾರೆ.

‘6 ಕ್ವಿಂಟಲ್ ಶೇಂಗಾ ಬೀಜದ ಅವಶ್ಯಕತೆ ಇದೆ. ಮೂರು ದಿನಗಳಿಂದ ಅಲೆಯುತ್ತಿದ್ದರೂ ಬೀಜ ಸಿಕ್ಕಿಲ್ಲ. ಇವರು ನೀಡುವ ಒಂದೂವರೆ ಕ್ವಿಂಟಲ್ ಬೀಜ ಸಾಕಾಗುವುದಿಲ್ಲ. ಸಣ್ಣ, ಅತಿಸಣ್ಣ ರೈತರಿಗೆ ಕವಡೆ ಕಾಸಿನ ಕಿಮ್ಮತ್ತು ನೀಡದೆ ಅನ್ಯಾಯ ಮಾಡಲಾಗುತ್ತಿದೆ’ ಎಂದು ಚಿತ್ತಾಪುರ ತಾಲ್ಲೂಕು ಲಾಡ್ಲಾಪುರದ ರೈತ ದುರ್ಗಪ್ಪ ನಾಟೀಕಾರ ಆಕ್ರೋಶ ವ್ಯಕ್ತಪಡಿಸಿದರು.

‘ಬೇಡಿಕೆ ಸಲ್ಲಿಸಿದಷ್ಟು ಬಿತ್ತನೆ ಬೀಜ ಲಭ್ಯವಿದ್ದು, ರೈತರು ಆತಂಕಕ್ಕೆ ಒಳಗಾಗಬಾರದು. ರೈತರ ಜಮೀನಿನ ಮಾಹಿತಿ ಆನ್‌ಲೈನ್‌ನಲ್ಲಿ ಇರುವುದರಿಂದ ಬೀಜ ಹಂಚಿಕೆಯಲ್ಲಿ ತಾರತಮ್ಯ ಸಾಧ್ಯವಾಗುವುದಿಲ್ಲ’ ಎಂದು ಕಲಬುರಗಿ ಜಂಟಿ ಕೃಷಿ ನಿರ್ದೇಶಕ ಡಾ. ರತೇಂದ್ರನಾಥ ಸೂಗೂರ ಹೇಳಿದರು.

‘ಯಾದಗಿರಿ, ಗುರುಮಠಕಲ್ ತಾಲ್ಲೂಕಿನಲ್ಲಿ ಮಾತ್ರ ಶೇಂಗಾ ಬೀಜಕ್ಕೆ ಹೆಚ್ಚಿನ ಬೇಡಿಕೆ ಇದೆ. ಈಚೆಗೆ ಉತ್ತಮ ಮಳೆಯಾಗಿದ್ದರಿಂದ ಶೇಂಗಾ ಬಿತ್ತನೆಗೆ ಬೇಡಿಕೆ ಹೆಚ್ಚಿದೆ. ಆದರೂ, ಬಿತ್ತನೆ ಬೀಜ ಕೊರತೆ ಇಲ್ಲ’ ಎಂದು ಯಾದಗಿರಿ ಜಂಟಿ ಕೃಷಿ ನಿರ್ದೇಶಕ ಎಸ್.ಎಸ್. ಅಭೀದ್ ತಿಳಿಸಿದರು.

ಪಿಎಸ್‌ಐ ವರ್ಗಾವಣೆ: ಗುರುಮಠಕಲ್ ಪಟ್ಟಣದ ರೈತ ಸಂಪರ್ಕ ಕೇಂದ್ರದಲ್ಲಿ ಮಂಗಳವಾರ ಬಿತ್ತನೆ ಬೀಜಕ್ಕಾಗಿ ಸರದಿಯಲ್ಲಿ ನಿಂತಿದ್ದ ರೈತ ಮಹಿಳೆಯನ್ನು ತಳ್ಳಿ ನೆಲಕ್ಕೆ ಕೆಡವಿದ ಪಿಎಸ್‌ಐ ಗಂಗಮ್ಮ ಭದ್ರಾಪುರ ವರ್ತನೆಗೆ ವ್ಯಾಪಕ ಟೀಕೆ ವ್ಯಕ್ತವಾಗುತ್ತಿದ್ದಂತೆ ಅವರನ್ನು ನಾರಾಯಣಪುರ ಪೊಲೀಸ್ ಠಾಣೆಗೆ ವರ್ಗಾವಣೆ ಮಾಡಿ ಯಾದಗಿರಿ ಎಸ್ಪಿ ವೇದಮೂರ್ತಿ ಆದೇಶ ಹೊರಡಿಸಿದ್ದಾರೆ.

ಬಿಎಸ್‌ವೈ ಭೇಟಿ ಮಾಡಿದ ಮಾಜಿ ಶಾಸಕರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಾಜಿ ಶಾಸಕ ಸುರೇಶ್ ಗೌಡ ಮತ್ತು ಸಿಂದಗಿ ಕ್ಷೇತ್ರದ ಟಿಕೆಟ್ ಆಕಾಂಕ್ಷಿ ರಮೇಶ ಭೂಸನೂರ ಅವರು ಬುಧವಾರ ಶಾಸಕ ಬಿ.ಎಸ್.ಯಡಿಯೂರಪ್ಪ ಅವರನ್ನು ಭೇಟಿ ಮಾಡಿ ಮಾತುಕತೆ ನಡೆಸಿದರು.

ತುಮಕೂರು ಜಿಲ್ಲಾ ಬಿಜೆಪಿ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡಿರುವ ಸುರೇಶ್ ಗೌಡ ಅವರು ಯಡಿಯೂರಪ್ಪ ಆಪ್ತ ಬಣದಲ್ಲಿ ಗುರುತಿಸಿಕೊಂಡಿದ್ದಾರೆ. ಪಕ್ಷದ ಬೆಳವಣಿಗೆಗಳಿಂದ ಬೇಸತ್ತಿರುವ ಅವರು ಕಾಂಗ್ರೆಸ್ ಸೇರುತ್ತಾರೆ ಎಂಬ ವದಂತಿ ದಟ್ಟವಾಗಿರುವ ಬೆನ್ನಲ್ಲೇ ಈ ಭೇಟಿ ಮಹತ್ವ ಪಡೆದಿದೆ.

ಸಿಂದಗಿ ಕ್ಷೇತ್ರದಲ್ಲಿ ಟಿಕೆಟ್ ಆಕಾಂಕ್ಷಿಯಾಗಿರುವ ರಮೇಶ ಭೂಸನೂರ ಅವರ ಕಳೆದ ವಿಧಾನಸಭಾ ಚುನಾವಣೆಯಲ್ಲಿ ಅಲ್ಪ ಮತಗಳಿಂದ ಸೋತಿದ್ದರು. ಹೀಗಾಗಿ ಮತ್ತೊಮ್ಮೆ ಅವಕಾಶ ನೀಡಬೇಕು ಎಂದು ಅವರು ಮನವಿ ಮಾಡಿರುವುದಾಗಿ ಮೂಲಗಳು ಹೇಳಿವೆ.

ಸಂಕ್ಷಿಪ್ತ ಸುದ್ದಿ

ನನ್ನ ಬಾಳಿನ ಸುದೈವ: ಎಸ್‌.ಎಂ. ಕೃಷ್ಣ



ಬೆಂಗಳೂರು: 'ಈ ಬಾರಿ ಮೈಸೂರು ದಸರಾ ಉದ್ಘಾಟಿಸುವ ಅವಕಾಶ ಸಿಕ್ಕಿರುವುದು ನನ್ನ ಬಾಳಿನ ಸುದೈವ' ಎಂದು ಬಿಜೆಪಿ ನಾಯಕ ಎಸ್‌.ಎಂ. ಕೃಷ್ಣ ಹೇಳಿದ್ದಾರೆ.

'ಮನುಕುಲಕ್ಕೆ ಬಂದಿರುವ ಕೋವಿಡ್ ಮಹಾಮಾರಿಯಿಂದ ತಾಯಿ ಚಾಮುಂಡೇಶ್ವರಿ ಮುಕ್ತಿಗೊಳಿಸಿ, ನಾಡು ನಿಮ್ಮ ನೇತೃತ್ವದಲ್ಲಿ ಮತ್ತೆ ಅಭಿವೃದ್ಧಿಯೆಡೆಗೆ ಮುನ್ನಡೆಯಲಿ' ಎಂದು ಆಶಿಸಿರುವ ಅವರು, ದಸರಾ ಉದ್ಘಾಟನೆಗೆ ಅವಕಾಶ ನೀಡಿದ್ದಕ್ಕೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿಗೆ ಧನ್ಯವಾದ ತಿಳಿಸಿದ್ದಾರೆ.

'ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ದೂರದೃಷ್ಟಿಯಿಂದ ಪ್ರತಿಷ್ಠಾಪನೆಗೊಂಡ ರೈತಾಪಿ ವರ್ಗವೇ ಆರ್ಥಿಕವಾಗಿರುವ ಮಂಡ್ಯ ಜಿಲ್ಲೆಯಿಂದ ಬಂದ ನನಗೆ ಈ ಅವಕಾಶ ಸಿಕ್ಕಿದೆ' ಎಂದೂ ಅವರು ಸಂತಸ ವ್ಯಕ್ತಪಡಿಸಿದ್ದಾರೆ.

'ಸಿದ್ದರಾಮಯ್ಯಗೆ ಪೂರ್ಣ ತಲೆಕೆಟ್ಟಿದೆ'


ಸದಾನಂದ ಗೌಡ

ಚಿಕ್ಕಬಳ್ಳಾಪುರ: ಆರ್‌ಎಸ್‌ಎಸ್ ಅನ್ನು ತಾಲಿಬಾನ್‌ಗೆ ಹೋಲಿಕೆ ಮಾಡಿರುವ ಕಾಂಗ್ರೆಸ್ ಮುಖಂಡ ಸಿದ್ದರಾಮಯ್ಯ ಅವರಿಗೆ ಸಂಪೂರ್ಣ ತಲೆಕೆಟ್ಟಿದೆ. ರಾಜಕಾರಣದಲ್ಲಿ ಸ್ವಲ್ಪ ತಲೆಕೆಟ್ಟರೆ ಪರವಾಗಿಲ್ಲ. ಆದರೆ ಪೂರ್ಣ ತಲೆಕೆಟ್ಟಿರಬಾರದು ಎಂದು ಸಂಸದ ಡಿ.ವಿ.ಸದಾನಂದಗೌಡ ತಿರುಗೇಟು ನೀಡಿದ್ದಾರೆ.

ತಾಲ್ಲೂಕಿನ ಗೊಲ್ಲಹಳ್ಳಿಯಲ್ಲಿ ಬುಧವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ತಾಲಿಬಾನ್ ಸಂಸ್ಕೃತಿ ಇದ್ದಿದ್ದರೆ ಸಿದ್ದರಾಮಯ್ಯ ವಿರೋಧ ಪಕ್ಷದ ನಾಯಕರಾಗಿ ಕಾರಿನಲ್ಲಿ ಓಡಾಡುತ್ತಿದ್ದರಾ? ತಾಲಿಬಾನ್ ಸಂಸ್ಕೃತಿ ಇಲ್ಲಿ ಇದಿದ್ದರೆ ಅವರ ಕಾಲಿಗೆ ಹಗ್ಗಕಟ್ಟಿ ಎಳೆದುಕೊಂಡು ಹೋಗುತ್ತಿದ್ದರು ಎಂದರು.

ಸಿದ್ದರಾಮಯ್ಯ ಭಯೋತ್ಪಾದಕ: ಕಟೀಲ್



ಮಂಗಳೂರು: 'ಕಾಂಗ್ರೆಸ್ ನಾಯಕ ಸಿದ್ದರಾಮಯ್ಯ ಅವರೇ ಒಬ್ಬ ಭಯೋತ್ಪಾದಕ' ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್‌ಕುಮಾರ್ ಕಟೀಲ್ ಟೀಕಿಸಿದರು.

'ಆರ್‌ಎಸ್‌ಎಸ್‌ನವರು ತಾಲಿಬಾನಿಗಳಿದ್ದಂತೆ' ಎಂಬ ಸಿದ್ದರಾಮಯ್ಯ ಹೇಳಿಕೆಗೆ ಬುಧವಾರ ಇಲ್ಲಿ ಪ್ರತಿಕ್ರಿಯಿಸಿದ ಅವರು, 'ರಾಜ್ಯದಲ್ಲಿ ಸಿದ್ದರಾಮಯ್ಯ ಆಡಳಿತ ಇರುವಾಗಲೇ ಹೆಚ್ಚು ಕೊಲೆ, ಸುಲಿಗೆ, ಗೋಹತ್ಯೆಗಳು ನಡೆದಿವೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪ್ರಶಾಂತ್ ಪೂಜಾರಿ, ಶರತ್ ಮಡಿವಾಳ, ದೀಪಕ್ ರಾವ್ ಹತ್ಯೆಗಳು ನಡೆದವು. ಅವರ ಅವಧಿಯಲ್ಲಿ ರಾಜ್ಯದಲ್ಲಿ 24 ಕಾರ್ಯಕರ್ತರ ಹತ್ಯೆಗಳು ನಡೆದಿವೆ. ಎ.ಟಿ.ಎಂ.ಗೆ ಹೋಗಿದ್ದ ಮಹಿಳೆಯ ಮೇಲೆ ಹಲ್ಲೆ ನಡೆಯಿತು. ಹೀಗಾಗಿ, ತಾಲಿಬಾನ್ ಸಂಸ್ಕೃತಿ ಅವರದ್ದೇ. ಆರ್‌ಎಸ್‌ಎಸ್ ಬಗ್ಗೆ ಮಾತನಾಡಲು ಅವರಿಗೆ ನೈತಿಕತೆ ಇಲ್ಲ' ಎಂದರು.

'ಕಾಂಗ್ರೆಸ್‌ನಲ್ಲಿ ಸಿದ್ದರಾಮಯ್ಯ ಅತಂತ್ರ ಸ್ಥಿತಿಯಲ್ಲಿದ್ದಾರೆ. ಅದಕ್ಕಾಗಿ ಅವರು ಇಂತಹ ಹೇಳಿಕೆ ನೀಡುತ್ತಿದ್ದಾರೆ' ಎಂದು ಹೇಳಿದರು.

30-35 ಕ್ಷೇತ್ರಗಳಲ್ಲಿ ಮಹಿಳೆಯರಿಗೆ ಟಿಕೆಟ್: ಎಚ್‌ಡಿಕೆ



ರಾಮನಗರ: ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ 30-35 ಕ್ಷೇತ್ರಗಳಲ್ಲಿ ಮಹಿಳೆಯರಿಗೆ ಟಿಕೆಟ್ ನೀಡಲಾಗುವುದು ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ. ಕುಮಾರಸ್ವಾಮಿ ಹೇಳಿದರು.

ಬಿಡದಿಯಲ್ಲಿ ನಡೆದಿರುವ ಜೆಡಿಎಸ್ ಸಂಘಟನಾ ಕಾರ್ಯಾಗಾರದಲ್ಲಿ ಬುಧವಾರ ಮಹಿಳಾ ಕಾರ್ಯಕರ್ತರ ಸಮಾವೇಶಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು. ಈಗಾಗಲೇ 7-8 ಕ್ಷೇತ್ರಗಳಲ್ಲಿ ಮಹಿಳಾ ಅಭ್ಯರ್ಥಿಗಳನ್ನು ಅಂತಿಮಗೊಳಿಸಿದ್ದೇವೆ. 2023ರಲ್ಲಿ ರಾಜ್ಯದಲ್ಲಿ ಅಧಿಕಾರಕ್ಕೆ ಬಂದರೆ ಶೇ 33 ಮಹಿಳಾ ಮೀಸಲಾತಿ ವಿಧೇಯಕಕ್ಕೆ ಶಕ್ತಿ ತುಂಬುತ್ತೇವೆ ಎಂದರು.

ಬಿಜೆಪಿ, ಕಾಂಗ್ರೆಸ್ ಗೆ ಹೋಲಿಸಿದರೆ ನಮ್ಮಲ್ಲಿ ಮಹಿಳಾ ಘಟಕ ಹಿಂದೆ ಉಳಿದಿದೆ. ಅದನ್ನು ಸರಿಪಡಿಸಿ ಬೂತ್ ಮಟ್ಟದಿಂದ ಶಕ್ತಿ ತುಂಬುವ ಕೆಲಸ ಮಾಡುತ್ತೇವೆ ಎಂದರು.

ಶಾಸಕಿ ಅನಿತಾ ಕುಮಾರಸ್ವಾಮಿ, ಜೆಡಿಎಸ್ ರಾಜ್ಯ ಘಟಕದ ಅಧ್ಯಕ್ಷೆ ಲೀಲಾದೇವಿ ಆರ್ ಪ್ರಸಾದ್ ಸೇರಿ ರಾಜ್ಯದ ವಿವಿಧೆಡೆಯಿಂದ 200ಕ್ಕೂ ಹೆಚ್ಚು ಮಂದಿ ಪಾಲ್ಗೊಂಡರು. ಜೆಡಿಎಸ್ ರಾಷ್ಟ್ರೀಯ ಅಧ್ಯಕ್ಷ ಎಚ್‌.ಡಿ. ದೇವೇಗೌಡ ಹಾಗೂ ರಾಜ್ಯ ಘಟಕದ ಅಧ್ಯಕ್ಷ ಎಚ್‌.ಕೆ. ಕುಮಾರಸ್ವಾಮಿ ಇದ್ದರು.

'ತುರ್ತು ಅವಕಾಶ' ಬಳಸಿಕೊಂಡ ರಾಜ್ಯ ಸರ್ಕಾರದಿಂದ ₹4,000 ಕೋಟಿ ವೆಚ್ಚ

ಕೆಟಿಪಿಪಿ ಕಾಯ್ದೆ ಉಲ್ಲಂಘನೆ

• ಅಕ್ರಂ ಮೊಹಮ್ಮದ್

> ಕೆಟಿಪಿಪಿ ಕಾಯ್ದೆಯಿಂದ 4-ಜಿ ವಿನಾಯ್ತಿ ಕೈಬಿಡಬೇಕು. ಪ್ರವಾಹ, ಸಾಂಕ್ರಾಮಿಕ ರೋಗಗಳ ಸಂದರ್ಭ ತುರ್ತು ಇರುತ್ತದೆ. ಆದರೆ ಉಳಿದ ಕೆಲಸದಲ್ಲಿ ಏನು ತುರ್ತು ಇದೆ?
> **ಜಿ.ಆರ್. ಅನಿಲ್‌ಕುಮಾರ್,** ಹೋರಾಟಗಾರ

> ತುರ್ತು ಅಗತ್ಯ ಎಂದರೆ ಏನು ಎಂಬುದರ ಕುರಿತು ಕೆಟಿಪಿಪಿ ಕಾಯ್ದೆಯಲ್ಲಿ ಸರಿಯಾದ ವಿವರಣೆ ಇಲ್ಲ. ಸರ್ಕಾರ ತಕ್ಷಣವೇ ಕಾಯ್ದೆಗೆ ತಿದ್ದುಪಡಿ ತರಬೇಕು.
> **ವೆಂಕಟೇಶ್ ದಳವಾಯಿ,** ಹೈಕೋರ್ಟ್ ವಕೀಲ

ಬೆಂಗಳೂರು: ಮುಖ್ಯಮಂತ್ರಿ ಮತ್ತು ಸಚಿವರ ಬಂಗಲೆಗಳ ನವೀಕರಣ, ವಾಹನಗಳ ಖರೀದಿ, ತ್ರಿತಾರಾ ಹೋಟೆಲ್ ನಿರ್ಮಾಣ, ನ್ಯಾಯಾಧೀಶರ ವಸತಿ ಗೃಹಗಳ ದುರಸ್ತಿ ಸೇರಿದಂತೆ ಹಲವು ಕೆಲಸಗಳಿಗೆ 'ತುರ್ತು ಅವಕಾಶ' ಬಳಸಿಕೊಂಡಿರುವ ರಾಜ್ಯ ಸರ್ಕಾರ 2018 ರಿಂದ ಈಚೆಗೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ (ಕೆಟಿಪಿಪಿ) ಕಾಯ್ದೆಯನ್ನು ಉಲ್ಲಂಘಿಸಿ ₹ 4,000 ಕೋಟಿ ವೆಚ್ಚ ಮಾಡಿದೆ.

ಕೆಟಿಪಿಪಿ ಕಾಯ್ದೆಯ ಸೆಕ್ಷನ್ 4-ಜಿ ಅಡಿಯಲ್ಲಿ ವಿನಾಯ್ತಿ ಪಡೆದುಕೊಂಡು ಟೆಂಡರ್ ಇಲ್ಲದೇ ಕಾಮಗಾರಿ ಮತ್ತು ಖರೀದಿ ನಡೆಸಿರುವುದು ವಿಧಾನ ಪರಿಷತ್‌ನಲ್ಲಿ ಜೆಡಿಎಸ್ ಸದಸ್ಯ ಕಾಂತರಾಜು ಅವರಿಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ನೀಡಿರುವ ಉತ್ತರದಲ್ಲಿ ಬಹಿರಂಗವಾಗಿದೆ. ಮುಖ್ಯಮಂತ್ರಿಯವರ ನಿವಾಸಕ್ಕೆ ಎಲ್‌ಇಡಿ ಟಿವಿಗಳ ಖರೀದಿ, ವಿವಿಧ ಇಲಾಖೆಗಳ ಬಳಕೆಗಾಗಿ ತಂತ್ರಾಂಶ ಅಭಿವೃದ್ಧಿಪಡಿಸುವುದಕ್ಕೂ ಈ ರೀತಿ ಹಣ ವ್ಯಯಿಸಲಾಗಿದೆ.

ಪ್ರಜಾವಾಣಿ ವಿಶೇಷ

ಶಿವಮೊಗ್ಗ ವಿಮಾನ ನಿಲ್ದಾಣದ ಕಾಮಗಾರಿ, ವಿಜಯಪುರ ವಿಮಾನ ನಿಲ್ದಾಣದ ಪ್ರಾಥಮಿಕ ಹಂತದ ಕಾಮಗಾರಿಗಳು, ಹಂಪಿ, ಬೇಲೂರು, ವಿಜಯಪುರ ಮತ್ತು ಬಾದಾಮಿಯಲ್ಲಿ ₹ 79.98 ಕೋಟಿ ವೆಚ್ಚದಲ್ಲಿ ತ್ರಿತಾರಾ ಹೋಟೆಲ್‌ಗಳ ನಿರ್ಮಾಣ ಕಾಮಗಾರಿಗಳಿಗೂ ಕೆಟಿಪಿಪಿ ಕಾಯ್ದೆಯ ಸೆಕ್ಷನ್ 4-ಜಿ ಯಿಂದ ವಿನಾಯ್ತಿ ನೀಡಲಾಗಿತ್ತು.

₹ 15 ಕೋಟಿ ವೆಚ್ಚದಲ್ಲಿ ಬೆಳ್ಳಂದೂರು ಮತ್ತು ವರ್ತೂರು ಕೆರೆಗಳ ಹೂಳೆತ್ತುವ ಕಾಮಗಾರಿ, ಮುಖ್ಯಮಂತ್ರಿಯವರ ಗೃಹ ಕಚೇರಿ ಕೃಷ್ಣಾದಲ್ಲಿ ₹ 99.80 ಲಕ್ಷ ವೆಚ್ಚದಲ್ಲಿ 'ಡಿಜಿಟಲ್ ಬ್ರಾಡ್‌ಕಾಸ್ಟಿಂಗ್ ಅಳವಡಿಕೆ', ಕೃಷ್ಣಾಕ್ಕೆ ₹ 88.50 ಲಕ್ಷ ವೆಚ್ಚದಲ್ಲಿ 130 ಇಂಚಿನ ಎಲ್‌ಇಡಿ ಪರದೆ ಖರೀದಿ, ಶಾಸಕರು, ಸಂಸದರು, ಅಧಿಕಾರಿಗಳ ಬಳಕೆಗೆ ವಾಹನಗಳ ಖರೀದಿಗೆ ಟೆಂಡರ್ ಇಲ್ಲದೆ ಹಣ ವೆಚ್ಚ ಮಾಡಲಾಗಿದೆ.

ಕರ್ನಾಟಕ ಗ್ರಾಮೀಣ ಮೂಲಸೌಕರ್ಯ ಅಭಿವೃದ್ಧಿ ನಿಗಮ (ಕೆಆರ್‌ಐಡಿಎಲ್) ಮತ್ತು ನಿರ್ಮಿತಿ ಕೇಂದ್ರಗಳ ಮೂಲಕ ಕೆಟಿಪಿಪಿ ಕಾಯ್ದೆಯ ಸೆಕ್ಷನ್ 4-ಜಿ ವಿನಾಯ್ತಿ ಪಡೆದು ಹಲವು ಕಾಮಗಾರಿಗಳನ್ನು ನಡೆಸಲಾಗಿದೆ. 2019ರಲ್ಲಿ ಬೆಂಗಳೂರು ಮೆಟ್ರೊ ರೈಲು ನಿಗಮದಿಂದ ನೂರಾರು ಕೋಟಿ ರೂಪಾಯಿ ವೆಚ್ಚದಲ್ಲಿ ರಸ್ತೆ ನಿರ್ಮಾಣ, ಬೇಲಿ ನಿರ್ಮಾಣ, ಕಟ್ಟಡ ಮತ್ತು ಶೆಡ್‌ಗಳ ನಿರ್ಮಾಣ, ಮೆಟ್ರೊ ಮಾರ್ಗದುದ್ದಕ್ಕೂ ವಿವಿಧ ತೆರವು ಕೆಲಸಗಳನ್ನು ಸೆಕ್ಷನ್ 4-ಜಿ ಅಡಿ ವಿನಾಯಿತಿ ನೀಡಿ ಕೆಆರ್‌ಐಡಿಎಲ್‌ಗೆ ವಹಿಸಲಾಗಿತ್ತು. ಅದೇ ವರ್ಷ ಬಿಡದಿಯಲ್ಲಿ ₹ 10 ಕೋಟಿ ವೆಚ್ಚದಲ್ಲಿ ರಸ್ತೆ ನಿರ್ಮಾಣಕ್ಕೂ ಕೆಆರ್‌ಐಡಿಎಲ್‌ಗೆ ನೇರ ಗುತ್ತಿಗೆ ನೀಡಲಾಗಿತ್ತು.

'2018 ರಿಂದ 2021ರ ಆಗಸ್ಟ್ ಅವಧಿಯಲ್ಲಿ ಕೆಟಿಪಿಪಿ ಕಾಯ್ದೆಯ ಸೆಕ್ಷನ್ 4-ಜಿ ಅಡಿಯಲ್ಲಿ ವಿನಾಯಿತಿ ನೀಡಿ 1,498 ಕೆಲಸಗಳನ್ನು ನಿರ್ವಹಿಸಲಾಗಿದೆ. ಯಾವುದರಲ್ಲಿಯೂ ಕಾನೂನು ಉಲ್ಲಂಘನೆಯಾಗಿಲ್ಲ' ಎಂದು ಮುಖ್ಯಮಂತ್ರಿ ಉತ್ತರದಲ್ಲಿ ತಿಳಿಸಿದ್ದಾರೆ.

'ತುರ್ತು ಅಗತ್ಯ ಅಥವಾ ಸಂಪುಟದ ಒಪ್ಪಿಗೆ ಪಡೆದು 4-ಜಿ ವಿನಾಯ್ತಿ ನೀಡಿ ಕಾಮಗಾರಿ ನಡೆಸಲಾಗುತ್ತದೆ. ಹೀಗಾಗಿ ಸಹಜವಾಗಿಯೇ ಸರ್ಕಾರ ಈ ನಿರ್ಧಾರಗಳನ್ನು ಸಮರ್ಥಿಸಿಕೊಳ್ಳುತ್ತದೆ. ಕೆಲವು ಕಾಮಗಾರಿಗಳಲ್ಲಿ ಟೆಂಡರ್ ಅಗತ್ಯವಿದ್ದರೂ, ಪರಿಣಿತರ ಸೇವೆ ಅಗತ್ಯವಿರುವುದರಿಂದ ವಿನಾಯ್ತಿ ನೀಡಲಾಗುತ್ತದೆ' ಎನ್ನುತ್ತವೆ ಸರ್ಕಾರದ ಮೂಲಗಳು.

4-ಜಿ ವಿನಾಯ್ತಿ ವಿವರ

ವರ್ಷ	ಮೊತ್ತ (₹ ಕೋಟಿಗಳಲ್ಲಿ)
2018	₹1,235.4
2019	₹1,000.99
2020	₹1,466.99
2021(ಆಗಸ್ಟ್‌ವರೆಗೆ)	₹ 473.6


ದಾವಣಗೆರೆಯಲ್ಲಿ ಬುಧವಾರ ಹಮ್ಮಿಕೊಂಡಿದ್ದ ಅಖಿಲ ಭಾರತ ವಿಶ್ವಕರ್ಮ ಪರಿಷತ್ ಉದ್ಘಾಟನಾ ಸಮಾರಂಭದಲ್ಲಿ ಹಾಸನ ಜಿಲ್ಲೆಯ ಅರೆಮಾದೇನಹಳ್ಳಿಯ ವಿಶ್ವಕರ್ಮ ಮಹಾಸಂಸ್ಥಾನದ ಶಿವ ಸುಜ್ಞಾನತೀರ್ಥ ಸ್ವಾಮೀಜಿ ಮಾತನಾಡಿದರು. ಪರಿಷತ್‌ನ ರಾಷ್ಟ್ರೀಯ ಅಧ್ಯಕ್ಷ ಎಚ್‌ವಿ. ಸತೀಶ್‌ಕುಮಾರ್, ಶಂಕರಾತ್ಮಾನಂದ ಸರಸ್ವತಿ ಸ್ವಾಮೀಜಿ, ಗೌರವಾಧ್ಯಕ್ಷ ನಾಗೇಂದ್ರಾಚಾರ್ ಬಸಾಪುರ, ಕೆಪಿಸಿಸಿಯ ಇತರೆ ಹಿಂದುಳಿದ ವರ್ಗಗಳ ವಿಭಾಗದ ಅಧ್ಯಕ್ಷ ಎಂ.ಡಿ. ಲಕ್ಷ್ಮೀನಾರಾಯಣ್ ಇದ್ದಾರೆ.

ಉಪ್ಪಿನಕಾಯಿಯಂತೆ ವಿಶ್ವಕರ್ಮರ ಬಳಕೆ: ಶಂಕರಾತ್ಮಾನಂದ ಸರಸ್ವತಿ ಸ್ವಾಮೀಜಿ ಕಿಡಿ

ಪ್ರಜಾವಾಣಿ ವಾರ್ತೆ

ದಾವಣಗೆರೆ: 'ಕೋವಿಡ್ ಸಂಕಷ್ಟ ಕಾಲದಲ್ಲಿ ವಿಶ್ವಕರ್ಮ ಸಮಾಜಕ್ಕೆ ನೆರವು ನೀಡಲು ಸರ್ಕಾರ ಮತ್ತು ಯಾವುದೇ ರಾಜಕೀಯ ಪಕ್ಷವೂ ಮುಂದೆ ಬರಲಿಲ್ಲ. ನಮ್ಮ ಸಮಾಜವನ್ನು ಊಟಕ್ಕೆ ಬೇಕಾದ ಉಪ್ಪಿನಕಾಯಿಯಂತೆ ಬಳಸಿಕೊಳ್ಳಲಾಗುತ್ತಿದೆ' ಎಂದು ಚನ್ನಗಿರಿ ತಾಲ್ಲೂಕಿನ ಬೆಲಗೂರು ವಿಶ್ವಕರ್ಮ ಮಹಾಸಂಸ್ಥಾನ ಕಾಶಿಮಠದ ಶಂಕರಾತ್ಮಾನಂದ ಸರಸ್ವತಿ ಸ್ವಾಮೀಜಿ ಆಕ್ರೋಶ ವ್ಯಕ್ತಪಡಿಸಿದರು.

ನಗರದಲ್ಲಿ ಬುಧವಾರ ನಡೆದ ವಿಶ್ವಕರ್ಮ ಮಹೋತ್ಸವ ಹಾಗೂ ಅಖಿಲ ಭಾರತ ವಿಶ್ವಕರ್ಮ ಪರಿಷತ್ ಉದ್ಘಾಟನಾ ಸಮಾರಂಭದ ಸಾನ್ನಿಧ್ಯ ವಹಿಸಿದ್ದ ಅವರು, 'ಕೋವಿಡ್ ಸಂದರ್ಭದಲ್ಲೂ ದೊಡ್ಡ ಸಮುದಾಯಗಳ ನಿಗಮಗಳಿಗೆ ಕೋಟ್ಯಂತರ ರೂಪಾಯಿ ನೀಡಲಾಗಿದೆ. ಆದರೆ, ನಮ್ಮದು ಸಣ್ಣ ಸಮುದಾಯ ಎಂಬ ಕಾರಣಕ್ಕೆ ವಿಶ್ವಕರ್ಮ ಅಭಿವೃದ್ಧಿ ನಿಗಮದ ₹ 25 ಕೋಟಿ ಅನುದಾನದಲ್ಲಿ ₹ 15 ಕೋಟಿಯನ್ನು ವಾಪಸ್ ಪಡೆಯಲಾಗಿದೆ' ಎಂದು ಕಿಡಿಕಾರಿದರು.

'ಸರ್ಕಾರ ವಿಶ್ವಕರ್ಮ ಜಯಂತಿಯನ್ನು ಆಚರಿಸುತ್ತಿದೆ. ವಿಶ್ವಕರ್ಮ ಅಭಿವೃದ್ಧಿ ನಿಗಮವನ್ನೂ ರಚಿಸಿದೆ. ಆದರೆ, ಇವೆಲ್ಲ ಹೆಸರಿಗೆ ಮಾತ್ರ. ವಿಶ್ವಕರ್ಮ ಸಮಾಜದ ಕೊಡುಗೆಗಳು ಹೊಗಳುವುದಕ್ಕಷ್ಟೇ ಸೀಮಿತವಾಗುತ್ತಿವೆ. ನಮ್ಮ ಸಮಾಜಕ್ಕೆ ಆರ್ಥಿಕ, ಶೈಕ್ಷಣಿಕ, ರಾಜಕೀಯ ಪ್ರಾತಿನಿಧ್ಯ ಸಿಗುತ್ತಿಲ್ಲ. ಸರ್ಕಾರ ಹಾಗೂ ರಾಜಕೀಯ ಪಕ್ಷಗಳು ನಮ್ಮ ಸಮಾಜವನ್ನು ಕಡೆಗಣಿಸುತ್ತಿವೆ' ಎಂದು ಅಸಮಾಧಾನ ವ್ಯಕ್ತಪಡಿಸಿದರು.

'ಶಿಲ್ಪಕಲಾ ವಿಶ್ವವಿದ್ಯಾಲಯ ನಿರ್ಮಿಸುವಂತೆ ಐದಾರು ವರ್ಷಗಳಿಂದ ಮಾಡುತ್ತಿರುವ ಮನವಿಗೆ ಸರ್ಕಾರ ಸ್ಪಂದಿಸುತ್ತಿಲ್ಲ. ಇದೇ ರೀತಿ ಮುಂದುವರಿದರೆ ಇತರ ಸಮುದಾಯಗಳಂತೆ ನಮ್ಮ ಸಮಾಜವೂ ಹಕ್ಕಿಗಾಗಿ ಹೋರಾಟದ ಹಾದಿಯನ್ನು ಹಿಡಿಯಬೇಕಾಗುತ್ತದೆ' ಎಂದು ಸ್ವಾಮೀಜಿ ಎಚ್ಚರಿಕೆ ನೀಡಿದರು.

ಹಾಸನ ಜಿಲ್ಲೆಯ ಅರಕಲಗೂಡಿನ ಅರೆಮಾದೇನಹಳ್ಳಿಯ ವಿಶ್ವಕರ್ಮ ಮಹಾಸಂಸ್ಥಾನದ ಶಿವ ಸುಜ್ಞಾನತೀರ್ಥ ಸ್ವಾಮೀಜಿ, 'ಎಲ್ಲಾ ಧರ್ಮ-ಪಂಥದವರಿಗೂ ಸಮಾನವಾಗಿ ಸೇವೆ ಸಲ್ಲಿಸುತ್ತಿದ್ದರೂ ನಮ್ಮ ಸಮಾಜದವರಿಗೆ ಇನ್ನೂ ತಮ್ಮ ಕಾಲ ಮೇಲೆ ನಿಲ್ಲಲು ಸಾಧ್ಯವಾಗದೇ ಇರುವುದು ವಿಪರ್ಯಾಸ. ಹೀಗಾಗಿ ಸಮಾಜದ ಮಠಾಧೀಶರ ನೇತೃತ್ವದಲ್ಲಿ 2022ರಲ್ಲಿ ಬೆಂಗಳೂರಿನಲ್ಲಿ ಬೃಹತ್ ಸಮಾವೇಶ ನಡೆಸಲು ನಿರ್ಧರಿಸಲಾಗಿದೆ' ಎಂದು ತಿಳಿಸಿದರು.

ಮುಂದುವರಿದ ಬಿಜೆಪಿ–ಕಾಂಗ್ರೆಸ್ ಟ್ವೀಟ್ ಸಮರ

'ಸಂಘದ ಶಾಖೆಗೆ ಸಿದ್ದರಾಮಯ್ಯಗೆ ಆಹ್ವಾನ'

ಪ್ರಜಾವಾಣಿ ವಾರ್ತೆ


ಸಿ.ಟಿ.ರವಿ

ಬೆಂಗಳೂರು: 'ರಾಷ್ಟ್ರೀಯ ಸ್ವಯಂ ಸೇವಕ ಸಂಘ ಎಂದರೇನು ಎಂಬುದು ನಿಮ್ಮ ಘನ ಹೃದಯಕ್ಕೆ ಅರ್ಥವಾಗಬೇಕಾದರೆ ನೀವು ಮೊದಲು ಆರ್‌ಎಸ್‌ಎಸ್ ಶಾಖೆಗೆ ಬರಬೇಕು' ಎಂದು ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ. ರವಿ ಹೇಳಿದ್ದಾರೆ.

ಆರ್‌ಎಸ್‌ಎಸ್ ಭಾರತದ ತಾಲಿಬಾನ್ ಎಂದು ಸಿದ್ದರಾಮಯ್ಯ ನೀಡಿರುವ ಹೇಳಿಕೆಗೆ ಸಂಬಂಧಿಸಿದಂತೆ ಟ್ವೀಟ್ ಸಮರ ಬುಧವಾರವೂ ಮುಂದುವರಿದಿದೆ. 'ಆರ್‌ಎಸ್‌ಎಸ್ ಅನ್ನು ಹೊರಗಿನಿಂದ ಅರ್ಥ ಮಾಡಿಕೊಳ್ಳುವುದು ಕಷ್ಟ. ಏಕೆಂದರೆ ಅವರು ಕೊಡುವ ಶಿಕ್ಷಣ, ಪ್ರೇರಣೆಯನ್ನು ಹತ್ತಿರದಿಂದ ನೋಡಿದಾಗ ನಿಮಗೆ ಅರ್ಥವಾಗಬಹುದು' ಎಂದು ಹೇಳಿದ್ದಾರೆ.

'ನೀವು ಹತ್ತಿರಕ್ಕೆ ಬರದೇ ಸಂಘವನ್ನು ನೋಡುವುದು ಅಂಧನೊಬ್ಬ ಆನೆಯನ್ನು ಮುಟ್ಟಿ ವರ್ಣಿಸಿದಂತಾಗುತ್ತದೆ. ಆರ್‌ಎಸ್‌ಎಸ್ ಕಾರ್ಖಾನೆಯಲ್ಲ. ದೇಶವನ್ನು ಸಂಘಟಿಸಲು ಮತ್ತು ಸದೃಢ ಭಾರತವನ್ನು ಕಟ್ಟಲು ಕಾರ್ಯಕರ್ತರನ್ನು ರೂಪಿಸುವ ಗರಡಿ ಮನೆ' ಎಂದಿದ್ದಾರೆ.

ಮಿದುಳಿಗೆ ಪೊರೆ: 'ನನ್ನ ವಾಹನ ಅಪಘಾತ ಆದ ದಿನ ವಾಹನ ಚಲಾಯಿಸುತ್ತಿದ್ದವರು ಯಾರು ಎಂಬುದು ಟೋಲ್ ಸೇರಿದಂತೆ ವಿವಿಧೆಡೆ ಇರುವ ಸಿಸಿಟಿವಿ ಕ್ಯಾಮೆರಾಗಳಲ್ಲಿ ಆಧಾರ ಇದೆ. ಆಗ ನಿಮ್ಮದೇ ಸರ್ಕಾರದ ಆಡಳಿತ ಇತ್ತು. ಆ ದಿನ ಸ್ಥಳದಲ್ಲಿ ದಾಖಲಿಸಿದ ಎಫ್‌ಐಆರ್ ಕೂಡ ಇದೆ. ಇಷ್ಟೆಲ್ಲದರ ಅರಿವೂ ನಿಮಗಿದೆ. ದುರಂತ ಎಂದರೆ ನಿಮ್ಮ ಮಿದುಳಿಗೆ ಪೊರೆ ಆವರಿಸಿದೆ. ಕಣ್ಣಿಗೆ ಪೊರೆ ಬಂದರೆ ಕ್ಯಾಟರಾಕ್ಟ್ ಮಾಡಿಸಬಹುದು. ನಿಮ್ಮ ಮಿದುಳಿನ ಪೊರೆಗೆ ಮದ್ದೆಲ್ಲಿ' ಎಂದು ವ್ಯಂಗ್ಯವಾಡಿದ್ದಾರೆ.

'ಸ್ನೇಹಿತರೊಟ್ಟಿಗೆ ಸೇರಿ ಕುಡಿದು ತೇಲಾಡುತ್ತಿದ್ದವರು ಯಾರು ಎಂದು ಮೈಸೂರಿನ ನಾಗರೀಕರು ಈಗಲೂ ಮರೆತಿರಲಿಕ್ಕಿಲ್ಲ. ಒಮ್ಮೆ ಕೇಳಿ ನೋಡಿ ಸಿದ್ದರಾಮಯ್ಯನವರೇ' ಎಂದು ರವಿ ಟ್ವೀಟ್ ಮೂಲಕ ಕಟಕಿಯಾಡಿದ್ದಾರೆ.

ಪರೇಡ್‌ಗೆ ಆಹ್ವಾನಿಸಿದ್ದ ನೆಹರೂ: '1962 ರಲ್ಲಿ ಭಾರತ ಚೀನಾ ಮಧ್ಯೆ ನಡೆದ ಯುದ್ಧದ ಸಂದರ್ಭದಲ್ಲಿ ಆರ್‌ಎಸ್‌ಎಸ್ ಸ್ವಯಂ ಸೇವಕರು ಸಲ್ಲಿಸಿದ ಸೇವೆಯನ್ನು ಗುರುತಿಸಿ ಅಂದಿನ ಪ್ರಧಾನಿ ನೆಹರೂ ಅವರು 1963ರ ಗಣರಾಜ್ಯೋತ್ಸವ ದಿನಾಚರಣೆ ಪರೇಡ್‌ಗೆ ಸ್ವಯಂ ಸೇವಕರನ್ನು ಆಹ್ವಾನಿಸಿದ್ದರು' ಎಂದು ಆರೋಗ್ಯ ಸಚಿವ ಡಾ.ಕೆ.ಸುಧಾಕರ್ ಟ್ವೀಟ್ ಮಾಡಿದ್ದಾರೆ.


ಕೆ.ಸುಧಾಕರ್

'ಆರ್‌ಎಸ್‌ಎಸ್ ಅನ್ನು ತಾಲಿಬಾನಿಗೆ ಹೋಲಿಸುವ ಮೂಲಕ ಕಾಂಗ್ರೆಸ್ ನಾಯಕರು ತಮ್ಮ ವೈಚಾರಿಕ ದಿವಾಳಿತನ ಪ್ರದರ್ಶಿಸಿದ್ದಾರೆ' ಎಂದು ಕಿಡಿಕಾರಿದ್ದಾರೆ.

ತಂದೆ-ತಾಯಿ ಇದ್ದಂತೆ: 'ನಮಗೆ ಬಿಜೆಪಿ ಮತ್ತು ಆರ್‌ಎಸ್‌ಎಸ್ ತಂದೆ-ತಾಯಿ ಇದ್ದ ಹಾಗೆ. ಜನಪರ ಚಿಂತನೆ, ಆಡಳಿತದಲ್ಲಿ ನಿಷ್ಠೆ ಮತ್ತು ಪ್ರಾಮಾಣಿಕತೆಯನ್ನು ಬಿಜೆಪಿ ಹೇಳಿಕೊಟ್ಟಿದ್ದರೆ, ಆರ್‌ಎಸ್‌ಎಸ್ ನಮಗೆ ದೇಶಭಕ್ತಿ, ಸಾಮಾಜಿಕ ಸೇವೆಯಂತಹ ಉದಾತ್ತ ಗುಣಗಳನ್ನು ಹೇಳಿ ಕೊಟ್ಟಿದೆ ಎಂದು ಲೋಕೋಪಯೋಗಿ ಸಚಿವ ಸಿ.ಸಿ.ಪಾಟೀಲ ಹೇಳಿಕೆಯಲ್ಲಿ ತಿಳಿಸಿದ್ದಾರೆ.


ಸಿ.ಸಿ.ಪಾಟೀಲ

'ವ್ಯಕ್ತಿಗೆ ಎರಡು ಕಣ್ಣುಗಳು ಹೇಗೆ ಮುಖ್ಯವೋ, ಹಾಗೆಯೇ ನಮಗೆ ಬಿಜೆಪಿ ಮತ್ತು ಆರ್‌ಎಸ್‌ಎಸ್ ಎರಡು ಕಣ್ಣುಗಳು ಇದ್ದ ಹಾಗೆ, ಆದ್ದರಿಂದ ನಮ್ಮ ತಂದೆ-ತಾಯಿಗಳಿಗೆ ಅವಹೇಳನ ಮಾಡುವವರ ಮುಂದೆ ನಾವು ಕೈಕಟ್ಟಿ ಕೂರುವುದಿಲ್ಲ' ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಕೋಮುವಾದವೂ ತಾಲಿಬಾನ್ ಸಂಸ್ಕೃತಿಯೇ: ಕಾಂಗ್ರೆಸ್


ಆರ್‌ಧ್ರುವ ನಾರಾಯಣ

'ತಾಲಿಬಾನ್ ಸಂಸ್ಕೃತಿ ಎಂದರೆ ಬಂದೂಕು ಹಿಡಿಯಲೇಬೇಕಿಲ್ಲ. ಜಾತಿ, ಧರ್ಮಗಳ ನಡುವೆ ವಿಷಬೀಜ ಬಿತ್ತಿ ಕಂದಕ ಮೂಡಿಸುವ ಕೋಮುವಾದವೂ ತಾಲಿಬಾನ್ ಸಂಸ್ಕೃತಿಯೇ' ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷ ಧ್ರುವನಾರಾಯಣ ಹೇಳಿದರು.

ಬಿಜೆಪಿಯವರು ತಾಲಿಬಾನ್‌ನವರು ಎಂದು ಸಿದ್ದರಾಮಯ್ಯ ನೀಡಿದ ಹೇಳಿಕೆಯನ್ನು ಅವರು ಸಮರ್ಥಿಸಿದರು.

'ಈ ಹೇಳಿಕೆ ಮೊದಲು ಬಂದಿದ್ದೇ ನನ್ನಿಂದ. ಆರೆಸ್ಸೆಸ್‌ನಿಂದ ಸಾಮರಸ್ಯ ಮೂಡಿಸುವ ಪ್ರಯತ್ನ ಎಲ್ಲಿ ಆಗಿದೆ. ಈ ವಿಚಾರದಲ್ಲಿ ಅವರ ಕೊಡುಗೆ ಏನಿದೆ. ಸ್ವಾತಂತ್ರ್ಯ ಸಂಗ್ರಾಮದಲ್ಲಿ ಮತ್ತು ನಂತರದ ದಿನಗಳಲ್ಲಿ ದೇಶಕ್ಕೆ ಅವರ ಕೊಡುಗೆ ಏನು' ಎಂದು ಪ್ರಶ್ನಿಸಿದರು.

'ಚೀನಾ, ಪಾಕಿಸ್ತಾನ ಯುದ್ಧದಲ್ಲಿ ಆರೆಸ್ಸೆಸ್‌ನವರು ಹೋರಾಡಿದ್ದರು' ಎಂಬ ಸಿ.ಟಿ.ರವಿ ಅವರ ಹೇಳಿಕೆಗೆ ಪ್ರತಿಕ್ರಿಯಿಸಿದ ಧ್ರುವನಾರಾಯಣ, 'ಬಿಜೆಪಿಯವರ ಹೇಳಿಕೆ, ಚರ್ಚೆ ಕೇವಲ ಕಾದಂಬರಿ ಹಾಗೂ ಕಾಲ್ಪನಿಕ ಆಧಾರಿತವಾದುದು. ವೈಜ್ಞಾನಿಕವಾಗಿ ಯಾವ ವಿಚಾರದಲ್ಲೂ ಮಾತನಾಡುವುದಿಲ್ಲ. ಸಿ.ಟಿ.ರವಿಗೆ ಜ್ಞಾನ ಇದೆಯೊ, ಇಲ್ಲವೊ ಗೊತ್ತಿಲ್ಲ. ಯುದ್ಧದಲ್ಲಿ ಹೋರಾಡುವುದು ಮಿಲಿಟರಿ ಯೋಧರು. ಅವರಿಗೆ ಸುದೀರ್ಘ ತರಬೇತಿ ನೀಡಲಾಗಿರುತ್ತದೆ. ಈ ವಿಚಾರದಲ್ಲಿ ಇಂದಿರಾ ಗಾಂಧಿ ಅವರನ್ನು ಸ್ಮರಿಸಬೇಕು' ಎಂದರು.

ವಾಂತಿ- ಭೇದಿ: ಇಬ್ಬರು ಮಹಿಳೆಯರ ಸಾವು

ಕಮಲಾಪುರ (ಕಲಬುರ್ಗಿ ಜಿಲ್ಲೆ): ತಾಲ್ಲೂಕಿನ ದಸ್ತಾಪುರ ಗ್ರಾಮದಲ್ಲಿ ಮಂಗಳವಾರ ರಾತ್ರಿಯಿಂದ ವಾಂತಿ-ಭೇದಿ ತೀವ್ರ ಉಲ್ಬಣಗೊಂಡಿದ್ದು, ಬುಧವಾರ ಇಬ್ಬರು ಮಹಿಳೆಯರು ಮೃತಪಟ್ಟಿದ್ದಾರೆ. ಇನ್ನೂ 42 ಜನ ತೀವ್ರ ಅಸ್ವಸ್ಥರಾಗಿದ್ದು ವಿವಿಧ ಆಸ್ಪತ್ರೆಗಳಿಗೆ ದಾಖಲಾಗಿದ್ದಾರೆ.

ವಾಂತಿ-ಭೇದಿಯಿಂದ ಬಳಲುತ್ತಿದ್ದ ದ್ರೌಪದಿ ಶಿವರಾಯ (60) ಹಾಗೂ ಕಮಲಾಬಾಯಿ (56) ಮೃತಪಟ್ಟವರು. ದ್ರೌಪದಿ ಅವರನ್ನು ಹೆಚ್ಚಿನ ಚಿಕಿತ್ಸೆಗಾಗಿ ಕಲಬುರ್ಗಿಯ ಜಿಲ್ಲಾಸ್ಪತ್ರೆಗೆ ದಾಖಲಿಸಲಾಗಿತ್ತು. ಚಿಕಿತ್ಸೆಗೆ ಸ್ಪಂದಿಸದೆ ಕೊನೆಯುಸಿರೆಳೆದರು ಎಂದು ಜಿಮ್ಸ್ ವೈದ್ಯರು ತಿಳಿಸಿದರು. ಇವರ ಮಗಳು ಪವಿತ್ರಾ ವಿದ್ಯಾಸಾಗರ, ಮೊಮ್ಮಗ ವೇದಾಂತ ವಿದ್ಯಾಸಾಗರ ಸಹ ಜಿಲ್ಲಾ ಆಸ್ಪತ್ರೆಗೆ ದಾಖಲಾಗಿದ್ದಾರೆ.

ಕಮಲಾಬಾಯಿ ಅವರನ್ನು ಬುಧವಾರ ಬೆಳಿಗ್ಗೆ ಆಂಬುಲೆನ್ಸ್ ನಲ್ಲಿ ಕರೆದೊಯ್ಯಲಾಗುತ್ತಿತ್ತು. ಜಿಲ್ಲಾಸ್ಪತ್ರೆ ತಲುಪುವ ಮುನ್ನವೇ ಅವರು ಕೊನೆಯುಸಿರೆಳೆದರು ಎಂದು ಆರೋಗ್ಯ ಇಲಾಖೆಯವರು ತಿಳಿಸಿದ್ದಾರೆ.

'ಕುಡಿಯುವ ನೀರು ಕಲುಷಿತಗೊಂಡಿದ್ದರಿಂದ ಗ್ರಾಮದಲ್ಲಿ ಒಂದು ವಾರದಿಂದ ವಾಂತಿ-ಭೇದಿ ಕಾಣಿಸಿಕೊಂಡಿದೆ. ಕಾಲರಾ ಹರಡಿರುವ ಸಾಧ್ಯತೆ ಇದೆ ಎಂದು ತಾಲ್ಲೂಕು ಆರೋಗ್ಯಾಧಿಕಾರಿಗೆ ಮಾಹಿತಿ ನೀಡಿದರೂ ಸ್ಪಂದಿಸಲಿಲ್ಲ' ಎಂದು ಗ್ರಾಮಸ್ಥ ಪ್ರಕಾಶ ಖೋಬ್ರೆ ದೂರಿದರು.

ಉಮೇಶ್ ರೆಡ್ಡಿಗೆ ಗಲ್ಲು ಶಿಕ್ಷೆ ಕಾಯಂ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರಣಿ ಅತ್ಯಾಚಾರ ಪ್ರಕರಣಗಳ ಅಪರಾಧಿ ಉಮೇಶ್ ರೆಡ್ಡಿಗೆ ಗಲ್ಲು ಶಿಕ್ಷೆಯನ್ನು ಹೈಕೋರ್ಟ್ ಕಾಯಂಗೊಳಿಸಿದೆ.

ಕ್ಷಮಾದಾನ ಕೋರಿದ್ದ ಅರ್ಜಿ ಇತ್ಯರ್ಥ ವಿಳಂಬವಾಗಿದೆ. ಹೀಗಾಗಿ, ಮರಣ ದಂಡನೆ ಶಿಕ್ಷೆಯನ್ನು ಜೀವಾವಧಿ ಶಿಕ್ಷೆಯಾಗಿ ಮಾರ್ಪಡಿಸಬೇಕು ಎಂದು ಕೋರಿ ರೆಡ್ಡಿ ಪರ ವಕೀಲರು ಸಲ್ಲಿಸಿದ್ದ ಅರ್ಜಿಯನ್ನು ತಿರಸ್ಕರಿಸಿದೆ.

ದಾಖಲೆಗಳನ್ನು ಪರಿಶಿಲಿಸಿದ ನ್ಯಾಯಮೂರ್ತಿ ಅರವಿಂದ ಕುಮಾರ್ ಮತ್ತು ನ್ಯಾಯಮೂರ್ತಿ ಪ್ರದೀಪ್ ಸಿಂಗ್ ಯೆರೂರ್ ಅವರನ್ನು ಒಳಗೊಂಡ ವಿಭಾಗೀಯ ಪೀಠ, 'ರಾಜ್ಯಪಾಲರು ಅಥವಾ ರಾಷ್ಟ್ರಪತಿ ಅವರಿಂದ ಯಾವುದೇ ವಿಳಂಬ ಆಗಿಲ್ಲ' ಎಂದು ಅಭಿಪ್ರಾಯಪಟ್ಟಿತು.

'ಮರಣ ದಂಡನೆ ಶಿಕ್ಷೆ ಆಗಿರುವ ಕಾರಣ ಈ ಆದೇಶ ಪ್ರಶ್ನಿಸಿ ಸುಪ್ರೀಂಕೋರ್ಟ್ ಮೊರೆ ಹೋಗಲು ಆರು ವಾರಗಳ ಕಾಲಾವಕಾಶ ನೀಡಲಾಗುವುದು' ಎಂದು ಪೀಠ ಹೇಳಿತು.

1998 ರ ಫೆಬ್ರುವರಿ 28ರಂದು ಪೀಣ್ಯ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ವಿಧವೆ ಮೇಲೆ ಅತ್ಯಾಚಾರ ಎಸಗಿ ಕೊಲೆ ಮಾಡಿದ್ದ ಪ್ರಕರಣದಲ್ಲಿ 2006ರಲ್ಲಿ ಬೆಂಗಳೂರಿನ ಸೆಷನ್ಸ್ ಕೋರ್ಟ್ ಉಮೇಶ್ ರೆಡ್ಡಿಗೆ ಗಲ್ಲು ಶಿಕ್ಷೆ ವಿಧಿಸಿತ್ತು. ನಂತರ ಹೈಕೋರ್ಟ್ ಮತ್ತು ಸುಪ್ರೀಂ ಕೋರ್ಟ್ ಕೂಡ ಗಲ್ಲು ಶಿಕ್ಷೆಯನ್ನು ಎತ್ತಿ ಹಿಡಿದಿದ್ದವು.

ಮಗನಿಗೆ ಕ್ಷಮಾದಾನ ನೀಡಲು ಕೋರಿ ಉಮೇಶ್‌ರೆಡ್ಡಿ ತಾಯಿ 2011ರಲ್ಲಿ ಸಲ್ಲಿಸಿದ್ದ ಅರ್ಜಿ ವಿಲೇವಾರಿಗೆ ಎರಡು ವರ್ಷ ಮೂರು ತಿಂಗಳು(830 ದಿನ) ವಿಳಂಬ ಮಾಡಲಾಗಿದೆ. 10 ವರ್ಷಗಳಿಂದ ಒಂಟಿಯಾಗಿ ಸೆರೆವಾಸ ಅನುಭವಿಸಿದ್ದಾನೆ. ಹೀಗಾಗಿ ಶಿಕ್ಷೆ ಮಾರ್ಪಡಿಸಬೇಕು ಎಂದು 2016ರಲ್ಲಿ ಹೈಕೋರ್ಟ್‌ನಲ್ಲಿ ರೆಡ್ಡಿ ಪರ ವಕೀಲರು ಅರ್ಜಿ ಸಲ್ಲಿಸಿದ್ದರು.

2016ರ ಅಕ್ಟೋಬರ್ 20ರಂದು ಗಲ್ಲು ಶಿಕ್ಷೆಗೆ ಮಧ್ಯಂತರ ತಡೆಯನ್ನೂ ಪೀಠ ನೀಡಿತ್ತು. ಕ್ಷಮಾದಾನ ಕೋರಿ ಉಮೇಶ್ ರೆಡ್ಡಿ ತಾಯಿ ರಾಷ್ಟ್ರಪತಿಗೆ ಸಲ್ಲಿಸಿದ್ದ ಅರ್ಜಿ 2013ರಲ್ಲಿ ತಿರಸ್ಕರಿಸಲ್ಪಟ್ಟಿತ್ತು.

ಹೈದರಾಬಾದ್‌ನಲ್ಲಿ ಲಿಂಗಾಯತ ಪ್ರತ್ಯೇಕ ಧರ್ಮದ ರ‍್ಯಾಲಿ

ಬೀದರ್: 'ಕೋವಿಡ್ ಕಾರಣ ಎರಡು ವರ್ಷ ಲಿಂಗಾಯತ ಸ್ವತಂತ್ರ ಧರ್ಮದ ಹೋರಾಟ ನಡೆದಿಲ್ಲ. ಹಾಗಾಂತ ಹೋರಾಟ ನಿಂತಿಲ್ಲ. ಕೇಂದ್ರ ಸರ್ಕಾರದ ಗಮನ ಸೆಳೆಯಲು 2022ರಲ್ಲಿ ಹೈದರಾಬಾದ್‌ನಲ್ಲಿ ಒಂದು ಲಕ್ಷ ಲಿಂಗಾಯತರನ್ನು ಸೇರಿಸಿ ರ‍್ಯಾಲಿ ನಡೆಸಲಾಗುವುದು' ಎಂದು ರಾಷ್ಟ್ರೀಯ ಬಸವ ದಳದ ಅಧ್ಯಕ್ಷ ಬಸವರಾಜ ಧನ್ನೂರ್ ಬುಧವಾರ ಇಲ್ಲಿ ಮಾಧ್ಯಮಗೋಷ್ಠಿಯಲ್ಲಿ ತಿಳಿಸಿದರು.

'ಕಲ್ಯಾಣ ಪರ್ವ 20ನೇ ವರ್ಷಕ್ಕೆ ಪದಾರ್ಪಣೆ ಮಾಡಿದೆ. ಅಕ್ಟೋಬರ್ 18, 19 ಹಾಗೂ 20ರಂದು ಕಲ್ಯಾಣ ಪರ್ವ ನಡೆಯಲಿದೆ' ಎಂದರು.

'ಬಿ.ಇ ಶುಲ್ಕ ಹೆಚ್ಚಳವಿಲ್ಲ'

ಒಂದನೇ ಪುಟದಿಂದ...

'ಎಂಜಿನಿಯರಿಂಗ್ ಕೋರ್ಸ್‌ಗಳ ಶುಲ್ಕವನ್ನು ಶೇ 30ರಷ್ಟು ಹೆಚ್ಚಿಸುವಂತೆ ಖಾಸಗಿ ಕಾಲೇಜುಗಳು ಬೇಡಿಕೆ ಇಟ್ಟಿದ್ದವು. ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ (ವಿಟಿಯು) ಕುಲಪತಿ ಪ್ರೊ.ಕರಿಸಿದ್ದಪ್ಪ ನೇತೃತ್ವದ ಸಮಿತಿ ಶೇ 15 ರಿಂದ ಶೇ 20ರವರೆಗೆ ಶುಲ್ಕ ಹೆಚ್ಚಳ ಮಾಡಬಹುದು ಎಂಬ ಶಿಫಾರಸು ನೀಡಿತ್ತು. ಆದರೆ, ಕೋವಿಡ್ ಕಾರಣದಿಂದ ಉಂಟಾಗಿರುವ ಪರಿಸ್ಥಿತಿಯ ಆಧಾರದಲ್ಲಿ ಶುಲ್ಕ ಹೆಚ್ಚಳ ಬೇಡ ಎಂಬ ನಿರ್ಧಾರ ಕೈಗೊಳ್ಳಲಾಯಿತು. ಈ ಕುರಿತು ಖಾಸಗಿ ಎಂಜಿನಿಯರಿಂಗ್ ಕಾಲೇಜುಗಳ ಒಕ್ಕೂಟದ ಪ್ರತಿನಿಧಿಗಳನ್ನು ಮನವೊಲಿಸಲಾಯಿತು' ಎಂದು ಹೇಳಿದರು.

ಇತರ ಶುಲ್ಕಗಳಿಗೂ ಕಡಿವಾಣ: ಖಾಸಗಿ ಎಂಜಿನಿಯರಿಂಗ್ ಕಾಲೇಜುಗಳು 'ಇತರ ಶುಲ್ಕ'ದ ಹೆಸರಿನಲ್ಲಿ ವಿದ್ಯಾರ್ಥಿಗಳಿಂದ ತಲಾ ₹ 70,000 ದವರೆಗೂ ಪಡೆಯುತ್ತಿವೆ ಎಂಬ ದೂರುಗಳು ಬಂದಿದ್ದವು. ಈ ಕಾರಣದಿಂದ 'ಇತರ ಶುಲ್ಕ'ದ ಗರಿಷ್ಠ ಮೊತ್ತವನ್ನು ₹ 20,000 ಕ್ಕೆ ನಿಗದಿಪಡಿಸಲಾಗಿದೆ. ಖಾಸಗಿ ಕಾಲೇಜುಗಳ ಸಂಘದ ಪ್ರತಿನಿಧಿಗಳೂ ಒಪ್ಪಿಗೆ ಸೂಚಿಸಿದ್ದಾರೆ ಎಂದು ಸಚಿವರು ತಿಳಿಸಿದರು.

ವಿವಿಧ ಶುಲ್ಕದ ದರ

ಎರಡು ಹಂತದ ಪ್ರವೇಶ ಶುಲ್ಕ
₹65,340 ಮತ್ತು ₹58,806

₹200.00
ಇತರ ಶುಲ್ಕ ಗರಿಷ್ಠ

₹10,000
₹15,000
₹20,000
ಮೂರು ಹಂತದ ಕೌಶಲ ಅಭಿವೃದ್ಧಿ ಶುಲ್ಕ

ಬೋಧನಾ ಶುಲ್ಕ ಮತ್ತು ಇತರ ಶುಲ್ಕವನ್ನು ಯಾವ ಉದ್ದೇಶಗಳಿಗಾಗಿ ಪಡೆಯಲಾಗುತ್ತಿದೆ ಎಂಬುದರ ಕುರಿತು ಎಲ್ಲ ಕಾಲೇಜುಗಳೂ ಕೆಇಎ, ತಾಂತ್ರಿಕ ಶಿಕ್ಷಣ ಇಲಾಖೆ ಮತ್ತು ವಿಟಿಯುಗೆ ಮಾಹಿತಿ ನೀಡಬೇಕು. ಆಯಾ ಕಾಲೇಜಿನ ವೆಬ್‌ಸೈಟ್‌ನಲ್ಲೂ ಪ್ರಕಟಿಸಬೇಕು. ಕೆಇಎ ಮೂಲಕ ಶುಲ್ಕ ಪಾವತಿಸುವ ಕುರಿತೂ ವೆಬ್‌ಸೈಟ್‌ನಲ್ಲಿ ಮಾಹಿತಿ ನೀಡಬೇಕು. ಶುಲ್ಕ ಪಾವತಿಯಲ್ಲಿನ ಗೊಂದಲ ನಿವಾರಣೆಗಾಗಿ ಈ ಕ್ರಮ ಕೈಗೊಳ್ಳಲಾಗಿದೆ ಎಂದು ಹೇಳಿದರು.

ಕೌಶಲ ಅಭಿವೃದ್ಧಿ ಶುಲ್ಕಕ್ಕೂ ಮಿತಿ: ಕೆಲವು ಕಾಲೇಜುಗಳಲ್ಲಿ ಉದ್ಯಮಗಳಿಗೆ ಪೂರಕವಾಗಿ ವಿದ್ಯಾರ್ಥಿಗಳಿಗೆ ಕೌಶಲ ಅಭಿವೃದ್ಧಿ ತರಬೇತಿ ನೀಡಲಾಗುತ್ತಿದೆ. ಅದಕ್ಕೆ ಪ್ರತ್ಯೇಕವಾಗಿ ಕೌಶಲ ಅಭಿವೃದ್ಧಿ ಶುಲ್ಕ ಪಡೆಯಲಾಗುತ್ತಿದೆ. ಒಂದೊಂದು ಕಾಲೇಜಿನಲ್ಲಿ ಒಂದೊಂದು ದರದಲ್ಲಿ ಶುಲ್ಕ ನಿಗದಿಪಡಿಸಲಾಗಿದೆ. ಕೌಶಲ ಅಭಿವೃದ್ಧಿ ಶುಲ್ಕದ ಗರಿಷ್ಠ ಮಿತಿಯನ್ನು ₹ 20,000 ನಿಗದಿಪಡಿಸಲಾಗಿದೆ ಎಂದು ಅಶ್ವತ್ಥನಾರಾಯಣ ತಿಳಿಸಿದರು.

ಅತ್ಯಾಧುನಿಕ ಪ್ರಯೋಗಾಲಯ, ವಿಶೇಷ ಕೋರ್ಸ್‌ಗಳು ಸೇರಿದಂತೆ ಕೌಶಲ ಅಭಿವೃದ್ಧಿಗಾಗಿ ಇರುವ ಸೌಲಭ್ಯಗಳ ಕುರಿತು ವಿಟಿಯು ತಂಡವು ಪರಿಶೀಲನೆ ನಡೆಸಲಿದೆ. ಬಳಿಕ ಶುಲ್ಕ ನಿಗದಿಪಡಿಸಲಾಗುವುದು. ಈ ಶುಲ್ಕವನ್ನೂ ಕೆಇಎ ಮೂಲಕವೇ ಪಾವತಿಸುವುದನ್ನು ಕಡ್ಡಾಯಗೊಳಿಸಲಾಗಿದೆ ಎಂದರು.

'ಕುಪೇಕಾ'ದ ತಾಂತ್ರಿಕ ಸಮಿತಿ ಅಧ್ಯಕ್ಷ ಮಂಜುನಾಥ ಭಂಡಾರಿ, ಸದಸ್ಯರಾದ ಚಂದ್ರಶೇಖರ್ ರಾಜು, ರಮೇಶ್ ರಾಜು, ಉನ್ನತ ಶಿಕ್ಷಣ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಜಿ. ಕುಮಾರ್ ನಾಯಕ್, ಕಾಲೇಜು ಶಿಕ್ಷಣ ಇಲಾಖೆ ಆಯುಕ್ತ ಪಿ.ಪ್ರದೀಪ್, ಬಿಜೆಪಿ ಮುಖಂಡ ಗಣೇಶ್ ಕಾರ್ಣಿಕ್ ಇದ್ದರು.

4 ಕಾಲೇಜುಗಳಲ್ಲಿ ಕನ್ನಡದಲ್ಲಿ ಎಂಜಿನಿಯರಿಂಗ್

ಭಾಲ್ಕಿಯ ಭೀಮಣ್ಣ ಖಂಡ್ರೆ ತಾಂತ್ರಿಕ ಮಹಾವಿದ್ಯಾಲಯ (ಸಿವಿಲ್), ಚಿಕ್ಕಬಳ್ಳಾಪುರದ ಎಸ್‌.ಜೆ.ಸಿ. ತಾಂತ್ರಿಕ ಮಹಾವಿದ್ಯಾಲಯ (ಸಿವಿಲ್), ಮೈಸೂರಿನ ಮಹಾರಾಜ ತಾಂತ್ರಿಕ ಮಹಾವಿದ್ಯಾಲಯ (ಮೆಕ್ಯಾನಿಕಲ್) ಮತ್ತು ವಿಜಯಪುರದ ಬಿ.ಎಲ್‌.ಡಿ.ಇ. ಎ.ವಿ.ಪಿ. ಡಾ.ಪಿ.ಜಿ. ಹಳಕಟ್ಟಿ ಎಂಜಿನಿಯರಿಂಗ್ ಕಾಲೇಜಿನಲ್ಲಿ (ಮೆಕ್ಯಾನಿಕಲ್) ಕನ್ನಡದಲ್ಲಿ ಎಂಜಿನಿಯರಿಂಗ್ ಬೋಧನೆಗೆ ತಯಾರಿ ನಡೆದಿದೆ. ಈ ಕೋರ್ಸ್‌ಗಳಿಗೆ ತಲಾ 30 ವಿದ್ಯಾರ್ಥಿಗಳಿಗೆ ಪ್ರವೇಶ ನೀಡಬಹುದು ಎಂದು ಅಶ್ವತ್ಥನಾರಾಯಣ ತಿಳಿಸಿದರು.

ಪಂಜಾಬ್ ಕಾಂಗ್ರೆಸ್ ಬಿಕ್ಕಟ್ಟು: ಮಾತುಕತೆಗೆ ಆಹ್ವಾನ ಕೊಟ್ಟ ಮುಖ್ಯಮಂತ್ರಿ: ಹೊಸ ಅಧ್ಯಕ್ಷರ ಹುಡುಕಾಟ

ಸಿಧು ಹಟ, ಪಕ್ಷ ಸರ್ವೋಚ್ಚ ಎಂದ ಚನ್ನಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಪಂಜಾಬ್ ಕಾಂಗ್ರೆಸ್ ಪಕ್ಷದಲ್ಲಿನ ಬಿಕ್ಕಟ್ಟನ್ನು ಪರಿಹರಿಸುವುದಕ್ಕಾಗಿ ಕುಳಿತು ಮಾತನಾಡೋಣ ಎಂದು ರಾಜ್ಯ ಘಟಕದ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡಿರುವ ನವಜೋತ್ ಸಿಂಗ್ ಸಿಧು ಅವರಿಗೆ ಮುಖ್ಯಮಂತ್ರಿ ಚರಣ್‌ಜಿತ್ ಸಿಂಗ್ ಚನ್ನಿ ಬುಧವಾರ ಹೇಳಿದ್ದಾರೆ. ಆದರೆ, ಈ ಸಂದರ್ಭದಲ್ಲಿ 'ಪಕ್ಷವೇ ಸರ್ವೋಚ್ಚ' ಎಂಬ ಸೂಚ್ಯ ಎಚ್ಚರಿಕೆಯನ್ನೂ ಚನ್ನಿ ನೀಡಿದ್ದಾರೆ. ಸಿಧು ಅವರು ರಾಜೀನಾಮೆ ನೀಡಿದ್ದರ ಆ ಸ್ಥಾನಕ್ಕೆ ಹೊಸಬರನ್ನು ತರುವ ಬಗ್ಗೆ ಕಾಂಗ್ರೆಸ್ ಯೋಚನೆ ಆರಂಭಿಸಿದೆ.

ಮುಖ್ಯಮಂತ್ರಿ ಅಮರಿಂದರ್ ಸಿಂಗ್ ಅವರನ್ನು ಮುಖ್ಯಮಂತ್ರಿ ಹುದ್ದೆಯಿಂದ ಸೆ. 18ರಂದು ಕೆಳಗಿಳಿಸಲು ಯಶಸ್ವಿಯಾದ ಸಿಧು ಅವರು, ರಾಜ್ಯ ಘಟಕದ ಅಧ್ಯಕ್ಷರಾಗಿ ನೇಮಕವಾಗಿ 71ನೇ ದಿನಕ್ಕೆ ರಾಜೀನಾಮೆ ಕೊಟ್ಟಿದ್ದಾರೆ. ಪರಿಣಾಮವಾಗಿ ಪಕ್ಷವು ಮತ್ತೆ ಬಿಕ್ಕಟ್ಟಿಗೆ ಬಿದ್ದಿದೆ. ತಮ್ಮ ಮಹತ್ವ ಕುಂದಿದೆ ಎಂಬ ವಿಚಾರವೂ ಸಿಧು ಅವರಿಗೆ ಸಿಟ್ಟು ತರಿಸಿದೆ ಎನ್ನಲಾಗಿದೆ.

ತಮ್ಮದು ವಿಷಯಾಧಾರಿತ ಹೋರಾಟ ಎಂದು ಟ್ವಿಟರ್‌ನಲ್ಲಿ ವಿಡಿಯೊ ಪ್ರಕಟಿಸಿರುವ ಸಿಧು ಹೇಳಿದ್ದಾರೆ. ಈ ಮೂಲಕ ತಾವು ಸುಲಭದಲ್ಲಿ ಮಣಿಯುವುದಿಲ್ಲ ಎಂಬ ಸಂದೇಶ ರವಾನಿಸಿದ್ದಾರೆ.

ಸಿಧು ಅವರನ್ನು ರಾಜ್ಯ ಘಟಕದ ಅಧ್ಯಕ್ಷರಾಗಿ ನೇಮಿಸುವಲ್ಲಿ ಮುತುವರ್ಜಿ ವಹಿಸಿದ್ದ ಮುಂಚೂಣಿದಾರರಾದ ರಾಹುಲ್ ಗಾಂಧಿ ಮತ್ತು ಪ್ರಿಯಾಂಕಾ ವಾದ್ರಾ ಅವರು ಬಹಿರಂಗವಾಗಿ ಯಾವುದೇ ಹೇಳಿಕೆ ನೀಡಿಲ್ಲ. ಪಂಜಾಬ್ ಉಸ್ತುವಾರಿ ಪ್ರಧಾನ ಕಾರ್ಯದರ್ಶಿ ಹರೀಶ್ ರಾವತ್ ಅವರನ್ನು ರಾಜ್ಯಕ್ಕೆ ಕಳುಹಿಸಲಾಗಿದೆ.

ಇಲ್ಲಿ ಅಹಂ ಸಂಘರ್ಷದ ಪ್ರಶ್ನೆಯೇ ಇಲ್ಲ, ನೇಮಕಾತಿಗಳ ಮರುಪರಿಶೀಲನೆಗೆ ತಾವು ಸಿದ್ಧ ಎಂದು ಚನ್ನಿ ಹೇಳಿದ್ದಾರೆ.

ಚನ್ನಿ ಅವರು ಸದ್ಯದ ಬಿಕ್ಕಟ್ಟಿನಿಂದ ದಿಕ್ಕೆಟ್ಟ ಹಾಗೆ ಇಲ್ಲ. ಅವರು ಬುಧವಾರ ಸಚಿವ ಸಂಪುಟ ಸಭೆ ನಡೆಸಿ ಹಲವು ಮಹತ್ವದ ನಿರ್ಧಾರಗಳನ್ನು ಕೈಗೊಂಡಿದ್ದಾರೆ.

ಸಿಧು ಅವರು ಪಕ್ಷವನ್ನು ಅನುಸರಿಸಬೇಕೇ ವಿನಾ ಬೇರೆ ದಾರಿ ಇಲ್ಲ ಎಂಬ ಸುಳಿವನ್ನು ಪಕ್ಷದ ಹೈಕಮಾಂಡ್ ಹಲವು ಬಾರಿ ನೀಡಿದೆ. ರಾಹುಲ್ ಅವರ ಆಪ್ತರಾಗಿರುವ ಕುಲಜೀತ್ ಸಿಂಗ್ ನಾಗ್ರಾ ಮತ್ತು ರವನೀತ್ ಬಿಟ್ಟು ಅವರ ಹೆಸರು ಅಧ್ಯಕ್ಷ ಸ್ಥಾನಕ್ಕೆ ಪರಿಶೀಲನೆಯಲ್ಲಿದೆ. ಬಿಕ್ಕಟ್ಟು ಶೀಘ್ರ ಪರಿಹಾರ ಆಗಲಿದೆ ಎಂದು ಸಿಧು ಅವರ ಆಪ್ತ ಶಾಸಕ ಪರಗತ್ ಸಿಂಗ್ ಹೇಳಿದ್ದಾರೆ.

ಪಂಜಾಬ್‌ನ ಮೊದಲ ದಲಿತ ಮುಖ್ಯಮಂತ್ರಿಯು ಮಧ್ಯಂತರ ಅವಧಿಗೆ ಸೀಮಿತ ಎಂಬ ಭಾವನೆ ಜನರಲ್ಲಿ ಮೂಡುವುದು ಕಾಂಗ್ರೆಸ್‌ಗೆ ಬೇಕಿಲ್ಲ. ಆದ್ದರಿಂದಲೇ, ಮುಖ್ಯಮಂತ್ರಿಯಾಗುವ ತಮ್ಮ ಆಕಾಂಕ್ಷೆ ಈಡೇರದು ಎಂಬುದೂ ಸಿಧು ಅವರ ಅತೃಪ್ತಿಗೆ ಕಾರಣವಾಗಿದೆ.

ಕುತೂಹಲ ಮೂಡಿಸಿದ ಶಾ–ಕ್ಯಾಪ್ಟನ್ ಭೇಟಿ



ಅಮಿತ್ ಶಾ– ಅಮರಿಂದರ್ (ಸಂಗ್ರಹ ಚಿತ್ರ)

ನವದೆಹಲಿ: ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರನ್ನು ಪಂಜಾಬ್‌ನ ಮಾಜಿ ಮುಖ್ಯಮಂತ್ರಿ ಮತ್ತು ಕಾಂಗ್ರೆಸ್ ನಾಯಕ ಕ್ಯಾಪ್ಟನ್ ಅಮರಿಂದರ್ ಸಿಂಗ್ ಅವರು ಬುಧವಾರ ದೆಹಲಿಯಲ್ಲಿ ಭೇಟಿ ಮಾಡಿ ಮಾತುಕತೆ ನಡೆಸಿದ್ದಾರೆ. ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಿದ 11 ದಿನಗಳ ನಂತರ ಅವರು ಬಿಜೆಪಿ ವರಿಷ್ಠರನ್ನು ಭೇಟಿ ಮಾಡಿದ್ದಾರೆ.

ಅಮಿತ್ ಶಾ ಅವರ ದೆಹಲಿಯ ನಿವಾಸಕ್ಕೆ ತೆರಳಿದ ಅಮರಿಂದರ್ ಸಿಂಗ್ ಅವರು, ಒಂದು ತಾಸಿಗೂ ಹೆಚ್ಚು ಕಾಲ ಮಾತುಕತೆ ನಡೆಸಿದರು. ನಂತರ ಅಲ್ಲಿಂದ ಬೇರೊಂದು ಕಾರಿನಲ್ಲಿ ಅಜ್ಞಾತ ಸ್ಥಳಕ್ಕೆ ತೆರಳಿದ್ದಾರೆ. ಅವರ ಮುಂದಿನ ನಡೆ ಏನು ಎಂಬುದು ನಿಗೂಢವಾಗಿದೆ.

ಸಭೆಯ ಬಗ್ಗೆ ಅಮರಿಂದರ್ ಅವರ ಮಾಧ್ಯಮ ಸಲಹೆಗಾರರು ಟ್ವೀಟ್ ಮಾಡಿ ಮಾಹಿತಿ ನೀಡಿದ್ದಾರೆ. 'ಕೇಂದ್ರ ಸರ್ಕಾರದ ನೂತನ ಕೃಷಿ ಕಾಯ್ದೆಗಳ ವಿರುದ್ಧ ರೈತರು ನಡೆಸುತ್ತಿರುವ ಪ್ರತಿಭಟನೆ ಬಗ್ಗೆ ಶಾ ಅವರ ಜತೆ ಅಮರಿಂದರ್ ಚರ್ಚಿಸಿದರು. ಕಾಯ್ದೆಗಳನ್ನು ಶೀಘ್ರವೇ ರದ್ದುಪಡಿಸಿ ಎಂದು ಒತ್ತಾಯಿಸಿದರು' ಎಂದು ಅವರು ಟ್ವೀಟ್ ಮಾಡಿದ್ದಾರೆ. ಬಿಜೆಪಿ ಸೇರ್ಪಡೆ ಬಗ್ಗೆ ಚರ್ಚಿಸಲೆಂದೇ ಶಾ ಅವರನ್ನು ಅಮರಿಂದರ್ ಭೇಟಿ ಮಾಡಿದ್ದಾರೆ ಎಂದು ಕೆಲವು ಮೂಲಗಳು ಹೇಳಿವೆ. ರಾಹುಲ್ ಮತ್ತು ಪ್ರಿಯಾಂಕಾ ಗಾಂಧಿ ಅವರಿಗೆ ಎಚ್ಚರಿಕೆ ರವಾನಿಸಲೆಂದೇ ಶಾ ಅವರನ್ನು ಭೇಟಿ ಮಾಡಿದ್ದಾರೆ ಎಂದೂ ಕೆಲವು ಮೂಲಗಳು ಹೇಳಿವೆ.

ಕೊನೆ ಉಸಿರಿನವರೆಗೂ ಸತ್ಯಕ್ಕಾಗಿ ಹೋರಾಟ: ಸಿಧು

ಪಂಜಾಬ್ ಪ್ರದೇಶ ಕಾಂಗ್ರೆಸ್ ಸಮಿತಿಯ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡಿದ ಮರುದಿನ ಮಾತನಾಡಿರುವ ನವಜೋತ್ ಸಿಂಗ್ ಸಿಧು, ತಮ್ಮ ಕೊನೆಯ ಉಸಿರು ಇರುವವರೆಗೆ ಸತ್ಯಕ್ಕಾಗಿ ಹೋರಾಡುತ್ತೇನೆ ಎಂದು ಶಪಥ ಮಾಡಿದ್ದಾರೆ.

ಬುಧವಾರ ವಿಡಿಯೊ ಬಿಡುಗಡೆ ಮಾಡಿರುವ ಅವರು, ಪಂಜಾಬ್ ಡಿಜಿಪಿ ಹಾಗೂ ರಾಜ್ಯದ ಅಡ್ವೋಕೇಟ್ ಜನರಲ್ ನೇಮಕಾತಿಯನ್ನು ಪ್ರಶ್ನಿಸಿದ್ದಾರೆ. 'ನನ್ನ ಹೋರಾಟ ವಿಷಯಾಧಾರಿತ. ನನ್ನ ಸಿದ್ಧಾಂತ ಮತ್ತು ನೈತಿಕತೆಯ ಜೊತೆ ರಾಜಿ ಮಾಡಿಕೊಳ್ಳಲು ಸಾಧ್ಯವಿಲ್ಲ' ಎಂದಿದ್ದಾರೆ.

ದಲಿತ ಮುಖ್ಯಮಂತ್ರಿ ಚರಣ್‌ಜಿತ್ ಸಿಂಗ್ ಚನ್ನಿ ಅವರು ಸಂಪುಟ ಸಹೋದ್ಯೋಗಿಗಳಿಗೆ ಖಾತೆ ಹಂಚಿಕೆ ಮಾಡಿದ್ದರಿಂದ ಬೇಸರಗೊಂಡ ಸಿಧು, ಮಂಗಳವಾರ ದಿಢೀರ್ ರಾಜೀನಾಮೆ ಪ್ರಕಟಿಸಿದ್ದರು. ಸರ್ಕಾರದ ಕೆಲವು ನೇಮಕಾತಿ ನಿರ್ಧಾರಗಳ ಹಾಗೂ ಸಚಿವರ ಆಯ್ಕೆ ಬಗ್ಗೆ ಅವರ ಆಕ್ಷೇಪವಿತ್ತು.

'ನಾನು ಪಕ್ಷದ ಹೈಕಮಾಂಡ್ ಅನ್ನು ದಾರಿ ತಪ್ಪಿಸುವುದಿಲ್ಲ ಅಥವಾ ಅವರನ್ನು ದಾರಿ ತಪ್ಪಲು ಬಿಡಲಾರೆ. ನನಗೆ ಯಾರೊಂದಿಗೂ ವೈಯಕ್ತಿಕ ದ್ವೇಷ ಇಲ್ಲ. ಜನರ ಜೀವನದಲ್ಲಿ ಬದಲಾವಣೆ ತರುವುದು ಹಾಗೂ ಅವರ ಜೀವನವನ್ನು ಉತ್ತಮಗೊಳಿಸುವುದು ನನ್ನ ಏಕೈಕ ಧರ್ಮ. ನನ್ನ 17 ವರ್ಷಗಳ ರಾಜಕೀಯ ಜೀವನದಲ್ಲಿ ಇದನ್ನು ಪಾಲಿಸಿಕೊಂಡು ಬಂದಿದ್ದೇನೆ' ಎಂದರು.

ಹಿರಿಯ ಐಪಿಎಸ್ ಅಧಿಕಾರಿ ಇಕ್ಬಾಲ್ ಪ್ರೀತ್ ಸಿಂಗ್ ಸಹೋತಾ ಅವರಿಗೆ ಡಿಜಿಪಿಯ ಹೆಚ್ಚುವರಿ ಜವಾಬ್ದಾರಿ ನೀಡಿದ್ದನ್ನು ಉಲ್ಲೇಖಿಸಿ ಮಾತನಾಡಿದ ಅವರು, 'ಆರು ವರ್ಷಗಳ ಹಿಂದೆ ಬಾದಲ್ ಮನೆತನಕ್ಕೆ ಅವರು ಕ್ಲೀನ್ ಚಿಟ್ ನೀಡಿದ್ದನ್ನು ನೋಡಿದ್ದೇನೆ. ಅಂತಹ ವ್ಯಕ್ತಿಗೆ ಈ ಜವಾಬ್ದಾರಿ ನೀಡಲಾಗಿದೆ' ಎಂದು ಆರೋಪಿಸಿದ್ದಾರೆ. ಎಪಿಎಸ್ ದೇವಲ್ ಅವರನ್ನು ಹೊಸ ಅಡ್ವೋಕೇಟ್ ಜನರಲ್ ಆಗಿ ನೇಮಿಸಿರುವುದನ್ನೂ ಅವರು ಪ್ರಶ್ನಿಸಿದ್ದಾರೆ.



ಕಾಂಗ್ರೆಸ್ ಕಾರ್ಯಕರ್ತರು ದೆಹಲಿಯಲ್ಲಿ ಪಕ್ಷದ ಹಿರಿಯ ಮುಖಂಡ ಕಪಿಲ್ ಸಿಬಲ್ ಅವರ ನಿವಾಸದ ಎದುರು ಬುಧವಾರ ಪ್ರತಿಭಟಿಸಿದರು –ಪಿಟಿಐ ಚಿತ್ರ

ಸಿಬಲ್ ಮನೆ ಮುಂದೆ ಕಾಂಗ್ರೆಸ್ ಕಾರ್ಯಕರ್ತರ ಪ್ರತಿಭಟನೆ

ನವದೆಹಲಿ (ಪಿಟಿಐ): ಪಕ್ಷದ ಕಾರ್ಯನಿರ್ವಹಣೆ ಬಗ್ಗೆ ಪ್ರಶ್ನಿಸಿದ್ದ ಕೆಲವೇ ಗಂಟೆಗಳ ಬಳಿಕ ಕಾಂಗ್ರೆಸ್ ಮುಖಂಡ ಕಪಿಲ್ ಸಿಬಲ್ ಮನೆ ಎದುರು ಕಾಂಗ್ರೆಸ್ ಕಾರ್ಯಕರ್ತರು ಪ್ರತಿಭಟನೆ ನಡೆಸಿದ್ದಾರೆ.

ಹಲವು ಕಾಂಗ್ರೆಸ್ ನಾಯಕರು ಪಕ್ಷವನ್ನು ತೊರೆಯುತ್ತಿರುವ ಮತ್ತು ಪಂಜಾಬ್ ಕಾಂಗ್ರೆಸ್ ಘಟಕದ ಬಿಕ್ಕಟ್ಟು ಹಿನ್ನೆಲೆಯಲ್ಲಿ ತಕ್ಷಣವೇ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ಸಭೆಯನ್ನು ಕರೆಯಬೇಕೆಂದು ಸಿಬಲ್ ಒತ್ತಾಯಿಸಿದ್ದರು. ಪೂರ್ಣ ಪ್ರಮಾಣದ ಅಧ್ಯಕ್ಷರ ಅನುಪಸ್ಥಿತಿಯಲ್ಲಿ ಪಕ್ಷದಲ್ಲಿ ಯಾರು ನಿರ್ಧಾರಗಳನ್ನು ತೆಗೆದುಕೊಳ್ಳುತ್ತಿದ್ದಾರೆ ಎಂಬುದು ತಿಳಿಯುತ್ತಿಲ್ಲ ಎಂದು ಹೇಳಿಕೆ ನೀಡಿದ್ದರು.

ಕಳೆದ ವರ್ಷ ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ ಅವರಿಗೆ ಪತ್ರ ಬರೆದು ಪಕ್ಷದಲ್ಲಿ ಬದಲಾವಣೆಗೆ ಒತ್ತಾಯಿಸಿದ್ದ 23 ಮಂದಿಯ ತಂಡದಲ್ಲಿದ್ದ ಸಿಬಲ್, ಪತ್ರಿಕಾಗೋಷ್ಠಿಯಲ್ಲಿ ಈ ಗುಂಪು 'ಜೀ ಹುಜೂರ್ 23 ಅಲ್ಲ' ನಿರಂತರವಾಗಿ ನಮ್ಮ ಅಭಿಪ್ರಾಯಗಳನ್ನು ಪಕ್ಷದ ಮುಂದಿಡುತ್ತೇವೆ. ಬೇಡಿಕೆಗಳನ್ನು ಪುನರಾವರ್ತಿಸುತ್ತೇವೆ ಎಂದಿದ್ದರು. ಸಿಬಲ್ ಹೇಳಿಕೆಯಿಂದ ಸಿಡಿದೆದ್ದಿರುವ ದೆಹಲಿ ಕಾಂಗ್ರೆಸ್ ಸಮಿತಿಯ ಕಾರ್ಯಕರ್ತರು, 'ಬೇಗ ಗುಣಮುಖರಾಗಿ' ಎಂಬ ಫಲಕ ಗಳನ್ನು ಹಿಡಿದು ಕಪಿಲ್ ಅವರ ನಿವಾಸದ ಎದುರು ಪ್ರತಿಭಟನೆ ನಡೆಸಿದ್ದಾರೆ.


ಛತ್ತೀಸಗಡದಲ್ಲೂ ಕಾಂಗ್ರೆಸ್ ಬಿಕ್ಕಟ್ಟು

ನವದೆಹಲಿ: ಛತ್ತೀಸಗಡದ ಕಾಂಗ್ರೆಸ್‌ನಲ್ಲಿ ನಾಯಕತ್ವ ಬದಲಾವಣೆಯ ಬಗ್ಗೆ ಊಹಾಪೋಹಗಳು ಎದ್ದಿರುವ ಬೆನ್ನಲ್ಲೇ ಪಕ್ಷದ ಹತ್ತಕ್ಕೂ ಹೆಚ್ಚು ಶಾಸಕರು ಬುಧವಾರ ದೆಹಲಿ ತಲುಪಿದ್ದಾರೆ. ಪಕ್ಷದ ವರಿಷ್ಠರೊಂದಿಗೆ ಮಾತುಕತೆಗೆ ಎದುರು ನೋಡುತ್ತಿದ್ದಾರೆ.


ಛತ್ತೀಸಗಡ ಮುಖ್ಯಮಂತ್ರಿ ಭೂಪೇಶ್ ಬಘೇಲ್ ಅವರ ಆಪ್ತ ಶಾಸಕರು ದೆಹಲಿಯ ಛತ್ತೀಸಗಡ ಸದನ ತಲುಪಿದ್ದು, ರಾಜ್ಯದಲ್ಲಿ ನಾಯಕತ್ವ ಬದಲಾವಣೆಯ ವಿರುದ್ಧ ದನಿ ಎತ್ತಿದ್ದಾರೆ.

ಕಾಂಗ್ರೆಸ್: ಮತ್ತೆ ಜಿ- 23 ದನಿ

ಒಂದನೇ ಪುಟದಿಂದ...



ಕಪಿಲ್ ಸಿಬಲ್



ಗುಲಾಂ ನಬಿ ಆಜಾದ್

'ಸದ್ಯಕ್ಕೆ ನಮ್ಮ ಪಕ್ಷಕ್ಕೆ ಅಧ್ಯಕ್ಷರಿಲ್ಲ. ಪಕ್ಷದಲ್ಲಿ ಯಾರು ನಿರ್ಧಾರ ತೆಗೆದುಕೊಳ್ಳುತ್ತಿದ್ದಾರೆ ಎಂಬುದು ನಮಗೆ ಗೊತ್ತಿಲ್ಲ. ನಮಗೆ ಅದೆಲ್ಲಾ ಗೊತ್ತು, ಆದರೂ ಅದೆಲ್ಲಾ ಗೊತ್ತಿಲ್ಲ. ಪಕ್ಷವನ್ನು ತೊರೆದವರನ್ನು ಮರಳಿ ಪಕ್ಷಕ್ಕೆ ಕರೆತರುವ ಸಂಬಂಧ ಪ್ರಾಮಾಣಿಕವಾಗಿ ಯತ್ನಿಸಬೇಕು. ಏಕೆಂದರೆ ದೇಶವನ್ನು ಹಾಳುಗೆಡವುತ್ತಿರುವ ನರೇಂದ್ರ ಮೋದಿ ಅವರ ಸರ್ಕಾರವನ್ನು ಮಣಿಸುವ ಸಾಮರ್ಥ್ಯ ಇರುವ ಏಕೈಕ ಸಂಘಟನೆ ಕಾಂಗ್ರೆಸ್ ಮಾತ್ರ' ಎಂದು ಅವರು ಪ್ರತಿಪಾದಿಸಿದ್ದಾರೆ.

'ಸಮಾನ ಮನಸ್ಕರ ಪರವಾಗಿ ನಾನು ಮಾತನಾಡುತ್ತಿದ್ದೇನೆ. ಪಕ್ಷದ ಅಧ್ಯಕ್ಷ ಸ್ಥಾನಕ್ಕೆ ಚುನಾವಣೆ ನಡೆಯಬೇಕು ಎಂದು ಪತ್ರ ಬರೆದಿದ್ದೆವು. ಆ ಬಗ್ಗೆ ಕ್ರಮ ತೆಗೆದುಕೊಂಡನ್ನು ನೋಡಲು ನಾವು ಇನ್ನೂ ಕಾಯುತ್ತಿದ್ದೇವೆ' ಎಂದು ಅವರು ಲೇವಡಿ ಮಾಡಿದ್ದಾರೆ.

ಪಂಜಾಬ್ ಕಾಂಗ್ರೆಸ್‌ನಲ್ಲಿನ ಬಿಕ್ಕಟ್ಟಿನಿಂದ ಪಾಕಿಸ್ತಾನ ಮತ್ತು ಅಲ್ಲಿನ ಗುಪ್ತಚರ ಸಂಸ್ಥೆ ಐಎಸ್‌ಐಗೆ ಅನುಕೂಲವಾಗುತ್ತದೆ. ಇದಕ್ಕೆ ನಾವು ಅವಕಾಶ ನೀಡಬಾರದು. ಪಕ್ಷವು ಒಗ್ಗಟ್ಟಾಗಿ ಇರಬೇಕು ಎಂದು ಅವರು ಹೇಳಿದ್ದಾರೆ.

ಕಾಂಗ್ರೆಸ್‌ನ 23 ಹಿರಿಯ ನಾಯಕರು, ಪಕ್ಷದ ಅಧ್ಯಕ್ಷ ಸ್ಥಾನಕ್ಕೆ ಚುನಾವಣೆ ನಡೆಸಬೇಕು ಎಂದು ಒತ್ತಾಯಿಸಿ ಸೋನಿಯಾ ಗಾಂಧಿ ಅವರಿಗೆ ಪತ್ರ ಬರೆದಿದ್ದರು. ಅವರೆಲ್ಲರನ್ನೂ ಜಿ-23 ನಾಯಕರು ಎಂದು ಕರೆಯಲಾಗಿದೆ. ಆಜಾದ್ ಮತ್ತು ಕಪಿಲ್ ಸಿಬಲ್ ಸಹ ಈ ಗುಂಪಿನಲ್ಲಿದ್ದಾರೆ.

ತಾಲಿಬಾನ್‌ನಿಂದ ಭಾರತಕ್ಕೆ ಮನವಿ

ವಿಮಾನಯಾನವನ್ನು ಪುನರಾರಂಭಿಸುವಂತೆ ಪತ್ರ ಬರೆದ ಅಫ್ಗಾನಿಸ್ತಾನ ಸಿಎಎ

ನವದೆಹಲಿ (ಪಿಟಿಐ/ರಾಯಿಟರ್ಸ್): ಭಾರತ ಮತ್ತು ಅಫ್ಗಾನಿಸ್ತಾನದ ನಡುವೆ ವಿಮಾನಯಾನವನ್ನು ಪುನರಾರಂಭಿಸಬೇಕು ಎಂದು ತಾಲಿಬಾನ್ ಹಿಡಿತದಲ್ಲಿರುವ ಅಫ್ಗಾನಿಸ್ತಾನ ನಾಗರಿಕ ವಿಮಾನಯಾನ ಪ್ರಾಧಿಕಾರವು (ಸಿಎಎ) ಭಾರತೀಯ ನಾಗರಿಕ ವಿಮಾನಯಾನ ಮಹಾ ನಿರ್ದೇಶನಾಲಯಕ್ಕೆ (ಡಿಜಿಸಿಎ) ಪತ್ರ ಬರೆದಿದೆ.

ಈ ಮನವಿ ಕುರಿತಂತೆ ಡಿಜಿಸಿಎ ಇನ್ನಷ್ಟೇ ನಿರ್ಧಾರ ತೆಗೆದುಕೊಳ್ಳಬೇಕಿದೆ.

2021ರ ಸೆ.7ರಂದು ಈ ಪತ್ರ ಬರೆಯಲಾಗಿದೆ. ಅಫ್ಗನ್‌ನ ವಾಣಿಜ್ಯ ಉದ್ದೇಶದ ವಿಮಾನಗಳಾದ ಏರಿಯಾನ ಅಫ್ಗನ್ ಏರ್‌ಲೈನ್ ಮತ್ತು ಕಾಮ್ ಏರ್‌ಅನ್ನು ಭಾರತ ಮತ್ತು ಅಫ್ಗಾನಿಸ್ತಾನದ ನಡುವೆ ಹಾರಿಸಲು ಅನುಮತಿ ನೀಡಬೇಕು ಎಂದು ಸಿಎಎ ಹಂಗಾಮಿ ಮಂತ್ರಿ ಅಲ್ಹಾಜ್ ಹಮೀದುಲ್ಲ ಅಕುಂಜಾದ ಮನವಿ ಮಾಡಿದ್ದಾರೆ. ನಾವು ಮೊದಲೇ ಹೇಳಿದ್ದಂತೆ ಕಾಬೂಲ್ ವಿಮಾನ ನಿಲ್ದಾಣ ಅಮೆರಿಕದ ವಾಯುಪಡೆಯಿಂದ ಹಾನಿಗೀಡಾಗಿತ್ತು. ಆದರೆ ಈಗ ಕತಾರ್ ನೆರವಿನಿಂದ ದುರಸ್ತಿ ಮಾಡಿದ್ದೇವೆ. ಈಗ ವಿಮಾನ ನಿಲ್ದಾಣ ಕಾರ್ಯಾಚರಣೆಗೆ ತಯಾರಾಗಿದೆ ಎಂದಿದ್ದಾರೆ.

ಈ ಪತ್ರ ಬರೆಯಲು ಮುಖ್ಯ ಉದ್ದೇಶವೇನೆಂದರೆ, ಎರಡು ದೇಶಗಳ ನಡುವಿನ ಒಪ್ಪಂದದ ಪ್ರಕಾರ ಪ್ರಯಾಣಿಕರು ಸುಲಭವಾಗಿ ಓಡಾಟ ನಡೆಸಬೇಕು. ಜೊತೆಗೆ, ನಮ್ಮ ರಾಷ್ಟ್ರದ ವಿಮಾನಯಾನ ಸಂಸ್ಥೆಗಳ ವಿಮಾನಗಳು ಎಂದಿನಂತೆ ಕಾರ್ಯಾಚರಣೆ ನಡೆಸುವಂತೆ ಆಗಬೇಕು. ವಿಮಾನಗಳ ಹಾರಾಟಕ್ಕೆ ಅಫ್ಗಾನಿಸ್ತಾನ ಸಹಕಾರ ನೀಡಲಿದೆ ಎಂದು ಅಕುಂಜಾದ ಹೇಳಿದ್ದಾರೆ.

ಅಫ್ಗಾನಿಸ್ತಾನಕ್ಕೆ ಭಾರತ ವಾಣಿಜ್ಯ ಉದ್ದೇಶದ ವಿಮಾನವನ್ನು ಕಡೇ ಬಾರಿ ಹಾರಿಸಿದ್ದು ಆ.15ರಂದು. ಅಫ್ಗಾನಿಸ್ತಾನವನ್ನು ತಾಲಿಬಾನ್ ವಶಪಡಿಸಿಕೊಂಡ ಬಳಿಕ, ಅಫ್ಗಾನಿಸ್ತಾನದಲ್ಲಿ ಸಿಲುಕಿದ್ದವರನ್ನು ತೆರವುಗೊಳಿಸಲು ಭಾರತದಿಂದ ವಿಮಾನಗಳನ್ನು ಕಳಿಸಲಾಗಿತ್ತು. ತೆರವು ಕಾರ್ಯಾಚರಣೆ ಮುಗಿದ ಬಳಿಕ ಅಫ್ಗಾನಿಸ್ತಾನಕ್ಕೆ ವಿಮಾನಗಳನ್ನು ಹಾರಿಸಿಲ್ಲ.

ಅಮೆರಿಕಕ್ಕೆ ತಾಲಿಬಾನ್ ಎಚ್ಚರಿಕೆ

ಅಫ್ಗಾನಿಸ್ತಾನದ ವಿಮಾನಯಾನ ಪ್ರದೇಶದ ಮೇಲೆ ಅಮೆರಿಕ ಡ್ರೋನ್ ಹಾರಿಸುತ್ತಿರುವುದರ ವಿರುದ್ಧ ತಾಲಿಬಾನ್ ಬುಧವಾರ ಎಚ್ಚರಿಕೆ ನೀಡಿದೆ.

ಅಫ್ಗಾನಿಸ್ತಾನದ ಮೇಲೆ ಡ್ರೋನ್ ಹಾರಿಸುವ ಮೂಲಕ ಎಲ್ಲಾ ಅಂತರರಾಷ್ಟ್ರೀಯ ಹಕ್ಕುಗಳು ಮತ್ತು ಕಾನೂನುಗಳನ್ನು ಅಮೆರಿಕ ಉಲ್ಲಂಘಿಸಿದೆ. ಜೊತೆಗೆ, ದೋಹಾ ಮತ್ತು ಕತಾರ್‌ನಲ್ಲಿ ತಾಲಿಬಾನ್ ಜೊತೆಗೆ ಮಾಡಿಕೊಂಡ ಒಪ್ಪಂದವನ್ನೂ ಅಮೆರಿಕ ಮುರಿದಿದೆ ಎಂದು ತಾಲಿಬಾನ್ ಆರೋಪಿಸಿದೆ.

ಋಣಾತ್ಮಕ ಪರಿಣಾಮಗಳನ್ನು ತಡೆಯುವ ದಿಸೆಯಲ್ಲಿ, ಅಂತರರಾಷ್ಟ್ರೀಯ ಹಕ್ಕುಗಳು, ಕಾನೂನುಗಳು ಮತ್ತು ಒಪ್ಪಂದಗಳಿಗೆ ಅನುಗುಣವಾಗಿ ಅಫ್ಗಾನಿಸ್ತಾನದ ಜೊತೆ ಎಲ್ಲಾ ದೇಶಗಳು ವರ್ತಿಸಬೇಕು. ಇದನ್ನು ನಾವು ವಿಶೇಷವಾಗಿ ಅಮೆರಿಕಕ್ಕೆ ಹೇಳುತ್ತೇವೆ ಎಂದು ತಾಲಿಬಾನ್ ಹೇಳಿದೆ.

'ಪಟಾಕಿ: ವಿಷಕಾರಿ ರಾಸಾಯನಿಕಗಳ ಬಳಕೆ ಗಂಭೀರವಾದದ್ದು'



ನವದೆಹಲಿ (ಪಿಟಿಐ): ಪಟಾಕಿ ತಯಾರಿಕೆಯಲ್ಲಿ ವಿಷಕಾರಿ ರಾಸಾಯನಿಕಗಳ ಬಳಕೆ ಆಗುತ್ತಿರುವ ಕುರಿತು ಸಿಬಿಐ ಸಲ್ಲಿಸಿರುವ ವರದಿ ಅತ್ಯಂತ ಗಂಭೀರದ್ದಾಗಿದೆ ಎಂದಿರುವ ಸುಪ್ರೀಂ ಕೋರ್ಟ್, ಇದು ಮೇಲ್ನೋಟಕ್ಕೆ ನ್ಯಾಯಾಲಯದ ಆದೇಶದ ಉಲ್ಲಂಘನೆಯಾಗಿದೆ ಎಂದು ಹೇಳಿದೆ.


ಈ ಕುರಿತು ಬುಧವಾರ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ಎಂ.ಆರ್.ಶಾ ಮತ್ತು ಎ.ಎಸ್.ಬೋಪಣ್ಣ ಅವರ ಪೀಠವು, 'ಬೇರಿಯಂ' ಲವಣಗಳಂತಹ ಹಾನಿಕಾರಕ ರಾಸಾಯನಿಕಗಳು ಸಿಬಿಐ ವಶಪಡಿಸಿಕೊಂಡಿರುವ ಪಟಾಕಿಗಳಲ್ಲಿ ಕಂಡು ಬಂದಿವೆ ಎಂದು ತಿಳಿಸಿತು.

'ಹಿಂದೂಸ್ತಾನ್ ಫೈರ್‌ವರ್ಕ್ಸ್' ಮತ್ತು 'ಸ್ಟ್ಯಾಂಡರ್ಡ್ ಫೈರ್‌ವರ್ಕ್ಸ್' ತಯಾರಕರು ಭಾರಿ ಪ್ರಮಾಣದಲ್ಲಿ 'ಬೇರಿಯಂ' ಖರೀದಿಸಿರುವುದು ಮತ್ತು ಈ ರಾಸಾಯನಿಕಗಳನ್ನು ಪಟಾಕಿಗಳಲ್ಲಿ ಬಳಸಿರುವುದು ಗಮನಕ್ಕೆ ಬಂದಿದೆ ಎಂದು ಪೀಠ ತಿಳಿಸಿತು.

ಸಿಬಿಐನ ಚೆನ್ನೈ ಜಂಟಿ ನಿರ್ದೇಶಕರು ಸಲ್ಲಿಸಿರುವ ಪ್ರಾಥಮಿಕ ವಿಚಾರಣಾ ವರದಿಯನ್ನು ಪ್ರತಿವಾದಿಗಳ ಎಲ್ಲ ವಕೀಲರಿಗೆ ನೀಡುವಂತೆ ಸೂಚಿಸಿದ ಪೀಠವು, ಪಟಾಕಿ ತಯಾರಕರಿಗೆ ವಾದ ಮಂಡಿಸಲು ಇನ್ನೊಂದು ಅವಕಾಶ ನೀಡುವುದಾಗಿ ಹೇಳಿತು.

13 ವರ್ಷಕ್ಕೆ ಸನ್ಯಾಸ ಸ್ವೀಕಾರ ತಪ್ಪಲ್ಲ: ಪೇಜಾವರ ಸ್ವಾಮೀಜಿ

ಪ್ರಜಾವಾಣಿ ವಾರ್ತೆ



ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿ

ಉಡುಪಿ: 'ಹದಿಮೂರು ವಯಸ್ಸು ತುಂಬಿದ ಬಾಲಕನಿಗೆ ಸನ್ಯಾಸ ದೀಕ್ಷೆ ನೀಡುವುದು ಧಾರ್ಮಿಕ ನೆಲೆಯಲ್ಲಿ ತಪ್ಪಲ್ಲ' ಎಂದು ಪೇಜಾವರ ಮಠದ ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿ ಅಭಿಪ್ರಾಯಪಟ್ಟರು.

ಉಡುಪಿಯ ಶಿರೂರು ಮಠಕ್ಕೆ ಬಾಲಸನ್ಯಾಸಿಯ ನೇಮಕ ಸಂಬಂಧ ಹೈಕೋರ್ಟ್ ನೀಡಿರುವ ಆದೇಶಕ್ಕೆ ಬುಧವಾರ ಮಠದಲ್ಲಿ ಪ್ರತಿಕ್ರಿಯೆ ನೀಡಿದ ಸ್ವಾಮೀಜಿ, '13 ವಯಸ್ಸಿನ ಬಾಲಕನಲ್ಲಿ ಪ್ರೌಢಿಮೆ ಇರುತ್ತದೆ. ಈ ಅವಧಿಯಲ್ಲಿ ಸನ್ಯಾಸ ಸ್ವೀಕರಿಸಬಹುದು ಎಂಬ ಅಂಶವನ್ನು ಆಣಿಮಾಂಡವ್ಯ ಎಂಬ ಮಹರ್ಷಿ ಮಹಾಭಾರತದಲ್ಲಿ ಉಲ್ಲೇಖಿಸಿದ್ದಾರೆ. ಹಾಗಾಗಿ, ಮಠಗಳಿಗೆ ಪ್ರೌಢ ಬಾಲಸನ್ಯಾಸಿಗಳನ್ನು ನೇಮಿಸಬಹುದು' ಎಂದರು.

ಸಭೆ ಕರೆದು ನಿರ್ಧಾರ: ಮತ್ತೊಂದೆಡೆ, ಶಿರೂರು ಮಠಕ್ಕೆ ಬಾಲಸನ್ಯಾಸಿಯ ನೇಮಕ ವಿರುದ್ಧ ಹೈಕೋರ್ಟ್‌ನಲ್ಲಿ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸಿದ್ದ ಲಾತವ್ಯ ಆಚಾರ್ಯ ಪ್ರತಿಕ್ರಿಯಿಸಿ, ಶೀಘ್ರವೇ ಶಿರೂರು ಮಠದ ಭಕ್ತ ಸಮಿತಿಯ ಸಭೆ ಕರೆದು ಮುಂದಿನ ಕಾನೂನು ಹೋರಾಟದ ಬಗ್ಗೆ ನಿರ್ಧಾರ ತೆಗೆದುಕೊಳ್ಳುವುದಾಗಿ ತಿಳಿಸಿದರು.

ಸ್ವಾಗತಾರ್ಹ: ಬಾಲಸನ್ಯಾಸ ಹಾಗೂ ದ್ವಂದ್ವ ಮಠಗಳ ಅಧಿಕಾರ ಪ್ರಶ್ನಿಸಿ ಹೈಕೋರ್ಟ್‌ನಲ್ಲಿ ಸಲ್ಲಿಕೆಯಾಗಿದ್ದ ಅರ್ಜಿ ವಜಾಗೊಂಡಿರುವುದು ಸ್ವಾಗತಾರ್ಹ ಎಂದು ಸೋದೆ ಮಠದ ವಕ್ತಾರ ರತ್ನಕುಮಾರ್ ತಿಳಿಸಿದ್ದಾರೆ.

ಬಾಲ ಪೀಠಾಧಿಪತಿ ನೇಮಕ ಪ್ರಶ್ನಿಸಿದ್ದ ಅರ್ಜಿ ವಜಾ

ಬೆಂಗಳೂರು: ಉಡುಪಿಯ ಶೀರೂರು ಮಠಕ್ಕೆ ಬಾಲ ಪೀಠಾಧಿಪತಿ ನೇಮಕ ಮಾಡಿರುವುದನ್ನು ಪ್ರಶ್ನಿಸಿ ಸಲ್ಲಿಕೆಯಾಗಿದ್ದ ಅರ್ಜಿಯನ್ನು ಹೈಕೋರ್ಟ್ ವಜಾಗೊಳಿಸಿದೆ.

ಪಿ. ಲಾತವ್ಯ ಆಚಾರ್ಯ ಮತ್ತು ಇತರರು ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ಹಂಗಾಮಿ ಮುಖ್ಯ ನ್ಯಾಯಮೂರ್ತಿ ಸತೀಶ್ ಚಂದ್ರ ಶರ್ಮಾ ನೇತೃತ್ವದ ವಿಭಾಗೀಯ ಪೀಠ, '18 ವರ್ಷದ ಒಳಗಿನವರಿಗೆ ಸನ್ಯಾಸ ದೀಕ್ಷೆ ನೀಡಬಾರದು ಎಂಬುದಕ್ಕೆ ಯಾವುದೇ ಕಾನೂನು ಇಲ್ಲ' ಎಂದು ಹೇಳಿದೆ.

'ಬಾಲಕರಿಗೆ ಸನ್ಯಾಸ ದೀಕ್ಷೆ ಕೊಡುವುದು ಸಂವಿಧಾನಕ್ಕೆ ವಿರುದ್ಧವಾದ ನಡೆ' ಎಂದು ಅರ್ಜಿದಾರರು ವಾದಿಸಿದ್ದರು. ಧಾರ್ಮಿಕ ಆಚರಣೆಗಳು 800 ವರ್ಷಗಳಿಂದ ನಡೆದುಕೊಂಡು ಬರುತ್ತಿವೆ ಎಂಬುದನ್ನು ಗಮನಿಸಿದ ಪೀಠ, 'ಯಾವುದೇ ಶಾಸನ ಅಥವಾ ಸಂವಿಧಾನವನ್ನು ಉಲ್ಲಂಘಿಸಲಾಗಿದೆ ಎಂಬುದನ್ನು ಸಾಬೀತಪಡಿಸಲು ಸಾಧ್ಯವಿಲ್ಲ' ಎಂದು ಹೇಳಿದೆ.

ಆರ್ಶ್ ಮಾರ್ಗ ಸೇವಾ ಟ್ರಸ್ಟ್ ಮತ್ತು ಇತರರ ಪ್ರಕರಣದಲ್ಲಿ ಮಧ್ಯಪ್ರದೇಶ ಹೈಕೋರ್ಟ್ 2019ರಲ್ಲಿ ನೀಡಿದ್ದ ಆದೇಶವನ್ನು ಪೀಠ ಉಲ್ಲೇಖಿಸಿದೆ.

'ಈ ವಿಷಯದಲ್ಲಿ ಮಧ್ಯ ಪ್ರವೇಶಿಸಿದರೆ ಸಂವಿಧಾನ ಕಾಯುವ ಪ್ರಾಧಿಕಾರವಾಗಿ ತನ್ನ ಪಾತ್ರವನ್ನು ಉಲ್ಲಂಘಿಸಿದಂತೆ ಆಗಲಿದೆ' ಎಂದು ಹೇಳಿತು.

ಪೀಠಕ್ಕೆ ಸಲಹೆ ನೀಡಲು ನೇಮಕವಾಗಿರುವ ವಕೀಲ ಎಸ್. ಎಸ್. ನಾಗಾನಂದ ಅವರು, '18 ವರ್ಷಕ್ಕಿಂತ ಕೆಳಗಿನವರಿಗೆ ಸನ್ಯಾಸ ನೀಡಬಾರದು ಎಂಬುದಕ್ಕೆ ಯಾವುದೇ ಶಾಸನ ಇಲ್ಲ ಮತ್ತು ಅದು ಹಾನಿಕಾರಕ ಸಂಪ್ರದಾಯವೂ ಅಲ್ಲ' ಎಂದು ವರದಿ ಸಲ್ಲಿಸಿದ್ದರು.

ಪಂಚಮಸಾಲಿ ಪೀಠದ ಬಸವ ಜಯ ಮೃತ್ಯುಂಜಯ ಸ್ವಾಮೀಜಿ

ಸ್ಪಷ್ಟ ಭರವಸೆ ಕೊಡದಿದ್ದರೆ ಸತ್ಯಾಗ್ರಹದ ಎಚ್ಚರಿಕೆ

ಪ್ರಜಾವಾಣಿ ವಾರ್ತೆ



ಮೃತ್ಯುಂಜಯ ಸ್ವಾಮೀಜಿ

ಬೆಂಗಳೂರು: ಪಂಚಮಸಾಲಿ ಸಮುದಾಯವನ್ನು ಹಿಂದುಳಿದ ವರ್ಗಗಳ ಪ್ರವರ್ಗ–2ಎ ಪಟ್ಟಿಗೆ ಸೇರಿಸುವ ಕುರಿತು ಅಕ್ಟೋಬರ್ 1 ರಂದು ಸ್ಪಷ್ಟ ಭರವಸೆ ನೀಡದಿದ್ದರೆ ಧರಣಿ ಸತ್ಯಾಗ್ರಹ ಆರಂಭಿಸಲಾಗುವುದು ಎಂದು ಕೂಡಲ ಸಂಗಮದ ಪಂಚಮಸಾಲಿ ಪೀಠದ ಬಸವ ಜಯ ಮೃತ್ಯುಂಜಯ ಸ್ವಾಮೀಜಿ ಹೇಳಿದರು.

ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 'ಪ್ರವರ್ಗ–2 ಎ ಮೀಸಲಾತಿ ನೀಡುವಂತೆ ಒತ್ತಾಯಿಸಿ ನಾವು ಆರಂಭಿಸಿರುವ ಅಭಿಯಾನ ಅ.1 ರಂದು ಬೆಂಗಳೂರು ತಲುಪಲಿದೆ. ಆ ದಿನ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ನಮಗೆ ಸ್ಪಷ್ಟವಾದ ಭರವಸೆ ನೀಡಬೇಕು. ಅವರಿಂದ ಉತ್ತರ ಬಾರದಿದ್ದರೆ ಧರಣಿ ಆರಂಭಿಸುತ್ತೇವೆ' ಎಂದು ಅವರು ಹೇಳಿದರು.

ಅ.1 ರಂದು ಮಾಜಿ ಮುಖ್ಯಮಂತ್ರಿ ಜೆ.ಎಚ್. ಪಟೇಲ್ ಅವರ ಸ್ಮರಣೆಯ ಕಾರ್ಯಕ್ರಮ ನಡೆಯಲಿದೆ. ಆ ಸಮಾರಂಭಕ್ಕೆ ಮುಖ್ಯಮಂತ್ರಿ ಅಥವಾ ಸರ್ಕಾರದ ಪ್ರತಿನಿಧಿ ಬಂದು ಭರವಸೆ ನೀಡುತ್ತಾರೆ ಎಂಬ ನಿರೀಕ್ಷೆ ಇದೆ. ಶುಕ್ರವಾರ ಮಧ್ಯಾಹ್ನದವರೆಗೂ ಕಾದು ನೋಡಲಾಗುವುದು. ಯಾವುದೇ ಪ್ರತಿಕ್ರಿಯೆ ದೊರೆಯದಿದ್ದರೆ ಕಾರ್ಯಕ್ರಮದ ಸ್ಥಳದಿಂದ ಸ್ವಾತಂತ್ರ್ಯ ಉದ್ಯಾನಕ್ಕೆ ತೆರಳಿ ಹೋರಾಟ ಆರಂಭಿಸಲಾಗುವುದು ಎಂದು ಹೇಳಿದರು.

'ಸೆಪ್ಟೆಂಬರ್ 15 ರೊಳಗೆ ನಮ್ಮ ಸಮುದಾಯಕ್ಕೆ ಪ್ರವರ್ಗ–2 ಎ ಅಡಿಯಲ್ಲಿ ಮೀಸಲಾತಿ ನೀಡುವುದಾಗಿ ಸರ್ಕಾರ ಭರವಸೆ ನೀಡಿತ್ತು. ಆದರೆ, ಗಡುವಿನೊಳಗೆ ತೀರ್ಮಾನ ಆಗಿಲ್ಲ. ಆದರೆ, ಹಿಂದುಳಿದ ವರ್ಗಗಳ ಆಯೋಗ ಈ ಸಂಬಂಧ ಪ್ರಕ್ರಿಯೆ ಆರಂಭಿಸಿದೆ. ಹೀಗಾಗಿ ನಮ್ಮ ಭರವಸೆ ಹುಸಿಯಾಗಿಲ್ಲ. ಬಸವರಾಜ ಬೊಮ್ಮಾಯಿ ಅವರು ನಮ್ಮ ಹೋರಾಟ ಬೆಂಬಲಿಸಿ ಮಾತನಾಡಿದ್ದಾರೆ. ಅವರಿಂದ ಸಕಾರಾತ್ಮಕ ಭರವಸೆ ಸಿಗುತ್ತದೆ ಎಂಬ ನಿರೀಕ್ಷೆ ಇದೆ' ಎಂದರು.

ಮುಖ್ಯಮಂತ್ರಿಯವರು ಎಲ್ಲ ಜಿಲ್ಲಾಧಿಕಾರಿಗಳಿಂದ ವರದಿ ಪಡೆದಿದ್ದಾರೆ. ಮೀಸಲಾತಿ ನೀಡುವ ವಿಷಯದಲ್ಲಿ ಶೇಕಡ 70 ರಷ್ಟು ಕೆಲಸ ಆಗಿದೆ. ಹಿಂದುಳಿದ ವರ್ಗಗಳ ಆಯೋಗದಿಂದ ವರದಿ ಪಡೆದು ಅಂತಿಮ ನಿರ್ಧಾರ ಕೈಗೊಳ್ಳುವುದು ಮಾತ್ರ ಬಾಕಿ ಇದೆ. ಅದನ್ನು ಸ್ಪಷ್ಟವಾಗಿ ಹೇಳಬೇಕು ಎಂಬುದು ತಮ್ಮ ಆಗ್ರಹ ಎಂದು ತಿಳಿಸಿದರು.

ಅಖಿಲ ಭಾರತ ಪಂಚಮಸಾಲಿ ಮಹಾಸಭಾ ಅಧ್ಯಕ್ಷ ವಿಜಯಾನಂದ ಕಾಶಪ್ಪನವರ ಮಾತನಾಡಿ, 'ಆರು ತಿಂಗಳ ಗಡುವು ನೀಡಿದ್ದರೂ ಸರಿಯಾಗಿ ಕ್ರಮ ಕೈಗೊಂಡಿಲ್ಲ. ಈ ಕಾರಣದಿಂದ ನಾವು ಮತ್ತೆ ಹೋರಾಟ ಆರಂಭಿಸಿದ್ದೇವೆ' ಎಂದರು.

'ಸಚಿವ ಮುರುಗೇಶ ನಿರಾಣಿ ನಮ್ಮ ಹೋರಾಟವನ್ನು ದುರ್ಬಳಕೆ ಮಾಡಿಕೊಂಡಿದ್ದಾರೆ. ಹೋರಾಟ ನಿಲ್ಲಿಸುವ ಭರವಸೆ ನೀಡಿ ಸಚಿವ ಪದವಿ ಗಿಟ್ಟಿಸಿಕೊಂಡಿದ್ದಾರೆ' ಎಂದು ಆರೋಪಿಸಿದರು.

ಸಚಿವನಾಗಿ ಬೀದಿಯಲ್ಲಿ ಹೋರಾಡಲಾಗಲ್ಲ:ನಿರಾಣಿ



ಮುರುಗೇಶ ನಿರಾಣಿ

ಬೆಳಗಾವಿ: 'ನಾನು ಸಚಿವ ಸ್ಥಾನದಲ್ಲಿದ್ದುಕೊಂಡು, ಲಿಂಗಾಯತ ಪಂಚಮಸಾಲಿ ಸಮಾಜಕ್ಕೆ ಪ್ರವರ್ಗ 2ಎ ಮೀಸಲಾತಿಗೆ ಆಗ್ರಹಿಸಿ ಬೀದಿಯಲ್ಲಿ ನಿಂತು ಹೋರಾಡಲು ಸಾಧ್ಯವಾಗುವುದಿಲ್ಲ' ಎಂದು ಬೃಹತ್ ಕೈಗಾರಿಕಾ ಸಚಿವ ಮುರುಗೇಶ ನಿರಾಣಿ ಹೇಳಿದರು.

ಇಲ್ಲಿ ಪತ್ರಕರ್ತರೊಂದಿಗೆ ಬುಧವಾರ ಮಾತನಾಡಿದ ಅವರು, 'ಬಸವ ಜಯಮೃತ್ಯುಂಜಯ ಸ್ವಾಮೀಜಿ ನಮ್ಮ ಗುರುಗಳು. ಅವರನ್ನು ಸಮಾಜದ ಪೀಠಕ್ಕೆ ನಾವೇ ಆಯ್ಕೆ ಮಾಡಿದ್ದು. ನಮ್ಮ ಹೋರಾಟಕ್ಕೆ ಕೆಲವರು ಅಡ್ಡಿಪಡಿಸುತ್ತಿದ್ದಾರೆ ಎಂದು ಅವರು ಯಾರನ್ನು ದೃಷ್ಟಿಯಲ್ಲಿಟ್ಟುಕೊಂಡು ಆರೋಪ ಮಾಡಿದ್ದಾರೋ ನನಗೆ ಗೊತ್ತಿಲ್ಲ' ಎಂದರು.

'ಸಮಾಜವನ್ನು ಪ್ರವರ್ಗ 3ಬಿ ಪಟ್ಟಿಗೆ ತಂದವನು ನಾನೇ. ಪ್ರವರ್ಗ 2ಎ ಮೀಸಲಾತಿ ಸಿಗಬೇಕು ಎಂದು ಹೋರಾಟ ಮಾಡಿದವರಲ್ಲಿ ಮೊದಲಿಗ ನಾನು. ಇತರರಂತೆ ಪಾದಯಾತ್ರೆ ಮಾಡಲು ಅಥವಾ ಹೋರಾಟಕ್ಕೆ ಹೋಗಲು ಆಗುವುದಿಲ್ಲ. ಸಮಾಜದವರು ನಡೆಸುವ ಕಾರ್ಯಕ್ರಮಕ್ಕೆ ಕಲ್ಲು ತೂರಾಟ ನಡೆಸುವುದು, ಮೊಟ್ಟೆ ಎಸೆಯುವಂತೆ ಮಾಡುವುದು ನಮ್ಮ ಜಾಯಮಾನವಲ್ಲ. ಕುಂಬಳ ಕಾಯಿ ಕಳ್ಳ ಎಂದರೆ ನಾನೇಕೆ ಹೆಗಲು ಮುಟ್ಟಿ ನೋಡಿಕೊಳ್ಳಲಿ?' ಎಂದರು.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು	ಹೊರಹರಿವು
			(ಕ್ಯುಸೆಕ್‌ಗಳಲ್ಲಿ)	
ಕೆಆರ್‌ಎಸ್*	124.80	112.81	4,442	7,797
ಹಾರಂಗಿ	2,859	2,857.63	1,053	1,250
ಕಬಿನಿ	2284.00	2,280.6	2,650	3,500
ಹೇಮಾವತಿ	2,922	2,914.16	4,046	4,972
ಲಿಂಗನಮಕ್ಕಿ	1,819	1815.85	8,935	3,019
ಸೂಪಾ (ಮೀ)	564	556.75	3,271	3,271
ಮಾಣಿ	594	587.74	1,482	792
ತುಂಗಭದ್ರಾ	1,633	1,632.72	7,429	10,576
ಮಲಪ್ರಭಾ	2079.5	2,078.90	97	1,694
ಘಟಪ್ರಭಾ	2175	2,175.00	489	489
ಭದ್ರಾ	186	184.10	2,451	3,655
ಆಲಮಟ್ಟಿ (ಮೀ)	519.6	519.59	17,800	17,800
ನಾರಾಯಣಪುರ (ಮೀ)	492.25	492.19	16,000	11,800

* ನೆಲಮಟ್ಟದಿಂದ

ತಾಯಿ ಬಳಿ ಒಯ್ಯಿರಿ ಉಗ್ರನ ಮನವಿ

ಶ್ರೀನಗರ (ಪಿಟಿಐ): ಜಮ್ಮು ಮತ್ತು ಕಾಶ್ಮೀರದ ಉರಿ ವಲಯದಲ್ಲಿ ಭಾರತೀಯ ಸೇನಾಪಡೆಯು ನಡೆಸಿದ ಕಾರ್ಯಾಚರಣೆ ಸಂದರ್ಭದಲ್ಲಿ ಸೆರೆಸಿಕ್ಕ ಹದಿವಯಸ್ಸಿನ ಭಯೋತ್ಪಾದಕನು, ತಾಯಿಯ ಬಳಿಗೆ ವಾಪಸ್ ಕರೆದೊಯ್ಯುವಂತೆ ತನ್ನ ನಿರ್ವಾಹಕರಿಗೆ ಮನವಿ ಮಾಡಿದ್ದಾನೆ.

'ನನ್ನನ್ನು ಹೇಗೆ ಇಲ್ಲಿಗೆ (ಭಾರತಕ್ಕೆ) ಕಳುಹಿಸಿದ್ದರೋ ಅದೇ ರೀತಿ ವಾಪಸ್ ನನ್ನ ತಾಯಿಯ ಬಳಿಗೆ ಕರೆದೊಯ್ಯಬೇಕು ಎಂದು ಲಷ್ಕರ್ ಎ ತಯಬಾ (ಎಲ್‌ಇಟಿ) ಏರಿಯಾ ಕಮಾಂಡರ್, ಐಎಸ್‌ಐ ಹಾಗೂ ಪಾಕಿಸ್ತಾನದ ಸೇನೆಗೆ ಮನವಿ ಮಾಡುತ್ತಿದ್ದೇನೆ' ಎಂದು ಭಯೋತ್ಪಾದಕ ಅಲಿ ಬಾಬರ್ ಪಾತ್ರಾ, ಪಾಕಿಸ್ತಾನಕ್ಕೆ ಮನವಿ ಮಾಡಿರುವ ವಿಡಿಯೊ ಸಂದೇಶವನ್ನು ಬುಧವಾರ ಭಾರತೀಯ ಸೇನೆಯು ಬಿಡುಗಡೆ ಮಾಡಿದೆ.

ಕಾಶ್ಮೀರ ಪರಿಸ್ಥಿತಿ ಬಗ್ಗೆ ಪಾಕಿಸ್ತಾನದ ಸೇನೆ, ಎಲ್‌ಇಟಿ ಹಾಗೂ ಐಎಸ್‌ಐ ಸುಳ್ಳು ಮಾಹಿತಿಯನ್ನು ಹರಡುತ್ತಿರುವುದಾಗಿ ಬಾಬರ್ ಹೇಳಿರುವುದು ಈ ವಿಡಿಯೊದಲ್ಲಿದೆ.

ಹಣಕಾಸಿನ ಸಮಸ್ಯೆಯಿಂದಾಗಿ ಶಾಲೆಯನ್ನು ತೊರೆದು ಭಯೋತ್ಪಾದಕರ ಸಹವಾಸಕ್ಕೆ ಬಂದಿದ್ದಾಗಿ ಹೇಳಿದ್ದಾನೆ.

ಪ್ರಜಾವಾಣಿ ಗುರುವಾರ, 30 ಸೆಪ್ಟೆಂಬರ್ 2021

ಸ್ಪರ್ಧಾ ವಾಣಿ



ಅನ್ವಯಿಕ ಓದಿನಿಂದ ಯಶಸ್ಸು ಖಚಿತ



ಸ್ನೇಹಾ ಕೋರಿ

ಮೂಲತಃ ಧಾರವಾಡ ಜಿಲ್ಲೆ ಕುಂದಗೋಳ ತಾಲ್ಲೂಕಿನ ಸಂಶಿಯವರಾದ ಸ್ನೇಹಾ ಕೋರಿ, 2014ರಲ್ಲಿ ಕೆಪಿಎಸ್‌ಸಿ ಪರೀಕ್ಷೆಯಲ್ಲಿ ತೇರ್ಗಡೆಯಾದ ಅವರು ವಾಣಿಜ್ಯ ತೆರಿಗೆ ಇಲಾಖೆಯ ಧಾರವಾಡ ವಿಭಾಗದಲ್ಲಿ ಪ್ರೊಬೇಷನರಿ ಸಿಟಿಒ ಅಧಿಕಾರಿಯಾಗಿ ಸೇವೆ ಸಲ್ಲಿಸಿ, ಹುಬ್ಬಳ್ಳಿಯಲ್ಲಿ ಎಲ್‌.ಜಿ.ಎಸ್‌.ಟಿ.ಒ (ಸ್ಥಳೀಯ ಜಿ.ಎಸ್‌.ಟಿ ಅಧಿಕಾರಿ) ಆಗಿ ಸೇವೆಯಲ್ಲಿದ್ದಾರೆ. ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಯಶಗಳಿಸುವ ನಿಟ್ಟಿನಲ್ಲಿ ಅವರು ಇಲ್ಲಿ ಮಾರ್ಗದರ್ಶನ ನೀಡಿದ್ದಾರೆ.

ಸಂದರ್ಶನ: ಚನ್ನಬಸಪ್ಪ ರೊಟ್ಟಿ

• ಆರಂಭಿಕ ಶೈಕ್ಷಣಿಕ ಜೀವನ ಹೇಗಿತ್ತು?

ಸಂಶಿಯಲ್ಲಿಯೇ ಎಸ್ಸೆಸ್ಸೆಲ್ಸಿವರೆಗೆ ಕನ್ನಡ ಮಾಧ್ಯಮದಲ್ಲಿ ಅಧ್ಯಯನ. ಹುಬ್ಬಳ್ಳಿಯ ಪಿ.ಸಿ. ಜಾಬಿನ್ ಕಾಲೇಜಿನಲ್ಲಿ ಪಿಯುಸಿ ಓದು. ಬಿಎಸ್‌ಸಿ (ಕೃಷಿ ಮಾರುಕಟ್ಟೆ) ಧಾರವಾಡದ ಕೃಷಿ ವಿಶ್ವವಿದ್ಯಾಲಯದಲ್ಲಿ ಓದಿದ್ದೇನೆ. ಬಿಎಸ್‌ಸಿ ಮುಗಿದ ಮೊದಲ ವರ್ಷದಲ್ಲಿ ಮೊದಲನೇ ಪ್ರಯತ್ನದಲ್ಲಿಯೇ ಕನ್ನಡ ಮಾಧ್ಯಮದಲ್ಲಿ ಪರೀಕ್ಷೆ ಬರೆದು ಕೆಎಎಸ್ ಅಧಿಕಾರಿಯಾದೆ.

• ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸಿದ್ಧತೆ ಹೇಗಿತ್ತು?

ಬಾಲ್ಯದಿಂದಲೇ ಓದುವ ಹವ್ಯಾಸವಿತ್ತು. ಐಪಿಎಸ್ ಅಧಿಕಾರಿ ಸಂತೋಷ ಹಾದಿಮನಿ ಅವರಿಂದ ನಾಗರಿಕ ಪರೀಕ್ಷೆ ಎದುರಿಸಲು ಪ್ರೇರಣೆ ದೊರೆಯಿತು. ಒಬಿಸಿ ಕೋಟಾದಡಿ ಕೋಚಿಂಗ್‌ಗೆ ಆಯ್ಕೆಯಾಗಿ ಹೈದರಾಬಾದ್‌ಗೆ ತೆರಳಿದ್ದೆ. ನಂತರ ಧಾರವಾಡದಲ್ಲಿಯೇ ಉಳಿದುಕೊಂಡು ಸ್ವಯಂ ಅಧ್ಯಯನ ಮಾಡಿದೆ. ಹಲವು ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿ ಸಂಸ್ಥೆಗಳಲ್ಲಿ ಕಾರ್ಯಾಗಾರ ಹಾಗೂ ಮಾದರಿ ಪರೀಕ್ಷೆಗಳನ್ನು ಎದುರಿಸಿದೆ. ನಾನು ದಿನಕ್ಕೆ ಇಂತಿಷ್ಟು ಗಂಟೆ ಓದಬೇಕು ಎಂಬ ನಿಯಮ ಹಾಕಿಕೊಂಡಿರಲಿಲ್ಲ. ಆದರೆ, ಓದಿದ್ದಷ್ಟನ್ನು ಆನಂದದಿಂದ, ಅನ್ವಯ ಮಾಡಿಕೊಂಡು ಓದುತ್ತಿದ್ದೆ. ರಾಜ್ಯಸಭಾ ಟಿವಿ ವೀಕ್ಷಣೆ, ಆಲ್ ಇಂಡಿಯಾ ರೇಡಿಯೊ ವಾರ್ತೆ ಕೇಳಿದ್ದು, ಒಂದು ಪರಿಕಲ್ಪನೆಯ ಪರ-ವಿರೋಧ ನಿಲುವುಗಳನ್ನು ಅರ್ಥ ಮಾಡಿಕೊಳ್ಳಲು ನೆರವು ನೀಡಿತು. ರಾಜ್ಯ ಪಠ್ಯಕ್ರಮದ 5 ರಿಂದ 12ನೇ ತರಗತಿವರೆಗಿನ ಪುಸ್ತಕಗಳ ಓದು ಬಹಳ ನೆರವಾಯಿತು.

• ನೋಟ್ಸ್, ಬರವಣಿಗೆ ಹೇಗಿತ್ತು?

ನಿರ್ದಿಷ್ಟವಾದ ಕೆಲವು ಪುಸ್ತಕಗಳನ್ನು ಮಾತ್ರ ಓದಿ ಮುಖ್ಯಾಂಶಗಳನ್ನು 'ಮೈಂಡ್ ಮ್ಯಾಪಿಂಗ್'ಗೆ ಅನುಕೂಲ ಆಗುವಂತೆ 'ಡಯಾಗ್ರಾಮಿಕ್ ಪ್ಯಾಟರ್ನ್' ಅಲ್ಲಿ ಬರೆದಿಟ್ಟುಕೊಳ್ಳುತ್ತಿದ್ದೆ. ಇದರಿಂದ ವಿಷಯ ಬಲು ಸುಲಭವಾಗಿ, ಬಹು ದಿನಗಳವರೆಗೆ ನೆನಪಿನಲ್ಲಿ ಉಳಿಯುತ್ತಿತ್ತು. ಸರ್ಕಾರದಿಂದ ಪ್ರಕಾಶಿತವಾಗುವ ಯೋಜನಾ, ಕುರುಕ್ಷೇತ್ರ, ಎಕನಾಮಿಕ್ ಸರ್ವೇ, ಬಜೆಟ್ ರಿಪೋರ್ಟ್, ಜನಸಂಖ್ಯಾ ವರದಿ ನಿಯತಕಾಲಿಕೆಗಳನ್ನು ಓದಿ ಪ್ರಬಂಧ ಬರವಣಿಗೆ ರೂಢಿಸಿಕೊಳ್ಳುತ್ತಿದ್ದೆ.

• ಸ್ಪರ್ಧಾರ್ಥಿಗಳಿಗೆ ನಿಮ್ಮ ಸಲಹೆ ಏನು?

ನೀವು ಬರೆಯುವ ಪರೀಕ್ಷೆಯ ಪಠ್ಯಕ್ರಮದ ಒಂದು ಪ್ರತಿಯನ್ನು ತಪ್ಪದೇ ಇಟ್ಟುಕೊಳ್ಳಬೇಕು. ಹಳೆಯ ಪ್ರಶ್ನೆಪತ್ರಿಕೆಗಳ ಪರಾಮರ್ಶೆ, ಒಂದು ಪರಿಕಲ್ಪನೆಯ ಬಗ್ಗೆ 360 ಡಿಗ್ರಿ ಪರಿಶೀಲನೆ ಅಗತ್ಯ. ಆದಷ್ಟು ಸಾಮಾಜಿಕ ಜಾಲತಾಣಗಳಿಂದ ದೂರವಿರಬೇಕು. 'ನೀ ನನಗೆ- ನಾ ನಿನಗೆ' ಎಂಬ ತತ್ವದಡಿ ಸಮಾನಮನಸ್ಕರೊಡನೆ ಉತ್ತಮ ಜ್ಞಾನ ವಿನಿಮಯಕ್ಕೆ ಆದ್ಯತೆ ನೀಡಬೇಕು.

• ಮಹಿಳಾ ಸ್ಪರ್ಧಾರ್ಥಿಗಳಿಗೆ ವಿಶೇಷ ಕಿವಿಮಾತು?

ನಾನು, ನಮ್ಮ ತಾಲ್ಲೂಕಿನ ಮೊದಲ ಮಹಿಳಾ ಕೆಎಎಸ್ ಅಧಿಕಾರಿ. ಈ ನಿಟ್ಟಿನಲ್ಲಿ ನನ್ನ ತಂದೆ-ತಾಯಿಯ ಪರಿಶ್ರಮ ಮತ್ತು ನೆರವು ಅಪಾರವಾಗಿದೆ. ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸಂಬಂಧಿಸಿದಂತೆ ಮಹಿಳೆಯರಿಗೆ ಕುಟುಂಬದ ಬೆಂಬಲ ದೊರೆತದ್ದೇ ಆದರೆ, ಬಹುತೇಕರು ಖಂಡಿತವಾಗಿ ಯಶಸ್ಸು ಸಾಧಿಸುತ್ತಾರೆ. ತಂದೆ- ತಾಯಿ, ಹೆಣ್ಣುಮಕ್ಕಳಿಗಾಗಿ ಆಸ್ತಿ ಮಾಡುವ ಬದಲು ನಮ್ಮನ್ನೇ ಆಸ್ತಿಯಾಗಿಸಬೇಕು. 'ನಮಗೆ ಕರುಣೆ ಬೇಡ; ಪ್ರೋತ್ಸಾಹ ಸಾಕು'. ಪ್ರಸ್ತುತ ಪತಿ ಗುರುಬಸಯ್ಯ ಕೂಡ ಸಿಟಿಒ ಆಗಿದ್ದು, ಓದಲು ಪ್ರೋತ್ಸಾಹಿಸುತ್ತಿದ್ದಾರೆ. ಇಬ್ಬರೂ ಒಟ್ಟಾಗಿಯೇ ಯುಪಿಎಸ್‌ಸಿ ಪರೀಕ್ಷೆಗೆ ತಯಾರಿ ನಡೆಸಿದ್ದೇವೆ.

(ಸಂದರ್ಶಕರು: ನಿರ್ದೇಶಕರು, ಸ್ಲೇಟ್ ಸ್ಪರ್ಧಾತ್ಮಕ ಪರೀಕ್ಷೆಗಳ ಮಾರ್ಗದರ್ಶನ ಕೇಂದ್ರ, ಧಾರವಾಡ)

'ಪ್ರಜಾವಾಣಿ'ಯ ಋಣ ದೊಡ್ಡದು

ನಾನು ಆರಂಭದಲ್ಲಿ 'ಪ್ರಜಾವಾಣಿ' ಪತ್ರಿಕೆಯ ಪ್ರತಿನಿಧಿಯಾಗಿ ಕೆಲಸ ಮಾಡಿದ್ದೆ. ಆ ಸಂದರ್ಭದಲ್ಲಿ ಈ ಪತ್ರಿಕೆಯಲ್ಲಿ ಪ್ರಕಟವಾಗುತ್ತಿದ್ದ ಲೇಖನಗಳು ಹಾಗೂ ಸಾಧಕರ ಯಶೋಗಾಥೆಗಳು ನನಗೆ ಪ್ರೇರಣೆ ನೀಡಿದವು. ಅನ್ನ, ಅಕ್ಷರ ಎರಡೂ ವಿಧದ ದಾಸೋಹವಿತ್ತ ಈ ಪತ್ರಿಕೆಯ ಋಣ ದೊಡ್ಡದು. ನಾನು ಪರೀಕ್ಷೆಗೆ ಸಿದ್ಧಳಾಗುವಾಗ ಪ್ರಚಲಿತ ವಿದ್ಯಮಾನಗಳ ಕುರಿತು ಪ್ರತಿನಿತ್ಯ ಈ ಪತ್ರಿಕೆಯನ್ನ ಓದಿ ನೋಟ್ಸ್ ಮಾಡಿಕೊಳ್ಳುತ್ತಿದ್ದೆ. ಇದರ ಸಂಪಾದಕೀಯ ಪುಟಗಳಲ್ಲಿ ಪ್ರಕಟವಾದ ಲೇಖನಗಳು ಕೆಪಿಎಸ್‌ಸಿ ಪರೀಕ್ಷೆ ಎದುರಿಸಲು ನನಗೆ ತುಂಬಾ ನೆರವಾದವು. ಹೀಗಾಗಿ, ಸ್ಪರ್ಧಾತ್ಮಕ ಪರೀಕ್ಷೆ ಎದುರಿಸುವವರಿಗಂತೂ 'ಪ್ರಜಾವಾಣಿ'ಯ ಓದು ಕಡ್ಡಾಯ ಎನ್ನಬಹುದು.

12ನೇ ತರಗತಿ ನಂತರ ಸ್ಪರ್ಧಾತ್ಮಕ ಪರೀಕ್ಷೆ



ರೈಲ್ವೆ ನೇಮಕಾತಿ ಮಂಡಳಿಯ ಗ್ರೂಪ್ ಡಿ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಸ್ಪರ್ಧಾರ್ಥಿಗಳು ದೈಹಿಕ ಸಾಮರ್ಥ್ಯ ಪರೀಕ್ಷೆಯಲ್ಲಿ ಪಾಲ್ಗೊಂಡಿರುವುದು

ಪಿಯುಸಿ ಅಥವಾ 12ನೇ ತರಗತಿಯ ನಂತರ ಸರ್ಕಾರಿ ಹುದ್ದೆಗಳನ್ನು ಸೇರಬಯಸುವವರಿಗೆ ಹಲವಾರು ಸ್ಪರ್ಧಾತ್ಮಕ ಪರೀಕ್ಷೆಗಳಿರುತ್ತವೆ. ಕಳೆದ ವಾರ ಕೆಲವು ಪರೀಕ್ಷೆಗಳ ವಿವರ ನೀಡಲಾಗಿದ್ದು, ಇನ್ನಷ್ಟು ಪರೀಕ್ಷೆಗಳ ಬಗ್ಗೆ ಮಾಹಿತಿಯನ್ನು ಇಲ್ಲಿ ನೀಡಲಾಗಿದೆ.

ಎಸ್‌ಎಸ್‌ಸಿ ಮಲ್ಟಿ ಟಾಸ್ಕಿಂಗ್ ಸಿಬ್ಬಂದಿ (ಎಂಟಿಎಸ್)

ಇದು ರಾಷ್ಟ್ರಮಟ್ಟದ ಪರೀಕ್ಷೆಯಾಗಿದ್ದು, ಎಸ್‌ಎಸ್‌ಸಿ (ಸ್ಟಾಫ್ ಸೆಲೆಕ್ಷನ್ ಕಮೀಷನ್) ನಡೆಸುತ್ತದೆ. ಕೇಂದ್ರ ಸರ್ಕಾರದ ವಿವಿಧ ಇಲಾಖೆಗಳು, ಸಚಿವಾಲಯಗಳಲ್ಲಿರುವ ನಾನ್ ಗೆಜೆಟೆಡ್ ಹಾಗೂ ಗ್ರೂಪ್ ಸಿ ಹುದ್ದೆಗಳನ್ನು ಭರ್ತಿ ಮಾಡಲು ಈ ಪರೀಕ್ಷೆ ನಡೆಸಲಾಗುತ್ತದೆ.

ಪರೀಕ್ಷೆಯಲ್ಲಿ ಎರಡು ಪ್ರಶ್ನೆಪತ್ರಿಕೆಗಳಿರುತ್ತವೆ. ಮೊದಲನೆಯದು ಆನ್‌ಲೈನ್ ಆಗಿದ್ದು, ಒಂದೂವರೆ ತಾಸಿನ ಅವಧಿಯದ್ದಾಗಿದ್ದರೆ, ಎರಡನೇ ಪತ್ರಿಕೆ ಆಫ್‌ಲೈನ್ ಆಗಿರುತ್ತವೆ. ಅವಧಿ ಅರ್ಧ ತಾಸು. ಹಿಂದಿ, ಇಂಗ್ಲಿಷ್ ಹಾಗೂ ವಿವಿಧ ಪ್ರಾದೇಶಿಕ ಭಾಷೆಗಳಲ್ಲಿ ಪರೀಕ್ಷೆಯನ್ನು ಬರೆಯಬಹುದು. ವರ್ಷಕ್ಕೊಮ್ಮೆ ಪರೀಕ್ಷೆ ನಡೆಸುವ ಕ್ರಮವಿದೆ. 12ನೇ ತರಗತಿ ನಂತರ ಸರ್ಕಾರಿ ಉದ್ಯೋಗ ಸೇರಬಯಸುವ ಅಭ್ಯರ್ಥಿಗಳಿಗೆ ಅನುಕೂಲ.

ಎಸ್‌ಎಸ್‌ಸಿ ಸ್ಟೆನೋಗ್ರಾಫರ್ (ಗ್ರೇಡ್ ಸಿ ಮತ್ತು ಡಿ)

ಸರ್ಕಾರದ ವಿವಿಧ ಇಲಾಖೆಗಳಲ್ಲಿ ಸ್ಟೆನೊಗ್ರಾಫರ್ ಪಾತ್ರ ಬಹುಮುಖ್ಯ. ಭಾಷಣದ ಬರವಣಿಗೆ, ಪತ್ರಿಕಾಗೋಷ್ಠಿಯ ವರದಿ, ಸಾರ್ವಜನಿಕ ಸಂಪರ್ಕದ ವಿಷಯದಲ್ಲಿ ಸಚಿವರಿಗೆ, ಅಧಿಕಾರಿಗಳಿಗೆ ನೆರವಾಗುವುದು, ಅವರ ಹೇಳಿಕೆಗಳನ್ನು ಟೈಪ್ ಮಾಡುವುದು, ಮುಖ್ಯವಾದ ಕಡತಗಳನ್ನು, ಈಗಂತೂ ಇ-ಕಡತಗಳಿದ್ದು, ಅವುಗಳನ್ನು ಕಾಪಿಟ್ಟು ಬೇಕೆಂದಾಗ ಹುಡುಕಿ ತೆಗೆಯುವುದು, ಸಚಿವರ, ಅಧಿಕಾರಿಗಳ ಪ್ರಯಾಣದ ವ್ಯವಸ್ಥೆ ಮಾಡುವುದು, ಮುಖ್ಯವಾದ ವಿಷಯಗಳನ್ನು ನಿರ್ವಹಿಸುವುದು ಇದರಲ್ಲಿ ಸೇರಿವೆ.

ರೈಲ್ವೆ ನೇಮಕಾತಿ ಮಂಡಳಿ (ಆರ್‌ಆರ್‌ಬಿ)

ಅತ್ಯಂತ ಹೆಚ್ಚು ಉದ್ಯೋಗಿಗಳನ್ನು ನೇಮಕಾತಿ ಮಾಡಿಕೊಳ್ಳುವ ಈ ಭಾರತೀಯ ರೈಲ್ವೆ ನೇಮಕಾತಿ ಮಂಡಳಿಯು 12ನೇ ತರಗತಿಯ ನಂತರ ನಡೆಸುವ ಪರೀಕ್ಷೆಗೆ ಪ್ರತೀ ವರ್ಷ ಸಾವಿರಾರು ವಿದ್ಯಾರ್ಥಿಗಳು ಅರ್ಜಿ ಸಲ್ಲಿಸುತ್ತಾರೆ. ಸಹಾಯಕ ಲೋಕೊ ಪೈಲಟ್, ಕಚೇರಿ ಸಹಾಯಕ, ಸ್ಟೇಶನ್ ಮಾಸ್ಟರ್, ಟಿಕೆಟ್ ಕಲೆಕ್ಟರ್ ಮೊದಲಾದ ಹುದ್ದೆಗಳಿಗೆ ಅರ್ಜಿ ಸಲ್ಲಿಸಬಹುದು.

ಸಹಾಯಕ ಲೋಕೊ ಪೈಲಟ್ ಹಾಗೂ ಟೆಕ್ನೀಶಿಯನ್ ಹುದ್ದೆಗೆ ಪರೀಕ್ಷೆಯು ಮೂರು ಹಂತಗಳಲ್ಲಿ ನಡೆಯಲಿದ್ದು, ಕಂಪ್ಯೂಟರ್ ಆಧಾರಿತ ಅಥವಾ ಕೌಶಲ ಆಧಾರಿತ ಪರೀಕ್ಷೆಯನ್ನೂ ಒಳಗೊಂಡಿದೆ. ಲೋಕೊ ಪೈಲಟ್ ಆಯ್ಕೆಯ ಕೊನೆಯ ಹಂತದಲ್ಲಿ ವೈದ್ಯಕೀಯ ಪರೀಕ್ಷೆ, ದೃಷ್ಟಿ ಪರೀಕ್ಷೆ ಮೊದಲಾದವುಗಳು ನಡೆಯುತ್ತವೆ.

ಪ್ರಜಾವಾಣಿ ಉದ್ಯೋಗ ವಾರ್ತೆ

ಎಸ್‌ಎಸ್‌ಸಿಯಲ್ಲಿ ಹುದ್ದೆಗಳು

ಸ್ಟಾಫ್ ಸೆಲೆಕ್ಷನ್ ಕಮಿಷನ್ (ಎಸ್‌ಎಸ್‌ಸಿ) ವಿವಿಧ ಹುದ್ದೆಗಳ ಭರ್ತಿಗೆ ಅರ್ಜಿ ಆಹ್ವಾನಿಸಿದೆ. ಆಸಕ್ತರು ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬಹುದು.

ಹುದ್ದೆಗಳ ಸಂಖ್ಯೆ: 3261

ಹುದ್ದೆಗಳು: ಜೂನಿಯರ್ ಸೀಡ್ ಅನಾಲಿಸ್ಟ್, ಸೈಂಟಿಫಿಕ್ ಅಸಿಸ್ಟೆಂಟ್, ಅಕೌಂಟೆಂಟ್, ಹೆಡ್ ಕ್ಲರ್ಕ್ ಹಾಗೂ ಇನ್ನಿತರ

ಸ್ಥಳ: ಭಾರತದೆಲ್ಲೆಡೆ

ವಿದ್ಯಾರ್ಹತೆ: ವಿವಿಧ ಹುದ್ದೆಗಳಿಗೆ ಅನುಗುಣವಾಗಿ ವಿದ್ಯಾರ್ಹತೆಯನ್ನು ನಿಗದಿ ಮಾಡಲಾಗಿದೆ. ಮಾನ್ಯತೆ ಪಡೆದ ವಿದ್ಯಾಸಂಸ್ಥೆಯಿಂದ ಪಿಯುಸಿ, ಪದವಿ ಹಾಗೂ ಸ್ನಾತಕೋತ್ತರ ಪದವಿ ಪಡೆದ ಅಭ್ಯರ್ಥಿಗಳು ಈ ಹುದ್ದೆಗೆ ಅರ್ಜಿ ಸಲ್ಲಿಸಲು ಅರ್ಹರು.

ಅರ್ಜಿ ಶುಲ್ಕ: ₹ 100. ಮಹಿಳೆಯರು, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಮಾಜಿ ಸೈನಿಕರಿಗೆ ಅರ್ಜಿ ಶುಲ್ಕವಿಲ್ಲ.

ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: ಅಕ್ಟೋಬರ್ 25, 2021

ಹೆಚ್ಚಿನ ಮಾಹಿತಿಗೆ: https://ssc.nic.in/

ಐಐಎಸ್‌ಸಿ ಬೆಂಗಳೂರಿನಲ್ಲಿ ಪ್ರಾಧ್ಯಾಪಕ ಹುದ್ದೆಗಳು

ಭಾರತೀಯ ವಿಜ್ಞಾನ ಸಂಸ್ಥೆ (ಐಐಎಸ್‌ಸಿ) ಬೆಂಗಳೂರು ವಿವಿಧ ವಿಷಯಗಳ ಸಹಾಯಕ ಪ್ರಾಧ್ಯಾಪಕ ಹುದ್ದೆಗಳಿಗೆ ಅರ್ಜಿ ಆಹ್ವಾನಿಸಿದೆ. ಅರ್ಹರು ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬಹುದು.

ಅರ್ಹತೆ: ಅರ್ಜಿ ಸಲ್ಲಿಸ ಬಯಸುವ ಅಭ್ಯರ್ಥಿಯು ಪ್ರಥಮ ದರ್ಜೆಯಲ್ಲಿ ಪಿಎಚ್‌ಡಿ ಮುಗಿಸಿರಬೇಕು. ತತ್ಸಮಾನ, ಹಿಂದಿನ ಪದವಿ ಹಾಗೂ ಇತರ ಎಲ್ಲಾ ವರ್ಷಗಳಲ್ಲೂ ಉತ್ತಮ ಶೈಕ್ಷಣಿಕ ದಾಖಲೆ ಹೊಂದಿರಬೇಕು. ಕನಿಷ್ಠ 3 ವರ್ಷಗಳ ಬೋಧನೆ, ಸಂಶೋಧನೆ ಹಾಗೂ ವೃತ್ತಿಪರ ಅನುಭವವನ್ನು ಹೊಂದಿರಬೇಕು.

ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: ಅಕ್ಟೋಬರ್ 31, 2021

ಹೆಚ್ಚಿನ ಮಾಹಿತಿಗೆ: https://iisc.ac.in/positions-open/

600 ಬ್ಯಾಂಕ್ ಆಫೀಸರ್ ಹುದ್ದೆಗಳಿಗೆ ಅರ್ಜಿ

ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಸ್ಪೆಷಲಿಸ್ಟ್ ಕೇಡರ್ ಆಫೀಸರ್ (ಎಸ್‌ಸಿಒ) ಹುದ್ದೆಗಳ ನೇಮಕಾತಿಗಾಗಿ ಅರ್ಜಿಗಳನ್ನು ಆಹ್ವಾನಿಸಿದೆ. ಅರ್ಹ ಅಭ್ಯರ್ಥಿಗಳು ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬಹುದು.

ಹುದ್ದೆಗಳ ಸಂಖ್ಯೆ: 600

ಸ್ಥಳ: ದೇಶದೆಲ್ಲೆಡೆ

ವಿದ್ಯಾರ್ಹತೆ: ಹುದ್ದೆಗಳಿಗೆ ಅನುಸಾರವಾಗಿ ಪದವಿ ಮತ್ತು ಸ್ನಾತಕೋತ್ತರ ಪದವಿಯನ್ನು ಪಡೆದಿರಬೇಕು.

ವೇತನ: ಮಾಸಿಕ ವೇತನಕ್ಕೆ ಸಂಬಂಧಿಸಿದ ಮಾಹಿತಿಗೆ ಈ ಕೆಳಗೆ ನೀಡಿರುವ ಎಸ್‌ಬಿಐ ವೆಬ್‌ಸೈಟ್‌ನಿಂದ ಮಾಹಿತಿ ಪಡೆಯಬಹುದು.

ವಯಸ್ಸು: 21 ರಿಂದ 40 ವರ್ಷದೊಳಗಿನವರಾಗಿರಬೇಕು. (ಮೀಸಲಾತಿ ನಿಯಮಗಳು ಅನ್ವಯಿಸುತ್ತವೆ).

ವಯೋಮಿತಿ ಸಡಿಲಿಕೆ: ಎಸ್‌ಸಿ, ಎಸ್‌ಟಿ ಅಭ್ಯರ್ಥಿಗಳಿಗೆ 5 ವರ್ಷ, ಇತರೆ ಹಿಂದುಳಿದ ವರ್ಗದ ಅಭ್ಯರ್ಥಿಗಳಿಗೆ 3 ವರ್ಷ, ಅಂಗವಿಕಲರಿಗೆ 10 ವರ್ಷಗಳು.

ನೇಮಕಾತಿ ಪ್ರಕ್ರಿಯೆ: ಲಿಖಿತ ಪರೀಕ್ಷೆ (ಕೆಲವು ಹುದ್ದೆಗಳಿಗೆ ಮಾತ್ರ) ಹಾಗೂ ಅಭ್ಯರ್ಥಿಗಳ ಸೇವಾ ಅನುಭವವನ್ನು ಪರಿಗಣಿಸಿ ಸಂದರ್ಶನಕ್ಕೆ ಕರೆಯಲಾಗುವುದು. ನೇಮಕಾತಿ ಲಿಖಿತ ಪರೀಕ್ಷೆ ಮತ್ತು ಸಂದರ್ಶನದ ಮೂಲಕ ನಡೆಯಲಿದೆ.

ಅರ್ಜಿ ಶುಲ್ಕ: ಸಾಮಾನ್ಯ ಮತ್ತು ಹಿಂದುಳಿದ ವರ್ಗಗಳ ಅಭ್ಯರ್ಥಿಗಳಿಗೆ ₹ 750, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಅಂಗವಿಕಲ ಅಭ್ಯರ್ಥಿಗಳಿಗೆ ಶುಲ್ಕವಿಲ್ಲ.

ಅರ್ಜಿ ಸಲ್ಲಿಸಲು ಕೊನೆಯ ದಿನ: ಅಕ್ಟೋಬರ್ 18, 2021

ಹೆಚ್ಚಿನ ಮಾಹಿತಿಗೆ ವೆಬ್‌ಸೈಟ್ ನೋಡಿ: https://www.sbi.co.in or www.sbi.co.in/careers

ಗ್ರೂಪ್-ಸಿ ತಾಂತ್ರಿಕೇತರ ಹುದ್ದೆ ಬಹು ಆಯ್ಕೆ ಪ್ರಶ್ನೆಗಳು
ಗ್ರಾಮೀಣಾಭಿವೃದ್ಧಿ

ಗ್ರೂಪ್ ಸಿ ವೃಂದದ ತಾಂತ್ರಿಕೇತರ ಹುದ್ದೆಗಳಾದ ಲೇಬರ್ ಇನ್‌ಸ್ಪೆಕ್ಟರ್, ಹಾಸ್ಟೆಲ್ ವಾರ್ಡನ್, ಸಾಂಖ್ಯಿಕ ನಿರೀಕ್ಷರು, ಪ್ರಥಮ ದರ್ಜೆ ಕಂದಾಯ ನಿರೀಕ್ಷಕರು, ಕರವಸೂಲಿಗಾರರು ಈ ಮೊದಲಾದ ಹುದ್ದೆಗಳಿಗೆ ಸ್ಪರ್ಧಾತ್ಮಕ ಪರೀಕ್ಷೆಗಾಗಿ ಸಾಮಾನ್ಯ ಜ್ಞಾನ ವಿಭಾಗದಲ್ಲಿರುವ 'ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಂಸ್ಥೆಗಳು ಹಾಗೂ ಗ್ರಾಮೀಣ ಸಹಕಾರ' ಅಲ್ಲದೇ 'ಸ್ವಾತಂತ್ರ್ಯಾ ನಂತರ ಭೂ ಸುಧಾರಣೆ ಮತ್ತು ಸಾಮಾಜಿಕ ಬದಲಾವಣೆ' ಸಂಬಂಧಿಸಿದ ಪ್ರಶ್ನೋತ್ತರಗಳನ್ನು ಇಲ್ಲಿ ನೀಡಲಾಗಿದೆ.

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಂಸ್ಥೆಗಳು ಈ ವಿಷಯಕ್ಕೆ ಸಂಬಂಧಿಸಿದ ಬಹು ಆಯ್ಕೆ ಪ್ರಶ್ನೆಗಳು

1. ಜನವರಿ 1957ರಲ್ಲಿ ಪ್ರಜಾಸತ್ತೆಯ ವಿಕೇಂದ್ರೀಕರಣಕ್ಕೆ ಪೂರಕವಾಗುವಂತೆ ಭಾರತ ಸರ್ಕಾರವು ಒಂದು ಸಮಿತಿಯನ್ನು ಸ್ಥಾಪಿಸಿ ನಂತರದಲ್ಲಿ ವರದಿಯೊಂದನ್ನು ಪಡೆಯಿತು. ಆ ವರದಿಯ ಹೆಸರೇನು?

ಎ. ಅಶೋಕ್ ಮೆಹ್ತಾ ವರದಿ
ಬಿ. ಬಲವಂತರಾಯ್ ಮೆಹ್ತಾ ವರದಿ
ಸಿ. ಕೊಂಡಜ್ಜಿ ಬಸಪ್ಪ ವರದಿ
ಡಿ. ಯಾವುದೂ ಅಲ್ಲ

2. 1959ರಲ್ಲಿ .... ಎಂಬಲ್ಲಿ ಜರುಗಿದ ಸ್ಥಳೀಯ ಸ್ವಯಮಾಡಳಿತ ಕೇಂದ್ರೀಯ ಸಮಿತಿಯ ಸಮಾವೇಶವು ಬಲವಂತರಾಯ್ ಮೆಹ್ತಾ ವರದಿಯ ಅನ್ವಯ ಪಂಚಾಯತ್ ರಾಜ್ ವ್ಯವಸ್ಥೆಯನ್ನು ಜಾರಿಗೊಳಿಸುವ ಕರ್ತವ್ಯವು ರಾಜ್ಯ ಸರ್ಕಾರಗಳದ್ದೆಂದು ಘೋಷಿಸಿತು.

ಎ. ಬೆಂಗಳೂರು ಬಿ. ನವದೆಹಲಿ
ಸಿ. ಚೆನ್ನೈ ಡಿ. ಹೈದರಾಬಾದ್

3. ಮೂರು ಹಂತಗಳ (ತ್ರಿ ಟೈಯರ್ ಸಿಸ್ಟಮ್) ಪಂಚಾಯತ್ ರಾಜ್ ವ್ಯವಸ್ಥೆಯನ್ನು ಪ್ರತಿಪಾದಿಸಿದ ಮೊದಲ ವರದಿ ಯಾವುದು?

ಎ. ಅಶೋಕ್ ಮೆಹ್ತಾ ವರದಿ
ಬಿ. ಬಲವಂತರಾಯ್ ಮೆಹ್ತಾ ವರದಿ
ಸಿ. ಕೊಂಡಜ್ಜಿ ಬಸಪ್ಪ ವರದಿ
ಡಿ. ಯಾವುದೂ ಅಲ್ಲ

4. ಈ ಕೆಳಗಿನ ಯಾವ ಕಾಯ್ದೆ ಗ್ರಾಮ ಪಂಚಾಯತಿಗಳ ಪುನರುಜ್ಜೀವನಕ್ಕೆ ಅವಕಾಶವನ್ನು ಕಲ್ಪಿಸಿತು?

ಎ. 1919ರ ಮಾಂಟೆಗೋ ಚೆಮ್ಸ್ ಫರ್ಡ್ ಸುಧಾರಣೆ
ಬಿ. 1858ರ ಬ್ರಿಟಿಷ್ ಇಂಡಿಯಾ ಕಾಯ್ದೆ
ಸಿ. 1901ರ ವಿಶೇಷ ಶಾಸನ
ಡಿ. 1909ರ ವಿಶೇಷ ಶಾಸನ

5. ಈ ಕೆಳಗಿನ ಯಾವ ಸಮಿತಿಯ ವರದಿಯು 2 ಟೈಯರ್ ಸಿಸ್ಟಮ್ ಅಥವಾ 2 ಹಂತದ ಪಂಚಾಯತ್ ರಾಜ್ ವ್ಯವಸ್ಥೆಯನ್ನು ಜಾರಿಗೊಳಿಸಲು ಶಿಫಾರಸು ಮಾಡಿತ್ತು?

ಎ. ಅಶೋಕ್ ಮೆಹ್ತಾ ವರದಿ
ಬಿ. ಬಲವಂತರಾಯ್ ಮೆಹ್ತಾ ವರದಿ
ಸಿ. ಕೊಂಡಜ್ಜಿ ಬಸಪ್ಪ ವರದಿ
ಡಿ. ಯಾವುದೂ ಅಲ್ಲ.

6. ಕರ್ನಾಟಕದ ಸ್ಥಳೀಯ ಆಡಳಿತಕ್ಕೆ ಸಂಬಂಧಿಸಿದಂತೆ ವರದಿ ನೀಡಿದ ಸಮಿತಿಯನ್ನು ಹೆಸರಿಸಿ

ಎ. ಹಾರನಹಳ್ಳಿ ರಾಮಸ್ವಾಮಿ ವರದಿ
ಬಿ. ಬಲವಂತರಾಯ್ ಮೆಹ್ತಾ ವರದಿ
ಸಿ. ಕೊಂಡಜ್ಜಿ ಬಸಪ್ಪ ವರದಿ
ಡಿ. ಡಾ. ನಂಜುಂಡಪ್ಪ ವರದಿ

7. ಈ ಕೆಳಗಿನ ಯಾವ ರಾಜಮನೆತನವು ಸ್ಥಳೀಯ ಆಡಳಿತಕ್ಕೆ ಹೆಸರುವಾಸಿ?

ಎ. ಕದಂಬ ಬಿ. ಗಂಗ
ಸಿ. ರಾಷ್ಟ್ರಕೂಟ ಡಿ. ಚೋಳ

8. ಮೈಸೂರು ರಾಜ್ಯದಲ್ಲಿ ಮೊಟ್ಟಮೊದಲ ಬಾರಿಗೆ ಪ್ರಾಯೋಗಿಕವಾಗಿ ಮೈಸೂರು ಮತ್ತು .... ನಗರದಲ್ಲಿ 1862ರಲ್ಲಿ ಪುರಸಭೆಗಳನ್ನು ರಚಿಸಲಾಯಿತು.

ಎ. ಚಾಮರಾಜನಗರ ಬಿ. ಶ್ರೀರಂಗಪಟ್ಟಣ
ಸಿ. ಶಿವಮೊಗ್ಗ ಡಿ. ಬೆಂಗಳೂರು

ಉತ್ತರ: 1. ಬಿ, 2. ಡಿ, 3. ಬಿ, 4. ಎ, 5. ಎ, 6. ಸಿ, 7. ಡಿ, 8. ಡಿ

ಸ್ವಾತಂತ್ರ್ಯಾ ನಂತರ ಭೂ ಸುಧಾರಣೆ ಮತ್ತು ಸಾಮಾಜಿಕ ಬದಲಾವಣೆಗೆ ಸಂಬಂಧಿಸಿದ ಪ್ರಶ್ನೋತ್ತರಗಳು ಹೀಗಿವೆ:

1. ಸ್ವಾತಂತ್ರ್ಯಾ ನಂತರ ಭೂ ಸುಧಾರಣೆಗಳನ್ನು ಜಾರಿಗೊಳಿಸುವಲ್ಲಿ ಸರ್ಕಾರವು ಈ ಕೆಳಗಿನ ಯಾವೆಲ್ಲಾ ಉದ್ದೇಶಗಳನ್ನು ಹೊಂದಿತ್ತು?

1. ಜಮೀನ್ದಾರಿ ಪದ್ಧತಿಯನ್ನು ರದ್ದುಗೊಳಿಸುವುದು
2. ಗೇಣಿ ಪದ್ಧತಿಯ ನಿರ್ಮೂಲನೆ
3. ಕೃಷಿ ಕುಟುಂಬಗಳು ಹೊಂದಿರಬಹುದಾದ ಭೂಮಿಯ ಗರಿಷ್ಠಮಿತಿ
4. ಇನಾಮ್‌ದಾರಿ ಪದ್ಧತಿಯನ್ನು ತೆಗೆದುಹಾಕುವುದು.

ಉತ್ತರ ಸಂಕೇತಗಳು:
ಎ. 1, 2 ಮತ್ತು 3 ಮಾತ್ರ ಸರಿ
ಬಿ. 1, 2, 3 ಮತ್ತು 4 ಮಾತ್ರ ಸರಿ
ಸಿ. 1, 2 ಮತ್ತು 4 ಮಾತ್ರ ಸರಿ
ಡಿ. ಮೇಲಿನ ಯಾವುದೂ ಸರಿಯಾಗಿಲ್ಲ

2. ಭೂ ಸುಧಾರಣೆಗೆ ಸಂಬಂಧಿಸಿದಂತೆ ಬಿ.ಡಿ. ಜತ್ತಿ ಸಮಿತಿಯು ಯಾವ ವರ್ಷ ತನ್ನ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿತ್ತು.

ಎ. 1954 ಬಿ. 1959
ಸಿ. 1960 ಡಿ. 1957

3. ಕರ್ನಾಟಕ ಭೂ ಸುಧಾರಣಾ ಕಾನೂನು ಯಾವ ವರ್ಷ ಮೊಟ್ಟಮೊದಲು ಜಾರಿಗೆ ಬಂತು?

ಎ. 1961 ಬಿ. 1958
ಸಿ. 1966 ಡಿ. 1969

4. ಕೆಳಗಿನ ಹೇಳಿಕೆಗಳನ್ನು ಗಮನಿಸಿ

1. ನಮ್ಮ ರಾಜ್ಯದಲ್ಲಿ ಎಲ್ಲಾ ಕಡೆಗಳಲ್ಲಿ ರೈತುವಾರಿ ಹಿಡುವಳಿ ವ್ಯವಸ್ಥೆಯನ್ನು ನೋಡಬಹುದು. ಅಂದರೆ ಪ್ರತಿ ಭೂ ಮಾಲೀಕನು ಸರ್ಕಾರದೊಂದಿಗೆ ನೇರವಾಗಿ ವ್ಯವಹರಿಸುವ ಪ್ರಕ್ರಿಯೆ.
2. ಭೂ ಆಡಳಿತಕ್ಕೆ ಸಂಬಂಧಿಸಿದಂತೆ ಜಿಲ್ಲೆಯೇ ಪ್ರಮುಖ ಘಟ್ಟವಾಗಿದ್ದು, ಭೂ ಕಂದಾಯ ಮತ್ತು ಹಿಡುವಳಿಯ ಆಡಳಿತಕ್ಕೆ ಸಂಬಂಧಿಸಿದಂತೆ ಜಿಲ್ಲಾಧಿಕಾರಿ ಮುಖ್ಯ ಆಡಳಿತಾಧಿಕಾರಿಯಾಗಿರುತ್ತಾರೆ.
3. ತಾಲ್ಲೂಕು ಕಚೇರಿಗಳಲ್ಲಿ ಗ್ರಾಮಗಳ ಕುರಿತು ಕಾರ್ಯನಿರ್ವಹಿಸುವ ಅಧಿಕಾರಿಯನ್ನು ಕಂದಾಯ ನಿರೀಕ್ಷಕ (ರೆವೆನ್ಯೂ ಇನ್‌ಸ್ಪೆಕ್ಟರ್) ಎಂದು ಕರೆಯುತ್ತಾರೆ. ಇವರ ಆಡಳಿತ ವ್ಯಾಪ್ತಿಯ ಪ್ರದೇಶವನ್ನು ಹೋಬಳಿ ಎಂದು ಕರೆಯುತ್ತಾರೆ.
4. ಭೂ ಆಡಳಿತಕ್ಕೆ ಸಂಬಂಧಿಸಿದಂತೆ ತಾಲ್ಲೂಕುಗಳ ಸಮೂಹವನ್ನು ಉಪವಿಭಾಗಾಧಿಕಾರಿ (ಅಸಿಸ್ಟೆಂಟ್ ಕಮಿಷನರ್) ವ್ಯಾಪ್ತಿಗೆ ಸೇರಿಸಲಾಗಿದೆ.

ಉತ್ತರ ಸಂಕೇತಗಳು:
ಎ. 1, 2 ಮತ್ತು 4 ಮಾತ್ರ ಸರಿ
ಬಿ. 1, 2, ಮತ್ತು 3 ಮಾತ್ರ ಸರಿ
ಸಿ. 2, 3 ಮತ್ತು 4 ಮಾತ್ರ ಸರಿ
ಡಿ. 1 ರಿಂದ 4ರ ತನಕ ಎಲ್ಲವೂ ಸರಿ

5. 750 ಗ್ರಾಮ ಪಂಚಾಯತಿಗಳಲ್ಲಿ 'ಅಮೃತ ಗ್ರಾಮ ಪಂಚಾಯತಿ ಯೋಜನೆ' ಜಾರಿಗೆ ತರುವ ಮೂಲಕ ಅವುಗಳ ಸಮಗ್ರ ಅಭಿವೃದ್ಧಿಗೆ ಗುರಿ ಹಾಕಿಕೊಳ್ಳಲಾಗಿದೆ. ಆ ಹಿನ್ನೆಲೆಯಲ್ಲಿ ಕೆಳಗಿನ ಹೇಳಿಕೆಗಳನ್ನು ಗಮನಿಸಿ

1. ಪ್ರತಿ ಗ್ರಾಮ ಪಂಚಾಯ್ತಿಗೆ ₹3 ಕೋಟಿ ಅನುದಾನ ಬಿಡುಗಡೆ, ಬರುವ ಮಾರ್ಚ್ ಹೊತ್ತಿಗೆ ಇದನ್ನು ಸದುಪಯೋಗಪಡಿಸಿಕೊಂಡರೆ ಹೆಚ್ಚುವರಿ ₹25 ಲಕ್ಷ ನೀಡಿಕೆಗೆ ಅವಕಾಶ.
2. ಶಾಲೆ/ ಅಂಗನವಾಡಿಯ ಮುರಿದ ಗೋಡೆ ದುರಸ್ತಿ, ಆಟದ ಮೈದಾನ ನಿರ್ಮಾಣ, ಕುಡಿಯುವ ನೀರು, ಶೌಚಾಲಯ ನಿರ್ಮಾಣಕ್ಕೆ ಅನುದಾನವನ್ನು ಬಳಸಿಕೊಳ್ಳಬಹುದು.
3. ಕೆರೆ, ಕಲ್ಯಾಣಿಗಳ ನಿರ್ಮಾಣಕ್ಕೆ ಅವಕಾಶ, ಉದ್ಯಾನವನಗಳ ನಿರ್ಮಾಣಕ್ಕೆ ಅವಕಾಶ, ತ್ಯಾಜ್ಯ ನೀರಿನ ನಿರ್ವಹಣೆಗೆ ಅವಕಾಶ, ಗ್ರಂಥಾಲಯಗಳ ಡಿಜಿಟಲೀಕರಣಕ್ಕೆ ಅವಕಾಶ,
4. 'ನನ್ನ ಗ್ರಾಮ ನನ್ನ ಪರಂಪರೆ' ಘೋಷಣೆಯಡಿ, ಸ್ವಾತಂತ್ರ್ಯದ ಹೋರಾಟಕ್ಕೆ ಕೈ ಜೋಡಿಸಿದ್ದ ಹಿರಿಯರ ಸ್ಮರಣೆಯಲ್ಲದೇ, ಗ್ರಾಮದ ವಿದ್ವಾಂಸರು, ಗ್ರಾಮದಲ್ಲಿ ಆಗಿ ಹೋದ ಹಿರಿಯರ ಸಂಸ್ಮರಣೆ ಮಾಡುವುದು

ಮೇಲಿನ ಯಾವೆಲ್ಲಾ ಹೇಳಿಕೆಗಳು ಸರಿಯಾಗಿವೆ?

ಉತ್ತರ ಸಂಕೇತಗಳು:
ಎ. 2, 3 ಮತ್ತು 4 ಮಾತ್ರ ಸರಿ
ಬಿ. 1 ರಿಂದ 4ರ ತನಕ ಎಲ್ಲವೂ ಸರಿ
ಸಿ. 1, 3 ಮತ್ತು 4 ಮಾತ್ರ ಸರಿ
ಡಿ. 2, ಮತ್ತು 4 ಮಾತ್ರ ಸರಿ

ಉತ್ತರ: 1. ಬಿ, 2. ಡಿ, 3. ಎ, 4. ಡಿ, 5. ಬಿ

ಮಾಹಿತಿ: Spardha Bharati UPSC ಯೂಟ್ಯೂಬ್ ಚಾನೆಲ್

ಪೊಲೀಸ್ ಕಾನ್‌ಸ್ಟೇಬಲ್ ನೇಮಕಾತಿ ಪರೀಕ್ಷೆಯ ಮಾದರಿ ಪ್ರಶ್ನೆಗಳು

ಭಾಗ- 68

926. A ಯು B ನ ಸಹೋದರ, C ಯು A ನ ತಾಯಿ, D ಯು C ನ ತಂದೆ, E ಯು B ನ ಮಗ ಹಾಗಾದರೆ, D ಯು B ಗೆ ಏನಾಗುತ್ತಾರೆ?

ಎ) ಮಾವ ಬಿ) ಸಹೋದರ
ಸಿ) ತಾತ ಡಿ) ಚಿಕ್ಕಪ್ಪ

927. ಸರಣಿ ಪೂರ್ಣಗೊಳಿಸಿ; 1432, 2543, 3654, 4765,

ಎ) 3654 ಬಿ) 4775
ಸಿ) 5766 ಡಿ) 5876

928. ಈ ವರ್ಷ ಡಾ.ಬಿ.ಸಿ.ರಾಯ್ ಪ್ರಶಸ್ತಿ ಪಡೆದವರು ಯಾರು?

ಎ) ಡಾ.ಜಗದೀಶ ಪಿ. ಮಾಚಯ್ಯ
ಬಿ) ಡಾ.ಸುಧಾಕರ್
ಸಿ) ಡಾ.ಸುದರ್ಶನ ಬಲ್ಲಾಳ
ಡಿ) ಡಾ.ಮಂಜುನಾಥ

929. ಇತ್ತೀಚೆಗೆ ಯಾವ ರಾಷ್ಟ್ರದ ಕಮ್ಯೂನಿಸ್ಟ್ ಪಕ್ಷ 100 ವರ್ಷ ಪೂರೈಸಿತು?

ಎ) ರಷ್ಯಾ
ಬಿ) ಕಜಕಿಸ್ತಾನ
ಸಿ) ಭಾರತ
ಡಿ) ಚೀನಾ

930. ಇತ್ತೀಚೆಗೆ ಭಾರತದಲ್ಲಿ ಬಳಕೆಗೆ ಅನುಮತಿ ಪಡೆದ ಕೋವಿಡ್ ಲಸಿಕೆ ಯಾವುದು?

ಎ) ಕೋವಿಶೀಲ್ಡ್
ಬಿ) ಕೋವ್ಯಾಕ್ಸಿನ್
ಸಿ) ಫೈಜರ್
ಡಿ) ಮಾಡರ್ನಾ

931. ಕರ್ನಾಟಕ ಸರ್ಕಾರದ ಹೊಸ ಯೋಜನೆಯಡಿ ನಿರ್ಮಾಣ ಕಾರ್ಮಿಕರಿಗೆ ಎಷ್ಟು ಪಿಂಚಣಿ ನೀಡಲಾಗುತ್ತದೆ?

ಎ) ₹ 3000 ಬಿ) ₹ 2000
ಸಿ) ₹1000 ಡಿ) ₹ 500

932. 'ಒಂದು ದೇಶ ಒಂದು ಪಡಿತರಚೀಟಿ' ಯೋಜನೆ ಜಾರಿಗೆ ಸುಪ್ರೀಂ ಕೋರ್ಟ್ ನೀಡಿದ್ದ ಗಡುವು ಯಾವುದು?

ಎ) ಜುಲೈ 31, 2021
ಬಿ) ಆಗಸ್ಟ್ 31, 2021
ಸಿ) ಜೂನ್ 30, 2021
ಡಿ) ಡಿಸೆಂಬರ್ 31, 2021

933. ಯು.ಎ.ಇ.ಯಲ್ಲಿ ತನ್ನ ಪ್ರಥಮ ರಾಜತಾಂತ್ರಿಕ ಕಚೇರಿ ತೆರೆದ ದೇಶ ಯಾವುದು?

ಎ) ಚೀನಾ ಬಿ) ರಷ್ಯಾ
ಸಿ) ಇಸ್ರೇಲ್ ಡಿ) ಅಮೆರಿಕ

934. 'ಪಿ.ಎಂ-ವಾಣಿ' ಯಾವ ಯೋಜನೆಗೆ ಸಂಬಂಧಿಸಿದೆ?

ಎ) ಅಂತರ್ಜಾಲ ಸೇವೆ ಒದಗಿಸುವುದು
ಬಿ) ವೈ-ಫೈ ಸೇವೆ ಒದಗಿಸುವುದು
ಸಿ) ಉದ್ಯೋಗ ಒದಗಿಸುವುದು
ಡಿ) ಶಿಕ್ಷಣ ಸೌಲಭ್ಯ ಒದಗಿಸುವುದು

935. 2020ರ ಕುವೆಂಪು ರಾಷ್ಟ್ರೀಯ ಪುರಸ್ಕಾರ ಪ್ರಶಸ್ತಿ ಯಾರಿಗೆ ಲಭಿಸಿದೆ?

ಎ) ವೆಂಕಟಾಚಲ ಶಾಸ್ತ್ರಿ
ಬಿ) ಡಾ.ಸಿದ್ದಲಿಂಗಯ್ಯ
ಸಿ) ಡಾ.ರಾಜೇಂದ್ರ ಕಿಶೋರ್ ಪಂಡಾ
ಡಿ) ಹಂ.ಪ. ನಾಗರಾಜಯ್ಯ

936. ಇತ್ತೀಚೆಗೆ ಸುದ್ದಿಯಲ್ಲಿರುವ ಭಾರತದ ಸಾಲಿಸಿಟರ್ ಜನರಲ್ ಯಾರು?

ಎ) ಮುಕುಲ್ ರೋಹ್ಟಗಿ
ಬಿ) ಪಾಲಿ ನಾರಿಮನ್
ಸಿ) ಕೃಷ್ಣ ದೀಕ್ಷಿತ
ಡಿ) ತುಷಾರ್ ಮೆಹ್ತಾ

937. ಟೋಕಿಯೊ ಪ್ಯಾರಾ ಒಲಿಂಪಿಕ್ಸ್ ಪಥಸಂಚಲನದಲ್ಲಿ ತ್ರಿವರ್ಣ ಧ್ವಜ ಹಿಡಿದು ಭಾರತ ತಂಡವನ್ನು ಯಾರು ಮುನ್ನಡೆಸಿದರು?

ಎ) ಮರಿಯಪ್ಪನ್ ತಂಗವೇಲು
ಬಿ) ಸಾನಿಯಾ ಮಿರ್ಜಾ
ಸಿ) ಮಾನಾ ಪಟೇಲ
ಡಿ) ಅಭಿನವ ಪಟೇಲ

938. ಕೆರೆಮನೆ ಮೇಳ ಯಾವ ಕಲೆಗೆ ಸಂಬಂಧಿಸಿದೆ?

ಎ) ಕಥಕ್ಕಳಿ ಬಿ) ಕಥಕ್
ಸಿ) ಕೂಚಿಪುಡಿ ಡಿ) ಯಕ್ಷಗಾನ

939. ಕರ್ನಾಟಕದಲ್ಲಿ ಎಷ್ಟು ಕಂದಾಯ ವಿಭಾಗಗಳಿವೆ?

ಎ) 3 ಬಿ) 4 ಸಿ) 5 ಡಿ) 6

940. ಕರ್ನಾಟಕದ ಈಗಿನ ಗೃಹಮಂತ್ರಿ ಯಾರು?

ಎ) ಆರಗ ಜ್ಞಾನೇಂದ್ರ
ಬಿ) ಉಮೇಶ ಕತ್ತಿ
ಸಿ) ಸಿ.ಸಿ. ಪಾಟೀಲ
ಡಿ) ಬಿ.ಸಿ. ಪಾಟೀಲ

(ಪ್ರಶ್ನೋತ್ತರ ಸಂಯೋಜನೆ: ಸ್ಲೇಟ್ ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿ ಕೇಂದ್ರ, ಧಾರವಾಡ)

ಭಾಗ 67ರ ಉತ್ತರಗಳು: 911. ಡಿ, 912. ಎ, 913. ಸಿ, 914. ಡಿ, 915. ಬಿ, 916. ಡಿ, 917. ಸಿ, 918. ಡಿ, 919. ಬಿ, 920. ಎ, 921. ಸಿ, 922. ಬಿ, 923. ಎ, 924. ಸಿ, 925. ಡಿ




ಸುಭಾಷಿತ

ಜೀವನ ಎಷ್ಟೇ ಕಷ್ಟಕರವಾಗಿ ಕಂಡರೂ ನೀವು ಮಾಡಲು ಸಾಧ್ಯವಾಗುವಂತಹದ್ದು ಮತ್ತು ಯಶಸ್ವಿಯಾಗುವಂತಹದ್ದು ಏನಾದರೂ ಯಾವಾಗಲೂ ಇದ್ದೇ ಇರುತ್ತದೆ.

–ಸ್ಟೀಫನ್ ಹಾಕಿಂಗ್

ವಿಶ್ವಸಂಸ್ಥೆ ಅಧಿವೇಶನದಲ್ಲಿ ಭಾಷಣ ವಸ್ತುಸ್ಥಿತಿ ಮತ್ತು ವೈರುಧ್ಯ

ವಿಶ್ವಸಂಸ್ಥೆಯ ಮಹಾ ಅಧಿವೇಶನದಲ್ಲಿ ತಮ್ಮ ಭಾಷಣದಲ್ಲಿ ಪ್ರಧಾನಿ ನರೇಂದ್ರ ಮೋದಿಯವರು ಲಸಿಕೆ ಅಭಿವೃದ್ಧಿಯಿಂದ ಹಿಡಿದು ಅಫ್ಗಾನಿಸ್ತಾನದ ವಿದ್ಯಮಾನದವರೆಗೆ ಹಲವು ವಿಷಯಗಳ ಕುರಿತು ಮಾತನಾಡಿದ್ದಾರೆ. ವಿಶ್ವಸಂಸ್ಥೆಯ ಪರಿಣಾಮಕಾರಿ ಪಾತ್ರ, ಭಯೋತ್ಪಾದನೆ ನಿಗ್ರಹದ ತುರ್ತಿನ ಬಗ್ಗೆಯೂ ಅವರು ತಮ್ಮ ವಿಚಾರಗಳನ್ನು ಮಂಡಿಸಿದ್ದಾರೆ. ಅದೇ ವೇದಿಕೆಯಲ್ಲಿ ಮಾತನಾಡಿದ ಪಾಕಿಸ್ತಾನದ ಪ್ರಧಾನಿ ಇಮ್ರಾನ್ ಖಾನ್, ಪದೇ ಪದೇ ಭಾರತದ ಹೆಸರನ್ನು ಉಲ್ಲೇಖಿಸಿದ್ದಾರೆ. ಮೋದಿ ತಮ್ಮ ಮಾತಿನಲ್ಲಿ ಎಲ್ಲಿಯೂ ಪಾಕಿಸ್ತಾನ ಮತ್ತು ಚೀನಾದ ಹೆಸರನ್ನು ಪ್ರಸ್ತಾಪಿಸಿಲ್ಲ. ಆದರೆ ಭಯೋತ್ಪಾದಕ ಗುಂಪುಗಳ ಬಗ್ಗೆ ಮೋದಿ ಕಟುವಾಗಿ ಟೀಕಿಸಿದ್ದಾರೆ. ವಿಶ್ವಸಂಸ್ಥೆಯು ತನ್ನ ಪ್ರಸ್ತುತತೆಯನ್ನು ಉಳಿಸಿಕೊಳ್ಳಬೇಕಾದರೆ ಅದು ವಿಶ್ವಾರ್ಹ ಸಂಸ್ಥೆಯಾಗಿ ಕೆಲಸ ಮಾಡಬೇಕು ಎಂದು ಸಲಹೆ ನೀಡಿದ್ದಾರೆ. ಕೋವಿಡ್-19 ವಿಶ್ವದಾದ್ಯಂತ ಸಾಂಕ್ರಾಮಿಕವಾಗಿ ಹಬ್ಬುವ ಮುನ್ನವೇ ಅದರ ತಡೆಗೆ ವಿಶ್ವ ಆರೋಗ್ಯ ಸಂಸ್ಥೆಯು ಕ್ಷಿಪ್ರವಾಗಿ ಕ್ರಮ ಕೈಗೊಳ್ಳದ ಕುರಿತು ಹಾಗೂ ಕೋವಿಡ್ ಹುಟ್ಟು ಮತ್ತು ಹರಡುವಿಕೆಗೆ ಚೀನಾವನ್ನು ಹೊಣೆ ಮಾಡದಿರುವುದಕ್ಕೆ ಮೋದಿ ತಮ್ಮ ಅಸಮಾಧಾನವನ್ನು ವ್ಯಕ್ತಪಡಿಸಿದ್ದಾರೆ. ವಿಶ್ವಸಂಸ್ಥೆಯ ಮಹಾ ಅಧಿವೇಶನದಲ್ಲಿ ತಮಗೆ ಮಾತನಾಡಲು ದೊರೆತ ಅವಕಾಶವನ್ನು ಮೋದಿ ತಮ್ಮ ಅನುಕೂಲಕ್ಕೆ ತಕ್ಕಂತೆ ಬಳಸಿದ್ದಾರೆ ಎನ್ನುವುದರಲ್ಲಿ ಯಾವುದೇ ಸಂಶಯವಿಲ್ಲ.



ಹಾಗಿದ್ದೂ ಪ್ರಧಾನಿ ಮೋದಿ ಮಾಡಿರುವ ಭಾಷಣ ವೈರುಧ್ಯಗಳಿಂದ ಕೂಡಿತ್ತು ಎನ್ನುವುದನ್ನು ನಾವು ಮರೆಮಾಚಲು ಆಗುವುದಿಲ್ಲ. ಉಗ್ರವಾದವನ್ನು ಯಾವ ದೇಶವೂ ಬೆಂಬಲಿಸಬಾರದು ಎನ್ನುವ ಬಗ್ಗೆ ಎರಡು ಮಾತಿಲ್ಲ. ಆದರೆ ಪಾಕಿಸ್ತಾನವನ್ನು ಉಗ್ರರಿಗೆ ಬೆಂಬಲ ನೀಡುತ್ತಿದೆ ಎಂದು ಆರೋಪಿಸುವ ಮೋದಿ, ಮತಾಂಧತೆ ವಿಚಾರದಲ್ಲಿ ತಮ್ಮ ದೇಶದಲ್ಲಿ ತಮ್ಮದೇ ಪಕ್ಷದ ಕೆಲವರ ನಿಲುವುಗಳ ಬಗ್ಗೆ ಜಾಣಮೌನವನ್ನು ಪ್ರದರ್ಶಿಸುವುದೇಕೆ? ತಾವು ಪ್ರತಿನಿಧಿಸುವ ಪಕ್ಷದ ಮುಖಂಡರು ಮಾತ್ರವಲ್ಲ, ತಮ್ಮ ನೇತೃತ್ವದ ಸರ್ಕಾರದ ಸಚಿವರು, ಸಂಸದರು ಹಾಗೂ ಬಿಜೆಪಿ ಆಳ್ವಿಕೆಯ ರಾಜ್ಯಗಳಲ್ಲಿ ಇರುವ ಕೆಲವು ಅಧಿಕಾರಸ್ಥರೂ ದೇಶದಲ್ಲಿ ಧಾರ್ಮಿಕ ಮತಾಂಧತೆಗೆ ಮತ್ತು ಹಿಂಸೆಗೆ ಪ್ರಚೋದನೆ ನೀಡುತ್ತಿರುವುದು ಗುಟ್ಟಿನ ಸಂಗತಿಯೇನೂ ಅಲ್ಲ. ಧಾರ್ಮಿಕ ಅಲ್ಪಸಂಖ್ಯಾತರ ವಿರುದ್ಧ ದ್ವೇಷ ಕಾರುವ ಭಾಷಣಗಳನ್ನು ಮಾಡುತ್ತಾ ಅಧಿಕಾರ ಹಿಡಿದಿರುವ ನಾಯಕರ ದೊಡ್ಡ ದಂಡೇ ಬಿಜೆಪಿಯಲ್ಲಿ ಇದೆ. ಸ್ವದೇಶದಲ್ಲಿ ಉಗ್ರ ಮತಾಂಧತೆಗೆ ಕುಮ್ಮಕ್ಕು ಕೊಡುವ ಸ್ವಪಕ್ಷೀಯರ ಧೋರಣೆಗಳನ್ನು ಮೌನವಾಗಿ ಬೆಂಬಲಿಸುತ್ತಾ, ಅದನ್ನು ತಡೆಯಲು ಗಂಭೀರ ಪ್ರಯತ್ನ ನಡೆಸದೆ, ಅಂತರರಾಷ್ಟ್ರೀಯ ವೇದಿಕೆಯಲ್ಲಿ ಮತಾಂಧತೆಯ ಕುರಿತು ಸುದೀರ್ಘ ಭಾಷಣ ಮಾಡುವುದು ವಿರೋಧಾಭಾಸವೇ ಸರಿ. ತಮ್ಮ ಭಾಷಣದಲ್ಲಿ ಮೋದಿಯವರು ಇನ್ನೂ ಒಂದು ಸಂಗತಿಯನ್ನು ಪ್ರಸ್ತಾಪಿಸಿದ್ದಾರೆ. ‘ವಿಜ್ಞಾನದ ತಳಹದಿಯನ್ನು ಹೊಂದಿರುವ ವಿಚಾರವಾದ ಮತ್ತು ಪ್ರಗತಿಪರ ಚಿಂತನೆಗಳೇ ನಮ್ಮ ಪ್ರಗತಿಗೆ ಮೂಲವಾಗಬೇಕು’ ಎನ್ನುವುದು ಅವರ ಮಾತು. ವಿಶ್ವಸಂಸ್ಥೆಯ ಅಧಿವೇಶನದಲ್ಲಿ ವಿಚಾರವಾದ ಮತ್ತು ವೈಜ್ಞಾನಿಕ ಚಿಂತನೆಗಳ ಮಹತ್ವವನ್ನು ನಮ್ಮ ಪ್ರಧಾನಿ ಒತ್ತಿ ಹೇಳಿದ್ದಾರೆ. ಆದರೆ, ಸ್ವದೇಶದಲ್ಲಿ ಅದಕ್ಕೆ ತದ್ವಿರುದ್ಧ ಚಿಂತನೆಗಳನ್ನು ಅವರು ಪ್ರತಿನಿಧಿಸುವ ಪಕ್ಷ ಬೆಂಬಲಿಸುತ್ತಿರುವುದು ಎದ್ದು ಕಾಣುತ್ತಿದೆ. ಭಾರತದಲ್ಲಿ ಪ್ರಜಾಸತ್ತಾತ್ಮಕ ಸಂಸ್ಥೆಗಳು ಸ್ವತಂತ್ರವಾಗಿ ಕೆಲಸ ಮಾಡುವುದನ್ನು ಹತ್ತಿಕ್ಕುವ ಬಿಜೆಪಿ ನೇತೃತ್ವದ ಸರ್ಕಾರ, ಭಿನ್ನಮತದ ಧ್ವನಿಗಳನ್ನು ಪೊಲೀಸ್ ಬಲದಿಂದ ಅಡಗಿಸುವ ಮತ್ತು ದೇಶದ ಬಹುತ್ವಕ್ಕೆ ಮಾರಕವಾಗುವ ಹಲವು ಕ್ರಮಗಳನ್ನು ಕೈಗೊಂಡಿದೆ. ಸಿಬಿಐ, ಜಾರಿ ನಿರ್ದೇಶನಾಲಯ, ಆದಾಯ ತೆರಿಗೆ ಇಲಾಖೆ, ಚುನಾವಣಾ ಆಯೋಗ ಮುಂತಾಗಿ ಎಲ್ಲ ಶಾಸನಬದ್ಧ ಸ್ವತಂತ್ರ ಸಂಸ್ಥೆಗಳೂ ಬಿಜೆಪಿ ನೇತೃತ್ವದ ಸರ್ಕಾರದ ಅನಗತ್ಯ ಮತ್ತು ಅತೀವ ಹಸ್ತಕ್ಷೇಪದಿಂದಾಗಿ ರಾಜಕೀಯ ವಿರೋಧಿಗಳನ್ನು ಬಗ್ಗುಬಡಿಯುವ ಅಸ್ತ್ರಗಳಾಗಿ ಬಳಕೆಯಾಗುತ್ತಿರುವುದಕ್ಕೆ ಉದಾಹರಣೆಗಳು ನಮ್ಮ ಕಣ್ಣಮುಂದೆಯೇ ಇವೆ. ಜಾಗತಿಕ ವೇದಿಕೆಯಲ್ಲಿ ಪ್ರಧಾನಿ ಮೋದಿ ಮಾಡಿದ ಉದಾರವಾದಿ ಭಾಷಣಕ್ಕೂ ಸ್ವದೇಶದಲ್ಲಿ ಅವರ ನೇತೃತ್ವದ ಸರ್ಕಾರದ ಕಾರ್ಯವೈಖರಿಗೂ ಅಜಗಜಾಂತರ ಇದೆ.

> **ಜಾಗತಿಕ ವೇದಿಕೆಯಲ್ಲಿ ಪ್ರಧಾನಿ ಮೋದಿ ಮಾಡಿದ ಉದಾರವಾದಿ ಭಾಷಣಕ್ಕೂ ಸ್ವದೇಶದಲ್ಲಿ ಅವರ ನೇತೃತ್ವದ ಸರ್ಕಾರದ ಕಾರ್ಯವೈಖರಿಗೂ ಅಜಗಜಾಂತರ ಇದೆ**

ವಿಶ್ವಸಂಸ್ಥೆ ಮಹಾ ಅಧಿವೇಶನದಲ್ಲಿ ಮೋದಿಯವರ ಭಾಷಣವು ಅಮೆರಿಕದಲ್ಲಿರುವ ಅವರ ಕೆಲವು ಬೆಂಬಲಿಗರನ್ನು ಖುಷಿಪಡಿಸಿರಬಹುದು. ಆದರೆ ಅಂತರರಾಷ್ಟ್ರೀಯ ಸಮುದಾಯದ ಮೇಲೆ ಈ ಭಾಷಣ ಯಾವುದೇ ಪರಿಣಾಮವನ್ನು ಬೀರಿದಂತೆ ಕಾಣಿಸುತ್ತಿಲ್ಲ. ರಾಜಕೀಯ ಬೆಂಬಲದಿಂದ ಧಾರ್ಮಿಕ ಮತಾಂಧತೆ ವ್ಯಾಪಕವಾಗುತ್ತಿರುವ ಈ ಹೊತ್ತಿನಲ್ಲಿ ಭಾರತದ ಧರ್ಮನಿರಪೇಕ್ಷ ಜನಸಮುದಾಯದ ನಡುವೆಯೂ ಮೋದಿಯವರ ಭಾಷಣ ಯಾವ ಉತ್ಸಾಹವನ್ನೂ ಉಂಟು ಮಾಡಿಲ್ಲ. ಮಾತು ಮತ್ತು ಕೃತಿಯ ನಡುವಣ ಅಂತರ ಮತ್ತು ವೈರುಧ್ಯವನ್ನು ಪ್ರಜಾಪ್ರಭುತ್ವವಾದಿ ಜನಸಮುದಾಯ ಸದಾ ಎಚ್ಚರದಿಂದ ಗಮನಿಸುತ್ತದೆ. ಭಾಷಣ ಮಾಡುವಾಗಿನ ಮೋದಿಯವರ ಹಾವಭಾವ, ಕೆಲವು ಶಬ್ದಗಳನ್ನು ಒತ್ತಿ ಹೇಳುವ ಶೈಲಿ, ಗಾಳಿಯಲ್ಲಿ ಕೈಯಾಡಿಸುವ ಮ್ಯಾನರಿಸಂ ಎಲ್ಲವೂ, ಇನ್ನೇನು ಚುನಾವಣೆಗೆ ಸಿದ್ಧವಾಗುತ್ತಿರುವ ಉತ್ತರಪ್ರದೇಶದ ರಾಜಕೀಯ ರ‍್ಯಾಲಿಯಲ್ಲಿ ಅವರು ಭಾಗವಹಿಸಿದ್ದಾರೇನೋ ಎನ್ನುವಂತಿತ್ತು. ವಿಶ್ವಸಂಸ್ಥೆಯಂತಹ ಜಾಗತಿಕ ಘನತೆಯುಳ್ಳ ವೇದಿಕೆಯಲ್ಲಿ ಇಂತಹ ಜನಪ್ರಿಯ ರಾಜಕೀಯ ಸ್ವರೂಪದ ಭಾಷಣಗಳ ಬಗ್ಗೆ ಯಾವ ದೇಶವೂ ಆಸಕ್ತಿ ತೋರಿಸುವುದಿಲ್ಲ. ಹಾಗೆಂದೇ ಅವರು ಭಾಷಣ ಮಾಡುವಾಗ ಸಭಾಂಗಣ ಬಹುತೇಕ ಖಾಲಿಯಾಗಿಯೇ ಇತ್ತು.

ದಿನದ ಟ್ವೀಟ್




ಸ್ಪಂದನೆಯ ಕೊರತೆ

ಬಿಹಾರ, ಉತ್ತರಪ್ರದೇಶದಿಂದ ಬೆಂಗಳೂರಿಗೆ, ಮೈಸೂರಿಗೆ ಹೊಸ ರೈಲು ಹಾಕಲು ಯಾವುದೇ ಮೀನ ಅಥವಾ ಮೇಷ ಇರೋದಿಲ್ಲ. ಅದಾಗಿಯೇ ಆಗುತ್ತಿರುತ್ತದೆ. ಅದೇ, ಕರ್ನಾಟಕದ ಒಳಗೆ ಜನರಿಗೆ ವ್ಯವಸ್ಥೆ ಕಲ್ಪಿಸಲು ತಪಸ್ಸೇ ಮಾಡಬೇಕು. ರಾಜ್ಯದ ರೈಲು ವಿಚಾರದಲ್ಲಿ ಸ್ಪಂದಿಸುತ್ತಿದ್ದ ಸುರೇಶ ಅಂಗಡಿಯವರ ನಿಧನ, ರಾಜ್ಯದ ಪಾಲಿಗೆ ದೊಡ್ಡ ನಷ್ಟ.

ಕಿರಣ್ ಕೊಡ್ಲಾಡಿ, ನಾಗರಿಕ

ಕಿಡಿನುಡಿ

ದೇಶದ ಗಡಿ ರಾಜ್ಯ ಪಂಜಾಬ್‌ನಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಇಂಥ ಸ್ಥಿತಿ ಎದುರಾಗಿದೆ ಎಂದರೆ ಏನರ್ಥ? ಇದು ಐಎಸ್‌ಐ ಮತ್ತು ಪಾಕಿಸ್ತಾನಕ್ಕೆ ಅನುಕೂಲಕರ ಆಗಬಹುದಾಗಿದೆ. ನಮಗೆಲ್ಲ ಪಂಜಾಬ್‌ನ ಇತಿಹಾಸ ತಿಳಿದಿದೆ ಹಾಗೂ ಅಲ್ಲಿ ಉಂಟಾದ ತೀವ್ರವಾದದ ಬಗೆಗೂ...



ಕಪಿಲ್ ಸಿಬಲ್, ಕಾಂಗ್ರೆಸ್ ಮುಖಂಡ

25 ವರ್ಷಗಳ ಹಿಂದೆ

ಸೋಮವಾರ, 30-9-1996

- **ವಂಚನೆ ಹಗರಣ: ಕೋರ್ಟಿಗೆ ಇಂದು ರಾವ್ ಖುದ್ದು ಹಾಜರಿ**

ನವದೆಹಲಿ, ಸೆ. 29 (ಪಿಟಿಐ)– ಲಕ್ಕೂಭಾಯಿ ವಂಚನೆ ಹಗರಣಕ್ಕೆ ಸಂಬಂಧಿಸಿದಂತೆ ಮಾಜಿ ಪ್ರಧಾನಿ ಪಿ.ವಿ.ನರಸಿಂಹ ರಾವ್ ಅವರು ನಾಳೆ ಇಲ್ಲಿನ ತೀಸ್ ಹಜಾರಿ ನ್ಯಾಯಾಲಯಕ್ಕೆ ಹಾಜರಾಗಬೇಕಾಗಿದ್ದು ಇದಕ್ಕಾಗಿ ಭಾರಿ ಭದ್ರತಾ ವ್ಯವಸ್ಥೆ ಮಾಡಲಾಗಿದೆ.

ಕ್ರಿಮಿನಲ್ ಪ್ರಕರಣದ ಹಿನ್ನೆಲೆಯಲ್ಲಿ ಮಾಜಿ ಪ್ರಧಾನಿಯೊಬ್ಬರು ನ್ಯಾಯಾಲಯಕ್ಕೆ ಹಾಜರಾಗುತ್ತಿರುವುದು ಇದೇ ಮೊದಲನೇ ಬಾರಿ. ರಾವ್ ಅವರು ಸಲ್ಲಿಸಿದ್ದ ನಿರೀಕ್ಷಣಾ ಜಾಮೀನು ಈಗಾಗಲೇ ನ್ಯಾಯಾಲಯದಿಂದ ತಿರಸ್ಕೃತವಾಗಿರುವುದರಿಂದ ನಾಳೆ ಅವರು ನ್ಯಾಯಾಲಯಕ್ಕೆ ಹಾಜರಾದ ತಕ್ಷಣ ಅವರನ್ನು ಬಂಧಿಸಿ ನ್ಯಾಯಾಂಗ ಕಸ್ಟಡಿಗೆ ಒಪ್ಪಿಸುವ ಸಾಧ್ಯತೆ ಇದೆ.

- **ಆರ್ಥಿಕವಾಗಿ ಮುಂದುವರಿದವರಿಗೆ ನವೆಂಬರ್‌ನಿಂದ ರೇಷನ್ ಇಲ್ಲ**

ನವದೆಹಲಿ, ಸೆ. 29 (ಯುಎನ್‌ಐ)– ಬರುವ ನವೆಂಬರ್ ತಿಂಗಳಿಂದ ಸಮಾಜದ ಕೆನೆ ಪದರಿನಲ್ಲಿರುವವರಿಗೆ (ಆರ್ಥಿಕವಾಗಿ ಮುಂದುವರಿದಿರುವ) ಸಾರ್ವಜನಿಕ ಪಡಿತರ ಸೌಲಭ್ಯವನ್ನು ರದ್ದುಪಡಿಸಲಾಗುವುದು ಎಂದು ಕೇಂದ್ರ ಆಹಾರ ಮತ್ತು ನಾಗರಿಕ ಪೂರೈಕೆ ಸಚಿವ ಡಿ.ಪಿ.ಯಾದವ್ ಹೇಳಿದ್ದಾರೆ.

50 ವರ್ಷಗಳ ಹಿಂದೆ

ಗುರುವಾರ, 30-9-1971

- **ದಿವ್ಯಾಲಂಕೃತ ಭಾರತಮಾತೆಯ ವೈಭವಪೂರ್ಣ ದಸರಾ ಮೆರವಣಿಗೆ**

ಮೈಸೂರು, ಸೆ. 29– ರಾಜ– ಮಹಾರಾಜರ ಆಳ್ವಿಕೆಯ ಗುಂಗಿನಲ್ಲೇ ಇನ್ನೂ ಇದ್ದ ಮೈಸೂರು ನಗರದ ಇತಿಹಾಸದಲ್ಲಿ ಇಂದು ಒಂದು ಹೊಸ ಅಧ್ಯಾಯ ಪ್ರಾರಂಭವಾಯಿತು.

ಶುದ್ಧ ಪ್ರಜಾಸತ್ತೆಗೆ ಅನುಗುಣವಾಗಿ ಆನೆ ಮೇಲೇರಿ ವಿಜೃಂಭಿಸುತ್ತ ಮೊದಲ ಬಾರಿಗೆ ಬಂದ ಭಾರತಮಾತೆ ಮೆರವಣಿಗೆಯನ್ನು ಐದೂವರೆ ಕಿಲೊ ಮೀಟರ್ ಉದ್ದಕ್ಕೂ ಕಿಕ್ಕಿರಿದು ಕೂಡಿದ್ದ ಸುಮಾರು ಆರು ಲಕ್ಷ ಮಂದಿ ಪ್ರಥಮ ‘ಜನತಾ ದಸರಾ’ ಉತ್ಸವವನ್ನು ಸಾರಿದರು. ಇಷ್ಟು ವರ್ಷವೂ ಮಹಾರಾಜರ ಜಂಬೂ ಸವಾರಿಯನ್ನೇ ನೋಡಿ ನೋಡಿ ಅಭ್ಯಾಸವಾಗಿದ್ದ ಮೈಸೂರು ಜನತೆಗೆ ಇದೊಂದು ಹೊಸ ಅನುಭವ.

- **ಇಂದು ರಾವ್ ಸಂಪುಟದ ಪ್ರಮಾಣವಚನ**

ಹೈದರಾಬಾದ್, ಸೆ. 29– ಆಡಳಿತ ಕಾಂಗ್ರೆಸ್ ನಾಯಕ ಪಿ.ವಿ. ನರಸಿಂಹ ರಾವ್ ನೇತೃತ್ವದ ಆಂಧ್ರಪ್ರದೇಶದ ನೂತನ ಮಂತ್ರಿಮಂಡಲ ಗುರುವಾರ ಪ್ರಮಾಣವಚನ ಸ್ವೀಕರಿಸುವುದು.

ಹೊಸ ಶಿಕ್ಷಣ ನೀತಿ ಚೆನ್ನಾಗಿದೆ, ಆದರೆ ವಿಶ್ವವಿದ್ಯಾಲಯಗಳು ಮಾತ್ರ ಸಾಯಲಿವೆ!

ನೀತಿ ನಿವಾರಿಸಲಾಗದ ಮೂಲ ಸಮಸ್ಯೆ



ಅನುರಣನ

ನಾರಾಯಣ ಎ.

ಹೊಸ ಶಿಕ್ಷಣ ನೀತಿಯು ಉನ್ನತ ಶಿಕ್ಷಣದಲ್ಲಿ ತರಲು ಉದ್ದೇಶಿಸಿರುವ ಬದಲಾವಣೆಗಳಿಗೆ ಮಾತ್ರ ಈ ಲೇಖನ ಸೀಮಿತವಾಗಿದೆ. ಅದರಲ್ಲೂ ಉನ್ನತ ಶಿಕ್ಷಣ ಕುರಿತಾದ ಶೈಕ್ಷಣಿಕ ವಿಚಾರಗಳನ್ನಷ್ಟೇ ಇಲ್ಲಿ ಪರಿಗಣಿಸಲಾಗಿದೆ- ಆಡಳಿತಾತ್ಮಕ ಬದಲಾವಣೆಗಳ ವಿಚಾರಗಳನ್ನಲ್ಲ. ಹಾಗಾಗಿ, ಸಮಗ್ರ ಹೊಸ ಶಿಕ್ಷಣ ನೀತಿಯ ಸುತ್ತ ಹುಟ್ಟಿಕೊಂಡಿರುವ ರಾಜಕೀಯ ಚರ್ಚೆಗಳ ಯುಕ್ತಾಯುಕ್ತತೆಯ ಬಗ್ಗೆ ಇಲ್ಲಿ ಪ್ರಸ್ತಾಪಿಸುವುದಿಲ್ಲ.

ಕೇವಲ ಉನ್ನತ ಶಿಕ್ಷಣ ಹಂತದ ಶೈಕ್ಷಣಿಕ ವಿಷಯಗಳಿಗೆ ಸಂಬಂಧಿಸಿದಂತೆ ಹೇಳುವುದಾದರೆ, ಹೊಸ ನೀತಿಯ ಆಶಯ ಮತ್ತು ಅದು ಪ್ರಸ್ತಾಪಿಸಿರುವ ಸುಧಾರಣೆಗಳು ಮಹತ್ವಪೂರ್ಣವಾಗಿವೆ ಮತ್ತು ಈ ಕಾಲದ ಅಗತ್ಯಗಳಿಗೆ ಅನುಗುಣವಾಗಿಯೂ ಇವೆ. ಆದರೆ, ನಮ್ಮ ವಿಶ್ವವಿದ್ಯಾಲಯಗಳು, ಅದರಲ್ಲೂ ಸರ್ಕಾರಿ ಸ್ವಾಮ್ಯದ ವಿಶ್ವವಿದ್ಯಾಲಯಗಳು ಮಾತ್ರ ನಿಧಾನವಾಗಿ ಸಾಯಲಿವೆ. ಬೇಕಾದರೆ ಬರೆದಿಟ್ಟುಕೊಳ್ಳಿ- ನಮ್ಮ ಬಹುತೇಕ ವಿಶ್ವವಿದ್ಯಾಲಯಗಳು ಸಂಪೂರ್ಣ ನೆಲಕಚ್ಚಲಿವೆ.

ವಿಶ್ವವಿದ್ಯಾಲಯಗಳ ಈ ನಿಚ್ಚಳ ನಾಶಕ್ಕೆ ಹೊಸ ಶಿಕ್ಷಣ ನೀತಿ ಕಾರಣವಾಗಲಿದೆ ಅಂತ ಖಂಡಿತಾ ಇಲ್ಲಿ ಹೇಳುತ್ತಿಲ್ಲ. ಈ ದೇಶದ ವಿಶ್ವವಿದ್ಯಾಲಯಗಳು ಪತನದ ಹಾದಿಯಲ್ಲಿ ಸಾಗಲು ತೊಡಗಿ ದಶಕಗಳೇ ಕಳೆದಿವೆ. ಈಗ ಬಂದಿರುವ ನೀತಿಯೂ ಅವುಗಳನ್ನು ವಿನಾಶದಂಚಿನಿಂದ ರಕ್ಷಿಸಲಾರದು ಎನ್ನುವುದಷ್ಟೇ ಹೊಸ ನೀತಿಯ ಬಗ್ಗೆ ಇರುವ ಆಕ್ಷೇಪ. ಹೊಸ ನೀತಿಯಿಂದಾಗಿ ಉದ್ಭವಿಸಿದ ಪರಿಸ್ಥಿತಿ ಹೇಗಿದೆ ಎಂದರೆ, ಉಸಿರಾಡಲೂ ಸಾಧ್ಯವಾಗದಷ್ಟು ನಿಶ್ಯಕ್ತನಾಗಿ ಮಲಗಿ ಸಾವನ್ನು ಎದುರು ನೋಡುತ್ತಿದ್ದವನನ್ನು ಒಮ್ಮಿಂದೊಮ್ಮೆಲೆ ಎಬ್ಬಿಸಿ ಒಲಿಂಪಿಕ್ಸ್‌ಗೆ ಕಳುಹಿಸುವ ಪ್ರಯತ್ನದಂತೆ ಇದೆ.

ಹಾಗೆಂದ ಮಾತ್ರಕ್ಕೆ ದೇಶದಲ್ಲಿ ಒಳ್ಳೆಯದ್ದು ಎನ್ನಬಹುದಾದ ಉನ್ನತ ಶಿಕ್ಷಣ ಸಂಸ್ಥೆಗಳೇ ಇಲ್ಲ ಎಂದಾಗಲೀ ಉನ್ನತ ಶಿಕ್ಷಣ ನೀಡಲು ಅರ್ಹರಾದ ಪ್ರಾಧ್ಯಾಪಕ ವೃಂದವೇ ಇಲ್ಲ ಎನ್ನುವುದಾಗಲೀ ಅರ್ಥವಲ್ಲ. ಅಲ್ಲೋ ಇಲ್ಲೋ ಒಂದಷ್ಟು ಒಳ್ಳೆಯ ಸಂಸ್ಥೆಗಳು ಇರಬಹುದು, ಎಲ್ಲೋ ಬೆರಳೆಣಿಕೆಯ ಉತ್ತಮ ಪ್ರಾಧ್ಯಾಪಕರು ಇನ್ನೂ ಉಳಿದಿರಲೂಬಹುದು. ಆದರೆ, ಒಂದು ಹೊಸ ನೀತಿ ಎಂದಾಗ ಅದು ಇಡೀ ವ್ಯವಸ್ಥೆಯ ಧಾರಣಾ ಸಾಮರ್ಥ್ಯವನ್ನು ಗಮನದಲ್ಲಿ ಇಟ್ಟುಕೊಂಡು ಬದಲಾವಣೆಗಳನ್ನು ಪ್ರಸ್ತಾಪಿಸಬೇಕಾಗುತ್ತದೆ. ಹೊಸ ನೀತಿ ಪ್ರಸ್ತಾಪಿಸಿರುವ ಅಂಶಗಳು ಅದೆಷ್ಟು ಮಹತ್ವಾಕಾಂಕ್ಷೆಯಿಂದ ಕೂಡಿವೆ ಎಂದರೆ, ಈಗ ಇರುವ ನಮ್ಮ ಉನ್ನತ ಶಿಕ್ಷಣ ವ್ಯವಸ್ಥೆಗೆ ಅದನ್ನು ಭರಿಸಿ ಅನುಷ್ಠಾನಗೊಳಿಸುವುದು ಬಿಡಿ, ಕನಿಷ್ಠ ಅರ್ಥ ಮಾಡಿಕೊಳ್ಳುವ ಸಾಮರ್ಥ್ಯ ಕೂಡಾ ಇದೆ ಅಂತ ಅನ್ನಿಸುವುದಿಲ್ಲ.

ಹೀಗೆಲ್ಲಾ ಹೇಳುತ್ತಿದ್ದರೆ, ಇದು ಸಿನಿಕತನದ ಮಾತು, ನಮ್ಮ ಉನ್ನತ ಶಿಕ್ಷಣ ವ್ಯವಸ್ಥೆಯನ್ನು ಅವಮಾನಿಸುವ ಮಾತು ಅಂತ ಅನ್ನಿಸಬಹುದು. ಖಂಡಿತಾ ಅಲ್ಲ. ವಾಸ್ತವದಲ್ಲಿ ಇಲ್ಲಿ ಬಳಸಿದ ಸಚ್ಚ ಪದಗಳು ತಿಳಿಸಬಹುದಾದದ್ದಕ್ಕಿಂತಲೂ ಹೆಚ್ಚು ಈ ದೇಶದ ಉನ್ನತ ಶಿಕ್ಷಣ ವ್ಯವಸ್ಥೆಯು ಕೆಟ್ಟುಹೋಗಿದೆ. ರಾಮಾಯಣದಲ್ಲಿ ಹನುಮಂತನಿಗೆ ತನ್ನ ಶಕ್ತಿಯ ಬಗ್ಗೆ ತಿಳಿದಿರಲಿಲ್ಲ, ಹಾಗಾಗಿ ಸಮಸ್ತ ರಾಮಸೇನೆ ಸೇರಿ ಹನುಮಂತನ ಶಕ್ತಿ ಏನು ಅಂತ ಆತನಿಗೆ ಹೇಳಿ ಎಚ್ಚರಿಸಬೇಕಾಯಿತು. ನಮ್ಮ ಉನ್ನತ ಶಿಕ್ಷಣ ಇದಕ್ಕೆ ತದ್ವಿರುದ್ಧ ಸ್ಥಿತಿಯಲ್ಲಿದೆ. ಉತ್ತರದಾಯಿತ್ವ ಎನ್ನುವುದನ್ನು ಲವಲೇಶವೂ ಎದುರಿಸದ ಅದಕ್ಕೆ ಅದರ ದೌರ್ಬಲ್ಯ ಏನು ಅಂತ ತಿಳಿದಿಲ್ಲ. ‘ಗೊತ್ತಿಲ್ಲ ಎನ್ನುವುದು ಸಮಸ್ಯೆಯಲ್ಲ. ಗೊತ್ತಿಲ್ಲ ಅಂತ ಗೊತ್ತಿಲ್ಲದೆ ಇರುವುದು ಸಮಸ್ಯೆ’ ಎನ್ನುವುದು ಶೈಕ್ಷಣಿಕ ತತ್ವಶಾಸ್ತ್ರದ ಮಾತು. ಇದು ನಮ್ಮ ಉನ್ನತ ಶಿಕ್ಷಣ ವ್ಯವಸ್ಥೆಯ ಸಮಸ್ಯೆಯೂ ಹೌದು. ಆ ವ್ಯವಸ್ಥೆ ಯಂತ್ರೋಪಾದಿಯಲ್ಲಿ ಸೃಷ್ಟಿಸುತ್ತಿರುವ ಪದವೀಧರರ ಸಮಸ್ಯೆಯೂ ಹೌದು. ಆದಕಾರಣ ಈ ಹಂತದಲ್ಲಾದರೂ ಉನ್ನತ ಶಿಕ್ಷಣದ ಬಗ್ಗೆ ಅಪ್ರಿಯ ಸತ್ಯಗಳನ್ನು ಹೇಳದೇ ಹೋದರೆ ಅದು ಮುಂದಿನ ಜನಾಂಗಕ್ಕೆ ಮಾಡುವ ಅನ್ಯಾಯವಾಗುತ್ತದೆ.


ಹೊಸ ಶಿಕ್ಷಣ ನೀತಿಯ ಮಹತ್ವಾಕಾಂಕ್ಷೆಗೂ ದೇಶದ ಉನ್ನತ ಶಿಕ್ಷಣದ ವಾಸ್ತವ ಸ್ಥಿತಿಗೂ ಇರುವ ಅಜಗಜಾಂತರಕ್ಕೆ ಒಂದು ಉದಾಹರಣೆ ನೋಡೋಣ. ಹೊಸ ಶಿಕ್ಷಣ ನೀತಿಯು ಅಂತರರಾಷ್ಟ್ರೀಯ ಗುಣಮಟ್ಟದ ಉನ್ನತ ಶಿಕ್ಷಣವನ್ನು ಸರ್ಕಾರಿ ಸ್ವಾಮ್ಯದ ವಿಶ್ವವಿದ್ಯಾಲಯಗಳಲ್ಲಿ ನೀಡುವ ಭರವಸೆ ನೀಡುತ್ತದೆ. ಮೊದಲಿಗೆ ಈ ಅಂತರರಾಷ್ಟ್ರೀಯ ಮಟ್ಟ ಅಂದರೆ ಏನು ಎನ್ನುವ ಪ್ರಶ್ನೆ. ಇಡೀ ವಿಶ್ವದ ವಿದ್ಯಾರ್ಥಿ ಸಮೂಹವನ್ನು ಈಗಲೂ ಸೂಜಿಗಲ್ಲಿನಂತೆ ಆಕರ್ಷಿಸುವ ಆಕ್ಸ್‌ಫರ್ಡ್, ಕೇಂಬ್ರಿಡ್ಜ್, ಹಾರ್ವರ್ಡ್, ಕೊಲಂಬಿಯಾ ಮುಂತಾದ ವಿಶ್ವವಿದ್ಯಾಲಯಗಳು ಹುಟ್ಟಿದ್ದು ಸ್ಥಳೀಯ ವಿಶ್ವವಿದ್ಯಾಲಯಗಳಾಗಿಯೇ. ಆಯಾ ಸ್ಥಳೀಯ ಪರಿಸರದಲ್ಲಿ, ಆಯಾ ಕಾಲಕ್ಕೆ ಬೇಕಾದ ಉತ್ಕೃಷ್ಟತೆ ಮತ್ತು ಸಮತೆಯ ಸೂತ್ರಗಳನ್ನು ಅಳವಡಿಸಿಕೊಂಡು ಕಟ್ಟಿದ ಸಂಸ್ಥೆಗಳು ಅಂತರರಾಷ್ಟ್ರೀಯ ಮನ್ನಣೆ ಗಳಿಸಿಯೇ ಗಳಿಸುತ್ತವೆ. ಅಂತರರಾಷ್ಟ್ರೀಯ ಮಟ್ಟ ಅಂತ ಒಂದು ಇಲ್ಲ. ಇರುವುದು ಗುಣಮಟ್ಟ ಅಂತ ಮಾತ್ರ. ಬೇರೇನನ್ನಾದರೂ ಆಮದು ಮಾಡಿಕೊಳ್ಳಬಹುದೋ ಏನೋ, ಆದರೆ ಗುಣಮಟ್ಟ ಎನ್ನುವುದು ಸ್ಥಳೀಯವಾಗಿಯೇ ಬೆಳೆಯಬೇಕು.

ಅದೇನೇ ಇರಲಿ, ಅಂತರರಾಷ್ಟ್ರೀಯ ಮಟ್ಟದ ಸಂಸ್ಥೆಗಳು ಅಂತ ಸ್ವೀಕೃತವಾಗಿರುವ ವಿಶ್ವವಿದ್ಯಾಲಯಗಳು ಆ ಮಟ್ಟಕ್ಕೆ ಏರಲು ಸಾಧ್ಯವಾಗಿದ್ದು ಹೇಗೆ ಎನ್ನುವುದು ಮುಖ್ಯ ಪ್ರಶ್ನೆ. ಅದು ಸಾಧ್ಯವಾದದ್ದು ಅಲ್ಲಿರುವ ಗುಣಮಟ್ಟದ ಪ್ರಾಧ್ಯಾಪಕ ವರ್ಗದ ಕಾರಣದಿಂದಾಗಿ. ಗುಣಮಟ್ಟದ ಶಿಕ್ಷಣ ವ್ಯವಸ್ಥೆಗೆ ಹೆಸರಾಗಿರುವ ದೇಶಗಳಲ್ಲಿ ಇರುವ ಒಂದು ಸಾಮಾನ್ಯ ವಿಶ್ವವಿದ್ಯಾಲಯದಲ್ಲಿ ಕೂಡಾ ಪ್ರಾಧ್ಯಾಪಕರ ಹುದ್ದೆ ಸಂಪಾದಿಸುವುದು ಕಠಿಣ ಪರಿಶ್ರಮವನ್ನು ಬೇಡುತ್ತದೆ. ಆ ದೇಶಗಳಲ್ಲಿ ಪಡೆಯಲು ಅತ್ಯಂತ ಕಷ್ಟವಾದ ಉದ್ಯೋಗ ಅಂತ ಒಂದು ಇದ್ದರೆ ಅದು ವಿಶ್ವವಿದ್ಯಾಲಯಗಳ ಪ್ರಾಧ್ಯಾಪಕರ ಉದ್ಯೋಗ. ಸರ್ಕಾರವು ಆಡಳಿತಕ್ಕೆ, ರಾಜಕಾರಣಕ್ಕೆ ಬೇಕಾದ ಬಹುತೇಕರನ್ನು ವಿಶ್ವವಿದ್ಯಾಲಯಗಳಿಂದಲೇ ಪಡೆದುಕೊಳ್ಳುವುದು ಅಲ್ಲಿ ವಾಡಿಕೆ.

ಭಾರತದ ಪರಿಸ್ಥಿತಿ ನೋಡಿ. ಸ್ವಾತಂತ್ರ್ಯಾನಂತರದ ಮೊದಲ ಎರಡು- ಮೂರು ದಶಕಗಳ ಕಾಲ ಈ ದೇಶದ ಉನ್ನತ ಶಿಕ್ಷಣ ರಂಗ ಕಂಡ ಅದ್ಭುತ ಪ್ರಾಧ್ಯಾಪಕ ಪರಂಪರೆ ಈಗ ಹೆಚ್ಚುಕಡಿಮೆ ಅಳಿದೇ ಹೋಗಿದೆ. ಇಂತಹದ್ದೊಂದು ಘೋರ ಪತನಕ್ಕೆ ಕಾರಣವಾದದ್ದಾದರೂ ಏನು ಎನ್ನುವುದೇ ಒಂದು ಚೋದ್ಯ. ಈಗ ಕಳಪೆ ಸ್ನಾತಕೋತ್ತರ ಪದವಿ ಪಡೆದವರು ಮತ್ತು ಕಳಪೆ ಪಿಎಚ್‌.ಡಿ. ಪದವಿ ಪಡೆದವರು ಬೋಧಕರಾಗಿ ಕಳಪೆ ಸ್ನಾತಕೋತ್ತರ ಪದವೀಧರರನ್ನು ಮತ್ತು ಕಳಪೆ ಪಿಎಚ್‌.ಡಿ. ಪದವೀಧರರನ್ನು ಸೃಷ್ಟಿಸುತ್ತಿದ್ದಾರೆ. ಇವರು ಮತ್ತೆ ಪ್ರಾಧ್ಯಾಪಕರಾಗಿ ಮತ್ತಷ್ಟು ಕಳಪೆ ಪದವೀಧರರನ್ನು ಸೃಷ್ಟಿಸುತ್ತಾರೆ. ಮುಂದೆ ಇಂತಹವರೂ ಪ್ರಾಧ್ಯಾಪಕರಾಗುತ್ತಾ ಸಾಗುವ ಸ್ಥಿತಿ ನಿರ್ಮಾಣವಾಗುವ ಮೂಲಕ ಇಡೀ ವ್ಯವಸ್ಥೆ ಒಂದು ಅಧೋಗತಿಯ ಸುಳಿಯಲ್ಲಿ (downward spiral) ಸಿಲುಕಿಕೊಂಡಿದೆ. ಇದಕ್ಕೆ ಅಪವಾದ ಎನ್ನುವವರು ಸಣ್ಣ ಸಂಖ್ಯೆಯಲ್ಲಿ ಇರಬಹುದು. ಅವರು ಒಟ್ಟು ವ್ಯವಸ್ಥೆಯ ಅಧಃಪತನವನ್ನು ತಡೆಯಲಾಗುವುದಿಲ್ಲ.

ಇದೆಂತಹ ವಿಷಮ ವರ್ತುಲ ಎಂದರೆ, ಇದರಿಂದ ಹೊರಬರುವುದು ಕಷ್ಟ. ಯಾಕೆಂದರೆ, ಈಗಾಗಲೇ ವ್ಯವಸ್ಥೆಯೊಳಗೆ ಬೇರೂರಿದವರನ್ನು ಬಿಡಲೂ ಕಷ್ಟ, ಅವರನ್ನು ಹೊಸ ಅವಶ್ಯಕತೆಗೆ ಒಗ್ಗಿಸಲೂ ಕಷ್ಟ. ಹೊಸದಾಗಿ ಸೂಕ್ತರನ್ನು ನೇಮಿಸೋಣ ಎಂದರೆ, ಇಡೀ ವ್ಯವಸ್ಥೆಯೇ ದಶಕಗಳಿಂದ ಬರಡಾಗಿರುವಾಗ ಸೂಕ್ತರಾದವರು ಸಿಗುವುದಾದರೂ ಎಲ್ಲಿಂದ. ಈ ಮೂಲಭೂತ ಸಮಸ್ಯೆಯಿಂದ ಉನ್ನತ ಶಿಕ್ಷಣವನ್ನು ಬಿಡುಗಡೆಗೊಳಿಸುವ ಯಾವ ಅಂಶವೂ ಹೊಸ ನೀತಿಯಲ್ಲಿ ಕಾಣಿಸುತ್ತಿಲ್ಲ. ಇದುವೇ ಇಲ್ಲದ ಮೇಲೆ ಬೇರೇನಾದರೂ ಇದ್ದರೆಷ್ಟು ಬಿಟ್ಟರೆಷ್ಟು.

ಇಷ್ಟು ಸಮಯ ಅಧಿಕೃತ ಸರ್ಟಿಫಿಕೇಟ್ ಸಿಗು ತ್ತದೆ ಎನ್ನುವ ಕಾರಣಕ್ಕೆ ಎಲ್ಲಾ ರೀತಿಯ ವಿಶ್ವವಿದ್ಯಾಲಯಗಳಲ್ಲಿಯೂ ವಿದ್ಯಾರ್ಥಿಗಳು ದಾಖಲಾಗುತ್ತಿದ್ದರು. ಕೆಲವೇ ವರ್ಷಗಳಲ್ಲಿ ಔದ್ಯೋಗಿಕ ರಂಗ ಕಂಡುಕೇಳರಿಯದ ರೀತಿಯಲ್ಲಿ ಬದಲಾಗಲಿದ್ದು ಹೊಸ ಉದ್ಯೋಗಾವಕಾಶಗಳಿಗೆ ಸರ್ಟಿಫಿಕೇಟ್ ಬೇಕಾಗುವ ಪರಿಸ್ಥಿತಿ ಇರುವುದಿಲ್ಲ. ಎಂಬಲ್ಲಿಗೆ ಜ್ಞಾನ- ಜ್ಞಾನಗ್ರಹಣ ಚಿಂತನೆ- ಯೋಚನೆ, ವಿವೇಕ- ವಿವೇಚನೆ ಇತ್ಯಾದಿಗಳ ಕುರಿತು ತಲೆಕೆಡಿಸಿಕೊಳ್ಳದ ವಿಶ್ವವಿದ್ಯಾಲಯಗಳ ಅವಶ್ಯಕತೆ ಯಾರಿಗೂ ಇರುವುದಿಲ್ಲ. ಹೊಸ ಶಿಕ್ಷಣ ನೀತಿ ಇದನ್ನು ಮನಗಂಡಿದೆ. ಆದರೆ ನಮ್ಮ ಬಹುತೇಕ ವಿಶ್ವವಿದ್ಯಾಲಯಗಳು ಮಾಹಿತಿ ಆಧಾರಿತ ಶಿಕ್ಷಣ ಮತ್ತು ಪ್ರಮಾಣಪತ್ರ ನೀಡುವಾಚೆಗಿನ ಶಿಕ್ಷಣದ ಬಗ್ಗೆ ಕನಿಷ್ಠ ಯೋಚಿಸುವ ಸ್ಥಿತಿಯಲ್ಲೂ ಇಲ್ಲ.



ಚುರುಮುರಿ



ಬೊಜ್ಜು, ಬೆಲ್ಟು, ಬೈಸಿಕಲ್!

• ಎಸ್.ಬಿ.ರಂಗನಾಥ್

ಒಂದೂವರೆ ವರ್ಷದಿಂದ ಮನೆಯಿಂದಲೇ ಆಫೀಸು ಕೆಲಸ ಮಾಡುತ್ತಿದ್ದ ಚಿಕ್ಕೇಶಿ, ಮಿನಿಸ್ಟರ್ ಪ್ರೋಗ್ರಾಮ್ ಇದೆ ಎಂದು ವಾರದಿಂದ ಆಫೀಸಿಗೆ ಹೋಗುತ್ತಿದ್ದ.

ಇವತ್ತು ಕಚೇರಿಗೆ ಹೊರಡುವ ತರಾತುರಿಯಲ್ಲಿ ಪ್ಯಾಂಟಿಗೆ ಬೆಲ್ಟ್ ಹಾಕಿಕೊಳ್ಳಲು ಹೆಣಗಾಡುತ್ತಿದ್ದವನಿಗೆ ಪತ್ನಿ ಚಿನ್ನಮ್ಮ, ‘ಮೂರು ಹೊತ್ತೂ ಮೊಬೈಲ್ ಹಿಡ್ಕೊಂಡು, ಟಿ.ವಿ ಮುಂದೆ ಕುಂತು ಬೊಜ್ಜು ಬೆಳೆಸಿಕೊಂಡ್ರೆ ಇನ್ನೇನಾಗತ್ತೆ?’ ಎಂದಳು.

‘ಮಾರಾಯ್ತಿ, ವರ್ಕ್ ಫ್ರಮ್ ಹೋಮ್ ಜೊತೆಗೆ ವರ್ಕ್ ಫಾರ್ ಹೋಮ್ ಅನ್ನೂ ಮಾಡ್ತಿದೀನಲ್ಲಾ. ಡಿಷ್ ವಾಷರ್, ವಾಷಿಂಗ್ ಮಷೀನ್, ಫ್ಲೋರ್ ವಾಷರ್‌ಗಳ ಕೆಲ್ಸಗಳೆಲ್ಲಾ ನನ್ನವೇ. ಮೊಬೈಲ್, ಟಿ.ವಿ ರಿಮೋಟ್ ಯಾವಾಗ್ಲೂ ಕಾಣೆಯಾಗಿರುತ್ವೆ, ಇನ್ನು ಟಿ.ವಿ ನೋಡೋದೆಲ್ಲಿ ಬಂತು?’ ಎಂದ.

‘ಮಡ್ಡಿತಲೆ, ಗಣಪತಿ ಒಡೆದ ಹೊಟ್ಟೆ ಕೂಡಿಸೋಕೆ ಹಾವನ್ನು ಕಟ್ಟಿಕೊಂಡಂತೆ ಈ ಲೆದರ್ ಬೆಲ್ಟ್ ಬಿಗಿದುಕೊಳ್ಳಿ’ ಎನ್ನುತ್ತಾ ಬೇರೆ ಬೆಲ್ಟ್ ಕೈಗಿತ್ತಳು.

ಅಷ್ಟರಲ್ಲಿ ಬಂದ ಕುಮಾರಕಂಠೀರವ, ‘ಪಪ್ಪಾ, ವಾರದಿಂದ ಮೇಷ್ಟ್ರು ‘ನಿನ್ನ ಬೈಸಿಕಲ್ ಎಲ್ಲಿ? ತರದಿದ್ರೆ ಕ್ಲಾಸಿಂದ ಹೊರಗಾಕ್ತೀನಿ ಅಂತಿದಾರೆ. ಇವತ್ತು ನಾನು ಸೈಕಲ್ ಒಯ್ಯಲೇಬೇಕು. ಆಫೀಸಿಗೆ ಸ್ಕೂಟರಲ್ಲಿ ಹೋಗ್ರಿ’ ಎಂದ.

‘ಅದ್ರಲ್ಲಿ ಪೆಟ್ರೋಲ್ ಇಲ್ಲಯ್ಯಾ. ಪೆಟ್ರೋಲ್ ಬೆಲೆ ಇಳಿಯೋವರೆಗೆ ತಡ್ಕೋ. ಆಮೇಲೆ ನಿನ್ನ ಸೈಕಲನ್ನ ನೀನೇ ಒಯ್ಯುವಂತೆ, ಯಾರು ಬೇಡಾಂತಾರೆ’.

ಮಗನ ಪರವಾಗಿ ಅಮ್ಮನ ದಿಢೀರ್ ವಕಾಲತ್ತು- ‘ಹಾಗಾದ್ರೆ ಅವನಿಗೆ ಈ ಜನ್ಮದಲ್ಲಿ ಅವನ ಸೈಕಲ್ ಸಿಕ್ಕಂತೆಯೇ... ನಿಮ್ಮ ಆಫೀಸು ಎರಡೇ ಕಿಲೊ ಮೀಟರ್, ನಡ್ಕೊಂಡು ಹೋಗಿ ಆರೋಗ್ಯಕ್ಕೆ ಒಳ್ಳೇದು, ಬೊಜ್ಜೂ ಕರಗುತ್ತೆ’.

ಮಗ ‘ಟಾಟಾ, ಬೈಬೈ’ ಎನ್ನುತ್ತಾ ಸೈಕಲ್ಲೇರಿ ಮಾಯವಾದ. ಮಡದಿ ‘ಸ್ನಾನಕ್ಕೆ ಹೋಗ್ಬೇಕು’ ಎನ್ನುತ್ತಾ ಬಾಗಿಲು ಹಾಕಿಕೊಂಡಳು.

ವಿಶ್ವ ಹೃದಯ ದಿನದಂದಾದರೂ ತಾಯಿ–ಮಗನಲ್ಲಿ ಹೃದಯವಂತಿಕೆ ಇಲ್ಲವಲ್ಲ ಎಂದು ಪರಿತಪಿಸುತ್ತಾ ಚಿಕ್ಕೇಶಿ ಆಫೀಸಿನತ್ತ ಕಾಲೆಳೆದ.

ಸಂಗತ

ಬೇಡವಾದೀತೇ ಕೈಬರಹದ ಕೌಶಲ?

ಕೈಬರಹದ ಅಭ್ಯಾಸ ತಪ್ಪಿಸುವುದು ಮೆದುಳಿನ ಚಟುವಟಿಕೆಗಾಗುವ ನಷ್ಟವೇ ಸರಿ

• ಡಾ. ಕೆ.ಎಸ್.ಪವಿತ್ರ

ಆರನೇ ತರಗತಿಯಿಂದ ಶಾಲೆಗಳು ಪುನರಾರಂಭವಾಗಿವೆ. ಆದರೂ ಮಕ್ಕಳು ಶಾಲೆಗೆ ಹೋಗಲು ತುಂಬಾ ಉತ್ಸುಕರಾಗಿಲ್ಲ! ಏಕೆ? ಈವರೆಗೆ ಆನ್‌ಲೈನ್ ತರಗತಿಗಳು ಇದ್ದುದರಿಂದ ತಮ್ಮನ್ನು ಹೆಚ್ಚು ಕಾಡದಿದ್ದ, ನೋಟ್ಸ್- ಹೋಂವರ್ಕ್ ‘ಬರೆದು’ಮುಗಿಸಿ ಒಪ್ಪಿಸುವ ಬಗ್ಗೆ ಈಗ ಅಪ್ಪ-ಅಮ್ಮ-ಶಿಕ್ಷಕರಿಗಿಂತ ಮಕ್ಕಳೇ ಹೆಚ್ಚು ಕೆಲಸ ಮಾಡಬೇಕು!


ಈವರೆಗೆ ಆನ್‌ಲೈನ್ ತರಗತಿಗಳು ಇದ್ದುದರಿಂದ ಕೈಬರಹದ ಬಗ್ಗೆ ಹೆಚ್ಚು ಗಮನಹರಿಸದ ಮಕ್ಕಳು, ಇದೀಗ ಈ ವಿಷಯದಲ್ಲಿ ಮತ್ತೆ ಹೆಚ್ಚು ಕೆಲಸ ಮಾಡಬೇಕಾಗಿದೆ!

ಕಳೆದ 10 ವರ್ಷಗಳಲ್ಲಿ ಪತ್ರಗಳು ಇ-ಮೇಲ್-ಟೆಕ್ಸ್ಟ್- ವಾಯ್ಸ್ ಮೆಸೇಜ್‌ಗಳಾಗಿ ಬದಲಾದರೂ ವಿದ್ಯಾರ್ಥಿಗಳಿಗೆ ಮಾತ್ರ ನಾವು ಬೋಧಿಸುತ್ತಿದ್ದದ್ದು ಕೈಯಲ್ಲಿ ಪೆನ್ನು-ಪೆನ್ಸಿಲ್ ಹಿಡಿದು ಬರೆಯಬೇಕೆಂಬುದನ್ನೇ. ಒಂದೂವರೆ ವರ್ಷದಿಂದ ಈ ಪರಿಸ್ಥಿತಿ ಬದಲಾಗಿಬಿಟ್ಟಿದೆ. ಮಕ್ಕಳು ಮೊಬೈಲ್- ಕಂಪ್ಯೂಟರ್ ಸ್ಕ್ರೀನ್‌ಗಳ ಮುಂದೆ ಕುಳಿತು, ‘ಅಕ್ಷರ ಬರೆದೇ ಕಲಿಯಬೇಕು ಏಕೆ’ ಎಂದು ಪ್ರಶ್ನಿಸುತ್ತಿದ್ದಾರೆ. ಆಟೊ ಕರೆಕ್ಟಾಗಿ ತನ್ನಿಂತಾನೇ ಸರಿಗೊಳ್ಳುವ ‘ಸ್ಪೆಲ್ಲಿಂಗ್- ಕಾಗುಣಿತ’ ನೋಡಿ, ‘ನಾವು ಸ್ಪೆಲ್ಲಿಂಗ್ ಕಲಿಯಬೇಕಾದ ಅಗತ್ಯವಾದರೂ ಏನು’ ಎಂದು ಹೆತ್ತವರನ್ನು ಪ್ರಶ್ನಿಸುತ್ತಿದ್ದಾರೆ!

ಭಾರತದಂತಹ ಬೃಹತ್ ಜನಸಂಖ್ಯೆಯ ದೇಶದಲ್ಲಿ, ಶಿಕ್ಷಣ ಕ್ಷೇತ್ರದಲ್ಲಿ ಹಠಾತ್ತನೆ ಬದಲಾವಣೆಗಳನ್ನು ತರುವುದು ಸುಲಭವಲ್ಲ. ಫಿನ್ಲೆಂಡ್ ಮತ್ತು ನಾರ್ವೆಯಂತಹ ದೇಶಗಳು ಈಗಾಗಲೇ ಕೈಬರಹದ ಕೌಶಲವನ್ನು ಮಕ್ಕಳಿಗೆ ಹೇಳಿಕೊಡುವುದನ್ನೇ ನಿಲ್ಲಿಸಿಬಿಟ್ಟಿವೆ. ಅಲ್ಲಿ ಎಲ್ಲವೂ ‘ಡಿಜಿಟಲ್’ ಶಾಲೆಗಳೇ. ಮಕ್ಕಳಿಗೆ ಪೆನ್ನು-ಪೆನ್ಸಿಲ್‌ಗಿಂತ, ಕಡಿಮೆ ಸವಾಲುಗಳನ್ನು ಕೀಬೋರ್ಡ್ ಒಡ್ಡುತ್ತದೆ, ಕಲಿಕೆಯನ್ನು ಸುಲಭವಾಗಿಸುತ್ತದೆ ಎಂದು ಅಲ್ಲಿನ ಶಿಕ್ಷಕರು ಹೇಳುತ್ತಿದ್ದಾರೆ. ಭಾರತದಲ್ಲಿಯೂ ಮಕ್ಕಳು ಹಾಗೂ ಪೋಷಕರಿಗೆ ಇದು ಸತ್ಯ ಎನಿಸಬಹುದು. ಆದರೆ ಈಗ ಸದ್ಯಕ್ಕೆ ಶಿಕ್ಷಣ ಕ್ರಮ ಹೇಗಿದೆಯೆಂದರೆ, ಒಂಬತ್ತನೇ ತರಗತಿಯವರೆಗಂತೂ ಕೈಬರಹದಲ್ಲಿ ಪರೀಕ್ಷೆ ಬರೆಯಬೇಕು. ಹಾಗೆಂದು ಮಕ್ಕಳು ಕೈಬರಹವನ್ನು ಚೆನ್ನಾಗಿ ಕಲಿತರೆನ್ನಿ. ಮುಂದೆ ಸಿಇಟಿ, ನೀಟ್ ಬರೆದರೆ ಅದು ಏತಕ್ಕೂ ಬೇಡ! ಹಿಂದೆ ನಮ್ಮ ಪ್ರಶ್ನೆಪತ್ರಿಕೆಗಳಲ್ಲಿ ಇರುತ್ತಿದ್ದ ‘ಅಂದವಾದ ಬರವಣಿಗೆಗೆ 5 ಅಂಕಗಳು’ ಇಂದು ಮಕ್ಕಳಿಗೆ ಹೇಳಬಹುದಾದ ಹಿಂದಿನ ಕಥೆಯಷ್ಟೇ ಆಗಿ ನಿಂತಿದೆ.

ಇಂಥ ಪರಿಸ್ಥಿತಿ ಇದೀಗ ಕೋವಿಡ್‌ನಿಂದಾಗಿ ಮತ್ತಷ್ಟು ಬಲವಾಗಿದೆ. ಕೈಬರಹ-ಬರವಣಿಗೆಯ ಪ್ರಕ್ರಿಯೆಯನ್ನು, ವಾಹನ ಚಲಾಯಿಸುವ ಪ್ರಕ್ರಿಯೆಯಂತೆಯೇ ನೋಡಬಹುದು. ರಸ್ತೆ ನಿಯಮಗಳು- ಟ್ರಾಫಿಕ್ ಸಂಕೇತ-ನಿಯಂತ್ರಣಗಳು, ಕಾರಿನ ಬ್ರೇಕ್- ಕ್ಲಚ್ ಇವೆಲ್ಲವನ್ನೂ ನಾವು ಮೊದಲು ಕಲಿಯಬೇಕಷ್ಟೆ. ಈ ಆರಂಭಿಕ ಕೌಶಲಗಳು ಒಮ್ಮೆ ಕರಗತವಾದವೆಂದರೆ, ನಾವು ಎಲ್ಲಿಗೆ ಹೋಗಬೇಕು ಎಂಬುದರ ಮೇಲಷ್ಟೇ ಗಮನ ಕೇಂದ್ರೀಕರಿಸಿ, ಪ್ರಯಾಣವನ್ನು ಆರಾಮವಾಗಿ ಮಾಡಲು ಸಾಧ್ಯವಾಗುತ್ತದೆ.

ಇದೇರೀತಿ ಕೈಯಿಂದ ಬರೆಯುವುದೂ ಒಂದು ಸಂಕೀರ್ಣ ಪ್ರಕ್ರಿಯೆ. ಅಕ್ಷರವನ್ನು ಬರೆಯುವ ಬಗೆ, ಅದರ ಓರೆ, ವಾಲುವಿಕೆ, ಅಕ್ಷರ-ಅಕ್ಷರ, ಪದ-ಪದಗಳ ನಡುವಿನ ಅಂತರ ಇವು ಕೇವಲ ಕಾಗದದ ಮೇಲೆ, ಪೆನ್ನು -ಪೆನ್ಸಿಲ್ಲುಗಳಿಂದ ನಾವು ಮೂಡಿಸುವಂತಹವಲ್ಲ. ಅವು ನಮ್ಮ ಮಿದುಳಿನಿಂದ ನಡೆಯುವ ಪ್ರಕ್ರಿಯೆಗಳು. ಕೈಯಿಂದ ಬರೆಯುವಾಗ ನಾವು ಪ್ರತೀ ಅಕ್ಷರಕ್ಕೂ ಬೇರೆ ಬೇರೆ ರೀತಿಯಲ್ಲಿ ಚಲಿಸಬೇಕಾಗುತ್ತದೆ. ಅದೇ ಟೈಪ್ ಮಾಡುವಾಗ ಅಥವಾ ಸ್ಕ್ರೀನ್ ಮೇಲೆ ಅಕ್ಷರಗಳನ್ನು ‘ಟಚ್’ ಮಾಡುವಾಗ ಪ್ರತೀ ಅಕ್ಷರಕ್ಕೂ ಒಂದೇ ರೀತಿಯ ಚಲನೆಯಾಗಿಬಿಡುತ್ತದೆ. ಇದು ಮಿದುಳಿನ ಪ್ರಚೋದನೆಗಾಗುವ ನಷ್ಟವಾದರೆ, ‘ಬರೆಯುವ’ ಪ್ರಕ್ರಿಯೆಯ ಮೂಲಕ ಏಕಕಾಲಕ್ಕೆ ನಡೆಯುವ ವಿವಿಧ ಕಲಿಕೆಗಳೂ ಮಕ್ಕಳಲ್ಲಿ ಕ್ರಮೇಣ ಮರೆಯಾಗುತ್ತವೆ ಎಂಬುದನ್ನು ಅಧ್ಯಯನಗಳು ದೃಢಪಡಿಸಿವೆ.



ಟ್ಯಾಬ್ಲೆಟ್‌ನಲ್ಲಿ ಬರೆಯುವುದು, ಕೀಬೋರ್ಡ್‌ನಲ್ಲಿ ಟೈಪ್ ಮಾಡುವುದು ಮತ್ತು ಕೈಬರಹ ಈ ಮೂರನ್ನು ಹೋಲಿಸಿ ನೋಡಿದಾಗಲೂ ಕೈಬರಹವೇ ಮಿದುಳಿಗೆ ಅತ್ಯಂತ ಉಪಯುಕ್ತ ಎಂದು ಕಂಡುಬಂದಿರುವುದು ಗಮನಾರ್ಹ. ಕಾಗದ-ಪೆನ್ನು ಉಪಯೋಗಿಸುವ ಮಕ್ಕಳ ಓದುವ ಸಾಮರ್ಥ್ಯ, ಒಂದು ವರ್ಷದ ನಂತರ ಅವರು ಹೊಸತನ್ನು ಬರೆಯುವ ಸಾಮರ್ಥ್ಯ ಎರಡೂ, ಹಾಗೆ ಉಪಯೋಗಿಸದ ಮಕ್ಕಳಿಗಿಂತ ಹೆಚ್ಚು ಎಂಬುದು ಉಲ್ಲೇಖಾರ್ಹ ಅಂಶ.

ಮಕ್ಕಳು ಇಂದು ‘ಟೆಕ್‌ಸ್ಯಾವಿ’ ಆಗಿದ್ದಾರೆ. ಆದರೆ ಅದರರ್ಥ ಹಳೆಯ ಕೌಶಲಗಳನ್ನು ಬಿಟ್ಟು ಮಿದುಳು ‘ಕಲಿಕೆ’ಯನ್ನು ಕಳೆದುಕೊಳ್ಳಬೇಕೆಂದಲ್ಲ. ಹಾಗಿದ್ದರೆ ಶಾಲೆ ಆರಂಭವಾಗದ, ಬರವಣಿಗೆಯ ತಂತ್ರವನ್ನು ಕಲಿಯುವ ಅಗತ್ಯವಿರುವ ಹತ್ತು ವರ್ಷದವರೆಗಿನ ಮಕ್ಕಳು ಬರೆಯುವಂತೆ ಮಾಡುವುದಾದರೂ ಹೇಗೆ?

ಇಂಗ್ಲೆಂಡಿನಲ್ಲಿ ನಡೆದ ಅಧ್ಯಯನವೊಂದು, ಅಲ್ಲಿಯ ಪ್ರೌಢಶಾಲಾ ಮಕ್ಕಳು ಲಾಕ್‌ಡೌನ್ ಅವಧಿಯಲ್ಲಿ ತಾವು ತುಂಬಾ ಬರೆದೆವೆಂದೂ, ಅದನ್ನು ಎಂಜಾಯ್ ಮಾಡಿದೆವೆಂದೂ ಹೇಳಿದ್ದನ್ನು ದಾಖಲಿಸಿದೆ. ಅಂದರೆ ಹತ್ತು ವರ್ಷದವರೆಗಿನ ಮಕ್ಕಳಲ್ಲಿಯೂ ಕೇವಲ ಅನುಕರಿಸಿ ಬರೆಯುವುದಕ್ಕೆ, ಕಾಪಿರೈಟಿಂಗ್ ಪುಟಗಟ್ಟಲೆ ಬರೆಯುವುದಕ್ಕೆ ಒತ್ತಾಯಿಸದೆ, ‘ತಪ್ಪಾದರೂ ಪರವಾಗಿಲ್ಲ, ನಿಮಗನಿಸಿದ್ದನ್ನು ಬರೆಯಿರಿ, ಚಿತ್ರ ಬರೆಯಿರಿ, ‘ಇ’ ಅಕ್ಷರದಿಂದ ಇಲಿಯ ಚಿತ್ರ ಬರೆಯಲು ಸಾಧ್ಯವೇ ನೋಡಿ’ ಇತ್ಯಾದಿ ಅವಕಾಶಗಳನ್ನು ನೀಡಿದರೆ ಮಕ್ಕಳಲ್ಲಿ ಬರೆಯುವ ಬಗ್ಗೆ ಆಸಕ್ತಿ ಹುಟ್ಟಲು ಸಾಧ್ಯವಿದೆ.

ಪಾಠ ಕೇಳುತ್ತಾ ನೋಟ್ಸ್ ಮಾಡಬೇಕಾದಾಗ, ಲೆಕ್ಕ ಮಾಡುವಾಗ ಪೇಪರ್- ಪೆನ್ನು ಹಿಡಿದು ಮಧ್ಯೆ ಮಧ್ಯೆ ಬರೆಯುವುದು, ಅದೇ ಒಂದು ಪ್ರಬಂಧ ಬರೆಯಬೇಕಾದಾಗ ಟೈಪು ಮಾಡಿ ಸಮಯ ಉಳಿಸುವುದು ಇವು ಇಂದು ಹಿರಿಯರು ಮಕ್ಕಳಿಗೆ ಹಾಕಿಕೊಡಬೇಕಾದ ಮಾದರಿ.

ವಾಚಕರ ವಾಣಿ

ದೂರು ಸಲ್ಲಿಕೆ: ಚಾಲ್ತಿಯಲ್ಲಿದೆ ವ್ಯವಸ್ಥೆ

ತಪ್ಪೆಸಗುವ ಪೊಲೀಸರ ವಿರುದ್ಧ ದೂರು ನೀಡುವ ವ್ಯವಸ್ಥೆಯನ್ನು ಶೀಘ್ರ ಜಾರಿ ಮಾಡಲಾಗುವುದು ಎಂದು ಗೃಹ ಸಚಿವ ಆರಗ ಜ್ಞಾನೇಂದ್ರ ಅವರು ಹೇಳಿರುವುದನ್ನು ತಿಳಿದು ಅಚ್ಚರಿಯಾಯಿತು. ಯಾಕೆಂದರೆ ಪೊಲೀಸ್ ದೂರು ಪ್ರಾಧಿಕಾರ ಎಂಬ ಅಂತಹ ಒಂದು ವ್ಯವಸ್ಥೆ ಈಗಾಗಲೇ ಚಾಲ್ತಿಯಲ್ಲಿದೆ. ಖುದ್ದು ನಾನೇ 2017ರಲ್ಲಿ ಅದನ್ನು ಬಳಸಿಕೊಂಡು, ದೂರು ಸ್ವೀಕರಿಸದ ನಮ್ಮ ಏರಿಯಾದ ಇನ್‌ಸ್ಪೆಕ್ಟರ್ ವಿರುದ್ಧ ದೂರು ನೀಡಿ, ಕಮಿಷನರ್ ಕಚೇರಿಯಿಂದ ಸೂಕ್ತವಾದ ಹಿಂಬರಹವನ್ನು ಕೂಡ ಪಡೆದಿದ್ದೆ.

ಯಾವುದೇ ವ್ಯವಸ್ಥೆಯ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸುವುದು ಮುಖ್ಯ ಎಂಬುದು ಇದರಿಂದಲೇ ತಿಳಿಯುತ್ತದೆ. ಕೆಲವರಿಗೆ ಲಂಚ ಕೊಡುವುದು ಕಾನೂನುಬಾಹಿರ ಎಂಬ ಅರಿವೇ ಇರುವುದಿಲ್ಲ. ಅದೊಂದು ಸಹಜ ಪ್ರಕ್ರಿಯೆ ಎಂದುಕೊಂಡಿರುತ್ತಾರೆ. ಯಾವುದಾದರೂ ಸಮಸ್ಯೆಯ ಪರಿಹಾರಕ್ಕೆ ಒಂದು ಪ್ರಾಧಿಕಾರವೇ ದುಡಿಯುತ್ತಿದೆ ಎಂಬ ವಿಷಯವೇ ಆತನಿಗೆ ಗೊತ್ತಿಲ್ಲದಿದ್ದರೆ ಆತ ಎಲ್ಲಿಗೆ ತಾನೆ ದೂರು ನೀಡುತ್ತಾನೆ?

ರವಿಕಿರಣ್ ಶೇಖರ್, ಬೆಂಗಳೂರು

ನಿಸರ್ಗದ ಆರಾಧನೆಗೆ ಬೇಕಿರುವುದು ಕೃತಕ ಪರಿಸರವಲ್ಲ

ಜೋಗದ ಬಳಿ ಪಂಚತಾರಾ ಹೋಟೆಲ್‌ಗೆ ಅರಣ್ಯ ಭೂಮಿಯನ್ನು ಪರಭಾರೆ ಮಾಡುವ ನಿರ್ಧಾರ ಆಘಾತಕಾರಿಯಾದುದು. ಶಿವಮೊಗ್ಗದಿಂದ ಕೇವಲ ನೂರು ಕಿಲೊ ಮೀಟರ್ ದೂರದಲ್ಲಿರುವ ಜಲಪಾತದ ಹತ್ತಿರ ಇಂತಹ ಕಟ್ಟಡಗಳು ಅವಶ್ಯವೇ? ಪ್ರವಾಸಿಗರು ಉಳಿದುಕೊಳ್ಳಲು ಶಿವಮೊಗ್ಗ ಅಥವಾ ಕೇವಲ 30 ಕಿಲೊ ಮೀಟರ್ ದೂರದಲ್ಲಿರುವ ಸಾಗರದಲ್ಲಿ ಎಂತಹ ಪಂಚತಾರಾ ಹೋಟೆಲ್‌ಗಳನ್ನು ಬೇಕಾದರೂ ನಿರ್ಮಿಸಬಹುದಲ್ಲವೇ?

ಪಾರಂಪರಿಕ ಪ್ರಕೃತಿ ತಾಣಗಳನ್ನು ಮೂಲ ರೂಪದಲ್ಲಿ ಉಳಿಸಿಕೊಳ್ಳುವುದು ಆದ್ಯತೆಯಾಗಬೇಕೇ ವಿನಾ ಅಲ್ಲಿರುವ ಅರಣ್ಯ ನಾಶಪಡಿಸಿ ಕೃತಕ ಪರಿಕರಗಳನ್ನು ನಿರ್ಮಿಸುವುದಲ್ಲ. ಹಾಗೆಯೇ ರೋಪ್ ವೇ, ಜಿಪ್ ವೇಗಳ ಅವಶ್ಯಕತೆಯೂ ಇಲ್ಲ. ಅಲ್ಲಿನ ರುದ್ರ ರಮಣೀಯ ಸೌಂದರ್ಯವನ್ನು ಸವಿಯಲು ಸಂವೇದನಾಶೀಲ ಮನಸ್ಸು ಬೇಕೇ ವಿನಾ ಕೃತಕ ಪರಿಕರಗಳಲ್ಲ. ಕರ್ನಾಟಕದ ಹೆಮ್ಮೆಯಾದ ಜೋಗ ಜಲಪಾತದ ಸೌಂದರ್ಯವನ್ನು ಉಳಿಸಲು ಪರಿಸರ ಮಾರಕ ಅಭಿವೃದ್ಧಿಯನ್ನು ಮೊದಲು ತಡೆಯಬೇಕಾಗಿದೆ.

ಡಾ. ಎಸ್.ಶಿಶುಪಾಲ, ದಾವಣಗೆರೆ

ಕಟ್ಟಡ ಕುಸಿತ: ಹೊಣೆ ಯಾರು?

ಕಟ್ಟಡ ಕುಸಿತ ಪ್ರಕರಣಗಳು ದಿನೇ ದಿನೇ ಹೆಚ್ಚುತ್ತಿವೆ. ಕೆಲ ಘಟನೆಗಳಲ್ಲಿ ಪ್ರಾಣಾಪಾಯ ಸಂಭವಿಸದೇ ಇದ್ದರೂ ಇವುಗಳನ್ನು ಹಗುರವಾಗಿ ತೆಗೆದುಕೊಳ್ಳುವಂತಿಲ್ಲ. ಆಶ್ಚರ್ಯವೆಂದರೆ, ಇಂಥ ಪ್ರಕರಣಗಳು ನಡೆದಾಗ ಮಾತ್ರ ಬೃಹತ್ ಬೆಂಗಳೂರು ಮಹಾನಗರಪಾಲಿಕೆ (ಬಿಬಿಎಂಪಿ) ಎಚ್ಚೆತ್ತುಕೊಂಡು ವರದಿ ಕೇಳುವುದು, ಸಮಿತಿ ರಚಿಸುವುದು, ನೋಟಿಸ್ ಜಾರಿಯಂತಹ ಕೆಲಸಗಳನ್ನು ಮಾಡುತ್ತದೆ. ಇಂತಹ ಪ್ರಕ್ರಿಯೆಗಳು ಮತ್ತೆ ನೆನಪಾಗುವುದು ಮತ್ತೊಂದು ಕಟ್ಟಡ ಕುಸಿದಾಗಲೇ.

ಬಿಬಿಎಂಪಿ ಪ್ರಕಾರ, ದುಃಸ್ಥಿತಿಯಲ್ಲಿರುವ 178 ಕಟ್ಟಡಗಳನ್ನು 2019ರಲ್ಲಿ ಗುರುತಿಸಲಾಗಿತ್ತು. ಆದರೆ ಮಾಲೀಕರ ವಿರುದ್ಧ ಕ್ರಮವೂ ಇಲ್ಲ, ಅದರ ಮಾಹಿತಿಯೂ ಬಿಬಿಎಂಪಿ ಬಳಿ ಇಲ್ಲ. ಕೇವಲ ನಿಯೋಜನೆ ಆಧಾರದಲ್ಲಿ ಕೆಲಸ ಮಾಡುತ್ತಿರುವ ಸಿಬ್ಬಂದಿ, ಮತ್ತೆ ಮತ್ತೆ ಬದಲಾಗುವ ಆಯಕಟ್ಟಿನ ಅಧಿಕಾರಿಗಳು, ಜನಪ್ರತಿನಿಧಿಗಳ ಇಚ್ಛಾಶಕ್ತಿಯ ಕೊರತೆಯಿಂದಾಗಿ ಇನ್ನೇನು ನಿರೀಕ್ಷೆ ಇಟ್ಟುಕೊಳ್ಳಬಹುದು? ಪ್ರಸ್ತುತ ಪರಿಸ್ಥಿತಿಯಲ್ಲಿ, ದುಃಸ್ಥಿತಿಯಲ್ಲಿರುವ ಕಟ್ಟಡಗಳ ಮಾಲೀಕರಿಗೆ ಕಟ್ಟಡ ನೆಲಸಮ ಅಥವಾ ನವೀಕರಣಕ್ಕೆ ಸಂಬಂಧಿಸಿದಂತೆ ಮೊದಲು ಗಡುವು ನೀಡಬೇಕು. ನಿಗದಿತ ಗಡುವಿನೊಳಗೆ ಮಾಲೀಕರು ಯಾವುದೇ ಕ್ರಮ ಕೈಗೊಳ್ಳದೇ ಹೋದಲ್ಲಿ, ಬಿಬಿಎಂಪಿಯೇ ಮುಂದಾಗಿ ಇಂತಹ ಕಟ್ಟಡಗಳನ್ನು ನೆಲಸಮ ಮಾಡಬೇಕು. ಅದರ ಖರ್ಚನ್ನು ಮಾಲೀಕರೇ ಭರಿಸಬೇಕು. ಆಗ ಮಾತ್ರ ಕಟ್ಟಡ ಕುಸಿತ ಪ್ರಕರಣಗಳು ನಿಯಂತ್ರಣಕ್ಕೆ ಬರಲು ಸಾಧ್ಯ.

ಸುಘೋಷ ಸ. ನಿಗಳೆ, ಬೆಂಗಳೂರು

ಸಾವರ್ಕರ್, ತಿಲಕ್: ಮಿಥ್ಯೆ ದೂರವಾಗಲಿ

ಮತಾಂತರ ಕುರಿತ ನನ್ನ ಪತ್ರಕ್ಕೆ (ವಾ.ವಾ., ಸೆ. 25) ಪ್ರತಿಕ್ರಿಯಿಸಿರುವ ಡಿ.ಎಸ್.ನಾಗಭೂಷಣ ಅವರು (ವಾ.ವಾ., ಸೆ. 28) ಸ್ವಾಮಿ ವಿವೇಕಾನಂದರಾಗಲೀ, ಗೋಖಲೆಯವರಾಗಲೀ ಹಿಂದೂ ಧರ್ಮದ ಸುಧಾರಣೆಗೆ ಪಟ್ಟ ಪ್ರಯತ್ನಗಳನ್ನು ನಾನು ಉಲ್ಲೇಖಿಸಿಲ್ಲ ಎಂದು ಆಕ್ಷೇಪಿಸಿದ್ದಾರೆ. ಆದರೆ, ಇಂತಹ ಮಹನೀಯರು ನಡೆಸಿದ ಪ್ರಯತ್ನಗಳು ಈಗಾಗಲೇ ಎಲ್ಲರಿಗೂ ಗೊತ್ತಿವೆ. ಆದರೆ ನಮ್ಮ ಚರಿತ್ರೆಯಲ್ಲಿ ಇಂತಹುದೇ ಬಗೆಯಲ್ಲಿ ದನಿಯೆತ್ತಿದ ಇತರರ ಬಗ್ಗೆಯೂ ಜನರಿಗೆ ಗೊತ್ತಾಗಿ, ಅವರ ಬಗ್ಗೆ ವ್ಯವಸ್ಥಿತವಾಗಿ ಹಬ್ಬಿಸಿರುವ ಮಿಥ್ಯೆಗಳು ತುಸುವಾದರೂ ಮರೆಯಾಗಲಿ ಎನ್ನುವ ಉದ್ದೇಶದಿಂದಲೇ ನಾನು ಸಾವರ್ಕರ್, ಮುಖರ್ಜಿ, ತಿಲಕ್ ಮುಂತಾದವರ ಹೆಸರುಗಳನ್ನು ಉಲ್ಲೇಖಿಸಿದ್ದೆ.

ಸಾವರ್ಕರ್ ಅವರಿಗೆ ಅಂಡಮಾನಿನ ಜೈಲಿನಲ್ಲಿ ಮುಸ್ಲಿಂ ಸಿಬ್ಬಂದಿಯಿಂದ ಆದ ಕೆಟ್ಟ ಅನುಭವಗಳು ಅವರು ಹಿಂದುತ್ವದ ಪ್ರತಿಪಾದಕರಾಗುವಂತೆ ಮಾಡಿದವು. ಸಾವರ್ಕರರು ಅಸ್ಪೃಶ್ಯತೆಯ ನಿವಾರಣೆಗಾಗಿ ಶ್ರಮಿಸಿದವರು. ಕೈಗಾರಿಕೀಕರಣ, ನಗರೀಕರಣ ಮತ್ತು ವೈಜ್ಞಾನಿಕ ಮನೋಭಾವಗಳ ಪ್ರತಿಪಾದಕರಾಗಿದ್ದವರು. ‘ಸಾವರ್ಕರ್ ಅವರಂತಹ ಹತ್ತು ಜನರಿದ್ದರೆ ಸಾಕು, ಅಸ್ಪೃಶ್ಯತೆ ಈ ದೇಶದಿಂದ ಕೆಲವೇ ವರ್ಷಗಳಲ್ಲಿ ತೊಲಗಿ ಹೋಗುತ್ತದೆ’ ಎಂದು ಬಾಬಾಸಾಹೇಬರೇ ಹೇಳಿದ್ದಾರೆ.

ನಾಗಭೂಷಣರು ತಮ್ಮ ಪತ್ರದಲ್ಲಿ ತಿಲಕರನ್ನು ಪ್ರಶ್ನಿಸಿದ್ದಾರೆ. ಹಾಗೆ ನೋಡಿದರೆ, ಇವರು ಬಹುವಾಗಿ ಆರಾಧಿಸುವ ಗಾಂಧೀಜಿಯೂ ಅಸ್ಪೃಶ್ಯತೆ ನಿವಾರಣೆಯ ಬಗ್ಗೆ ದೀರ್ಘಕಾಲ ಸ್ಪಷ್ಟ ನಿಲುವಿಗೇ ಬಂದಿರಲಿಲ್ಲ. ಅವರು ವರ್ಣಾಶ್ರಮದ ಪರವಾಗಿದ್ದರು, ಗೋಮಾಂಸ ಸೇವನೆಯ ವಿರುದ್ಧವಾಗಿದ್ದರು. ಇಂಗ್ಲಿಷ್ ಶಿಕ್ಷಣ, ರೈಲ್ವೆ, ಅಂಚೆ, ಆಧುನಿಕ ಆಸ್ಪತ್ರೆ ಎಲ್ಲವನ್ನೂ ವಿರೋಧಿಸುತ್ತಿದ್ದರು. ನಮ್ಮಲ್ಲಿ ಹೆಚ್ಚಿನವರು ವೈವಿಧ್ಯ, ಪ್ರಜಾಸತ್ತೆ, ಜಾನಪದ, ಬುಡಕಟ್ಟು ಸಂಸ್ಕೃತಿಗಳ ಉಳಿವು, ಶೂದ್ರರು– ದಮನಿತರ ನಂಬಿಕೆಗಳು ಇತ್ಯಾದಿಗಳ ಬಗ್ಗೆ ರಮ್ಯವಾಗಿ ಮಾತನಾಡುತ್ತಾರಷ್ಟೆ. ಆದರೆ, ಇದೇ ಜನರು ಮತಾಂತರದಿಂದಾಗಿ ಏಕಾಕಾರದ ಸಂಸ್ಕೃತಿ ಮತ್ತು ಏಕದೇವತಾರಾಧನೆಯ ಗಂಡಾಂತರ ಹಬ್ಬುತ್ತಿದೆ ಎನ್ನುವುದರ ಬಗ್ಗೆ ತುಟಿ ಬಿಚ್ಚದೆ, ಜಾಣಮೌನಕ್ಕೆ ಶರಣಾಗುತ್ತಾರೆ. ಇದು ಪಲಾಯನವಾದ.

ಬಿ.ಎಸ್.ಜಯಪ್ರಕಾಶ ನಾರಾಯಣ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete.



ಮೈಸೂರಿನ ಲಕ್ಷ್ಮಿ ಚಿತ್ರಮಂದಿರ ಮುಚ್ಚಲಾಗಿದೆ

ಚಿತ್ರೋದ್ಯಮ ಕೋವಿಡ್ ನೆರಳಲ್ಲಿ ನಿರೀಕ್ಷೆಯ ಚುಂಗು

• ವಿಶಾಖ ಎನ್.

'ಸಲಗ', 'ಕೋಟಿಗೊಬ್ಬ3' ತರಹದ ದೊಡ್ಡ ಕನ್ನಡ ಚಿತ್ರಗಳು ಆಯುಧಪೂಜೆಯ ಬೂದುಕುಂಬಳದ ಮೇಲಿನ ಕರ್ಪೂರ ಉರಿಯುವ ಹೊತ್ತಿಗೆ ಕೋವಿಡ್‌ನ ಸಂಕಷ್ಟಗಳ ಸುಟ್ಟುಹಾಕಬಹುದೇನೋ ಎಂಬ ನಿರೀಕ್ಷೆಯ ಮಿಂಚು ಒಂದು ಕಡೆ. ಎಪ್ಪತ್ತೆರಡು ವರ್ಷ ಮೈಸೂರಿನ ಚಿತ್ರರಸಿಕರಿಗೆ ಸಿನಿಮಾಗಳ ದರ್ಶನ ಮಾಡಿಸಿಯೂ ಒಂದೂವರೆ ವರ್ಷದ ಸಾಂಕ್ರಾಮಿಕ ರೋಗದ ಹೊಡೆತಕ್ಕೆ ನಲುಗಿ 'ಸ್ಕ್ರೀನ್ ಡೌನ್' ಮಾಡಿದ ಲಕ್ಷ್ಮಿ ಚಿತ್ರಮಂದಿರದ ಮಾಲೀಕರು ಇನ್ನೊಂದು ಕಡೆ. ಕನ್ನಡ ಚಿತ್ರರಂಗ ಒಂದು ಕೈಯಲ್ಲಿ ನಿರೀಕ್ಷೆಯ ಚುಂಗು ಹಿಡಿದು, ಇನ್ನೊಂದು ಕೈಯನ್ನು ಆತಂಕ ಮತ್ತೆ ಅಪ್ಪಳಿಸೀತೇ ಎಂಬ ಆತಂಕದಲ್ಲಿ ನಡುಗಿಸುತ್ತಾ ಇರುವಂತಿದೆ ಎನ್ನುವುದರ ಪ್ರತೀಕವಿದು.

ದುನಿಯಾ ವಿಜಯ್ ನಿರ್ದೇಶಿಸಿ, ನಟಿಸಿರುವ 'ಸಲಗ' ದಸರಾ ಹಬ್ಬದ ಹೊತ್ತಿಗೆ ತೆರೆಕಾಣುವುದು ನಿಕ್ಕಿಯಾಗಿದೆ. ಸುದೀಪ್ ಅಭಿನಯದ 'ಕೋಟಿಗೊಬ್ಬ 3' ಕೂಡ ದರ್ಶನ ನೀಡಲು ಸಿದ್ಧ. ಆಮೇಲೆ ಶಿವರಾಜ್‌ಕುಮಾರ್ ನಾಯಕರಾಗಿರುವ 'ಬಜರಂಗಿ 2', ಉಪೇಂದ್ರ ಅಭಿನಯದ 'ಕಬ್ಜ', ಸುದೀಪ್ ನಟನೆಯ ಪ್ಯಾನ್ ಇಂಡಿಯಾ ಚಿತ್ರ 'ವಿಕ್ರಾಂತ್ ರೋಣ' ತೆರೆಕಾಣುವ ನಿರೀಕ್ಷೆ ಇದೆ. ಕೋವಿಡ್ ಕಾರಣದಿಂದಾಗಿ ಮನೆಯೊಳಗೆ ಕುಳಿತಿದ್ದ ಪ್ರೇಕ್ಷಕರನ್ನು ಎಳೆದು ಚಿತ್ರಮಂದಿರಕ್ಕೆ ತರುವ ಸಾಧ್ಯತೆ ಇರುವುದು ಈ ಚಿತ್ರಗಳಿಗೆ ಎನ್ನಲಾಗುತ್ತಿದೆ. ಈ ನಿರೀಕ್ಷೆಯ ಎಳೆಬಿಸಿಲಲ್ಲಿಯೂ ಕೋವಿಡ್ ಕರಿನೆರಳೇ ಕಾಡುತ್ತಿರುವುದು ಸ್ಪಷ್ಟ.


ಜೈರಾಜ್

ವಿತರಕರು ಹಾಗೂ ಪ್ರದರ್ಶಕರ ಸಂಕಷ್ಟಗಳ ಸೂಕ್ಷ್ಮವನ್ನು ಬಲ್ಲವರು ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ ನಿರ್ದೇಶಕ ಜೈರಾಜ್. ಖುದ್ದು ಆ ಚಟುವಟಿಕೆಯಲ್ಲಿ ತೊಡಗಿಸಿಕೊಂಡಿದ್ದರಿಂದ ಆ ವಲಯಗಳ ವಸ್ತುಸ್ಥಿತಿಯ ಅರಿವು ಅವರಿಗೆ ಇದೆ.

'ಕೋವಿಡ್ ಎರಡನೇ ಸಲ ಕಾಡಿತು. ಮುಂದೆಯೂ ಮರುಕಳಿಸಬಹುದು. ಆರೋಗ್ಯವೇ ಮುಖ್ಯ, ನಂತರ ಸಿನಿಮಾ. ಹೀಗಾಗಿಯೇ ಚಿತ್ರೋದ್ಯಮದ ಎಲ್ಲರೂ ಸಾಮಾಜಿಕ ಹೊಣೆಗಾರಿಕೆಯಿಂದಲೇ ವರ್ತಿಸಬೇಕು. ಆದರೂ ಈಗ ಇರುವ ಷರತ್ತುಗಳನ್ನು ಕುರಿತು ಕೆಲವು ಪ್ರಶ್ನೆಗಳಿವೆ. ಗರ್ಭಿಣಿಯರಿಗೆ ಚಿತ್ರಮಂದಿರಕ್ಕೆ ಪ್ರವೇಶವಿಲ್ಲ ಎಂಬ ನಿಬಂಧನೆ ಈಗ ಇದೆ. ತುಂಬುಗರ್ಭಿಣಿಯಾದರೆ ಗೊತ್ತಾಗುತ್ತದೆ. ಆದರೆ, ಮೂರರಿಂದ ಆರು ತಿಂಗಳ ಗರ್ಭಿಣಿಯರನ್ನು ಸುಲಭವಾಗಿ ಗುರುತು ಮಾಡಲಾಗದು. ಇಂತಹ ನಿಯಮಗಳನ್ನು ಪರಾಮರ್ಶಿಸಬೇಕಾಗುತ್ತದೆ' ಎನ್ನುತ್ತಾ ಜೈರಾಜ್ ಮಾತಿಗೆ ತೆರೆದುಕೊಂಡರು.

ಮೈಸೂರಿನ ಲಕ್ಷ್ಮಿ ಚಿತ್ರಮಂದಿರ ಮುಚ್ಚಿಹೋದ ಪ್ರಸಂಗವನ್ನು ಅವರು ಕೋವಿಡ್ ಒಡ್ಡಿರುವ ಸಂಕಷ್ಟಕ್ಕೆ ಉದಾಹರಣೆಯಾಗಿ ನೀಡಿದರು. ಏಳೂವರೆ-ಎಂಟು ಲಕ್ಷ ರೂಪಾಯಿಯಷ್ಟು ಆಸ್ತಿ ತೆರಿಗೆಯ ಭಾರ ಆ ಚಿತ್ರಮಂದಿರದವರಿಗೆ ಇತ್ತು ಎನ್ನುವುದು ಇವರ ಗಮನಕ್ಕೆ ಬಂದಿದೆ. 'ಏಕಪರದೆ ಚಿತ್ರಮಂದಿರಗಳ ಮಾಲೀಕರು ಬಹುತೇಕ ಎರಡು ವರ್ಷಗಳಲ್ಲಿ ಯಾವ ಸಿನಿಮಾ ಪ್ರದರ್ಶನವೂ ಇಲ್ಲದೆ ನಲುಗಿದ್ದಾರೆ. ಪರವಾನಗಿಗಳು, ಜಿಎಸ್‌ಟಿ, ಆಸ್ತಿ ತೆರಿಗೆ ಹೀಗೆ ವರ್ಷಕ್ಕೆ ಲಕ್ಷಗಟ್ಟಲೆ ಹಣವನ್ನು ತೆರುತ್ತಾ ಬಂದಿರುವ ಅವರೆಲ್ಲ ಈಗ ಹೈರಾಣಾಗಿರುವುದು ನಿಜ. ಕೋವಿಡ್ ಬಂದಮೇಲೆ ಆದಾಯವೇ ಇಲ್ಲದೇ ಇರುವಾಗ ತೆರಿಗೆಗಳು ಭಾರ ಎನಿಸುವುದು ಸಹಜ' ಎಂದು ವಸ್ತುಸ್ಥಿತಿಗೆ ಕನ್ನಡಿ ಹಿಡಿದರು.

ಕೋವಿಡ್ ಎಂಬ 'ಸ್ಪೆಷಲ್ ಕ್ಲಾಸ್'



ಹಿಂದೆ ಎಷ್ಟೋ ಸಾಂಕ್ರಾಮಿಕ ರೋಗಗಳು ಬಂದುಹೋಗಿವೆ. ಬದುಕೇ ಮನುಷ್ಯನಿಗೆ ಪಾಠ ಕಲಿಸುತ್ತಿರುತ್ತದೆ. ಕೋವಿಡ್ ಎನ್ನುವುದು 'ಸ್ಪೆಷಲ್ ಕ್ಲಾಸ್' ಇದ್ದಂತೆ. ಎರಡು ವರ್ಷ ಆರೋಗ್ಯ ಮುಖ್ಯ ಎಂದು ಕುಟುಂಬದವರ ಜತೆಗೇ ಜನರು ಇದ್ದರು. ಈಗ ಮತ್ತೆ ಸುಖಲೋಲುಪರಾಗುತ್ತಿಲ್ಲವೇ? ಚಿತ್ರೋದ್ಯಮವಷ್ಟೇ ಅಲ್ಲ, ಸಣ್ಣಸಣ್ಣ ಉದ್ದಿಮೆಗಳೂ ಹೊಡೆತ ತಿಂದಿವೆ. ಎಲ್ಲ ಸರಿಯಾಗಿದ್ದಿದ್ದರೆ ನಾನು ನಿರ್ದೇಶಿಸುತ್ತಿರುವ 'ಗಾಳಿಪಟ2' ತೆರೆಕಂಡು ವರ್ಷವಾಗಿರುತ್ತಿತ್ತು. ಈಗ ಅಂತಿಮ ಹಂತದ ಕೆಲಸದಲ್ಲಿದ್ದೇನೆ. ಇಂತಹ ಬದಲಾವಣೆಗಳು ಹಲವು ಉದ್ಯಮಗಳ ಮೇಲೆ ಆಗಿದೆ.

ಯೋಗರಾಜ್ ಭಟ್, ಚಿತ್ರ ನಿರ್ದೇಶಕ

ಕೋವಿಡ್ ಕಾಲವೇ 'ವರ'ವಾದದ್ದು...



ಕಳೆದ ವರ್ಷ ನವೆಂಬರ್‌ನಲ್ಲಿ 'ಆ್ಯಕ್ಟ್-1978' ಚಿತ್ರವನ್ನು ರಿಸ್ಕ್ ತೆಗೆದುಕೊಂಡು ಬಿಡುಗಡೆ ಮಾಡಿದೆವು. ಆಗ ಚಿತ್ರಮಂದಿರಗಳಲ್ಲಿ ಶೇ 50 ಸೀಟುಗಳ ಭರ್ತಿಗಷ್ಟೆ ಅವಕಾಶವಿತ್ತು. ಜನರು ಸಿನಿಮಾ ಮೆಚ್ಚಿ, ಬಾಯಿಂದ ಬಾಯಿಗೆ ವಿಮರ್ಶೆ ಹರಿದು, ಚಿತ್ರಮಂದಿರಗಳಿಗೆ ಬಂದದ್ದು ನಿಜ. ಏಳೆಂಟು ಪರದೆಗಳಲ್ಲಿ 75 ದಿನಗಳವರೆಗೆ ಸಿನಿಮಾ ಓಡಿತು. ಒಂದುವೇಳೆ ಆ ಸಂದರ್ಭದಲ್ಲಿ ಶೇ 100ರಷ್ಟು ಸೀಟುಗಳು ಭರ್ತಿಯಾಗಿದ್ದಿದ್ದರೆ ನಮಗೆ ಇನ್ನೂ ಒಳ್ಳೆಯದಾಗುತ್ತಿತ್ತು. ದೊಡ್ಡ ಚಿತ್ರಗಳ ಪ್ರಚಾರದ ಭರಾಟೆ ಇಲ್ಲದ ಸಂದರ್ಭ ನಮ್ಮ ಚಿತ್ರಕ್ಕೆ ಅನುಕೂಲಕರವಾಗಿ ಒದಗಿಬಂತು.

ಮನ್ಸೋರೆ, ಆ್ಯಕ್ಟ್-1978 ಚಿತ್ರದ ನಿರ್ದೇಶಕ

ಬರೆ ಹಾಕಿದ ಸಾಂಕ್ರಾಮಿಕ



ಹದಿನೆಂಟು ವರ್ಷಗಳಿಂದ ಚಿತ್ರರಂಗದಲ್ಲಿ ಲೈಟಿಂಗ್ ಯೂನಿಟ್ ಇಟ್ಟುಕೊಂಡು ಕೆಲಸ ಮಾಡುತ್ತಿದ್ದೇವೆ. ನನ್ನಲ್ಲಿ 20 ಮಂದಿ ಕೆಲಸ ಮಾಡುತ್ತಾರೆ. ಕೋವಿಡ್ ಬಂದಮೇಲೆ 8–10 ಲಕ್ಷ ರೂಪಾಯಿ ಬಾಕಿ ಬರಬೇಕಾದ ಹಣ ಹಾಗೆಯೇ ಉಳಿಯಿತು. ಬೆಂಗಳೂರಿನ ಲಗ್ಗೆರೆಯಲ್ಲಿದ್ದ ಬಾಡಿಗೆ ಮನೆಗೆ ಹಣ ಕಟ್ಟಲೂ ಕಷ್ಟವಾಯಿತು. ಹೆಂಡತಿ-ಮಗುವನ್ನು ಸ್ವಂತ ಊರು ಹಾಸನಕ್ಕೆ ಕಳುಹಿಸಿ, ನಾನು ಯೂನಿಟ್ ಕಚೇರಿಯಲ್ಲೇ ಮಲಗತೊಡಗಿದೆ. ಕೋವಿಡ್ ಮೊದಲ ಅಲೆ ಬಂದಾಗ ಕೆಲವರು ರೇಷನ್ ಕೊಡಿಸಿ, ಸಹಾಯ ಮಾಡಿದರು. ಎರಡನೇ ಅಲೆ ಕಂಗಾಲಾಗಿಸಿತು. ನಟ ಯಶ್ ಅವರು ನಮ್ಮ ಬ್ಯಾಂಕ್ ಖಾತೆಗೆ ಐದು ಸಾವಿರ ರೂಪಾಯಿ ಹಾಕಿದ ದಿನ ರೇಷನ್ ತಂದೆವು. ಅವತ್ತು ನಮಗೆಲ್ಲ ಪರಮಾನಂದವಾಗಿತ್ತು. ಈಗ ಪರಿಸ್ಥಿತಿ ಸುಧಾರಿಸುವಂತೆ ಕಾಣುತ್ತಿದೆ. ಎಲ್ಲ ಸರಿಹೋದರೆ ಹೆಂಡತಿ-ಮಗುವನ್ನು ವಾಪಸ್ ಕರೆಯುವೆ.

ಪ್ರದೀಪ್ ಕುಮಾರ್, ರಾಯಲ್ ಸಿನಿ ಲೈಟ್ಸ್ ಯೂನಿಟ್ ಮಾಲೀಕ


ಡಿ.ಕೆ. ರಾಮಕೃಷ್ಣ

ಗುಜರಾತ್‌ನಲ್ಲಿ ಚಿತ್ರಮಂದಿರಗಳವರಿಗೆ ಕೆಲವು ಅನುಕೂಲಗಳನ್ನು ಅಲ್ಲಿನ ಸರ್ಕಾರ ಮಾಡಿಕೊಟ್ಟಿರುವುದನ್ನು ಉದಾಹರಣೆಯಾಗಿ ನೀಡುವ ಜೈರಾಜ್, ಇಲ್ಲಿಯೂ ಸರ್ಕಾರ ಅಂತಹ ರಿಯಾಯಿತಿ ಕೊಟ್ಟರೆ ಚಿತ್ರೋದ್ಯಮ ಕೂಡ ಚೇತರಿಸಿಕೊಳ್ಳಬಲ್ಲದೆನ್ನುತ್ತಾರೆ. ಮಲ್ಟಿಪ್ಲೆಕ್ಸ್‌ಗಳ ಕಾರ್ಪೊರೇಟ್ ಸಾಂಸ್ಥಿಕ ಸ್ವರೂಪಕ್ಕೆ ಇಂತಹ ಹೊಡೆತಗಳನ್ನು ತಡೆದುಕೊಳ್ಳುವ ಚೈತನ್ಯ ಇರಬಹುದು, ಏಕಪರದೆ ಚಿತ್ರಗಳ ಮಾಲೀಕರಿಗೆ ಇಲ್ಲ ಎನ್ನುವುದು ಅವರ ವಾದ.

ಕೋವಿಡ್ ಪತ್ತೆ ಪ್ರಮಾಣ ಶೇ 1ಕ್ಕಿಂತ ಕಡಿಮೆ ಇರುವೆಡೆ ಚಿತ್ರಮಂದಿರಗಳಲ್ಲಿ ಶೇ 100 ಸೀಟುಗಳನ್ನು ಭರ್ತಿ ಮಾಡಬಹುದು ಎಂದು ಸರ್ಕಾರ ಆದೇಶಿಸಿರುವುದಕ್ಕೆ ನಿರ್ಮಾಪಕ ಸಂಘದ ಅಧ್ಯಕ್ಷ ಡಿ.ಕೆ. ರಾಮಕೃಷ್ಣ ಮೆಚ್ಚುಗೆ ವ್ಯಕ್ತಪಡಿಸಿದರು. ಅವರೂ 'ಸಲಗ', 'ಕೋಟಿಗೊಬ್ಬ3' ಚಿತ್ರಗಳ ಟಾನಿಕ್‌ನ ನಿರೀಕ್ಷೆಯಲ್ಲೇ ಇದ್ದಾರೆ.

'ಟಿ.ವಿ. ಚಾನೆಲ್‌ಗಳು, ಒಟಿಟಿಗಳಿಗೆ ಪ್ರೇಕ್ಷಕರ ಕಣ್ಣುಗಳು ಹೊಂದಿಕೊಂಡಿರುವ ಹೊತ್ತಿದು. ಪ್ರೇಕ್ಷಕರು ಚಿತ್ರಮಂದಿರಗಳಿಗೆ ಬರುವುದು ಕಷ್ಟ. ಆದರೂ ದಸರಾ ಸಂದರ್ಭ ಹಬ್ಬದ ವಾತಾವರಣ ಮೂಡಿಸಿದೆ. ಇಂತಹ ಸಂದರ್ಭಗಳು ಸೃಷ್ಟಿಯಾದರೆ ಮಾತ್ರ ಮನರಂಜನಾ ಉದ್ಯಮ ಚೇತರಿಸಿಕೊಳ್ಳಲು ಸಾಧ್ಯ' ಎನ್ನುತ್ತಾರೆ ರಾಮಕೃಷ್ಣ.

ಕೋವಿಡ್ ನಂತರ ಚಿತ್ರ ನಿರ್ಮಾಣದಲ್ಲಿ ಏನೆಲ್ಲ ಬದಲಾವಣೆಗಳನ್ನು ನಿರ್ಮಾಪಕರು ತರಬಹುದು ಎಂಬ ಪ್ರಶ್ನೆಗೆ ಅವರು ಉತ್ತರಿಸಿದ್ದು ಹೀಗೆ: 'ಚಿತ್ರ ನಿರ್ಮಾಣದ ಬಜೆಟ್ ಅನ್ನು ಶೇ 10–20ರಷ್ಟು ಕಡಿಮೆ ಮಾಡಲೇಬೇಕಿದೆ. ಕಲಾವಿದರು ಸಂಕಷ್ಟದ ಈ ಹೊತ್ತಿನಲ್ಲಿ ಸಂಭಾವನೆಯನ್ನು ತಗ್ಗಿಸಿಕೊಂಡು ಸಹಕರಿಸಬೇಕು. ದೊಡ್ಡ ನಟ-ನಟಿಯರು, ಪೋಷಕ ನಟ-ನಟಿಯರು ಕ್ಯಾರವಾನ್‌ಗಳು, ಬಾಡಿಗಾರ್ಡ್‌ಗಳನ್ನು ಬಯಸುತ್ತಾರೆ. ಇವೆಲ್ಲವೂ ನಿರ್ಮಾಪಕರಿಗೆ ಹೆಚ್ಚುವರಿ ವೆಚ್ಚದಂತೆ ಇಂತಹ ಸಂದರ್ಭದಲ್ಲಿ ಕಾಣುತ್ತದೆ. ಇವನ್ನೆಲ್ಲ ಕಡಿತಗೊಳಿಸಿ, ಚಿತ್ರೋದ್ಯಮ ಚೇತರಿಸಿಕೊಳ್ಳುವಂತೆ ಮಾಡಬೇಕು. ಪರಿಸ್ಥಿತಿ ಮೊದಲಿನಂತೆ ಆದಮೇಲೆ ನಟ-ನಟಿಯರು ತಮ್ಮ ಇಷ್ಟದಂತೆಯೇ ಈ ಬೇಡಿಕೆಗಳನ್ನು ಮತ್ತೆ ಮುಂದಿಡಬಹುದು. ಚಿತ್ರಮಂದಿರಗಳ ಮಾಲೀಕರು ಬಾಡಿಗೆಯನ್ನು ಪ್ರದರ್ಶನದ ಗಳಿಕೆಯ ಪ್ರತಿಶತದ ಆಧಾರದ ಮೇಲೆ ನಿಗದಿಗೊಳಿಸಬೇಕು. ಈ ಎಲ್ಲ ವಿಷಯಗಳ ಕುರಿತು ನಿರ್ಮಾಪಕರೆಲ್ಲ ಸೇರಿ ಚರ್ಚಿಸಲಿದ್ದೇವೆ. ದೊಡ್ಡ ನಟರ ಸಿನಿಮಾಗಳು ಪ್ರೇಕ್ಷಕರನ್ನು ಮರಳಿ ಚಿತ್ರಮಂದಿರಕ್ಕೆ ಒಂದಿಷ್ಟು ಕಾಲ ಎಳೆದು ತಂದರಷ್ಟೆ ಮತ್ತೆ ಚಿತ್ರೋದ್ಯಮ ಹಳಿಗೆ ಮರಳಬಲ್ಲದು' ಎನ್ನುವುದು ರಾಮಕೃಷ್ಣ ಅವರ ನಂಬಿಕೆ.


ಜಾಕ್ ಮಂಜು

'ವಿಕ್ರಾಂತ್ ರೋಣ' ನಿರ್ಮಾಪಕ ಜಾಕ್ ಮಂಜು ಈ ಸಿನಿಮಾ ಮೇಲೆ ದೊಡ್ಡ ಮೊತ್ತವನ್ನು ಹೂಡಿದವರು. ಚಿತ್ರೋದ್ಯಮದಲ್ಲಿ ಹಲವು ವರ್ಷಗಳಿಂದ ತೊಡಗಿರುವ ಅವರು ಇಡೀ ವ್ಯವಸ್ಥೆಯನ್ನು ತಮ್ಮದೇ ದೃಷ್ಟಿಕೋನದಲ್ಲಿ ವಿಶ್ಲೇಷಣೆ ಮಾಡುತ್ತಾರೆ.

'ಮನರಂಜನೆ ಬಹಳ ಮುಖ್ಯ. ಹಾಗೆಂದು ಚಿತ್ರೋದ್ಯಮ ಎಲ್ಲಿ ಚಿಕ್ಕದಾಗಿಬಿಡುವುದೋ ಎಂಬ ಭಯವೂ ಇದೆ. ಮಕ್ಕಳು, ಗರ್ಭಿಣಿಯರನ್ನು ಚಿತ್ರಮಂದಿರಗಳಿಗೆ ಬಿಡೊಲ್ಲ ಅಂತಾರೆ. ಹಾಗಿದ್ದಮೇಲೆ ಮನೆಯಲ್ಲೇ ಮಕ್ಕಳನ್ನು ಬಿಟ್ಟು ಎಷ್ಟೋ ಸಂಸಾರಸ್ಥರು ಸಿನಿಮಾ ನೋಡಲು ಬರೊಲ್ಲ.'

ನಮ್ಮ ರಾಜ್ಯದಲ್ಲಿ ಸರ್ಕಾರ, ಚಿತ್ರೋದ್ಯಮಕ್ಕೆ ಸಂಬಂಧಿಸಿದ ಸಂಘ-ಸಂಸ್ಥೆಗಳೆಲ್ಲ ದೊಡ್ಡ ಹೆಜ್ಜೆಗಳನ್ನು ಇಡಲೇ ಇಲ್ಲ. ಮಲಯಾಳ ಚಿತ್ರರಂಗ ಹದಿನೈದು ವರ್ಷಗಳ ಹಿಂದೆ ಕನ್ನಡ ಚಿತ್ರರಂಗಕ್ಕೆ ಸಮನಾಗಿ ಇದ್ದಂತೆ ಇತ್ತು. ಈಗ ಅದು ಸಾಕಷ್ಟು ಮುಂದಕ್ಕೆ ಹೋಗಿದೆ. ಅಲ್ಲಿನ ಸರ್ಕಾರದಲ್ಲಿ ಸಿನಿಮಾಗೇ ಪ್ರತ್ಯೇಕ ಖಾತೆ ಇದೆ. ಹಿಂದೆ ಆಂಧ್ರದವರು ಹೊಸ ಸಾಧ್ಯತೆಗಳನ್ನು ಹುಡುಕುವುದರಲ್ಲಿ ಮಾದರಿಗಳನ್ನು ಸೃಷ್ಟಿಸಿದ್ದರು. ಅಲ್ಲಿನ 'ಮಾ' ಎಂಬ ಟಿ.ವಿ. ಚಾನೆಲ್‌ಗೆ ಅನೇಕರು ಚಿತ್ರಗಳ ಹಕ್ಕುಗಳನ್ನು ಮಾರಿಕೊಂಡರು. ಆ ಚಾನೆಲ್ ಉದ್ಧಾರವಾಯಿತು. ಆಮೇಲೆ ಅದನ್ನು ಸ್ಟಾರ್ ಸಮೂಹ ಖರೀದಿಸಿತು. ಇದರಿಂದ ಆ ಚಾನೆಲ್‌ನವರಿಗೆ ಲಾಭವಾಯಿತು. ಅದಕ್ಕೆ ಹಕ್ಕುಗಳನ್ನು ಮಾರಿದ ನಮ್ಮ ಚಿತ್ರ ನಿರ್ಮಾಪಕರು ಮೊದಲಿನ ಸ್ಥಿತಿಯಲ್ಲೇ ಉಳಿದರು. 'ಆಹಾ' ಎಂಬ ಇನ್ನೊಂದು ಚಾನೆಲ್ ಈಗ ಇದೇ ಕೆಲಸವನ್ನು ಮಾಡುತ್ತಿದೆ. ಕನ್ನಡದಲ್ಲಿ ಈ ರೀತಿಯ ಕನ್ನಡತನವನ್ನು ಪೋಷಿಸುವಂಥ ಚಾನೆಲ್‌ಗಳಾಗಲೀ, ಒಟಿಟಿ ವೇದಿಕೆಗಳಾಗಲೀ ಇಲ್ಲ. ಅದು ದೊಡ್ಡಮಟ್ಟದಲ್ಲಿ ಆಗಬೇಕು. ಸರ್ಕಾರವೇ ಇಂತಹ ವೇದಿಕೆಗಳನ್ನು ಸೃಷ್ಟಿಸಬಹುದು. ಸಬ್ಸಿಡಿ ಕೊಡುವುದನ್ನು ನಿಲ್ಲಿಸಿ, ಇಂತಹ ಕೆಲಸಗಳನ್ನು ಮಾಡಿದರೆ ನಾವು ಸಾಂಸ್ಥಿಕವಾಗಿ ಗಟ್ಟಿಯಾಗುತ್ತೇವೆ. ಆಗ ಕಾರ್ಪೊರೇಟ್ ಜನರೂ ನಮ್ಮತ್ತ ನೋಡುತ್ತಾರೆ. ಕೆಜಿಎಫ್, ವಿಕ್ರಾಂತ್ ರೋಣ, ಕಬ್ಜ ಇವಿಷ್ಟೇ ಚಿತ್ರಗಳಲ್ಲ. ಸಣ್ಣ ಬಜೆಟ್‌ನಲ್ಲಿ ಗಟ್ಟಿ ವಸ್ತುಗಳನ್ನು ಇಟ್ಟುಕೊಂಡು ತಯಾರಾಗುವ ಸಿನಿಮಾಗಳನ್ನೂ ನೋಡುವ ಪ್ರೇಕ್ಷಕರ ಸಂಖ್ಯೆಯನ್ನು ಹೆಚ್ಚಿಸಿಕೊಳ್ಳುವಷ್ಟು ದೊಡ್ಡ ಪ್ರಯತ್ನ ನಮ್ಮಲ್ಲಿ ಆಗಬೇಕು. ಚಿತ್ರರಂಗದವರು ರಾಜಕೀಯ ಮೊಗಸಾಲೆ ಪ್ರವೇಶಿಸಿದರೂ ಇಂತಹ ಕೆಲಸಗಳು ಆಗದಿರುವುದು ವಿಷಾದದ ಸಂಗತಿ.

'ಅಮೆಜಾನ್, ನೆಟ್‌ಫ್ಲಿಕ್ಸ್ ರೀತಿಯ ವೇದಿಕೆಗಳು ಕನ್ನಡದವರನ್ನು ಮೂಸಿಯೂ ನೋಡುತ್ತಿಲ್ಲ. ಇದನ್ನು ತಪ್ಪಿಸಬೇಕು. ಮೈಸೂರು ವಿಶ್ವವಿದ್ಯಾಲಯದಲ್ಲಿ ಸಿನಿಮಾ ವ್ಯಾಕರಣ ಕಲಿಸುವ ಕೋರ್ಸ್ ಇದೆ. ಅಲ್ಲಿ ಕಲಿತವರು ಮುಂದೆ ನಮ್ಮ ನೆಲದಲ್ಲೇ ಕೆಲಸ ಮಾಡಬೇಕೆಂದರೆ ಇಂತಹ ಸೃಜನಶೀಲ ವೇದಿಕೆಗಳನ್ನು ಸೃಷ್ಟಿಸಬೇಕಲ್ಲವೇ' ಎಂದು ಜಾಕ್ ಮಂಜು ಗಂಭೀರ ಪ್ರಶ್ನೆಯನ್ನು ಮುಂದಿಟ್ಟರು.


ಎಚ್. ರಾಜು

ಕಾಸ್ಟ್ಯೂಮರ್ ಆಗಿ ಕೆಲಸ ಮಾಡುವ ಬೆಂಗಳೂರಿನ ಎಚ್. ರಾಜು ಕೋವಿಡ್ ಸಂಕಷ್ಟ ಕಾಲದಲ್ಲಿ ಮಾಸ್ಕ್ ಹೊಲಿದುಕೊಟ್ಟು, ಬಟ್ಟೆಗಳನ್ನು ಆಲ್ಟರ್ ಮಾಡಿಕೊಟ್ಟು ಬದುಕು ನಡೆಸಿದ್ದರು. ಈಗ ಚಿತ್ರಮಂದಿರಗಳು ಹೌಸ್‌ಫುಲ್ ಆಗಲಿವೆ ಎಂಬ ಸುದ್ದಿ ಅವರ ಮುಖದಲ್ಲಿ ಮಂದಹಾಸ ಮೂಡಿಸಿದೆ.


ದೆಹಲಿ ಸಮೀಪದ ಕಲ್ಲಿದ್ದಲು ವಿದ್ಯುತ್ ಸ್ಥಾವರ–ಸಂಗ್ರಹ ಚಿತ್ರ

ಕಲ್ಲಿದ್ದಲು ಮಾಲಿನ್ಯ: ಅಕಾಲಿಕ ಮರಣ ಶೇ 60ರಷ್ಟು ಹೆಚ್ಚಳ

ಮುಂಬೈ: ಜಗತ್ತಿನ ಇತರ ಪ್ರಮುಖ ನಗರಗಳಲ್ಲಿ ವಾಸಿಸುತ್ತಿರುವ ಜನರಿಗೆ ಹೋಲಿಸಿದರೆ ಬೆಂಗಳೂರು, ದೆಹಲಿ, ಮುಂಬೈ, ಕೋಲ್ಕತ್ತ ಮತ್ತು ಚೆನ್ನೈನಲ್ಲಿ ವಾಸಿಸುವ ಜನರು ಕಲ್ಲಿದ್ದಲು ಸಂಬಂಧಿತ ಮಾಲಿನ್ಯದಿಂದ ಕೆಟ್ಟ ಆರೋಗ್ಯ ಮತ್ತು ಆರ್ಥಿಕ ಪರಿಣಾಮಗಳನ್ನು ಅನುಭವಿಸುತ್ತಿದ್ದಾರೆ.

ದೇಶದಲ್ಲಿ ಈಗ ಅಸ್ತಿತ್ವದಲ್ಲಿರುವ ಕಲ್ಲಿದ್ದಲು ವಿದ್ಯುತ್ ಸ್ಥಾವರಗಳು ಮತ್ತು ಮುಂಬರುವ ದಿನಗಳಲ್ಲಿ ಕಲ್ಲಿದ್ದಲು ಘಟಕಗಳನ್ನು ವಿಸ್ತರಿಸುವ ವಿವಿಧ ಯೋಜನೆಗಳನ್ನು ಪರಿಶೀಲನೆಗೆ ಒಳಪಡಿಸಿ, 'ಸಿ40 ಸಿಟೀಸ್' ಸಂಸ್ಥೆಯು ಅಧ್ಯಯನ ವರದಿಯನ್ನು ಬುಧವಾರ ಬಿಡುಗಡೆ ಮಾಡಿದೆ.

'ಪ್ರಸ್ತುತ ಕಲ್ಲಿದ್ದಲು ಯೋಜನೆಗಳು ಭಾರತದ ಪ್ರಮುಖ ನಗರಗಳಲ್ಲಿ ಕಲ್ಲಿದ್ದಲು ಸಂಬಂಧಿತ ವಾಯು ಮಾಲಿನ್ಯದಿಂದ ವಾರ್ಷಿಕ ಅಕಾಲಿಕ ಮರಣಗಳ ಸಂಖ್ಯೆಯನ್ನು ಶೇ 60ರಷ್ಟು ಹೆಚ್ಚಿಸಬಹುದು' ಎಂದು ಅಧ್ಯಯನ ತಂಡದ ಮುಖ್ಯಸ್ಥ ಡಾ. ರಾಚೆಲ್ ಹಕ್ಸ್ಲೆ ಹೇಳಿದ್ದಾರೆ.

ಸಿ40 ಸಿಟೀಸ್, ವಿಶ್ವದ 97 ಮಹಾನ್ ನಗರಗಳ ಹವಾಮಾನ, ಆರೋಗ್ಯಕರ ಮತ್ತು ಸುಸ್ಥಿರ ಭವಿಷ್ಯದ ಕುರಿತು ಬೆಳಕು ಚೆಲ್ಲುತ್ತದೆ. ಅಧ್ಯಯನದ ಪ್ರಕಾರ, ಪ್ರಮುಖ ಭಾರತೀಯ ನಗರಗಳಲ್ಲಿ ಮುಂದಿನ ಒಂದು ದಶಕದಲ್ಲಿ 52,700 ಅಕಾಲಿಕ ಮರಣಗಳು, 31,300 ಅಕಾಲಿಕ ಜನನಗಳು ಆಗಲಿವೆ. 46,800 ಬಾರಿ ಆಸ್ತಮಾ ತುರ್ತು ಚಿಕಿತ್ಸೆಗಾಗಿ ಜನರು ಆಸ್ಪತ್ರೆಗಳಿಗೆ ಎಡತಾಕಲಿದ್ದಾರೆ. ಜನರು 2.58 ಕೋಟಿ ದಿನಗಳ ಅನಾರೋಗ್ಯದ ರಜೆ ಪಡೆಯಲಿದ್ದಾರೆ.

ಮಾಲಿನ್ಯ ಪರಿಣಾಮ

- ನಗರಗಳ ಆರ್ಥಿಕತೆಯ ಮೇಲೆ ಪರಿಣಾಮ
- ಕಾರ್ಮಿಕ ಉತ್ಪಾದಕತೆ ಇಳಿಕೆ
- ಉದ್ಯೋಗಿಗಳ ಅನುಪಸ್ಥಿತಿ ಹೆಚ್ಚಳ
- ಆರ್ಥಿಕ ನಷ್ಟಕ್ಕೆ ದಾರಿ
- ಆರೋಗ್ಯ ವೆಚ್ಚಗಳಿಗೆ ಕಾರಣ

ಭಾರತದಲ್ಲಿ ಕಲ್ಲಿದ್ದಲಿನಿಂದ ಉತ್ಪಾದಿಸಲಾಗುವ ವಿದ್ಯುತ್ತಿನ ಪೈಕಿ ಶೇ 55ರಷ್ಟು ವಿದ್ಯುತ್ ಈ ಮಹಾನಗರಗಳ 500 ಕಿ.ಮೀ. ವ್ಯಾಪ್ತಿಯಲ್ಲಿ ಉತ್ಪಾದನೆಯಾಗುತ್ತದೆ. ಕಲ್ಲಿದ್ದಲು ವಿದ್ಯುತ್ ಸ್ಥಾವರಗಳಿಂದ ಹೊರಸೂಸುವ ಮಲಿನ ಕಣಗಳು ಬಹಳ ದೂರ ಪ್ರಯಾಣಿಸುತ್ತವೆ. ಮಹಾನಗರಗಳಿಂದ ಸುಮಾರು 500 ಕಿ.ಮೀ. ವ್ಯಾಪ್ತಿಯಲ್ಲಿರುವ ಕಲ್ಲಿದ್ದಲು ಸ್ಥಾವರಗಳು ನಗರದ ಯುವಕರು, ವೃದ್ಧರು ಮತ್ತು ಗರ್ಭಿಣಿಯರ ಆರೋಗ್ಯವನ್ನು ಅಪಾಯಕ್ಕೆ ತಳ್ಳುತ್ತವೆ ಎಂದು ವರದಿ ತಿಳಿಸಿದೆ.

ಈಗ ಅಸ್ತಿತ್ವದಲ್ಲಿರುವ ಶೇ 20ರಷ್ಟು ಕಲ್ಲಿದ್ದಲು ಸ್ಥಾವರಗಳನ್ನು ಬಂದ್ ಮಾಡುವುದರಿಂದ ಮತ್ತು ದೆಹಲಿ, ಮುಂಬೈ, ಕೋಲ್ಕತಾ, ಬೆಂಗಳೂರು ಹಾಗೂ ಚೆನ್ನೈ ಬಳಿ ಹೊಸ ಕಲ್ಲಿದ್ದಲು ವಿದ್ಯುತ್ ಉತ್ಪಾದನೆಯನ್ನು ನಿಲ್ಲಿಸುವುದರಿಂದ 2020-2030 ಅವಧಿಯಲ್ಲಿ ಗಮನಾರ್ಹ ಪ್ರಯೋಜನ ಕಂಡುಬರಲಿದೆ. ಕಲ್ಲಿದ್ದಲು ವಿದ್ಯುತ್ ಘಟಕಗಳನ್ನು 2020ರಿಂದ 2030ರ ನಡುವೆ ಶೇ 28ರಷ್ಟು ಹೆಚ್ಚಿಸಲು ಗುರಿಹಾಕಿಕೊಳ್ಳಲಾಗಿದೆಯೇ ವಿನಾ, ಶೇ 20ರಷ್ಟು ಕಡಿಮೆ ಮಾಡುವ ದಿಕ್ಕಿನಲ್ಲಿಲ್ಲ ಎಂದು ಅಭಿಪ್ರಾಯಪಟ್ಟಿದೆ.

ಶುದ್ಧ ಇಂಧನ ಅಗತ್ಯ

ಹೊಸ ಕಲ್ಲಿದ್ದಲು ಸ್ಥಾವರಗಳನ್ನು ನಿರ್ಮಿಸುವ ಬದಲು ಶುದ್ಧ ಇಂಧನದಲ್ಲಿ ಹೂಡಿಕೆ ಮಾಡುವುದನ್ನು ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ವಾಯುಗುಣಮಟ್ಟ ಯೋಜನೆಯಲ್ಲಿ ಪ್ರಕಟಿಸಬೇಕು. ಹಳೆಯ ಮತ್ತು ಅತ್ಯಂತ ಮಾಲಿನ್ಯಕಾರಕ ಕಲ್ಲಿದ್ದಲು ಘಟಕಗಳಿಗೆ ನಿವೃತ್ತಿ ಘೋಷಿಸಬೇಕು ಎಂದು ವರದಿ ಸಲಹೆ ನೀಡಿದೆ.

ಭಾರತದಲ್ಲಿ ಕಲ್ಲಿದ್ದಲು ವಿದ್ಯುತ್ ಸ್ಥಾವರಗಳಿಗಿಂತ ಸೌರ ಮತ್ತು ಪವನ ಶಕ್ತಿಯು ಈಗಾಗಲೇ ಅಗ್ಗವಾಗಿದೆ. ಹೊಸ ಕಲ್ಲಿದ್ದಲು ಸ್ಥಾವರಗಳಿಗಿಂತ ಶುದ್ಧ ಶಕ್ತಿಯ ಮೇಲೆ ಹೂಡಿಕೆ ಮಾಡುವುದರಿಂದ ಮನೆ ಬಳಕೆ ಹಾಗೂ ಉದ್ದಿಮೆಗಳ ವಿದ್ಯುತ್ ವೆಚ್ಚ ಕಡಿಮೆಯಾಗಲಿದೆ ಎಂದು ವರದಿ ಅಭಿಪ್ರಾಯಪಟ್ಟಿದೆ.

ಪಿವಿ ಫ್ಯಾಕ್ಟ್ ಚೆಕ್


ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ಸೆಪ್ಟೆಂಬರ್ 27ರಂದು ಸಂಯುಕ್ತ ಕಿಸಾನ್ ಮೋರ್ಚಾವು ಭಾರತ್ ಬಂದ್ ನಡೆಸಿತು. ಬಂದ್‌ಗೆ ವಿರೋಧ ವ್ಯಕ್ತಪಡಿಸಿರುವ ಕೆಲವು ಸಾಮಾಜಿಕ ಜಾಲತಾಣ ಬಳಕೆದಾರರು ತಮ್ಮ ನಗರದಲ್ಲಿ ಬಂದ್ ನಡೆದಿಲ್ಲ ಎಂದು ಬಿಂಬಿಸಲು ಜನನಿಬಿಡ ರಸ್ತೆಯ ಚಿತ್ರಗಳನ್ನು ಹಂಚಿಕೊಂಡಿದ್ದಾರೆ. ಬೆಂಗಳೂರು, ದೆಹಲಿ, ಸೂರತ್, ಕೊಹಿಮಾ.. ಹೀಗೆ ಹಲವು ನಗರಗಳ ಜನ ಈ ಯತ್ನ ಮಾಡಿದ್ದಾರೆ. ಆದರೆ ಎಲ್ಲರೂ ಒಂದೇ ಚಿತ್ರವನ್ನು ಬಳಸಿರುವುದು ವಿಚಿತ್ರ. ಬಂದ್ ಪರವಾಗಿರುವವರು ಇದನ್ನು ಗೇಲಿ ಮಾಡಿದ್ದಾರೆ. 'ಒಂದು ದೇಶ, ಒಂದು ನಗರ' ಕಲ್ಪನೆ ಸಾಕಾರವಾಗಿದೆ ಎಂದು ಚುಚ್ಚಿದ್ದಾರೆ.



ಸಾಮಾಜಿಕ ಜಾಲತಾಣಲ್ಲಿ ವೈರಲ್ ಆಗಿರುವ ಚಿತ್ರವು ಬಿಹಾರದ ಪಟ್ನಾ ನಗರದ್ದು. 2016ರಲ್ಲಿ 'ಪಟ್ನಾ ಬೀಟ್ಸ್' ಎಂಬ ಸುದ್ದಿತಾಣವು ಮೊದಲಿಗೆ ಈ ಚಿತ್ರವನ್ನು ಪ್ರಕಟಿಸಿತ್ತು. ಪಟ್ನಾದಲ್ಲಿ ಸಮ-ಬೆಸ ವಾಹನ ಸಂಚಾರದ ಕುರಿತು ಪ್ರಕಟಿಸಿದ್ದ ಸುದ್ದಿಗೆ ಈ ಚಿತ್ರ ಬಳಸಿಕೊಂಡಿತ್ತು. ನಂತರ ಖಬರ್ ಇಂಡಿಯಾ, ದೈನಿಕ್ ಭಾಸ್ಕರ್ ಪತ್ರಿಕೆಗಳೂ ಪ್ರಕಟಿಸಿವೆ ಎಂದು ಲಾಜಿಕಲ್ ಇಂಡಿಯನ್ ಫ್ಯಾಕ್ಟ್ ಚೆಕ್ ವೇದಿಕೆ ತಿಳಿಸಿದ್ದು, ಭಾರತ್ ಬಂದ್‌ಗೂ ಈ ಚಿತ್ರಕ್ಕೂ ಸಂಬಂಧವಿಲ್ಲ ಎಂದು ಮಾಹಿತಿ ನೀಡಿದೆ.

ಗುಂಡಣ್ಣ



ದಿನ ಭವಿಷ್ಯ

ಗುರುವಾರ ಸೆಪ್ಟೆಂಬರ್ 30, 2021

ಶ್ರೀ ಪ್ಲವ ನಾಮ ಸಂವತ್ಸರ ದಕ್ಷಿಣಾಯಣ ವರ್ಷ ಋತು ಭಾದ್ರಪದ ಮಾಸ ಕೃಷ್ಣಪಕ್ಷ ಮಳೆ ನಕ್ಷತ್ರ ಹಸ್ತೆ ನವಮೀ ಗಂ. 28-41 (ಸಾ. 5-43) ಗುರುವಾರ ನಿತ್ಯ ನಕ್ಷತ್ರ ಪುನರ್ವಸು ಗಂ. 40-59 (ರಾ. 10-38) ಪರಿಘ ನಾಮ ಯೋಗ ಗಂ. 27-38 ಗರಜ ಕರಣ ಗಂ. 28-41 ವಿಷ ಗಂ. 8-11 ಅಮೃತ ಗಂ 33-58 : ರಾಹುಕಾಲ ಮ ಗಂ. 1-30 ರಿಂದ 3-00 ಗುಳಿಕ ಕಾಲ ಬೆ ಗಂ 9-00 ರಿಂದ 10-30 ಯಮಗಂಡ ಕಾಲ ಬೆ ಗಂ 6-00 ರಿಂದ 7-30 : ಸೂರ್ಯೋದಯ: 6-12 ಸೂರ್ಯಾಸ್ತ: 6-06 ಅದೃಷ್ಟ ಸಂಖ್ಯೆ 3

ಮೇಷ: ಮನೆಯಲ್ಲಿನ ಸಮಸ್ಯೆಗಳು ಪರಿಹಾರಗೊಂಡು ನೆಮ್ಮದಿ ನೆಲೆಸಲಿದೆ. ಗೃಹ ನಿರ್ಮಾಣ ಅಥವಾ ನವೀಕರಣದ ಸಾಧ್ಯತೆ ಕಂಡುಬರುವುದು. ನೀರಾವರಿ ಹೊಂದಿದ ಭೂಮಿ ಖರೀದಿ.

ವೃಷಭ: ಕೃಷಿ ವಿಧಾನದಲ್ಲಿ ಹೊಸತನವನ್ನು ಅಳವಡಿಸಲಿದ್ದೀರಿ. ವಾಹನ ಖರೀದಿಸುವ ಯೋಗವು ಕಂಡುಬರುತ್ತಿದೆ. ಶೇರು ಮತ್ತು ಏಜೆನ್ಸಿ ಉದ್ಯಮದಲ್ಲಿ ತುಂಬ ಉತ್ಕರ್ಷದ ದಿನವಾಗಿ ಕಂಡುಬರುವುದು.

ಮಿಥುನ: ವ್ಯಾಪಾರ ಉದ್ಯಮಗಳಲ್ಲಿ ಸ್ವಲ್ಪ ಮಟ್ಟಿನ ಮಂದಗತಿ ಕಾಣಬಹುದು. ವಿದೇಶ ಪ್ರಯಾಣದ ಸಾಧ್ಯತೆಯೂ ಕಂಡುಬರುವುದು. ಹಣಕಾಸ ವ್ಯವಹಾರವನ್ನು ಸ್ವಲ್ಪ ಮಟ್ಟಿಗೆ ಕಡಿಮೆ ಮಾಡುವುದು ಉತ್ತಮ.

ಕರ್ಕಾಟಕ: ಉನ್ನತ ಅಧ್ಯಯನ ನಿಮಿತ್ತ ಪ್ರಯಾಣ. ಆರ್ಥಿಕ ಅನುಕೂಲತೆಗಳು ಅಭಿವೃದ್ಧಿಯಾಗಲಿವೆ. ವಸ್ತ್ರಾಭರಣಗಳನ್ನು ಖರೀದಿಸುವ ಸಾಧ್ಯತೆ ಕಂಡುಬರುವುದು. ಆಸ್ತಿ ಲಾಭದ ಲಕ್ಷಣಗಳು ಗೋಚರವಾಗುತ್ತಿದೆ.

ಸಿಂಹ: ವ್ಯವಹಾರಗಳಲ್ಲಿ ಅನುಕೂಲವಾಗಲಿದೆ. ಸಂಗ್ರಹಿಸಲ್ಪಟ್ಟ ವಸ್ತುಗಳಿಂದ ಹೆಚ್ಚಿನ ಲಾಭ. ವಾಹನ ಖರೀದಿಸುವ ಸಾಧ್ಯತೆಗಳು ಕಂಡುಬರುವುದು. ಸರ್ಕಾರಿ ನೌಕರಸ್ಥರಿಗೆ ವಿಪರೀತ ಕಾರ್ಯ ಬಾಹುಳ್ಯ.

ಕನ್ಯಾ: ಸ್ತ್ರೀಯರು ಸಂಗಾತಿಯ ಪದೋನ್ನತಿಯನ್ನು ನಿರೀಕ್ಷಿಸಬಹುದು. ಪ್ರಯಾಣ ಸಾಧ್ಯತೆಯೂ ಕಂಡುಬರುವುದು. ನೆರೆಹೊರೆಯವರೊಂದಿಗೆ ಬಾಂಧವ್ಯ ವೃದ್ಧಿ. ಉದ್ಯೋಗದಲ್ಲಿ ಹೊಸತನ ಕಂಡುಬರಲಿದೆ.

ತುಲಾ: ಉದ್ಯೋಗಾಕಾಂಕ್ಷಿ ಸ್ತ್ರೀಯರಿಗೆ ಉದ್ಯೋಗ ಭಾಗ್ಯ ಲಭಿಸಲಿದೆ. ಅಧಿಕಾರಿಗಳ ಔದಾರ್ಯ ಹಾಗೂ ಸಾಮಾಜಿಕ ಗೌರವಾದರಗಳಿಗೆ ಪಾತ್ರರಾಗಲಿದ್ದೀರಿ.

ವೃಶ್ಚಿಕ: ರೈತಾಪಿ ವರ್ಗದವರಿಗೆ ಹೈನುಗಾರಿಕೆ ನಡೆಸುವವರಿಗೆ ಉತ್ತಮ ಆದಾಯ. ಹೊಸದಾಗಿ ಉದ್ಯಮ ಸ್ಥಾಪನೆ ಮಾಡುವ ಸಾಧ್ಯತೆ. ಆರೋಗ್ಯದಲ್ಲಿ ಸುಧಾರಣೆ ಕಂಡುಬರುವುದು.

ಧನು: ನೌಕರಸ್ಥರಿಗೆ ಬಡ್ತಿ ದೊರಕುವ ಸಾಧ್ಯತೆ. ರಾಜಕೀಯ ವ್ಯಕ್ತಿಗಳಿಗೆ ಉನ್ನತ ಸ್ಥಾನಮಾನಗಳು ದೊರಕಲಿದೆ. ಸಂಪತ್ತುಗಳಿಗೆ ಕಳ್ಳಕಾಕರ ಭಯ ಎದುರಾಗುವ ಸಾಧ್ಯತೆ.

ಮಕರ: ಪಾಲುಗಾರಿಕೆ ವ್ಯವಹಾರ ಅಥವಾ ಮಧ್ಯಸ್ಥಿಕೆಯ ವ್ಯವಹಾರಗಳಲ್ಲಿ ಮನಸ್ತಾಪ. ಉದ್ಯೋಗ ನಿಮಿತ್ತ ಅಲೆದಾಟದ ಸಾಧ್ಯತೆ ಕಂಡುಬರುವುದು. ಭತ್ತ, ಅಕ್ಕಿ ವ್ಯಾಪಾರ ಮತ್ತು ಹೋಟೆಲ್ ಉದ್ಯಮಿಗಳಿಗೆ ಹೆಚ್ಚಿನ ಅನುಕೂಲ.

ಕುಂಭ: ನೂತನ ಉದ್ಯಮ ಅಥವಾ ಕೈಗಾರಿಕೆಯನ್ನು ಸ್ಥಾಪಿಸುವ ನಿಟ್ಟಿನ ಚಟುವಟಿಕೆಗಳು ಭರದಿಂದ ಸಾಗುವವು. ವಿದ್ಯಾರ್ಥಿಗಳಲ್ಲಿ ಶೈಕ್ಷಣಿಕ ಪ್ರಗತಿಯು ಕಂಡುಬರುವುದು.

ಮೀನ: ಉದ್ಯೋಗದ ಪ್ರತಿ ಹೆಜ್ಜೆಗಳಲ್ಲಿಯೂ ಪ್ರಗತಿಯನ್ನು ಕಾಣಲಿದ್ದೀರಿ. ಭೂಮಿ, ನಿವೇಶನಗಳ ವ್ಯವಹಾರದಿಂದಾಗಿ ಹೆಚ್ಚಿನ ಧನ ಲಾಭ. ಶತ್ರುಗಳು ನಾಶ ಅಥವಾ ಮಿತ್ರರಾಗುವ ಸಾಧ್ಯತೆ.

ನಿಮ್ಮ ಜನ್ಮದಿನ 30-ಸೆಪ್ಟೆಂಬರ್ ಇಂದು ಅತ್ಯಂತ ಶುಭದಾಯಕವಾಗಿದ್ದು, ಹೊಸ ವ್ಯವಹಾರಗಳನ್ನು ಪ್ರಾರಂಭಿಸಲಿದ್ದೀರಿ. ಸ್ವಯಂ ಉದ್ಯೋಗಿಗಳಿಗೆ ಆರಂಭದಲ್ಲಿ ಸವಾಲುಗಳು ಎದುರಾಗಲಿವೆ. ಮಕ್ಕಳ ಆಯುರಾರೋಗ್ಯದ ನಿಮಿತ್ತ ಧಾರ್ಮಿಕ ಕಾರ್ಯಗಳನ್ನು ಹಮ್ಮಿಕೊಳ್ಳುವಿರಿ. ಮನೆಯಲ್ಲಿ ಹಬ್ಬದ ವಾತಾವರಣ ಮೂಡಲಿದೆ.

ಬೆರಗಿನ ಬೆಳಕು

ಗುರುರಾಜ ಕರಜಗಿ

ಮೌನರಸವೆಂಬ ಅದ್ಭುತ

ವ್ಯಸನಕಾರಣವೊಂದು ಹಸನಕಾರಣವೊಂದು |
ರಸಗಳೀಯೆರಡಕಿಂತಾಳವಿನ್ನೊಂದು ||
ಭೃಶ ವಿಶ್ವಜೀವಿತಗಭೀರತೆಯ ದರ್ಶನದ |
ರಸವದದ್ಭುತಮೌನ – ಮಂಕುತಿಮ್ಮ || 466 ||

ಪದ-ಅರ್ಥ: ಹಸನ = ಸಂತೋಷ, ರಸಗಳೀಯೆರಡಕಿಂತಾಳ = ರಸಗಳು + ಈ + ಎರಡಕಿಂತ + ಆಳ, ಭೃಶ = ವಿಚಿತ್ರ, ಗಭೀರತೆ = ಗಂಭೀರತೆ, ರಸವದ್ಭುತಮೌನ = ರಸವು + ಅದು + ಅದ್ಭುತ + ಮೌನ.

ವಾಚ್ಯಾರ್ಥ: ವ್ಯಸನಕ್ಕೊಂದು, ಸಂತೋಷಕ್ಕೊಂದು ರಸಗಳಿವೆ. ಅವೆರಡಕ್ಕಿಂತ ಆಳವಾದದ್ದು ಮತ್ತೊಂದಿದೆ. ಅದು ಈ ವಿಚಿತ್ರವಾದ ಪ್ರಪಂಚದ ಅನನ್ಯ ಗಂಭೀರತೆಯನ್ನು ಕಂಡಾಗ ಹುಟ್ಟುವಂಥದ್ದು. ಅದು ಮೌನ. ಯಾಕೆಂದರೆ ಆ ರಸ ಯಾವ ಮಾತಿಗೂ ಸಿಲುಕುವಂಥದ್ದಲ್ಲ.

ವಿವರಣೆ: ರಸಸಿದ್ಧಾಂತವು, ಜಾಗತಿಕ ಸಾಂಸ್ಕೃತಿಕ ಪರಂಪರೆಗೆ ಭಾರತದ ವಿಶಿಷ್ಟವೂ ಮಹತ್ವಪೂರ್ಣವೂ ಆದ ಕೊಡುಗೆ. ನಾವು ಈಗ ತಿಳಿದಂತೆ ನವರಸಗಳಿದ್ದರೂ ಸ್ಥೂಲವಾಗಿ ಅವುಗಳನ್ನು ಎರಡೇ ಭಾಗಗಳಾಗಿ ನೋಡಬಹುದು. ನಮಗೆ ವ್ಯಸನ ತರುವ, ದುಃಖ ತರುವ ರಸಗಳು ಮತ್ತು ಸಂತೋಷವನ್ನು ನೀಡುವ ರಸಗಳು. ಶೃಂಗಾರ, ಹಾಸ್ಯ, ವೀರ, ಅದ್ಭುತ ಮತ್ತು ಶಾಂತರಸಗಳು ಮನಸ್ಸಿಗೆ ಮುದ ಸಂತೋಷ ನೀಡಿದರೆ, ಕರುಣ, ರೌದ್ರ, ಭಯಾನಕ, ಭೀಭತ್ಸಗಳು ಮನಸ್ಸಿಗೆ ತಳಮಳವನ್ನು, ಕೊರಗನ್ನು ತರುತ್ತವೆ. ಈ ಎರಡು ರಸಗಳಿಗಿಂತ ಆಳದಲ್ಲಿರುವ ರಸ ಮತ್ತೊಂದಿದೆ. ಅದು ಮೌನ. ಮೌನವೆಂದರೆ ಮಾತನಾಡದೆ ಇರುವುದಲ್ಲ. ಮಾತನಾಡದೆ ಸುಮ್ಮನಿದ್ದಾಗಲೂ ತಲೆಯಲ್ಲಿ ವಿಚಾರಗಳ ಕಾರ್ಖಾನೆ ನಡೆಯುತ್ತಲೇ ಇರುತ್ತದೆ. ಮೌನವೆನ್ನುವುದು ಮನಸ್ಸಿನಲ್ಲಿ ಆಲೋಚನೆಗಳೇ ಇಲ್ಲದ ಕ್ಷಣ. ಅದೊಂದು ಧ್ಯಾನಸ್ಥ ಸ್ಥಿತಿ. ಅಲ್ಲಿ ಸಂತೋಷವಿಲ್ಲ, ದುಃಖವಿಲ್ಲ, ಯಾವುದೇ ಯೋಚನೆಯ ತಾಕಲಾಟಗಳಿಲ್ಲ. ಯಾಕೆಂದರೆ ಅಲ್ಲಿ ಇಂದ್ರಿಯಗಳಿಗೆ ಕೆಲಸವಿಲ್ಲ. ಇಂದ್ರಿಯಗಳಿಂದಲೇ ನಮಗೆ ಸುಖದ, ದುಃಖದ ಅನುಭವವಾಗುವುದು. ಭಗವದ್ಗೀತೆಯಲ್ಲಿ ಮೌನವನ್ನು ತಪಸ್ಸು ಎಂದು ಕರೆಯಲಾಗಿದೆ.

ಮನಃಪ್ರಸಾದ: ಸೌಮ್ಯತ್ವಂ ಮೌನಂ ಆತ್ಮವಿನಿಗ್ರಹಃ |
ಭಾವಸಂಶುದ್ಧಿರಿತ್ಯೇತತ್ ತಪೋ
ಮಾನಸಮುಚ್ಯತೇ||

ಮೌನ ಆತ್ಮದಲ್ಲಿ ಸ್ಫುರಿಸುವ ರಸ. ಅದಕ್ಕೆ ಇಂದ್ರಿಯಗಳ ಅವಶ್ಯಕತೆಯಿಲ್ಲ. ಹತ್ತನೆಯ ಅಧ್ಯಾಯದಲ್ಲಿ 'ಮೌನಂ ಚೈವಾಸ್ಮಿ ಗುಹ್ಯಾನಾಂ' ಎನ್ನುತ್ತಾನೆ ಕೃಷ್ಣ. ಅಂದರೆ 'ಅತ್ಯಂತ ಗೂಢವಾದದ್ದರಲ್ಲಿ ಮೌನ ನಾನು'. ಯಾವುದು ಗೂಢ? ಯಾವುದು ದೇಹ ಮತ್ತು ಮನಸ್ಸುಗಳಿಗೆ ಸಿಕ್ಕದೊ ಅದು ಗೂಢ, ಅನೂಹ್ಯ. ಕಲ್ಪನಾತೀತವಾದದ್ದನ್ನು ಒಮ್ಮೆಲೆ ಎದುರಿಸಿದಾಗ, ಎಂದೆಂದೂ ಚಿಂತಿಸಿದ ವಿಷಯ ಧುತ್ತನೆ ಮುಂದೆ ಸಾಕ್ಷಾತ್ಕಾರವಾದಾಗ ಮನಸ್ಸು ಏನನ್ನು ಹೇಳಲೂ ಅಸಮರ್ಥವಾಗುತ್ತದೆ. ಆಗ 'I become numb' ಎಂತಲೋ 'I was blinded' ಎಂತಲೋ ಎನ್ನುವುದುಂಟು. ಅದನ್ನು ವರ್ಣಿಸಲು ಆಗ ಭಾಷೆ ಸಾಲುವುದಿಲ್ಲ. ಸುನಾಮಿಯ ನೂರು ಅಡಿ ಎತ್ತರದ ಸಮುದ್ರದ ತೆರೆಗಳ ಗೋಡೆಯನ್ನು ಮೊದಲು ಕಂಡವನಿಗೆ ಏನಾಗಿರಬೇಕು? ಬೆಟ್ಟದ ಮೇಲೆ ನಿಂತಾಗ ಇದ್ದಕಿದ್ದಂತೆ ಪಕ್ಕದಲ್ಲೇ ಲಾವಾರಸದ ಕಾರಂಜಿ ಪುಟಿದರೆ ಮಾತು ಬಂದೀತೇ? ಬಹುಶಃ ತಾನು ಸ್ನೇಹಿತನೆಂದೇ ಬಗೆದ ಕೃಷ್ಣನ ವಿಶ್ವರೂಪವನ್ನು ನೋಡಿದಾಗ ಅರ್ಜುನನಿಗೆ ಹೀಗೆಯೇ ಅನ್ನಿಸಿರಬೇಕಲ್ಲವೇ? ಹೀಗೆ ಈ ವಿಚಿತ್ರ ಪ್ರಪಂಚದ ಜೀವಿತದಲ್ಲಿ ಎದುರಾದ ಗಂಭೀರತೆಯನ್ನು ಕಂಡಾಗ ಅದನ್ನು ವಿವರಿಸಲರಿಯದೆ ಮನಸ್ಸು ಮೌನಕ್ಕೆ ಜಾರುತ್ತದೆ. ಈ ಮೌನದ ರಸ, ಸಂತೋಷದ, ದುಃಖದ ರಸಗಳನ್ನು ಮೀರಿಸಿದ್ದು ಮತ್ತು ಅವುಗಳಿಗಿಂತ ಆಳದ್ದು. ❖

ಪದಬಂಧ 4734


– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಸ್ವರ್ಗ ಇಲ್ಲಿಯೇ ಇದೆಯಲ್ಲಾ! (4)
3.ತೋರಿಕೆಗಾಗಿ ನಗುವಿಕೆ(4)
5.ಒನಪು ತೋರಿದಾಗ ಬಂದಿರುವ ಸ್ಮರಣೆ (3)
6.ಗುಪ್ತ ನಿಧಿಯಿದು (3)
8.ಕುಲದಲ್ಲೇ ನುಸುಳಿರುವ ಕ್ಷೇಮ (3)
9.ಹಿತವಲ್ಲದ್ದು ಇದು (3)
10.ರಥದಲ್ಲಿ ಕುಳಿತು ಯುದ್ಧ ಮಾಡುವವನು (3)
12.ವನದಲ್ಲಿಯೇ ಎಲ್ಲವನ್ನು ತ್ಯಜಿಸುವಿಕೆ(3)
14.ಯಂತ್ರ ನಡುವಿದ್ದರೆ ಈ ಹಿಡಿತ! (4)
15.ಚಾರನ ಕೆಟ್ಟ ನಡುವಳಿಕೆ (4)

ಮೇಲಿಂದ ಕೆಳಕ್ಕೆ

1.ಹಾಲು ಕರೆಯುವ ಹಸು (4)
2.ಮದಿಸಿದ ಗಜ (3)
3.ಚರುಪು ನೀಡಿದಾಗಲೇ ಉಕ್ಕಿದ ಉತ್ಸಾಹ! (3)
4.ಪ್ರಾಚೀನ ಕಾಲದ ವಿದ್ಯಾಭ್ಯಾಸ ಕೇಂದ್ರ (4)
7.ಪರ್ವ ಕಾಲದಲ್ಲಿ ಏರಿದ ಬೆಟ್ಟ (3)
8.ಅಷ್ಟದಿಕ್ಪಾಲಕರಲ್ಲಿ ಈತ ಬಲು ಶ್ರೀಮಂತ (3)
9.ಸ್ಮರಣ ಶಕ್ತಿ ಚನ್ನಾಗಿರುವವನು (4)
11.ಕರದಲ್ಲಿರುವ ದೇಹ (4)
12.ನೀರಿನ ಅಧಿದೇವತೆ (3)
13.ನನಗದು ಬೇಕು ಎಂದಾಗ ಕೈಯಲ್ಲಿನ ಹಣ (3)



4733ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 2.ಪತ್ತಲ 3.ಭವಿಷ್ಯ 5.ಕ್ಷೇತ್ರ 6.ಅಧಮ 7.ಮಹಾರಾಜ 8.ಸತ್ವವಾನ 10.ತವಂಬಜಾಂ 11.ಚಾಡಿಕೋರ 13.ತವರ 14.ಭಾರ 15.ಅಗಸೆ 17.ಸ್ವಭಾವ

ಮೇಲಿಂದ ಕೆಳಕ್ಕೆ: 1.ಲಾಭ 2.ಪತ್ರ 4.ವಿರಹಾ 5.ಕ್ಷೇಮಸಮಾಚಾರ 6.ಅಜಗಜಾಂತರ 7.ಮಥಿತ 9.ನಶ್ವರ 12.ಕೋಡಗ 14.ಭಾವ 16.ಸೆಲೆ

ಸುಡೊಕು 5120

			9		2	1		6
1		6					8	
	8	2		6			4	5
7								
	5		7	1	4	2		8
4					6			7
2		5		7			6	
	6					8		
8		1	6		3			9

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.


5119 ಸುಡೊಕು

4	3	8	2	1	9	5	6	7
1	2	9	6	5	7	3	4	8
7	6	5	8	4	3	2	9	1
3	4	2	9	6	1	8	7	5
8	7	6	3	2	5	9	1	4
5	9	1	7	8	4	6	3	2
9	1	7	5	3	2	4	8	6
6	5	3	4	7	8	1	2	9
2	8	4	1	9	6	7	5	3

ಕೋವಿಡ್ ಲಸಿಕೆ: ದೇಶದ ವಯಸ್ಕ ಜನಸಂಖ್ಯೆಯ ಕಾಲುಭಾಗಕ್ಕೆ ಮಾತ್ರ ಎರಡೂ ಡೋಸ್

ರಾಜ್ಯದಲ್ಲಿ ಶೇ 80 ಮೊದಲ ಡೋಸ್

ಪ್ರಜಾವಾಣಿ ವಾರ್ತೆ



ನವದೆಹಲಿ: ಕರ್ನಾಟಕವೂ ಸೇರಿದಂತೆ ದೇಶದ 17 ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ ಶೇ 80ರಷ್ಟು ವಯಸ್ಕ ನಾಗರಿಕರಿಗೆ ಕೋವಿಡ್–19ರ ಲಸಿಕೆಯ ಮೊದಲ ಡೋಸ್ ಹಾಕಿಸಲಾಗಿದೆ. ಗೋವಾದಲ್ಲಿ ಶೇ 78ರಷ್ಟು ವಯಸ್ಕ ಜನರಿಗೆ ಲಸಿಕೆಯ ಮೊದಲ ಹಾಕಲಾಗಿದೆ ಎಂದು ಲಸಿಕೆ ಅಭಿಯಾನದ ಅಧಿಕೃತ ಅಂಕಿ ಅಂಶಗಳು ಹೇಳಿವೆ.

ಶೇ 80ರ ಸಾಧನೆ ಮಾಡಿರುವ ರಾಜ್ಯಗಳಲ್ಲಿ ಮಧ್ಯ ಪ್ರದೇಶ, ಗುಜರಾತ್, ತೆಲಂಗಾಣ, ಕೇರಳ ಮತ್ತು ಹರಿಯಾಣದಂತಹ ದೊಡ್ಡ ರಾಜ್ಯಗಳು-ಸೇರಿವೆ.

ದೇಶದಲ್ಲಿ ಶೇ 68ಕ್ಕೂ ಹೆಚ್ಚು ಜನರು ಲಸಿಕೆಯ ಮೊದಲ ಡೋಸ್ ಪಡೆದಿದ್ದರೆ, ಒಟ್ಟು ವಯಸ್ಕ ಜನಸಂಖ್ಯೆಯ ಕಾಲು ಭಾಗದಷ್ಟು ಜನರು ಮಾತ್ರ ಲಸಿಕೆಯ ಎರಡೂ ಡೋಸ್ ಪಡೆದಿದ್ದಾರೆ.

ಲಸಿಕಾ ದತ್ತಾಂಶದ ಪ್ರಕಾರ, ಹೆಚ್ಚು ಜನಸಂಖ್ಯೆ ಇರುವ ಮಧ್ಯಪ್ರದೇಶ, ಗುಜರಾತ್, ತೆಲಂಗಾಣ, ಕೇರಳ ಮತ್ತು ಹರಿಯಾಣದಲ್ಲಿ ಮೊದಲ ಡೋಸ್ ಪಡೆದವರ ಸಂಖ್ಯೆ ಶೇ 80 ಇದೆ. ರಾಜಸ್ಥಾನ (ಶೇ 78), ಅಸ್ಸಾಂ (ಶೇ 79), ಗೋವಾ (ಶೇ 78) ಹಾಗೂ ದೆಹಲಿ (ಶೇ 75) ಈ ಸಂಖ್ಯೆಗೆ ಸಮೀಪದಲ್ಲಿವೆ.

ಆದರೆ, ಎರಡೂ ಡೋಸ್ ಲಸಿಕೆ ಹಾಕಿಸುವಲ್ಲಿ ಕೇವಲ ಒಂಬತ್ತು ರಾಜ್ಯಗಳು ಶೇ 40ರ ಗುರಿ ತಲುಪಿವೆ. ಈ ಗುಂಪಿನಲ್ಲಿ, ದಕ್ಷಿಣದ ರಾಜ್ಯಗಳ ಪೈಕಿ ಗೋವಾ ಮಾತ್ರ ಇದೆ. ಗೋವಾ ಹೊರ-ತುಪಡಿಸಿದರೆ ಉಳಿದವುಗಳು ಈಶಾನ್ಯ ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳು.

ಎರಡನೇ ಡೋಸ್ ಪಡೆಯುವಲ್ಲಿ ಅತ್ಯಂತ ಹಿಂದೆ ಉಳಿದಿರುವ ರಾಜ್ಯಗಳೆಂದರೆ ಬಿಹಾರ (ಶೇ 15), ಉತ್ತರ ಪ್ರದೇಶ (ಶೇ 13) ಹಾಗೂ ಜಾರ್ಖಂಡ್ (ಶೇ 15). ಅಲ್ಲಿ ದಸರೆ, ದೀಪಾವಳಿ ಹಾಗೂ ಛತ್ ಸಂದರ್ಭದಲ್ಲಿ ಹೆಚ್ಚು ಜನ ಸೇರುವ ನಿರೀಕ್ಷೆ ಇದೆ.

'ಹಲವು ರಾಜ್ಯಗಳಲ್ಲಿ ಲಸಿಕೆ ಪಡೆಯಲು ಈಗಲೂ ಹಿಂಜರಿಕೆ ಇದೆ. ಎಲ್ಲೆಲ್ಲಿ ಲಸಿಕೆ ನೀಡಿದ ಪ್ರಮಾಣ ಕಡಿಮೆ ಇದೆಯೋ ಅಲ್ಲೆಲ್ಲ ಜಾಗೃತಿ ಮೂಡಿಸಲು ಕ್ರಮ ಕೈಗೊಳ್ಳುವ ಅಗತ್ಯವಿದೆ. ಭಾನುವಾರದಂದು ವಿಶೇಷ ಲಸಿಕಾ ಮೇಳ ಆಯೋಜನೆ ಮಾಡುವುದು, ಮನೆ ಬಾಗಿಲಿಗೆ ತೆರಳಿ ಪ್ರಚಾರ ಮಾಡುವುದು ಅಗತ್ಯ' ಎಂದು ಅಪೊಲೊ ಆಸ್ಪತ್ರೆಯ ಹಿರಿಯ ತಜ್ಞವೈದ್ಯ ಅಬ್ದುಲ್ ಗಫೂರ್ ಅಭಿಪ್ರಾಯಪಟ್ಟರು.

'ಲಸಿಕೆಯ ಎರಡೂ ಡೋಸ್ ಪಡೆದವರು, ಕೊರೊನಾ ಸೋಂಕು ಹಬ್ಬುವುದನ್ನು ತಡೆಯುವಲ್ಲಿ ನಿರ್ಣಾಯಕ ಪಾತ್ರ ವಹಿಸುತ್ತಾರೆ. ಹೀಗಾಗಿ, ಲಸಿಕೆ ನೀಡುವುದನ್ನು ತ್ವರಿ-ತಗೊಳಿಸುವುದರ ಮೂಲಕ, ಬೇಗನೇ ಸೋಂಕು ಬಾಧಿಸುವ ಸಾಧ್ಯತೆ ಇರುವ ಎಲ್ಲರನ್ನೂ ರಕ್ಷಿಸಬೇಕಿದೆ' ಎಂದು ನವದೆಹಲಿಯ ಜಾರ್ಜ್ ಇನ್‌ಸ್ಟಿಟ್ಯೂಟ್ ಆಫ್ ಗ್ಲೋಬಲ್ ಹೆಲ್ತ್ ಸಂಸ್ಥೆಯ ಹಿರಿಯ ಸಾರ್ವಜನಿಕ ಆರೋಗ್ಯ ಸಂಶೋಧಕ ಉಮ್ಮನ್ ಜಾನ್ ಹೇಳಿದರು.

'ಲಸಿಕೆಯ ಒಂದು ಡೋಸ್, ಡೆಲ್ಟಾ ಸೋಂಕಿನಿಂದ ಶೇ 30ರಿಂದ ಶೇ 40ರವರೆಗೆ ರಕ್ಷಣೆ ನೀಡುತ್ತದೆ. ಎರಡೂ ಡೋಸ್ ಪಡೆಯುವುದರಿಂದ ಶೇ 60ರಷ್ಟು ರಕ್ಷಣೆ ಸಾಧ್ಯ. ಲಸಿಕೆಯ ನಂತರದಲ್ಲಿ ಸೋಂಕಿನ ತೀವ್ರತೆ ಗಂಭೀರವಾಗಿಲ್ಲ ಎಂಬುದು ಅಧ್ಯಯ-ನಗಳಿಂದ ತಿಳಿದುಬಂದಿದೆ' ಎಂದು ದೆಹಲಿಯ ಅನುವಂಶಿಕ ರಚನೆ ಹಾಗೂ ಸಮಗ್ರ ಜೀವವಿಜ್ಞಾನ ಸಂಸ್ಥೆಯ ನಿರ್ದೇಶಕ ಅನುರಾಗ್ ಅಗರ್‌ವಾಲ್ ಹೇಳಿದ್ದಾರೆ.

ಮುಂಚೂಣಿಯಲ್ಲಿ ಕರ್ನಾಟಕ

ಬೆಂಗಳೂರು: ರಾಜ್ಯದಲ್ಲಿ ಬುಧವಾರ ಹಮ್ಮಿಕೊಳ್ಳಲಾಗಿ-ದ್ದ ಕೋವಿಡ್ ಲಸಿಕೆ ನೀಡಿಕೆಯ ಬೃಹತ್ ಮೇಳದಲ್ಲಿ 10.26 ಲಕ್ಷ ಡೋಸ್‌ಗಳಷ್ಟು(ರಾತ್ರಿ 9ರ ವೇಳೆಗೆ) ಲಸಿಕೆಯನ್ನು ವಿತರಿಸಲಾಗಿದೆ. ದಕ್ಷಿಣ ಭಾರತದಲ್ಲಿ ಅತೀ ಹೆಚ್ಚು ಡೋಸ್‌ಗಳನ್ನು ವಿತರಿಸಿದ ರಾಜ್ಯಗಳಲ್ಲಿ ಕರ್ನಾಟಕ ಮೊದಲ ಸ್ಥಾನದಲ್ಲಿದೆ.

ಒಂದು ತಿಂಗಳಿನಿಂದ ಕೋವಿಡ್ ಲಸಿಕೆ ವಿತರಣೆ ಅಭಿಯಾನಕ್ಕೆ ವೇಗ ನೀಡಲಾಗಿದೆ. ಈ ವರ್ಷದ ಅಂತ್ಯದೊಳಗೆ 18 ವರ್ಷ ಮೇಲ್ಪಟ್ಟ ಎಲ್ಲರಿಗೆ ಎರಡೂ ಡೋಸ್ ಲಸಿಕೆ ವಿತರಿಸುವ ಗುರಿಯನ್ನು ಸರ್ಕಾರ ಹಾಕಿಕೊಂಡಿದೆ.

ಬುಧವಾರ 9,127 ಸರ್ಕಾರಿ ಕೇಂದ್ರಗಳು ಹಾಗೂ 361 ಖಾಸಗಿ ಆಸ್ಪತ್ರೆಗಳಲ್ಲಿ ಲಸಿಕೆ ವಿತರಿಸಲಾಗಿದೆ. ಈವರೆಗೆ ನೀಡಲಾದ ಲಸಿಕೆಯ ಒಟ್ಟು ಡೋಸ್‌ಗಳ ಸಂಖ್ಯೆ 5.61 ಕೋಟಿ ದಾಟಿದೆ. 3.91 ಕೋಟಿ ಮಂದಿ ಮೊದಲ ಡೋಸ್ ಹಾಗೂ 1.70 ಕೋಟಿ ಮಂದಿ ಎರಡನೇ ಡೋಸ್ ಲಸಿಕೆಪಡೆದುಕೊಂಡಿದ್ದಾರೆ.

18 ರಿಂದ 44 ವರ್ಷದವರಲ್ಲಿ 2.14 ಕೋಟಿ ಮಂದಿ ಮೊದಲ ಡೋಸ್ ಹಾಗೂ 61.11 ಲಕ್ಷ ಮಂದಿ ಎರಡನೇ ಡೋಸ್ ಲಸಿಕೆ ಪಡೆದುಕೊಂಡಿದ್ದಾರೆ. 45 ವರ್ಷ ಮೇಲ್ಪಟ್ಟವರಲ್ಲಿ 1.58 ಕೋಟಿ ಮಂದಿ ಮೊದಲ ಡೋಸ್ ಹಾಕಿ-ಸಿಕೊಂಡಿದ್ದಾರೆ. ಅವರಲ್ಲಿ 94.21 ಲಕ್ಷ ಮಂದಿ ಎರಡೂ ಡೋಸ್ ಪೂರ್ಣಗೊಳಿಸಿದ್ದಾರೆ.

ಆರೋಗ್ಯ ಕಾರ್ಯ-ಕರ್ತರಲ್ಲಿ 7.63 ಲಕ್ಷ ಹಾಗೂ ಕೋವಿಡ್ ಮುಂಚೂಣಿ ಯೋಧರಲ್ಲಿ 9.39 ಲಕ್ಷ ಮಂದಿ ಮೊದಲ ಡೋಸ್ ಪಡೆದಿದ್ದಾರೆ. ಇವರಲ್ಲಿ ಕ್ರಮವಾಗಿ 6.49 ಲಕ್ಷ ಮಂದಿ ಹಾಗೂ 7.08 ಲಕ್ಷ ಮಂದಿ ಎರಡನೇ ಡೋಸ್ ಲಸಿಕೆ ಹಾಕಿಸಿ-ಕೊಂಡಿದ್ದಾರೆ.

ದಕ್ಷಿಣದ ರಾಜ್ಯಗಳಲ್ಲಿ ಲಸಿಕೆ ವಿತರಣೆ

ರಾಜ್ಯ	ಒಟ್ಟು ಡೋಸ್ (ಕೋಟಿಗಳಲ್ಲಿ)	ಮೊದಲ ಡೋಸ್ (ಕೋಟಿಗಳಲ್ಲಿ)	ಎರಡನೇ ಡೋಸ್ (ಕೋಟಿ)
ಕರ್ನಾಟಕ	5.61	3.91	1.70
ತಮಿಳುನಾಡು	4.68	3.58	1.10
ಆಂಧ್ರಪ್ರದೇಶ	4.07	2.72	1.35
ಕೇರಳ	3.55	2.46	1.08
ತೆಲಂಗಾಣ	2.52	1.83	69.19 ಲಕ್ಷ



ಮೀರಾಬಾಯಿ, ಸಿದ್ಧಗಂಗಾ ಮಠಕ್ಕೆ ಮಹಾತ್ಮ ಗಾಂಧಿ ಸೇವಾ ಪ್ರಶಸ್ತಿ

ಬೆಂಗಳೂರು: ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯು 2020 ಮತ್ತು 2021ನೇ ಸಾಲಿನ 'ಮಹಾತ್ಮ ಗಾಂಧಿ ಸೇವಾ ಪ್ರಶ-ಸ್ತಿ'ಗಳನ್ನು ಪ್ರಕಟಿಸಿದೆ. 2020ನೇ ಸಾಲಿಗೆ ಬಾಗಲಕೋಟೆ ಜಿಲ್ಲೆಯ ಸ್ವಾತಂತ್ರ್ಯ ಹೋರಾಟಗಾರರಾದ ಮೀರಾಬಾಯಿ ಕೊಪ್ಪಿಕರ್ ಮತ್ತು 2021ನೇ ಸಾಲಿಗೆ ಸಿದ್ಧಗಂಗಾ ಶಿಕ್ಷಣ ಸಂಸ್ಥೆ ಹಾಗೂ ಸಿದ್ಧಗಂಗಾ ಮಠವನ್ನು ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ.

ಮಹಾತ್ಮ ಗಾಂಧೀಜಿ ಅವರ ತತ್ವಾ-ದರ್ಶಗಳನ್ನು ಆಧರಿಸಿ ಸಮಾಜದಲ್ಲಿ ಗಣನೀಯ ಸೇವೆ ಮಾಡಿದ ಗಣ್ಯರನ್ನು ಗುರುತಿಸಿ, ಗೌರವಿಸಲು ಈ ಪ್ರಶಸ್ತಿ ನೀಡಲಾಗುತ್ತಿದೆ. ಕೋವಿಡ್-19 ಕಾರಣಕ್ಕೆ ಕಳೆದ ವರ್ಷದ ಪ್ರಶಸ್ತಿಯನ್ನು ಸರ್ಕಾರ ಪ್ರಕಟಿಸಿರಲಿಲ್ಲ. ಈ ಬಾರಿ ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಅಶೋಕ್ ಬಂಗಾರೆಪ್ಪಾ ಹಿಂಚಿಗೇರಿ ಅವರ ಅಧ್ಯಕ್ಷತೆಯಲ್ಲಿ ಆಯ್ಕೆ ಸಮಿತಿ ರಚಿಸಲಾಗಿತ್ತು. ಅ.2 ರಂದು ಬೆಂಗಳೂರಿನ ಗಾಂಧಿ ಭವನದಲ್ಲಿ ಹಮ್ಮಿಕೊಳ್ಳುವ ಕಾರ್ಯಕ್ರಮದಲ್ಲಿ ಪ್ರಶಸ್ತಿ ಪುರಸ್ಕೃತರಿಗೆ ತಲಾ ₹5 ಲಕ್ಷ ಹಾಗೂ ಸ್ಮರಣಿಕೆಯನ್ನು ನೀಡಿ ಗೌರವಿಸಲಾಗುವುದು ಎಂದು ಪ್ರಕಟಣೆ ತಿಳಿಸಿದೆ.

ಸಿದ್ಧಗಂಗಾ ಮಠ: 'ನಡೆದಾಡುವ ದೇವರು' ಎಂದೇ ಖ್ಯಾತರಾಗಿದ್ದ ಶಿವಕುಮಾರ ಸ್ವಾಮೀಜಿ ಅವರ ಆಶಯದಂತೆ ಸತತವಾಗಿ 80 ವರ್ಷಗಳಿಂದ ಅನ್ನದಾಸೋಹ ಹಾಗೂ ಅಕ್ಷರ ದಾಸೋಹದ ಕಾರ್ಯವನ್ನು ತುಮಕೂರಿನ ಸಿದ್ಧಗಂಗಾ ಶಿಕ್ಷಣ ಸಂಸ್ಥೆ ಮತ್ತು ಸಿದ್ಧಗಂಗಾ ಮಠ ಕೈಗೊಂಡಿವೆ.

ಜಾತಿ-ಧರ್ಮ, ಪ್ರದೇಶದ ಭೇದವಿಲ್ಲದೆಯೇ ಲಕ್ಷಾಂತರ ಮಕ್ಕಳಿಗೆ ಅನ್ನ, ಆಶ್ರಯ ಮತ್ತು ವಿದ್ಯೆಯನ್ನು ದಾನ ಮಾಡಿರುವ ಮಠವು, ರಾಷ್ಟ್ರದಲ್ಲೇ ಪ್ರತಿಷ್ಠಿತ ಸಂಸ್ಥೆ ಎಂದು ಹೆಸರಾಗಿದೆ.


ಮೀರಾಬಾಯಿ

ಮೀರಾಬಾಯಿ ಕೊಪ್ಪಿಕರ: ಮೀರಾಬಾಯಿ ಕೊಪ್ಪಿಕರ (96) ಅವರು ಹುಬ್ಬಳ್ಳಿಯ ಅತ್ಯಂತ ಶ್ರೀಮಂತರಾಗಿದ್ದ ಕೊಪ್ಪಿಕರ ವಂಶದ ಕುಡಿ. ಸದ್ಯ ಮುಧೋಳದಲ್ಲಿರುವ 'ವಾತ್ಸಲ್ಯ ಧಾಮ'ದಲ್ಲಿದ್ದಾರೆ. ಗಾಂಧಿವಾದಿಯಾಗಿರುವ ಇವರು ಇತ್ತೀಚಿನವರೆಗೂ ತಾವೇ ನೂಲು ನೇಯ್ದು ಅದರಲ್ಲಿ ವಸ್ತ್ರವನ್ನು ಮಾಡಿಕೊಳ್ಳುತ್ತಿದ್ದರು. ಈಗ ವಯಸ್ಸಾಗಿದ್ದರಿಂದ ನೇಯ್ಗೆ ಮಾಡುತ್ತಿಲ್ಲ.

ಮೀರಾಬಾಯಿ ಅವರು ಸ್ವಾತಂತ್ರ್ಯ ಹೋರಾಟದಲ್ಲಿ ಪಾಲ್ಗೊಂಡಿದ್ದರು. ಸಾಬರಮತಿ ಆಶ್ರಮದಲ್ಲಿ ಇದ್ದರು. ವಿನೋಬಾ ಭಾವೆ ಅವರ ಜತೆಗೂಡಿ ಭೂದಾನ ಚಳವಳಿಯಲ್ಲಿ ಪಾಲ್ಗೊಂಡಿದ್ದರು. ಕರ್ನಾಟಕದಿಂದ ಒಟ್ಟು 40 ಸಾವಿರ ಎಕರೆ ಭೂಮಿಯನ್ನು ದಾನ ಮಾಡಿಸುವಲ್ಲಿ ಯಶಸ್ವಿಯಾಗಿದ್ದಾರೆ. ಸಾವಯವ ಕೃಷಿ ಮಾಡುತ್ತಿದ್ದ ಇವರು ತಾವೇ ಬೆಳೆದ ವಸ್ತುಗಳನ್ನು ಮಾರಾಟ ಮಾಡಿ ಅದರಲ್ಲಿ ಬಂದ ಆದಾಯದಿಂದ ಜೀವನ ಮಾಡುತ್ತಿದ್ದಾರೆ.

ಬಾವಲಿಗಳಲ್ಲಿ ನಿಫಾ ಪ್ರತಿಕಾಯ ಪತ್ತೆ



ತಿರುವನಂತಪುರ (ಪಿಟಿಐ): ಎರಡು ಬಗೆಯ ಬಾವಲಿಗಳ ಮಾದರಿಗಳಲ್ಲಿ ನಿಫಾ ವೈರಸ್ ವಿರುದ್ಧದ ಪ್ರತಿಕಾಯಗಳು ಕಂಡು ಬಂದಿವೆ ಎಂದು ಕೇರಳ ಆರೋಗ್ಯ ಸಚಿವೆ ವೀಣಾ ಜಾರ್ಜ್ ಬುಧವಾರ ಹೇಳಿದರು.

ಸುದ್ದಿಗಾರರಿಗೆ ಈ ವಿಷಯ ತಿಳಿಸಿದ ಅವರು, 'ಪುಣೆಯಲ್ಲಿರುವ ರಾಷ್ಟ್ರೀಯ ವೈರಾಣು ಸಂಸ್ಥೆಯು (ಎನ್‌ಐವಿ) ಕೋಯಿಕ್ಕೋಡ್‌ನಲ್ಲಿ ವಿವಿಧ ಬಗೆಯ ಬಾವಲಿಗಳ ಮಾದರಿಗಳನ್ನು ಸಂಗ್ರಹಿಸಿ, ಪರೀಕ್ಷೆ ನಡೆಸಿದೆ. ಈಗ ಎರಡು ವಿಧದ ಬಾವಲಿಗಳಲ್ಲಿ ಪ್ರತಿಕಾಯಗಳು ಕಂಡು ಬಂದಿವೆ. ಇವುಗಳಿಂದಲೇ ಈ ಮಾರಕ ಸೋಂಕು ಪ್ರಸರಣವಾ-ಗುತ್ತದೆ ಎಂಬ ವಾದಕ್ಕೆ ಇದರಿಂದ ಪುಷ್ಟಿ ಸಿಕ್ಕಂತಾಗಿದೆ' ಎಂದರು.

'ಇತರ ಮಾದರಿಗಳ ಪರೀಕ್ಷೆಯೂ ನಡೆಯುತ್ತಿದ್ದು, ಪರೀಕ್ಷಾ ವರದಿ ಕೈ ಸೇರಲಿದೆ' ಎಂದರು.

ಕೋಯಿ-ಕ್ಕೋಡ್‌ನಲ್ಲಿ ನಿಫಾ ಸೋಂಕಿನ ಮೊದಲ ಪ್ರಕರಣ ವರದಿಯಾಗಿತ್ತು. 12 ವರ್ಷದ ಬಾಲಕನಲ್ಲಿ ನಿಫಾ ಸೋಂಕು ಇರುವುದು ಸೆ.4ರಂದು ಪತ್ತೆಯಾಗಿತ್ತು. ಈ ಸೋಂಕಿನಿಂದಾಗಿ ಬಾಲಕ ಸೆ. 5ರಂದು ಮೃತಪಟ್ಟಿದ್ದ.

ಇದರ ಬೆನ್ನಲ್ಲೆ ಆರೋಗ್ಯ ಇಲಾಖೆ ಹೈಅಲರ್ಟ್ ಘೋಷಿಸಿತ್ತು. ಮೃತ ಬಾಲಕನ ಮನೆಯ ಸುತ್ತಲಿನ 3 ಕಿ.ಮೀ. ವ್ಯಾಪ್ತಿ ಪ್ರದೇಶವನ್ನು ಪ್ರತ್ಯೇಕಿಸಿ, ಪ್ರತಿ ಮನೆಯಿಂದ ಮಾದರಿಗಳನ್ನು ಸಂಗ್ರಹಿಸಿ, ಪರೀಕ್ಷೆಗೆ ಒಳಪಡಿಸಲಾಗಿತ್ತು.

ಕೋವಿಡ್: ಸೋಂಕಿತರು, ಸಕ್ರಿಯ ಪ್ರಕರಣಗಳ ಸಂಖ್ಯೆ ಇಳಿಮುಖ

ನವದೆಹಲಿ: ದೇಶದಲ್ಲಿ ಸತತ 2ನೇ ದಿನವೂ ಕೋವಿಡ್ ಪ್ರಕರಣಗಳ ಸಂಖ್ಯೆ 20 ಸಾವಿರಕ್ಕಿಂತ ಕಡಿಮೆ ದಾಖಲಾಗಿದ್ದು, ಸಕ್ರಿಯ ಪ್ರಕರಣಗಳ ಸಂಖ್ಯೆಯೂ ಕಡಿಮೆಯಾಗಿರುವ ವರದಿಯಾಗಿದೆ.

ಬುಧವಾರ ಬೆಳಿಗ್ಗೆ 8ಕ್ಕೆ ಕೊನೆಗೊಂಡಂತೆ ಇಪ್ಪತ್ನಾಲ್ಕು ಗಂಟೆಗಳಲ್ಲಿ ದೇಶದಲ್ಲಿ ಒಟ್ಟು 18,870 ಪ್ರಕರಣಗಳು ವರದಿಯಾಗಿವೆ. ಈ ಮೂಲಕ ಒಟ್ಟು ಸೋಂಕಿತರ ಸಂಖ್ಯೆ 3,37,16,451ಕ್ಕೆ ಏರಿದೆ. ಈ ಅವಧಿಯಲ್ಲಿ 378 ಮಂದಿ ಸೋಂಕಿನಿಂದ ಮೃತಪಟ್ಟಿದ್ದಾರೆ, ಇದರಿಂದ ಒಟ್ಟು ಸಾವಿನ ಸಂಖ್ಯೆ 4,47,751ಕ್ಕೆ ಏರಿದೆ ಎಂದು ಆರೋಗ್ಯ ಸಚಿವಾಲಯದ ಪ್ರಕಟಣೆ ತಿಳಿಸಿದೆ.

ಡಿ.ಸಿ ಭರವಸೆ: ಅನಿರ್ದಿಷ್ಟ ಅವಧಿಯ ಮುಷ್ಕರ ಹಿಂದಕ್ಕೆ

ಮನೆ ಕೊಡಿ: ನೆರೆ ಸಂತ್ರಸ್ತರ ಆಗ್ರಹ

ಪ್ರಜಾವಾಣಿ ವಾರ್ತೆ

ಮೈಸೂರು: 2019ರ ಪ್ರವಾಹದಲ್ಲಿ ಮನೆಗಳನ್ನು ಕಳೆದುಕೊಂಡಿದ್ದ ಸರಗೂರು ತಾಲ್ಲೂಕಿನ ಬಿದರಹಳ್ಳಿ ಸರ್ಕಲ್‌ನ ನೆರೆ ಸಂತ್ರಸ್ತರು ನಗರದ ಜಿಲ್ಲಾಧಿಕಾರಿ ಕಚೇರಿ ಮುಂದೆ ಬುಧವಾರದಿಂದ ಆರಂಭಿಸಿದ್ದ ಅನಿರ್ದಿ-ಷ್ಟಾವಧಿ ಮುಷ್ಕರವನ್ನು ಜಿಲ್ಲಾಧಿಕಾರಿ ಡಾ.ಬಗಾದಿ ಗೌತಮ್ ಅವರ ಭರವಸೆ ಮೇರೆಗೆ ವಾಪಸ್ ಪಡೆದರು.

'ಸಂತ್ರಸ್ತರಿಗೆ ಹೊಸ ಮನೆಗಳನ್ನು ನಿರ್ಮಿಸಿ ಕೊಡಲಾಗಿದೆ ಎಂದು ಸರ್ಕಾರ ಜುಲೈ 26ರಂದು ಜಾಹೀರಾತು ಪ್ರಕಟಿಸಿತು. ಆದರೆ, ನಾವು ಕುಸಿಯಲಿರುವ ಮನೆಯಲ್ಲೇ ವಾಸಿಸುತ್ತಿ-ದ್ದೇವೆ. ಆ ಕುರಿತು ಎರಡು ವರ್ಷಗಳಿಂದ ಹಲವು ಬಾರಿ ಮನವಿ ಮಾಡಿದರೂ ಪ್ರಯೋಜನವಾಗಿಲ್ಲ' ಎಂದು ನೆರೆ ಸಂತ್ರಸ್ತರ ಹೋರಾಟ ಸಮಿತಿಯ ಸಂಚಾಲಕಿ ಹಾಗೂ ಸಂತ್ರಸ್ತೆ ಚೆಲುವಿ ಆಕ್ರೋಶ ವ್ಯಕ್ತಪಡಿಸಿದರು.



ಮನೆ ನಿರ್ಮಿಸಿಕೊಡಬೇಕು ಎಂದು ಆಗ್ರಹಿಸಿ ಮೈಸೂರು ಜಿಲ್ಲೆ ಸರಗೂರು ತಾಲ್ಲೂಕಿನ ಬಿದರಹಳ್ಳಿ ಸರ್ಕಲ್ ನೆರೆ ಸಂತ್ರಸ್ತರು ಬುಧವಾರ ಜಿಲ್ಲಾಧಿಕಾರಿ ಕಚೇರಿ ಮುಂದೆ ಅನಿರ್ದಿಷ್ಟ ಅವಧಿಯ ಪ್ರತಿಭಟನೆಯನ್ನು ಆರಂಭಿಸಿದರು

'42 ಕುಟುಂಬಗಳಿಗೆ ಹೊಸ ಮನೆ ನಿರ್ಮಿಸಿಕೊಡುವ ಸಲುವಾಗಿ ಸರ್ಕಾರ ಕಾವೇರಿ ನೀರಾವರಿ ನಿಗಮದ ಜಮೀನನ್ನು ಗುರುತಿಸಿದ್ದರೂ ಕಂದಾಯ ಇಲಾಖೆಗೆ ಹಸ್ತಾಂತರವಾಗಿರುವ ಕುರಿತು ಆದೇಶ ಪತ್ರ ಹೊರಡಿಸಿಲ್ಲ. ಕೂಡಲೇ ಆದೇಶ ಪತ್ರ ನೀಡಿ, ಕಂದಾಯ ಇಲಾಖೆಯು ಮನೆ ನಿರ್ಮಾಣ ಕಾಮಗಾರಿ ಆರಂಭಿಸಬೇಕು' ಎಂದು ಒತ್ತಾಯಿಸಿದರು.

ಅಖಿಲ ಭಾರತ ಮಹಿಳಾ ಸಾಂಸ್ಕೃತಿಕ ಸಂಘಟನೆಯ ಜಿಲ್ಲಾ ಕಾರ್ಯದರ್ಶಿ ಜಿ.ಎಸ್.ಸೀಮಾ, ಎಐಯುಟಿಯುಸಿ ಮುಖಂಡರಾದ ಪಿ.ಎಸ್.ಸಂಧ್ಯಾ, ಎಐಡಿವೈಒ ಜಿಲ್ಲಾ ಕಾರ್ಯದರ್ಶಿ ಸುನಿಲ್, ಎಸ್‌ಯುಸಿಐ ಜಿಲ್ಲಾ ಕಾರ್ಯದರ್ಶಿ ಬಿ.ರವಿ ಹಾಗೂ ಸಂತ್ರ-ಸ್ತೆಯರಾದ ಕಾಳಿಯಮ್ಮ, ಯಶೋಧಾ, ಪದ್ಮಾ, ಉದಯಕುಮಾರಿ, ಮಂಜುಳಾ ಇದ್ದರು.

ಯುಪಿಎಸ್‌ಸಿ: ಶೇ 52.04ರಷ್ಟು ಅಂಕ ಪಡೆದ ಶುಭಂ

ನವದೆಹಲಿ (ಪಿಟಿಐ): ಕೇಂದ್ರ ಲೋಕಸೇವಾ ಆಯೋಗ (ಯುಪಿಎಸ್‌ಸಿ) ನಡೆಸಿದ 2020ನೇ ಸಾಲಿನ ನಾಗರಿಕ ಸೇವಾ ಪರೀಕ್ಷೆಯಲ್ಲಿ ಮೊದಲ ಸ್ಥಾನ ಪಡೆದಿರುವ ಶುಭಂ ಕುಮಾರ್ ಶೇ 52.04 ಅಂಕಗಳನ್ನು ಹಾಗೂ ದ್ವಿತೀಯ ಸ್ಥಾನ ಪಡೆದಿರುವ ಜಾಗೃತಿ ಅವಸ್ಥಿ ಶೇ 51.95 ಅಂಕಗಳನ್ನು ಗಳಿಸಿದ್ದಾರೆ

ಶುಭಂ ಕುಮಾರ್ ಅವರು ಲಿಖಿತ ಪರೀಕ್ಷೆಯಲ್ಲಿ 878 ಮತ್ತು ಸಂದರ್ಶ-ನದಲ್ಲಿ 176 ಸೇರಿ ಒಟ್ಟು 1,054 ಅಂಕಗಳನ್ನು ಗಳಿಸಿದ್ದಾರೆ. ಅವಸ್ಥಿ ಅವರು ಲಿಖಿತ ಪರೀಕ್ಷೆಯಲ್ಲಿ 859 ಮತ್ತು ಸಂದ-ರ್ಶನದಲ್ಲಿ 193 ಸೇರಿ ಒಟ್ಟು 1,052 ಅಂಕಗಳನ್ನು ಪಡೆದಿದ್ದಾರೆ.

ಮೂರನೇ ಸ್ಥಾನ ಪಡೆದ ಅಂಕಿತಾ ಜೈನ್ ಅವರು ಲಿಖಿತ ಪರೀಕ್ಷೆಯಲ್ಲಿ 839 ಮತ್ತು ಸಂದರ್ಶನದಲ್ಲಿ 212 ಸೇರಿ ಒಟ್ಟು 1,051 ಅಂಕಗಳನ್ನು ಗಳಿಸಿದ್ದಾರೆ.

ಸಂಕ್ಷಿಪ್ತ ಸುದ್ದಿ

ಉ. ಕೊರಿಯಾ: ಹೈಪರ್‌ಸಾನಿಕ್ ಕ್ಷಿಪಣಿ ಪರೀಕ್ಷಾ ಪ್ರಯೋಗ ಯಶಸ್ವಿ

ಸೋಲ್ (ಎಪಿ): 'ಉತ್ತರ ಕೊರಿಯಾವು ಹೈಪರ್‌ಸಾನಿಕ್ ಕ್ಷಿಪಣಿಯ ಮೊದಲ ಪರೀಕ್ಷಾರ್ಥ ಪ್ರಯೋಗವನ್ನು ಯಶಸ್ವಿಯಾಗಿ ಪೂರೈಸಿದೆ' ಎಂದು ಅಲ್ಲಿನ ಸರ್ಕಾರಿ ಮಾಧ್ಯಮಗಳು ಬುಧವಾರ ವರದಿ ಮಾಡಿವೆ.



ಉತ್ತರ ಕೊರಿಯಾವು ತನ್ನ ಪರಮಾಣು ಸಾಮರ್ಥ್ಯದ ಅಭಿವೃದ್ಧಿಗೆ ಅನುಗುಣವಾಗಿ ಈ ಕ್ಷಿಪಣಿಯನ್ನು ರೂಪಿಸಿದೆ. ಇದರಿಂದಾಗಿ ದೇಶದ ರಕ್ಷಣಾ ಸಾಮರ್ಥ್ಯವು ಸಾವಿರಪಟ್ಟು ಹೆಚ್ಚಾಗಲಿದ್ದು, ಮಿಲಿಟರಿ ಸಾಮರ್ಥ್ಯವನ್ನು ವಿಸ್ತರಿಸಿದಂತಾಗಿದೆ ಎಂದು ತಿಳಿಸಲಾಗಿದೆ.

ಮಂಗಳವಾರ ಆರಂಭವಾದ ಕ್ಷಿಪಣಿಯ ಪರೀಕ್ಷೆಯು ಈ ತಿಂಗಳಿನಲ್ಲಿ ಉತ್ತರ ಕೊರಿಯಾ ನಡೆಸಿರುವ ಮೂರನೇ ಸುತ್ತಿನ ಯಶಸ್ವಿ ಕ್ಷಿಪಣಿ ಪ್ರಯೋಗವಾಗಿದೆ. ಅಮೆರಿಕದ ಕ್ಷಿಪಣಿ ಸುರಕ್ಷಾ ವ್ಯವಸ್ಥೆಗೂ ಹೈಪರ್‌ಸಾನಿಕ್ ಕ್ಷಿಪಣಿಯನ್ನು ಬೇಧಿಸುವುದು ಅಸಾಧ್ಯ ಎನ್ನಲಾಗಿದೆ.

ಜಪಾನ್ ಮುಂದಿನ ಪ್ರಧಾನಿ ಫುಮಿಯೊ ಕಿಶಿದ

ಟೋಕಿಯೊ (ಎಎಫ್‌ಪಿ/ಎಪಿ): ಜಪಾನ್‌ನ ಆಡಳಿತಾರೂಢ ಲಿಬರಲ್ ಡೆಮಾಕ್ರಟಿಕ್ ಪಕ್ಷವು ಮಾಜಿ ವಿದೇಶಾಂಗ ಸಚಿವ ಫುಮಿಯೊ ಕಿಶಿದ ಅವರನ್ನು ಬುಧವಾರ ತಮ್ಮ ಪಕ್ಷದ ನೂತನ ನಾಯಕನನ್ನಾಗಿ ಆಯ್ಕೆ ಮಾಡಿತು.



ಈ ಮೂಲಕ ಫುಮಿಯೊ ಕಿಶಿದ ಅವರು ವಿಶ್ವದ ಮೂರನೇ ಅತಿದೊಡ್ಡ ಆರ್ಥಿಕತೆ ಹೊಂದಿರುವ ರಾಷ್ಟ್ರದ ಪ್ರಧಾನಿ ಪಟ್ಟವನ್ನು ಅಲಂಕರಿಸಲಿದ್ದಾರೆ.

ಆಡಳಿತಾರೂಢ ಎಲ್‌ಡಿಪಿ ಪಕ್ಷ ಸಂಸತ್ತಿನಲ್ಲಿ ಬಹುಮತ ಹೊಂದಿರುವ ಹಿನ್ನೆಲೆಯಲ್ಲಿ ಅಕ್ಟೋಬರ್ 4ರಂದು ಸಂಸತ್ತಿ ನಲ್ಲಿ ನಡೆಯುವ ಚುನಾವಣೆಯಲ್ಲಿ, 64ರ ಹರೆಯದ ಫುಮಿಯಾ ಅವರು ಹೊಸ ಪ್ರಧಾನಿಯಾಗಿ ಅಧಿಕೃತವಾಗಿ ಆಯ್ಕೆಯಾಗುತ್ತಾರೆ. ನಂತರ ಫುಮಿಯಾ ಅವರು ನವೆಂಬರ್ ತಿಂಗಳಲ್ಲಿ ನಡೆಯಲಿರುವ ಸಾರ್ವತ್ರಿಕ ಚುನಾವಣೆಯಲ್ಲಿ ಪಕ್ಷವನ್ನು ಮುನ್ನಡೆಸಲಿದ್ದಾರೆ.

ಹಿರೋಷಿಮಾ ಮೂಲದ ರಾಜಕೀಯ ಕುಟುಂಬದ ಕುಡಿಯಾಗಿರುವ ಕಿಶಿದ ಅವರು, ಕಳೆದ ವರ್ಷ ಯಶೋಹಿಡೆ ಸುಗಾ ವಿರುದ್ಧ ಪ್ರಧಾನಿ ಹುದ್ದೆಯ ಚುನಾವಣೆಯಲ್ಲಿ ಸೋತಿದ್ದರು. ಅಂದಿನಿಂದಲೂ ಪ್ರಧಾನಿ ಹುದ್ದೆ ಮೇಲೆ ಕಣ್ಣಿಟ್ಟಿದ್ದರು.

ಭಾರತದ 'ಲೈಫ್' ಸಂಸ್ಥೆ ಸೇರಿ ನಾಲ್ವರಿಗೆ ರೈಟ್ ಲೈವ್ಲಿಹುಡ್ ಪ್ರಶಸ್ತಿ

ಸ್ಟಾಕ್‌ಹೋಂ (ಎಎಫ್‌ಪಿ): ಭಾರತದ 'ಲೈಫ್'(ಲೀಗಲ್ ಇನಿಶಿಯೇಟಿವ್ ಫಾರ್ ಫಾರೆಸ್ಟ್ ಅಂಡ್ ಎನ್ವಿರಾನ್ಮೆಂಟ್) ಸಂಸ್ಥೆ ಸೇರಿದಂತೆ ಮೂವರು ಪರಿಸರ, ಸಾಮಾಜಿಕ ಕಾರ್ಯಕರ್ತರು ಪ್ರಸಕ್ತ ಸಾಲಿನ ಪ್ರತಿಷ್ಠಿತ 'ರೈಟ್ ಲೈವ್ಲಿಹುಡ್' ಪ್ರಶಸ್ತಿಗೆ ಭಾಜನರಾಗಿದ್ದಾರೆ.

'ಪರ್ಯಾಯ ನೊಬೆಲ್' ಪ್ರಶಸ್ತಿ ಎಂದೇ ಖ್ಯಾತವಾಗಿರುವ ಈ ಪ್ರ-ಶಸ್ತಿಯನ್ನು ದೆಹಲಿ ಮೂಲದ 'ಲೈಫ್' ಸಂಸ್ಥೆಯ ಜೊತೆಗೆ, ಕೆನಡಾದ ಸ್ಥಳೀಯ ಹಕ್ಕುಗಳ ಪ್ರಚಾರಕಿ ಫ್ರೆಡೆ ಹ್ಯೂಸನ್, ಬಾಲಕಿಯರ ಮೇಲಿನ ಲೈಂಗಿಕ ದೌರ್ಜನ್ಯದ ವಿರುದ್ಧ ಹೋರಾಡುತ್ತಿರುವ ಕೆಮರೂನ್ ದೇಶದ ವಾಂಡೌ ಹಾಗೂ ರಷ್ಯಾದ ಪರಿಸರ ಪ್ರಚಾರಕ ವ್ಲಾಡಿಮಿರ್ ಸ್ಲಿವ್ಯಾಕ್ ಅವರು ಹಂಚಿಕೊಂಡಿದ್ದಾರೆ.

'ಮಕ್ಕಳ ರಕ್ಷಣೆಯಿಂದ ಹಿಡಿದು ಪರಿಸರ ರಕ್ಷಣೆಗಾಗಿ ವಿವಿಧ ಸಮುದಾ-ಯಗಳನ್ನು ಬಲವರ್ಧನೆಗೊಳಿಸಲು ಶ್ರಮಿಸುತ್ತಿರುವ ಸಂಸ್ಥೆ ಮತ್ತು ಕಾರ್ಯಕ-ರ್ತರನ್ನು ಈ ಬಾರಿಯ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ' ಎಂದು ಸ್ವೀಡಿಷ್ ರೈಟ್ ಲೈವ್ಲಿಹುಡ್ ಫೌಂಡೇಶನ್ ತಿಳಿಸಿದೆ.

ನಾಲ್ವರು ಪ್ರಶಸ್ತಿ ಪುರಸ್ಕೃತರು ತಲಾ 10 ಲಕ್ಷ ಕ್ರೋನರ್(₹84 ಲಕ್ಷ) ಬಹುಮಾನ ಪಡೆಯಲಿದ್ದಾರೆ. ಡಿಸೆಂಬರ್ 1ರಂದು ನಡೆಯಲಿರುವ ವರ್ಚುವಲ್ ಸಮಾರಂಭದಲ್ಲಿ ಪ್ರಶಸ್ತಿ ನೀಡಿ ಗೌರವಿಸಲಾಗುತ್ತದೆ.

'ಲೈಫ್' ಸಂಸ್ಥೆ ಕಾನೂನು ಮತ್ತು ಕಾನೂನು ಪ್ರಕ್ರಿಯೆಗಳ ಸೃಜನಶೀಲ ಬಳಕೆಯ ಮೂಲಕ ಭಾರತದಲ್ಲಿ ಪರಿಸರ ರಕ್ಷಣೆಗಾಗಿ ಕೆಲಸ ಮಾಡುತ್ತಿದೆ. ಪರಿಸರ ಕ್ಷೇತ್ರದ ಸಮಸ್ಯೆಗಳ ಕುರಿತು ಇತ್ಯರ್ಥಗೊಳಿಸುವು-ದಕ್ಕಿರುವ ಕಾನೂನಿನ ಕೊರತೆಯನ್ನು ಗಮನಿಸಿದ ವಕೀಲರಾದ ರಿತ್ವಿಕ್ ದತ್ತಾ ಮತ್ತು ರಾಹುಲ್ ಚೌಧರಿ ಅವರು 2005ರಲ್ಲಿ ಈ ಲೈಫ್ ಸಂಸ್ಥೆಯನ್ನು ಸ್ಥಾಪಿಸಿದ್ದರು.

ಭಾರತ ತಂಡಕ್ಕೆ ಚೊಚ್ಚಲ ಹಗಲು ರಾತ್ರಿ ಪಂದ್ಯ: ಆಸ್ಟ್ರೇಲಿಯಾ ಎದುರಾಳಿ

ಮಿಥಾಲಿ ಬಳಗಕ್ಕೆ ಪಿಂಕ್ ಬಾಲ್ 'ಟೆಸ್ಟ್'

ಗೋಲ್ಡ್ ಕೋಸ್ಟ್, ಆಸ್ಟ್ರೇಲಿಯಾ (ಪಿಟಿಐ): ಏಕದಿನ ಸರಣಿಯಲ್ಲಿ ಹೋರಾಟದ ಪ್ರದರ್ಶನ ನೀಡಿ ಭರವಸೆಯಲ್ಲಿರುವ ಭಾರತ ಮಹಿಳಾ ಕ್ರಿಕೆಟ್ ತಂಡ ಈಗ ಟೆಸ್ಟ್ ಕ್ರಿಕೆಟ್‌ಗೆ ಸಿದ್ಧವಾಗಿದೆ. ಮಟ್ರಿಕಾನ್ ಕ್ರೀಡಾಂಗಣದಲ್ಲಿ ಆಸ್ಟ್ರೇಲಿಯಾ ಎದುರಿನ ಏಕೈಕ ಟೆಸ್ಟ್ ಗುರುವಾರ ಆರಂಭವಾಗಲಿದ್ದು ಭಾರತ ಈ ಮೂಲಕ ಹೊನಲು ಬೆಳಕಿನ ಪಂದ್ಯಕ್ಕೆ ಪದಾರ್ಪಣೆ ಮಾಡಲಿದೆ.

ಭಾರತ 1-2ರಲ್ಲಿ ಸೋತಿರುವ ಏಕದಿನ ಸರಣಿ ಹಿಂದಿನ ಭಾನುವಾರ ಮುಕ್ತಾಯಗೊಂಡಿತ್ತು. ಸೋಮವಾರ ವಿಶ್ರಾಂತಿ ದಿನವಾಗಿತ್ತು. ಎರಡು ದಿನಗಳ ಅಭ್ಯಾಸದ ನಂತರ ಮಿಥಾಲಿ ರಾಜ್ ಸುದೀರ್ಘ ಮಾದರಿಯ ಹಣಾಹಣಿಯಲ್ಲಿ ಕಣಕ್ಕೆ ಇಳಿಯಲಿದ್ದು 'ಪಿಂಕ್ ಬಾಲ್'ಗೆ ತಂಡ ಯಾವ ರೀತಿ ಹೊಂದಿಕೊಳ್ಳಲಿದೆ ಎಂಬ ಕುತೂಹಲ ಮೂಡಿದೆ.

ಆಸ್ಟ್ರೇಲಿಯಾ ಈ ವರೆಗೆ ಒಂದೇ ಒಂದು ಪಿಂಕ್ ಬಾಲ್ ಟೆಸ್ಟ್ ಆಡಿದೆ. ಆ ಪಂದ್ಯ 2017ರ ನವೆಂಬರ್‌ನಲ್ಲಿ ನಡೆದಿತ್ತು. ಆ ತಂಡಕ್ಕೂ ಏಕದಿನ ಸರಣಿಯ ನಂತರ ಅಭ್ಯಾಸಕ್ಕೆ ಹೆಚ್ಚು ಅವಕಾಶ ಸಿಗಲಿಲ್ಲ. ಆದರೆ ಅತ್ಯುತ್ತಮ ವೇಗದ ಬೌಲಿಂಗ್ ದಾಳಿಯನ್ನು ಹೊಂದಿರುವ ತಂಡ ಉತ್ತಮ ಸಾಮರ್ಥ್ಯ ತೋರುವ ನಿರೀಕ್ಷೆಯಲ್ಲಿದೆ.

ಹರ್ಮನ್‌ಪ್ರೀತ್, ರಚೆಲ್ ಹೇನ್ಸ್ ಅಲಭ್ಯ: ಆಸ್ಟ್ರೇಲಿಯಾ ವಿರುದ್ಧ 15 ವರ್ಷಗಳ ನಂತರ ಭಾರತ ಟೆಸ್ಟ್ ಪಂದ್ಯ ಆಡುತ್ತಿದೆ. 2006ರಲ್ಲಿ ಕೊನೆಯ ಪಂದ್ಯ ಆಡಿದಾಗ ತಂಡದಲ್ಲಿದ್ದ ಮಿಥಾಲಿ ರಾಜ್ ಮತ್ತು ಜೂಲನ್ ಗೋಸ್ವಾಮಿ ಈಗಲೂ ತಂಡದ ಬೆನ್ನೆಲುಬು ಆಗಿದ್ದಾರೆ. ಹೆಬ್ಬೆರಳಿಗೆ ಗಾಯವಾಗಿರುವ ಹರ್ಮನ್‌ಪ್ರೀತ್ ಕೌರ್ ಏಕದಿನ ಪಂದ್ಯಗಳಲ್ಲಿ ಆಡಿರಲಿಲ್ಲ. ಟೆಸ್ಟ್ ಪಂದ್ಯಕ್ಕೂ ಅವರು ಲಭ್ಯ ಇರುವುದಿಲ್ಲ ಎಂದು ನಾಯಕಿ ಮಿಥಾಲಿ ರಾಜ್ ತಿಳಿಸಿದ್ದಾರೆ.



ಶಫಾಲಿ ವರ್ಮಾ (ಎಡ) ಮತ್ತು ಸ್ಮೃತಿ ಮಂದಾನ –ರಾಯಿಟರ್ಸ್ ಚಿತ್ರ

ಬ್ಯಾಟರ್ ಯಸ್ತಿಕಾ ಭಾಟಿಯಾ ಮತ್ತು ಮಧ್ಯಮ ವೇಗಿ ಮೇಘನಾ ಸಿಂಗ್ ಟೆಸ್ಟ್ ಪದಾರ್ಪಣೆ ಮಾಡುವ ಸಾಧ್ಯತೆ ಇದೆ. ಜೂಲನ್ ಗೋಸ್ವಾಮಿ, ಮೇಘನಾ ಮತ್ತು ಪೂಜಾ ವಸ್ತ್ರಕಾರ್ ಅವರನ್ನು ವೇಗದ ದಾಳಿಗೆ ಬಳಸಿಕೊಳ್ಳುವ ಸಾಧ್ಯತೆ ಇದೆ. ದೀಪ್ತಿ ಶರ್ಮಾ ಮತ್ತು ಸ್ನೇಹ್ ರಾಣಾ ಅವರನ್ನು ಆಲ್‌ರೌಂಡರ್‌ಗಳಾಗಿ ಸೇರಿಸಿಕೊಳ್ಳಲಿದ್ದು ವಿಕೆಟ್ ಕೀಪಿಂಗ್ ಜವಾಬ್ದಾರಿ ತಾನಿಯಾ ಭಾಟಿಯಾ ಅವರಿಗೆ ಸಿಗಲಿದೆ.

ಮಂಡಿರಜ್ಜು ಗಾಯಕ್ಕೆ ಒಳಗಾಗಿರುವ ಉಪನಾಯಕಿ ರಚೆಲ್ ಹೇನ್ಸ್ ಅವರು ಪಂದ್ಯಕ್ಕೆ ಅಲಭ್ಯರಾಗಿರುವುದು ಆಸ್ಟ್ರೇಲಿಯಾ ಪಾಳಯದಲ್ಲಿ ಆತಂಕ ಮೂಡಿಸಿದೆ. ಅವರ ಬದಲಿಗೆ ವೇಗದ ದಾಳಿ ನಡೆಸಬಲ್ಲ ಆಲ್‌ರೌಂಡರ್ ಅಥವಾ ಪೂರ್ಣಪ್ರಮಾಣದ ಬ್ಯಾಟರ್ ಆಡುವ ಸಾಧ್ಯತೆ ಇದೆ ಎಂದು ನಾಯಕಿ ಮೆಗ್ ಲ್ಯಾನಿಂಗ್ ತಿಳಿಸಿದ್ದಾರೆ. ಅನಾಬೆಲ್ ಸೂಥರ್ಲೆಂಡ್ ಪದಾರ್ಪಣೆ ಮಾಡುವ ಸಾಧ್ಯತೆ ಇದೆ.

ತಂಡಗಳು: ಭಾರತ: ಮಿಥಾಲಿ ರಾಜ್ (ನಾಯಕಿ), ಸ್ಮೃತಿ ಮಂದಾನ, ಶಫಾಲಿ ವರ್ಮಾ, ಪೂನಮ್ ರಾವತ್, ಜೆಮಿಮಾ ರಾಡ್ರಿಗಸ್, ದೀಪ್ತಿ ಶರ್ಮಾ, ಸ್ನೇಹ್ ರಾಣಾ, ಯಸ್ತಿಕಾ ಭಾಟಿಯಾ, ತಾನಿಯ ಭಾಟಿಯಾ (ವಿಕೆಟ್ ಕೀಪರ್), ಶಿಖಾ ಪಾಂಡೆ, ಜೂಲನ್ ಗೋಸ್ವಾಮಿ, ಮೇಘನಾ ಸಿಂಗ್, ಪೂಜಾ ವಸ್ತ್ರಕಾರ್, ರಾಜೇಶ್ವರಿ ಗಾಯಕವಾಡ್, ಪೂನಂ ಯಾದವ್, ರಿಚಾ ಘೋಷ್, ಏಕ್ತಾ ಬಿಷ್ಟ್.

ಆಸ್ಟ್ರೇಲಿಯಾ: ಮೆಗ್‌ಲ್ಯಾನಿಂಗ್ (ನಾಯಕಿ), ಡಾರ್ಸಿ ಬ್ರೌನ್, ಮೈಟ್ಲಾನ್ ಬ್ರೌನ್, ಸ್ಟೆಲ್ಲಾ ಕ್ಯಾಂಬೆಲ್, ನಿಕೋಲಾ ಕ್ಯಾರಿ, ಹನಾ ಡಾರ್ಲಿಂಗ್ಟನ್, ಆ್ಯಶ್ಲಿ ಗಾರ್ಡನರ್, ಅಲಿಸಾ ಹೀಲಿ, ತಹಲಿಯಾ ಮೆಗ್ರಾ, ಸೋಫಿ ಮೋಲಿನೆಕ್ಸ್, ಬೇಥ್ ಮೂನಿ, ಎಲಿಸ್ ಪೆರಿ, ಜಾರ್ಜಿಯಾ ರೆಡ್‌ಮೇನಿ, ಮೋಲಿ ಸ್ಟ್ರಾನೊ, ಅನಾಬೆಲ್ ಸೂಥರ್ಲೆಂಡ್, ತಾಯ್ಲಾ ವೆಮಿನಿಂಕ್, ಜಾರ್ಜಿಯಾ ವರೆಹಮ್.

ಬಲಾಬಲ

ಭಾರತ : ಪಂದ್ಯ 37		ಆಸ್ಟ್ರೇಲಿಯಾ : ಪಂದ್ಯ 74	
ಜಯ	5	ಜಯ	20
ಸೋಲು	6	ಸೋಲು	10
ಡ್ರಾ	26	ಡ್ರಾ	44

ಮುಖಾಮುಖಿ ಪಂದ್ಯ 9

ಭಾರತ ಗೆಲುವು	0
ಆಸ್ಟ್ರೇಲಿಯಾ ಜಯ	4
ಡ್ರಾ	5

ಆರಂಭ ಬೆಳಿಗ್ಗೆ 10.00 (ಭಾರತೀಯ ಕಾಲಮಾನ)

ಲೈವ್ ಸೋನಿ ಸಿಕ್ಸ್, ಸೋನಿ ಟೆನ್ 3,4

ಭಾರತಕ್ಕೆ ಉತ್ತಮ ಅವಕಾಶ: ಶಾಂತಾ

ಭಾರತ ತಂಡಕ್ಕೆ ಇದು ಸವಾಲಿನಿಂದ ಕೂಡಿರುವ ಉತ್ತಮ ಅವಕಾಶ. ಮೂರು–ನಾಲ್ಕು ವರ್ಷಗಳಿಂದ ಭಾರತ ಮಹಿಳಾ ತಂಡ ಟೆಸ್ಟ್‌ನಲ್ಲಿ ಗಮನಾರ್ಹ ಸಾಮರ್ಥ್ಯ ತೋರಲಿಲ್ಲ. ಇಂಥ ಸಂದರ್ಭದಲ್ಲಿ ತೀರಾ ಭಿನ್ನ ಮಾದರಿಯ ಹಗಲು ರಾತ್ರಿ ಪಂದ್ಯ ಆಡುವುದು ಸುಲಭ ಸಾಧ್ಯವಲ್ಲ. ಆಸ್ಟ್ರೇಲಿಯಾ ಮಹಿಳೆಯರಿಗೆ ಟೆಸ್ಟ್‌ನಲ್ಲಿ ಉತ್ತಮ ಅನುಭವ ಇದೆ. ಆದರೂ ಉತ್ತಮ ಪ್ರಯತ್ನ ಮಾಡಿದರೆ ಆ ತಂಡವನ್ನು ಮಣಿಸಬಹುದು ಎಂದು ಬಿಸಿಸಿಐ ಅಪೆಕ್ಸ್ ಸಮಿತಿ ಸದಸ್ಯೆ ಶಾಂತಾ ರಂಗಸ್ವಾಮಿ ಹೇಳಿದ್ದಾರೆ.

ಆರ್ಚರಿ: ದೀಪಿಕಾ ಮೇಲೆ ಭರವಸೆ

ಯಾಂಕ್ಟನ್, ಅಮೆರಿಕ (ಪಿಟಿಐ): ಟೋಕಿಯೊ ಒಲಿಂಪಿಕ್ಸ್‌ನಲ್ಲಿ ನೀರಸ ಪ್ರದರ್ಶನ ನೀಡಿದ ದೀಪಿಕಾ ಕುಮಾರಿ ಮತ್ತು ಅತನು ದಾಸ್ ಅವರು ವಿಶ್ವಕಪ್ ಆರ್ಚರಿ ಫೈನಲ್‌ನಲ್ಲಿ ಉತ್ತಮ ಸಾಮರ್ಥ್ಯ ತೋರುವ ಭರವಸೆಯೊಂದಿಗೆ ಕಣಕ್ಕೆ ಇಳಿಯಲಿದ್ದಾರೆ. ಟೂರ್ನಿ ಗುರುವಾರ ಮತ್ತು ಶುಕ್ರವಾರ ನಡೆಯಲಿದೆ.

ಯಾಂಕ್ಟನ್‌ನಲ್ಲಿ ನಡೆದ ವಿಶ್ವ ಚಾಂಪಿಯನ್‌ಷಿಪ್ ಕೆಲವೇ ದಿನಗಳ ಹಿಂದೆ ಮುಗಿದಿತ್ತು. ಒಲಿಂಪಿಕ್ಸ್‌ನಲ್ಲಿ ನಿರೀಕ್ಷಿತ ಸಾಧನೆ ಮಾಡಲು ಸಾಧ್ಯವಾಗದ ಕಾರಣ ಚಾಂಪಿಯನ್‌ಷಿಪ್‌ನಲ್ಲಿ ಪಾಲ್ಗೊಳ್ಳಲು ದೀಪಿಕಾ ಮತ್ತು ಅತನು ಅವರಿಗೆ ಅವಕಾಶ ಸಿಕ್ಕಿರಲಿಲ್ಲ. ಭಾರತ ತಂಡಕ್ಕೆ ಆಯ್ಕೆಯಾಗದ್ದರಿಂದ ಬೇಸರಗೊಂಡಿದ್ದ ಅವರಿಬ್ಬರು ಕೋಲ್ಕತ್ತದಲ್ಲಿರುವ ಭಾರತ ಕ್ರೀಡಾ ಪ್ರಾಧಿಕಾರದಕೇಂದ್ರದಲ್ಲಿಸ್ಪರ್ಧಿಸಿದ್ದರು.

ವಿಶ್ವ ಕ್ರಮಾಂಕದಲ್ಲಿ ಎರಡನೇ ಸ್ಥಾನದಲ್ಲಿರುವ ದೀಪಿಕಾ ಕುಮಾರಿ ಈಗಾಗಲೇ ಏಳು ಬಾರಿ ವಿಶ್ವಕಪ್‌ನಲ್ಲಿ ಪಾಲ್ಗೊಂಡಿದ್ದಾರೆ. ಒಟ್ಟು ನಾಲ್ಕು ಬೆಳ್ಳಿ ಮತ್ತು ಒಂದು ಕಂಚಿನ ಪದಕ ಗೆದ್ದಿದ್ದಾರೆ. 23 ವರ್ಷದ ರಷ್ಯಾ ಆರ್ಚರ್ ಸ್ವೆಟ್ಲಾನಾ ಗೊಂಬೆವಾ ಎದುರು ಅವರು ಮೊದಲ ಪಂದ್ಯ ಆಡಲಿದ್ದಾರೆ.

ಅತನು ದಾಸ್ ಅವರಿಗೆ ಇದು ಮೊದಲ ವಿಶ್ವಕಪ್ ಫೈನಲ್ ಆಗಿದ್ದು ಜರ್ಮನಿಯ ಮ್ಯಾಕ್ಸಿಮಿಲಿಯನ್ ವೆಕ್‌ಮುಲ್ಲರ್ ಎದುರು ಮೊದಲ ಸುತ್ತಿನಲ್ಲಿ ಕಣಕ್ಕೆ ಇಳಿಯಲಿದ್ದಾರೆ. ಕಾಂಪೌಂಡ್ ವಿಭಾಗದಲ್ಲಿ ಅಭಿಷೇಕ್ ವರ್ಮಾ ಅಮೆರಿಕದ ಬ್ರೇಡನ್ ಗೆಲೆಂಥೀನ್ ವಿರುದ್ಧ ಆಡುವರು.

ಕ್ರಿಕೆಟ್: ಕರ್ನಾಟಕ ಮಹಿಳೆಯರಿಗೆ ಸೋಲು

ಬೆಂಗಳೂರು: ಜೈಪುರದಲ್ಲಿ ಬುಧವಾರ ನಡೆದ 19 ವರ್ಷದೊಳಗಿನ ಮಹಿಳೆಯರ ಏಕದಿನ ಟ್ರೋಫಿ ಕ್ರಿಕೆಟ್ ಪಂದ್ಯದಲ್ಲಿ ಕರ್ನಾಟಕ 22 ರನ್‌ಗಳಿಂದ ಪಂಜಾಬ್‌ಗೆ ಮಣಿಯಿತು.

ಸಂಕ್ಷಿಪ್ತ ಸ್ಕೋರು: ಪಂಜಾಬ್ ಕ್ರಿಕೆಟ್ ಸಂಸ್ಥೆ: 50 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 168 (ಐಶ್ಮಿನ್ ಕೌರ್ 28, ಪ್ರಗತಿ ಸಿಂಗ್ 65 ಮನತ್ ಕಶ್ಯಪ್ 20; ಮಿಥಿಲಾ ವಿನೋದ್ 27ಕ್ಕೆ2, ನಿಕ್ಕಿ ಪ್ರಸಾದ್ 27ಕ್ಕೆ2, ಪೂಜಾ ಕುಮಾರಿ 22ಕ್ಕೆ2); ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ: 49 ಓವರ್‌ಗಳಲ್ಲಿ 146ಕ್ಕೆ ಆಲೌಟ್ (ಚಾಂದಸಿ ಕೃಷ್ಣಮೂರ್ತಿ 52; ಮುಸ್ಕಾನ್ ಸೋಗಿ 18ಕ್ಕೆ3, ಮನತ್ ಕಶ್ಯಪ್ 27ಕ್ಕೆ3). ಫಲಿತಾಂಶ: ಪಂಜಾಬ್‌ಗೆ 22 ರನ್‌ಗಳ ಜಯ.

ಜವಾಹರ್ ಸ್ಪೋರ್ಟ್ಸ್ ಚಾಂಪಿಯನ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜವಾಹರ್ ಸ್ಪೋರ್ಟ್ಸ್ ಕ್ಲಬ್ (1) ತಂಡ ರಾಜ್ಯ ಕ್ರಿಕೆಟ್ ಸಂಸ್ಥೆಯು ಎಂ.ಎ.ಟಿ ಆಚಾರ್ಯ ಶೀಲ್ಡ್‌ಗಾಗಿ ಆಯೋಜಿಸಿದ್ದ ಗುಂಪು ಒಂದರ ಎರಡನೇ ಡಿವಿಷನ್ ಕ್ರಿಕೆಟ್ ಲೀಗ್ ಟೂರ್ನಿಯಲ್ಲಿ ಚಾಂಪಿಯನ್ ಆಯಿತು. ಬುಧವಾರ ನಡೆದ ಪಂದ್ಯದಲ್ಲಿ ಜವಾಹರ್ ಕ್ಲಬ್ ತಂಡ ಜುಪಿಟರ್ ಕ್ರಿಕೆಟರ್ಸ್ ಅಸೋಸಿಯೇಷನ್ ತಂಡವನ್ನು 56 ರನ್‌ಗಳಿಂದ ಮಣಿಸಿತು.

ಮಳೆಯಿಂದಾಗಿ ಪಂದ್ಯವು ತಡವಾಗಿ ಆರಂಭವಾಯಿತು. ಹೀಗಾಗಿ 40 ಓವರ್‌ಗಳಿಗೆ ಸೀಮಿತಗೊಳಿಸಲಾಯಿತು. ಮೊದಲು ಬ್ಯಾಟಿಂಗ್ ಮಾಡಿದ ಜವಾಹರ್ ತಂಡ ಎಂಟು ವಿಕೆಟ್‌ಗಳಿಗೆ 262 ರನ್ ಗಳಿಸಿತು. ಪ್ರವೇಶ್ ಕೆ.ಎಂ ಮೂರು ಸಿಕ್ಸರ್ ಮತ್ತು ನಾಲ್ಕು ಬೌಂಡರಿ ಸಿಡಿಸಿ 61 ಎಸೆತಗಳಲ್ಲಿ 62 ರನ್ ಗಳಿಸಿದರು. ಕೃತಿಕ್ ಕೃಷ್ಣ 53 ಎಸೆತಗಳಲ್ಲಿ ನಾಲ್ಕು ಬೌಂಡರಿಗಳೊಂದಿಗೆ 51 ರನ್ ಕಲೆ ಹಾಕಿದರು. ಚೇತನ್ ಎಲ್.ಆರ್ 49 ರನ್ ಗಳಿಸಿದರು.


ಗುರಿ ಬೆನ್ನತ್ತಿದ ಜುಪಿಟರ್ ತಂಡಕ್ಕೆ 37.5 ಓವರ್‌ಗಳಲ್ಲಿ 206 ರನ್ ಗಳಿಸಲಷ್ಟೇ ಸಾಧ್ಯವಾಯಿತು. ಸಿಮೋನ್ ಲೂಯಿಸ್ ಮತ್ತು ರಿಷಿ ಭನ್ಸಾಲಿ ತಲಾ ಎರಡು ವಿಕೆಟ್ ಕಬಳಿಸಿದರು.

ಸಂಕ್ಷಿಪ್ತ ಸ್ಕೋರು: ಜವಾಹರ್ ಸ್ಪೋರ್ಟ್ಸ್ ಕ್ಲಬ್ (1): 40 ಓವರ್‌ಗಳಲ್ಲಿ 8ಕ್ಕೆ 262 (ಚೇತನ್ 49, ಕೃತಿಕ್ ಕೃಷ್ಣ 51, ಪ್ರವೇಶ್ ಕೆ.ಎಂ 62; ಚಿರಂತ್ 40ಕ್ಕೆ3, ಜಾಫರ್ ಅಲಿ 41ಕ್ಕೆ 2); ಜುಪಿಟರ್ ಕ್ರಿಕೆಟರ್ಸ್ ಅಸೋಸಿಯೇಷನ್: 37.5 ಓವರ್‌ಗಳಲ್ಲಿ 206 (ನಿಹಾಲ್ ಭಟ್ಕಳ್‌ಕರ್ 31; ಸಿಮೋನ್ ಲೂಯಿಸ್ 31ಕ್ಕೆ2, ರಿಷಿ ಭನ್ಸಾಲಿ 17ಕ್ಕೆ2). ಫಲಿತಾಂಶ: ಜವಾಹರ್ ಸ್ಪೋರ್ಟ್ಸ್ ಕ್ಲಬ್‌ಗೆ 56 ರನ್‌ಗಳ ಜಯ.



ಚಾಂಪಿಯನ್ ಜವಾಹರ್ ಸ್ಪೋರ್ಟ್ಸ್ ಕ್ಲಬ್ ತಂಡ (ಎಡದಿಂದ): ಮನೋಜ್ ಕುಮಾರ್, ಕುಮಾರ್ ಎಲ್‌ಆರ್, ರಿಷಿ ಭನ್ಸಾಲಿ, ಚೇತನ್ ಎಲ್‌ಆರ್, ಪ್ರವೇಶ್ ಕೆ.ಎಂ, ಅನಿರುದ್ಧ ರಾವ್, ಮಾಧವ್ ಎಂ (ಕುಳಿತವರು): ಕೃತಿಕ್ ಕೃಷ್ಣ, ಸಿಮೋನ್ ಲೂಯಿಸ್, ಗೋವಿಂದಪ್ಪ (ಕೋಚ್), ಮೊಹಮ್ಮದ್ ಅಸ್ಲಾಂ, ತಹಾ ಖಾನ್

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	17,748
ಇಂದಿನ ಅಂತ್ಯ	17,711
▼	37
ದಿನದ ಕನಿಷ್ಠ	17,608

ವಿನಿಮಯ ದರ

$ ಡಾಲರ್	74.14
£ ಪೌಂಡ್	100.26
€ ಯುರೊ	86.47
¥ ಯೆನ್ (100ಕ್ಕೆ)	67

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹460
12 ಮೊಟ್ಟೆಗೆ	₹60
ಮೈಸೂರು	
100 ಮೊಟ್ಟೆಗೆ	₹460

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1500 (1515)
ಸೋಯಾ (ರಿಫೈನ್ಡ್)	₹1325 (1325)
ಸೂರ್ಯಕಾಂತಿ (ರಿಫೈನ್ಡ್)	₹1370(1360)
ಪಾಮೋಲಿನ್	₹1210 (1208)

ಬೆಂಗಳೂರು ಈರುಳ್ಳಿ ಧಾರಣೆ

	ಕ್ವಿಂಟಲ್‌ಗೆ
ದೊಡ್ಡ	₹1500-2000
ಮಧ್ಯಮ	₹1000-1500
ಸಣ್ಣ	₹500-1000

ಹೂಡಿಕೆಗೆ ಇನ್ನೊಂದು ಆಯ್ಕೆ 'ಬೆಳ್ಳಿ ಇಟಿಎಫ್'

ನವದೆಹಲಿ (ಪಿಟಿಐ): ಬೆಳ್ಳಿಯ ವಿನಿಮಯ ವಹಿವಾಟು ನಿಧಿ (ಇಟಿಎಫ್) ಆರಂಭಿಸಲು ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿ (ಸೆಬಿ) ನಿರ್ಧಾರ ಮಾಡಿರುವುದರಿಂದ ಸಣ್ಣ ಹೂಡಿಕೆದಾರರಿಗೆ ಬಂಡವಾಳ ತೊಡಗಿಸಲು ಹೊಸದೊಂದು ಆಯ್ಕೆ ದೊರೆಯಲಿದೆ ಎಂದು ತಜ್ಞರು ಹೇಳಿದ್ದಾರೆ.

ಚಿನ್ನದ ಇಟಿಎಫ್‌ನಂತೆಯೇ ಬೆಳ್ಳಿಯ ಇಟಿಎಫ್ ಕೂಡ ಹೂಡಿಕೆಯನ್ನು ತಕ್ಷಣಕ್ಕೆ ನಗದು ಮಾಡಿಕೊಳ್ಳುವ ಅವಕಾಶವನ್ನು ಮತ್ತು ಇತರ ಹಲವು ಅನುಕೂಲಗಳನ್ನು ಸಣ್ಣ ಹೂಡಿಕೆದಾರರಿಗೆ ನೀಡಲಿದೆ ಎಂದು ಕ್ವಾಂಟಂ ಮ್ಯೂಚುವಲ್ ಫಂಡ್‌ನ ಪರ್ಯಾಯ ಹೂಡಿಕೆಯ ಹಿರಿಯ ನಿಧಿ ನಿರ್ವಾಹಕ ಚಿರಾಗ್ ಮೆಹ್ತಾ ಹೇಳಿದ್ದಾರೆ.

ಬೆಳ್ಳಿಯ ಇಟಿಎಫ್ ಆರಂಭಿಸಲು ಮುಂದಾಗಿರುವುದು ಬೆಳ್ಳಿಯ ಮೇಲೆ ಹೂಡಿಕೆ ಮಾಡಲು ಬಯಸುವ ಸಣ್ಣ ಹೂಡಿಕೆದಾರರ ಪಾಲಿಗೆ ಸೂಕ್ತವಾಗಿದೆ. ಆದಾಗ್ಯೂ, ಹೂಡಿಕೆದಾರರು ಚಿನ್ನದ ಮೇಲಿನ ಹೂಡಿಕೆಯ ಪ್ರಯೋಜನಗಳು ಬೆಳ್ಳಿಗಿಂತ ಹೆಚ್ಚು ಎಂಬುದನ್ನು ಅರ್ಥ ಮಾಡಿಕೊಳ್ಳಬೇಕು ಎಂದು ಮೆಹ್ತಾ ಅವರು ಸಲಹೆ ನೀಡಿದ್ದಾರೆ.

2021ರ ಆಗಸ್ಟ್ 31ರ ವೇಳೆಗೆ ಚಿನ್ನದ ಇಟಿಎಫ್‌ಗಳ ನಿರ್ವಹಣಾ ಸಂಪತ್ತು ಮೌಲ್ಯ ₹ 16,350 ಕೋಟಿಗಳಷ್ಟಾಗಿತ್ತು.



ಭಾರತದಲ್ಲಿ ಬೆಳ್ಳಿ ಇಟಿಎಫ್ ಎಷ್ಟು ವೇಗವಾಗಿ ಬೆಳೆಯಬಹುದು ಎಂಬುದು ಖಚಿತವಿಲ್ಲ. ಏಕೆಂದರೆ, ಚಿನ್ನದ ಇಟಿಎಫ್‌ಅನ್ನು 2007ರಲ್ಲಿ ಪ್ರಾರಂಭಿಸಿದ್ದರೂ ಅದು ಇನ್ನೂ ಉದ್ಯಮದ ಒಟ್ಟು ನಿರ್ವಹಣಾ ಸಂಪತ್ತು ಮೌಲ್ಯದ ಶೇಕಡ 0.45ರಷ್ಟು ಮಾತ್ರ ಇದೆ. ಹೀಗಿದ್ದರೂ, ಹೂಡಿಕೆದಾರರಿಗೆ ಹೆಚ್ಚುವರಿ ಆಯ್ಕೆ ನೀಡಲು ಮ್ಯೂಚುವಲ್ ಫಂಡ್‌ಗಳಿಗೆ ಇದು ಸಹಾಯ ಮಾಡಲಿದೆ ಎಂದು ರಿಲಯನ್ಸ್ ಸೆಕ್ಯುರಿಟೀಸ್‌ನ ಚೀಫ್ ಬಿಸಿನೆಸ್ ಆಫಿಸರ್ ದೀಪಕ್ ಸಿಂಗ್ ಅಭಿಪ್ರಾಯಪಟ್ಟಿದ್ದಾರೆ.

ಬೆಳ್ಳಿ ಇಟಿಎಫ್‌ನಲ್ಲಿ ಹೂಡಿಕೆ ಮಾಡುವವರು ಬೆಳ್ಳಿಯ ಶುದ್ಧತೆ ಅಥವಾ ಕಳ್ಳತನದ ಬಗ್ಗೆ ಚಿಂತಿಸಬೇಕಾಗಿಲ್ಲ. ಇದನ್ನು ವೃತ್ತಿಪರ ವಾಲ್ಟ್ ಮ್ಯಾನೇಜರ್‌ಗಳು ನಿರ್ವಹಿಸುತ್ತಾರೆ ಎಂದು ನಿಯೋ ಮನಿ ಕಂಪನಿಯ ವಹಿವಾಟು ಮುಖ್ಯಸ್ಥ ಸ್ವಪ್ನಿಲ್ ಭಾಸ್ಕರ್ ಹೇಳಿದ್ದಾರೆ.

ಪ್ರತಿ ಜಿಲ್ಲೆಗೊಂದು ಕೈಗಾರಿಕಾ ಪಾರ್ಕ್: ಸಚಿವ ನಿರಾಣಿ

ಪ್ರಜಾವಾಣಿ ವಾರ್ತೆ

ಬೆಳಗಾವಿ: 'ಒಂದು ಜಿಲ್ಲೆ ಒಂದು ಉತ್ಪಾದನೆ' ಕಾರ್ಯಕ್ರಮದಲ್ಲಿ ಪ್ರತಿ ಜಿಲ್ಲೆಯಲ್ಲೊಂದು ಕೈಗಾರಿಕಾ ಪಾರ್ಕ್ ಮಾಡಲಾಗುವುದು' ಎಂದು ಬೃಹತ್ ಕೈಗಾರಿಕಾ ಸಚಿವ ಮುರುಗೇಶ ನಿರಾಣಿ ತಿಳಿಸಿದರು.

ಇಲ್ಲಿ ಬುಧವಾರ ಮಾತನಾಡಿದ ಅವರು, 'ಯಾದಗಿರಿಯಲ್ಲಿ ಫಾರ್ಮಾ ಪಾರ್ಕ್ ಮಾಡಲಾಗುತ್ತಿದೆ. ಅಲ್ಲಿಗೆ ಕೇಂದ್ರ ಸರ್ಕಾರ ₹ 1ಸಾವಿರ ಕೋಟಿ ಕೊಡುತ್ತಿದೆ. 3 ಸಾವಿರ ಎಕರೆ ಸ್ವಾಧೀನ ಪಡಿಸಿಕೊಂಡಿದ್ದು, 80ಕ್ಕೂ ಹೆಚ್ಚು ಔಷಧಿ ಕಂಪನಿಗಳ ಕೈಗಾರಿಕೆಗಳು ಬರಲಿವೆ' ಎಂದು ಹೇಳಿದರು.

'ಕಲಬುರ್ಗಿಯಲ್ಲಿ ಜವಳಿ ಮತ್ತು ಜ್ಯುವೆಲ್ಲರಿ ಪಾರ್ಕ್, ಹುಬ್ಬಳ್ಳಿ-ಧಾರವಾಡದಲ್ಲಿ ಐಟಿ ಪಾರ್ಕ್, ತುಮಕೂರು ಮತ್ತು ಧಾರವಾಡದಲ್ಲಿ ಕೈಗಾರಿಕಾ ಕಾರಿಡಾರ್ ಮಾಡಲಾಗುತ್ತಿದೆ. ಪ್ರತಿ ಕಾರಿಡಾರ್‌ಗೆ ಕೇಂದ್ರ ಸರ್ಕಾರ ತಲಾ ₹ 1 ಸಾವಿರ ಕೋಟಿ ಅನುದಾನ ಕೊಡುತ್ತಿದೆ' ಎಂದು ಮಾಹಿತಿ ನೀಡಿದರು.

'ಎಂಜಿನಿಯರಿಂಗ್, ಎಂ.ಟೆಕ್. ಹಾಗೂ ಪಿಎಚ್.ಡಿ ಪಡೆದವರು ಉದ್ಯಮಿಗಳಾಗಬೇಕು ಎಂಬ ಉದ್ದೇಶದಿಂದ ಪ್ರೋತ್ಸಾಹ ನೀಡುವ ಕಾರ್ಯಕ್ರಮವನ್ನು ಇಲಾಖೆಯಿಂದ ನಡೆಸಲಾಗುವುದು. ಕಲಬುರ್ಗಿ, ಮೈಸೂರು, ಬೆಳಗಾವಿ, ಬೆಂಗಳೂರು ಗ್ರಾಮೀಣ, ಬೆಂಗಳೂರು ನಗರ ಹಾಗೂ ಮಂಗಳೂರಿನಲ್ಲಿ ತಲಾ ಎರಡು ದಿನಗಳ ಕಾರ್ಯಕ್ರಮ ನಡೆಯಲಿದೆ. ಸರ್ಕಾರದಿಂದ ಸಿಗುವ ಸವಲತ್ತುಗಳ ಬಗ್ಗೆ ತಿಳಿಸಲಾಗುವುದು' ಎಂದರು.

ಮುಂಬೈ ಧಾರಣೆ

ಶೇಂಗಾ

29-9-2021

ಜಾವಾ 70/80(ಹೊಸ)	10700-10750
ಜಾವಾ 80/90(ಹೊಸ)	10300-10350
ದಪ್ಪ ಮಧ್ಯಪ್ರದೇಶ(ಹೊಸ)	10600-10700
ದಪ್ಪ ಗುಜರಾತ್(ಹೊಸ)	9600-9700

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1510 (1525)
ಒಂದು ವಾರದ ಡೆಲಿವರಿ	1505 (1520)
ಸೋಯಾ ಕಚ್ಚಾ	1285 (1282)
ಪಾಮ್ ವಾರದ ಡೆಲಿವರಿ	1208 (1206)
ಸೂರ್ಯಕಾಂತಿ ಎಣ್ಣೆ ಕಚ್ಚಾ	1310 (1300)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10 ಗ್ರಾಂ 45,800 (45,850)

ಬೆಳ್ಳಿ ಕೆ.ಜಿ 59,800 (59,750)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಮಹಾಮಂಡಳಕ್ಕೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸಲಹೆ

'ಕೆಎಂಎಫ್‌ನಿಂದ ಬ್ಯಾಂಕ್ ತೆರೆಯಿರಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಾಲು ಉತ್ಪಾದಕರ ಸಹಕಾರ ಸಂಘಗಳ ಹಣಕಾಸು ವಹಿವಾಟು ನಿರ್ವಹಿಸಲು ಕೆಎಂಎಫ್ ನಿಂದಲೇ (ಕರ್ನಾಟಕ ಹಾಲು ಮಹಾಮಂಡಳ) ಬ್ಯಾಂಕ್ ತೆರೆದು ಮುನ್ನಡೆಸುವಂತೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸಲಹೆ ನೀಡಿದರು.

ಕರ್ನಾಟಕ ಹಾಲು ಮಹಾ ಮಂಡಳದ 10 ಹೊಸ ಯೋಜನೆಗಳ ಸಾಮೂಹಿಕ ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಿದ ಅವರು, 'ಬ್ಯಾಂಕ್ ತೆರೆಯುವ ನಿರ್ಧಾರ ಕೈಗೊಂಡರೆ ಅದಕ್ಕೆ ಮೂಲಧನವಾಗಿ ₹100 ಕೋಟಿಯನ್ನು ಸರ್ಕಾರದಿಂದ ನೀಡಲಾಗುವುದು' ಎಂದು ತಿಳಿಸಿದರು.

'ಬ್ಯಾಂಕ್ ತೆರೆಯಲು ಬೇಕಿರುವ ಎಲ್ಲ ರೀತಿಯ ವ್ಯವಸ್ಥೆ ಕೆಎಂಎಫ್‌ನಲ್ಲಿ ಇದೆ. ಅದನ್ನು ಬಳಸಿಕೊಂಡು ಬ್ಯಾಂಕ್ ತೆರೆದರೆ 14 ಒಕ್ಕೂಟಗಳು ಸ್ವಾವಲಂಬಿಯಾಗಬಹುದು' ಎಂದರು.

'ಹಾಲು ಉತ್ಪಾದಕರಿಗೆ ಕೆಳ ಹಂತದಲ್ಲಿ ಪ್ರೋತ್ಸಾಹ ದೊರೆಯಬೇಕಿದೆ. ಈ ಕೆಲಸ ಮಾಡುತ್ತಿರುವ ಹಾಲು ಉತ್ಪಾದಕರ ಸಂಘಗಳ ಕಾರ್ಯದರ್ಶಿ ಮತ್ತು ಸಹಾಯಕರಿಗೆ ಪ್ರೋತ್ಸಾಹ ಧನ ನೀಡಲು ₹50 ಕೋಟಿ ನೆರವು ನೀಡಲಾಗುವುದು. ಮುಂದಿನ ವರ್ಷದಿಂದ ಈ ಖರ್ಚನ್ನೂ ಕೆಎಂಎಫ್ ನಿಭಾಯಿಸಿಕೊಳ್ಳಬೇಕು' ಎಂದು ತಿಳಿಸಿದರು.

'ಮಹಾರಾಷ್ಟ್ರ ಮತ್ತು ಗುಜರಾತ್‌ನಲ್ಲಿ ಸಹಕಾರಿ ಕ್ಷೇತ್ರವೇ ಸರ್ಕಾರವನ್ನು ಆಳುತ್ತಿದೆ. ಕರ್ನಾಟಕದಲ್ಲಿ ಸರ್ಕಾರವೇ ಸಹಕಾರಿ ರಂಗವನ್ನು ಆಳುತ್ತಿದೆ. ಇದು ಬದಲಾಗಬೇಕು. ಸಹಕಾರಿ ರಂಗದ ಪದಾಧಿಕಾರಿಗಳು ಮಾತ್ರ ಸಾಹುಕಾರರಾದರೆ ಸಾಲದು, ಸಹಕಾರ ಸಂಸ್ಥೆಗಳು ಸಾಹುಕಾರ ಆಗುವಂತೆ ನೋಡಿಕೊಳ್ಳಬೇಕು' ಎಂದು ಕಿವಿಮಾತು ಹೇಳಿದರು.

'ಗೋಹತ್ಯೆ ನಿಷೇಧ ಕಾಯ್ದೆ ಜಾರಿಗೆ ತರಲಾಗಿದ್ದು, ಎಲ್ಲ ಜಿಲ್ಲೆಗಳಲ್ಲಿ ಗೋಶಾಲೆಗಳನ್ನು ತೆರೆಯಬೇಕಿದೆ. ಇದಕ್ಕೆ ಕೆಎಂಎಫ್ ಸಹಕಾರ ಬೇಕಿದೆ. ಲಾಭ-ನಷ್ಟ ಎರಡೂ ಇಲ್ಲದಂತೆ ಗೋಶಾಲೆಗಳನ್ನು ನಡೆಸಲು ಯೋಜನೆ ರೂಪಿಸೋಣ. ಆ ಮೂಲಕ ಗೋವುಗಳ ಋಣ ತೀರಿಸೋಣ' ಎಂದರು.

ಕೆಎಂಎಫ್ ಅಧ್ಯಕ್ಷ ಬಾಲಚಂದ್ರ ಜಾರಕಿಹೊಳಿ ಮಾತನಾಡಿ, '7 ಲಕ್ಷ ಲೀಟರ್ ಹಾಲನ್ನು ಪುಡಿ ಮಾಡಿ ಶಾಲಾ ಮಕ್ಕಳಿಗೆ ವಿತರಿಸಲಾಗುತ್ತಿದೆ. ಅದರ ಬದಲು 7 ಲಕ್ಷ ಲೀಟರ್ ಹಾಲನ್ನು ಟೆಟ್ರಾ ಪ್ಯಾಕ್ ಮೂಲಕ ಮಕ್ಕಳಿಗೆ ವಿತರಣೆ ಮಾಡಲು ಸರ್ಕಾರ ಮುಂದಿನ ಬಜೆಟ್‌ನಲ್ಲಿ ಘೋಷಣೆ ಮಾಡಬೇಕು. ಹಾಲನ್ನು ಪುಡಿಯಾಗಿ ಮಾರ್ಪಡಿಸುವ ಒತ್ತಡ ಕೆಎಂಎಫ್‌ಗೆ ಕಡಿಮೆಯಾಗಲಿದೆ' ಎಂದು ಹೇಳಿದರು.

'ಹಾಲು ಉತ್ಪಾದಕರಿಗೆ ಪ್ರತಿ ಲೀಟರ್‌ಗೆ ನೀಡುತ್ತಿರುವ ಪ್ರೋತ್ಸಾಹ ಧನವನ್ನು ₹5 ರಿಂದ ₹ 6ಕ್ಕೆ ಹೆಚ್ಚಳ ಮಾಡಬೇಕು. ಎಲ್ಲ ಹಾಲು ಒಕ್ಕೂಟಗಳಿಂದ ₹110 ಕೋಟಿ ವಿದ್ಯುತ್ ಬಿಲ್ ಪಾವತಿಸಲಾಗುತ್ತಿದೆ. ಎಲ್ಲೆಡೆ ಸೌರ ವಿದ್ಯುತ್ ಚಾವಣಿ ಅಳವಡಿಸಿಕೊಂಡರೆ ಈ ಮೊತ್ತ ಉಳಿತಾಯವಾಗಲಿದೆ. ಸರ್ಕಾರ 4 ಜಿ ವಿನಾಯಿತಿ ನೀಡುವ ಮೂಲಕ ಈ ಯೋಜನೆಗೆ ಸಹಕಾರ ನೀಡಬೇಕು' ಎಂದು ಕೋರಿದರು.

ಹಾಲು ಮಾರಾಟ ದರ ಹೆಚ್ಚಳ ಸದ್ಯಕ್ಕಿಲ್ಲ

'ಹಾಲು ಮಾರಾಟ ದರ ಏರಿಕೆ ಮಾಡಬೇಕು ಎಂಬ ಮನವಿ ಸಂಬಂಧ ಯಾವುದೇ ಭರವಸೆ ನೀಡುವುದಿಲ್ಲ' ಎಂದು ಬಸವರಾಜ ಬೊಮ್ಮಾಯಿ ಸ್ಪಷ್ಟಪಡಿಸಿದರು.

'ಈ ಬಗ್ಗೆ ಸದ್ಯಕ್ಕೆ ಏನನ್ನೂ ಹೇಳಲಾಗದು. ಆದರೆ, ರೈತರ ನೆರವಿಗೆ ಸದಾ ಸರ್ಕಾರ ಬದ್ಧವಾಗಿದೆ. ಅದಕ್ಕಾಗಿಯೇ ಪ್ರೋತ್ಸಾಹ ಧನ ನೀಡಲಾಗುತ್ತಿದೆ' ಎಂದರು.



ಕೆಎಂಎಫ್ ಹೊಸ ಯೋಜನೆಗಳ ಉದ್ಘಾಟನೆಗೆ ಮುನ್ನ ಹೊರಗೆ ಕಟ್ಟಲಾಗಿದ್ದ ಹಸುವಿಗೆ ಹೂವಿನ ಹಾರ ಹಾಕಿದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ನಂತರ ಅದರ ಹಣೆಗೆ ಮುತ್ತಿಟ್ಟರು. ಕೆಎಂಎಫ್ ವ್ಯವಸ್ಥಾಪಕ ನಿರ್ದೇಶಕ ಬಿ.ಸಿ. ಸತೀಶ್, ಸಹಕಾರ ಸಚಿವ ಎಸ್‌.ಟಿ. ಸೋಮಶೇಖರ್, ಪಶುಸಂಗೋಪನಾ ಸಚಿವ ಪ್ರಭು ಚವ್ಹಾಣ್ ಇದ್ದರು – ಪ್ರಜಾವಾಣಿ ಚಿತ್ರ

ಹೊಸ ಯೋಜನೆಗಳು

- ನಂದಿನಿ ಹೈಟೆಕ್ ಮೆಗಾ ಹಾಲಿನ ಪುಡಿ ಉತ್ಪಾದನಾ ಘಟಕ (ಕಣ್ವ, ರಾಮನಗರ ಜಿಲ್ಲೆ)
- ಪಶು ಆಹಾರ ಉತ್ಪಾದನಾ ಘಟಕ-2 (ಧಾರವಾಡ)
- ಪಶು ಆಹಾರ ಉತ್ಪಾದನಾ ಘಟಕ-2 (ಗುಬ್ಬಿ, ತುಮಕೂರು ಜಿಲ್ಲೆ)
- ಹೈಟೆಕ್ ಬುಲ್ ಮದರ್ ಫಾರಂ ಮತ್ತು ಮೇವು ಅಭಿವೃದ್ಧಿ ಕೇಂದ್ರ (ಹೆಸರಘಟ್ಟ, ಬೆಂಗಳೂರು)
- ರಾಜ್ಯ ಕೇಂದ್ರೀಯ ಪ್ರಯೋಗಾಲಯ ಕೆಎಂಎಫ್ ಸಂಕೀರ್ಣ (ಬೆಂಗಳೂರು)
- ಕೆಎಂಎಫ್ ತರಬೇತಿ ಕೇಂದ್ರ (ಕಲಬುರ್ಗಿ ಡೇರಿ ಆವರಣ)
- ಹಾಸನ ಪಶು ಆಹಾರ ಘಟಕದಲ್ಲಿ ಗೋದಾಮು, ಆಡಳಿತ ಕಚೇರಿ ಮತ್ತು ಇತರೆ ಅಭಿವೃದ್ಧಿ ಕಾಮಗಾರಿ
- ರಾಜಾನುಕುಂಟೆ ಪಶು ಆಹಾರ ಘಟಕದಲ್ಲಿ ಗೋದಾಮು, ಆಡಳಿತ ಕಚೇರಿ ಮತ್ತು ಇತರೆ ಅಭಿವೃದ್ಧಿ ಕಾಮಗಾರಿ
- ಶಿಕಾರಿಪುರ ಪಶು ಆಹಾರ ಘಟಕದಲ್ಲಿ ಕಾಕಂಬಿ ಶೇಖರಣಾ ಟ್ಯಾಂಕ್
- ಬೆಣ್ಣೆ ದಾಸ್ತಾನಿನ ಡೀಪ್ ಫ್ರೀಜರ್ ಘಟಕ ಚಲ್ಲಘಟ್ಟ (ಬೆಂಗಳೂರು)

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	600-650
ನಡುಗೋಲು	700-750
ರಾಶಿ	800-850
ರಾಶಿ ಉತ್ತಮ	900-950
ಜರಡಿ	1000-1050
ಹೆರಕಿದ್ದು	1200-1300
ಹಸಿರು ಸಾಧಾರಣ	800-850
ಹಸಿರು ಉತ್ತಮ	1000-1050
ಹಸಿರು ಅತಿ ಉತ್ತಮ	1300-1400
ಕಾಳು ಮೆಣಸು	390
ಅಡಿಕೆ	
ಬಂಟ್ವಾಳ	
ಕೋಕ	10000-25000
ಹೊಸತು	25000-50000
ಹಳತು	46000-51500
ಕುಮಟ	
ಚಿಪ್ಪು	37019-41509
ಕೋಕ	22509-37019
ಫ್ಯಾಕ್ಟರಿ	16099-23169
ಹೊಸಚಾಲಿ	45609-48610
ಹಳೆಚಾಲಿ	48099-48099
ಪುತ್ತೂರು	
ಕೋಕ	10500-26000
ಹೊಸತು	35500-50000
ಸಿದ್ದಾಪುರ	
ಬಿಳಿಗೋಟು	33980-42299
ಕೋಕ	28899-38900
ಚಾಲಿ	46699-48409
ಕೆಂಪುಗೋಟು	31090-35289
ರಾಶಿ	49549-50509
ತಟ್ಟಿಬೆಟ್ಟೆ	38899-46509
ಶಿರಸಿ	
ಬೆಟ್ಟೆ	31899-47999
ಬಿಳಿಗೋಟು	30299-43389
ಚಾಲಿ	45899-48721
ರಾಶಿ	47669-50508
ಶಿವಮೊಗ್ಗ (ಎಪಿಎಂಸಿ)	
ಬೆಟ್ಟೆ	48819-53099
ಗೊರಬಲು	16000-39069
ನ್ಯೂ ವೆರೈಟಿ	45509-47539
ರಾಶಿ	45209-51399
ಚನ್ನಗಿರಿ	
ರಾಶಿ	44999-51499
ಬೆಟ್ಟೆ	36599-37401
ರಾಮನಗರ ರೇಷ್ಮೆ	
ಮಿಶ್ರ ತಳಿ	297-498
ದ್ವಿತಳಿ	257-533

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	---	---	13500	--- ಸೆಂಟ್ಸ್
ಎಸಿ	---	---	5350	
ಆರ್‌ಪಿ	---	---	6300	ಲಂಡನ್
ಆರ್‌ಸಿ	---	---	3680	--- ಡಾಲರ್ಸ್

ಪಿರಾಮಲ್ ಸಮೂಹದಿಂದ ಡಿಎಚ್‌ಎಫ್‌ಎಲ್ ಸ್ವಾಧೀನ

ಮುಂಬೈ (ಪಿಟಿಐ): ದಿವಾನ್ ಹೌಸಿಂಗ್ ಫೈನಾನ್ಸ್ (ಡಿಎಚ್‌ಎಫ್‌ಎಲ್) ಕಂಪನಿಗೆ ಸಾಲ ನೀಡಿದ್ದವರಿಗೆ ಒಟ್ಟು ₹ 34,250 ಕೋಟಿ ಪಾವತಿಸಿ, ಕಂಪನಿಯನ್ನು ಸ್ವಾಧೀನಕ್ಕೆ ತೆಗೆದುಕೊಂಡಿರುವುದಾಗಿ ಪಿರಾಮಲ್ ಎಂಟರ್‌ಪ್ರೈಸಸ್ ಬುಧವಾರ ತಿಳಿಸಿದೆ.

ಡಿಎಚ್‌ಎಫ್‌ಎಲ್‌ಗೆ ಸಾಲ ನೀಡಿದ್ದವರಿಗೆ ಹಾಗೂ ಈ ಕಂಪನಿಯಲ್ಲಿ ನಿಶ್ಚಿತ ಠೇವಣಿ ಇರಿಸಿದ್ದವರಿಗೆ ಒಟ್ಟು ₹ 38 ಸಾವಿರ ಕೋಟಿ ಮರಳಿ ಸಿಗಲಿದೆ. ಪಿರಾಮಲ್ ಪಾವತಿಸುವ ₹ 34,250 ಕೋಟಿ ಹಾಗೂ ಡಿಎಚ್‌ಎಫ್‌ಎಲ್ ಬಳಿ ಇರುವ ಸರಿಸುಮಾರು ₹ 3,800 ಕೋಟಿ ಸೇರಿಸಿದರೆ ಇಷ್ಟು ಮೊತ್ತ ಆಗಲಿದೆ.

'ನಾವು ಪಿರಾಮಲ್ ಕ್ಯಾಪಿಟಲ್ ಆ್ಯಂಡ್ ಹೌಸಿಂಗ್ ಫೈನಾನ್ಸ್ ಲಿಮಿಟೆಡ್ (ಪಿಸಿಎಚ್‌ಎಫ್‌ಎಲ್) ಹಾಗೂ ಡಿಎಚ್‌ಎಫ್‌ಎಲ್ ಕಂಪನಿಗಳನ್ನು ನಾವು ವಿಲೀನ ಮಾಡುತ್ತೇವೆ. ವಿಲೀನವು ಮುಂದಿನ ಎರಡು ವಾರಗಳಲ್ಲಿ ಆಗಲಿದೆ' ಎಂದು ಪಿರಾಮಲ್ ಸಮೂಹದ ಅಧ್ಯಕ್ಷ ಅಜಯ್ ಪಿರಾಮಲ್ ಹೇಳಿದ್ದಾರೆ. ಮುಂದಿನ ಮೂರರಿಂದ ನಾಲ್ಕು ವರ್ಷಗಳಲ್ಲಿ ದೇಶದ ಒಂದು ಸಾವಿರ ಕಡೆಗಳಲ್ಲಿ ಕಂಪನಿ ಅಸ್ತಿತ್ವ ಹೊಂದಿರಲಿದೆ, ಒಂದು ಸಾವಿರ ಜನರನ್ನು ಹೆಚ್ಚುವರಿಯಾಗಿ ನೇಮಕ ಮಾಡಿಕೊಳ್ಳಲಿದೆ ಎಂದು ತಿಳಿಸಿದ್ದಾರೆ.

ಇಸಿಜಿಸಿ ಐಪಿಒ: ಕೇಂದ್ರ ಸಚಿವ ಸಂಪುಟ ಒಪ್ಪಿಗೆ

ನವದೆಹಲಿ (ಪಿಟಿಐ): ಸರ್ಕಾರಿ ಸ್ವಾಮ್ಯದ ಇಸಿಜಿಸಿ ಲಿಮಿಟೆಡ್ ಕಂಪನಿಗೆ ₹ 4,400 ಕೋಟಿ ಬಂಡವಾಳ ಒದಗಿಸಲು ಕೇಂದ್ರ ಸಚಿವ ಸಂಪುಟವು ಬುಧವಾರ ಅನುಮೋದನೆ ನೀಡಿದೆ. ಅಲ್ಲದೆ, ಈ ಕಂಪನಿಯ ಷೇರುಗಳನ್ನು ಐಪಿಒ ಮೂಲಕ ಸಾರ್ವಜನಿಕರಿಗೆ ಮುಕ್ತವಾಗಿಸುವ ಪ್ರಸ್ತಾವಕ್ಕೂ ಸಂಪುಟ ಸಮ್ಮತಿ ನೀಡಿದೆ.

ಈ ಬಂಡವಾಳವನ್ನು ಐದು ವರ್ಷಗಳ ಅವಧಿಯಲ್ಲಿ ನೀಡಲಾಗುತ್ತದೆ ಎಂದು ಕೇಂದ್ರ ವಾಣಿಜ್ಯ ಸಚಿವ ಪೀಯೂಷ್ ಗೋಯಲ್ ಅವರು ತಿಳಿಸಿದರು. ಇಸಿಜಿಸಿ ಕಂಪನಿಗೆ ತಕ್ಷಣಕ್ಕೆ ₹ 500 ಕೋಟಿ ಬಂಡವಾಳ ಒದಗಿಸಲಾಗುತ್ತದೆ, ಮುಂದಿನ ಹಣಕಾಸು ವರ್ಷದಲ್ಲಿ ₹ 500 ಕೋಟಿ ಒದಗಿಸಲಾಗುತ್ತದೆ ಎಂದು ಸಚಿವರು ಹೇಳಿದರು.

ಕಂಪನಿಯ ಐಪಿಒ ಪ್ರಕ್ರಿಯೆಯನ್ನು ಸರ್ಕಾರವು ಶೀಘ್ರದಲ್ಲಿಯೇ ಆರಂಭಿಸಲಿದೆ. ಮುಂದಿನ ಹಣಕಾಸು ವರ್ಷದಲ್ಲಿ ಐಪಿಒ ನಡೆಯಲಿದೆ.

ರಾಷ್ಟ್ರೀಯ ರಫ್ತು ವಿಮೆ ಖಾತೆ (ಎನ್‌ಇಐಎ) ಯೋಜನೆಯನ್ನು ಮುಂದುವರಿಸುವ ತೀರ್ಮಾನವನ್ನೂ ಕೇಂದ್ರ ಸರ್ಕಾರವು ಕೈಗೊಂಡಿದೆ. ಈ ಯೋಜನೆಗೆ ಮುಂದಿನ ಐದು ವರ್ಷಗಳಲ್ಲಿ ಒಟ್ಟು ₹ 1,650 ಕೋಟಿ ಧನಸಹಾಯ ಒದಗಿಸಲು ತೀರ್ಮಾನಿಸಿದೆ.

ಎನ್‌ಇಐಎಗೆ ಬಂಡವಾಳ ಒದಗಿಸುವ ಕ್ರಮದಿಂದ 2.6 ಲಕ್ಷ ಹೊಸ ಉದ್ಯೋಗ ಸೃಷ್ಟಿಗೆ ಸಹಾಯ ಆಗಲಿದೆ. ಇದರಲ್ಲಿ 12 ಸಾವಿರ ಉದ್ಯೋಗಗಳು ಸಂಘಟಿತ ವಲಯದಲ್ಲಿ ಸೃಷ್ಟಿಯಾಗಲಿವೆ ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

ಇಂಡೆಲ್ ಮನಿ, ಇಂಡಸ್‌ಇಂಡ್ ಒಪ್ಪಂದ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬ್ಯಾಂಕೇತರ ಹಣಕಾಸು ಸಂಸ್ಥೆಯಾಗಿರುವ (ಎನ್‌ಬಿಎಫ್‌ಸಿ) ಇಂಡೆಲ್ ಮನಿ, ಚಿನ್ನದ ಮೇಲಿನ ಸಾಲಕ್ಕೆ ಸಂಬಂಧಿಸಿದಂತೆ ಇಂಡಸ್‌ಇಂಡ್ ಬ್ಯಾಂಕ್ ಜೊತೆ ಒಪ್ಪಂದ ಮಾಡಿಕೊಂಡಿದೆ. ಸ್ಪರ್ಧಾತ್ಮಕ ಬಡ್ಡಿ ದರದಲ್ಲಿ ಚಿನ್ನದ ಮೇಲಿನ ಸಾಲವನ್ನು ಹೆಚ್ಚಿನ ಸಂಖ್ಯೆಯ ಗ್ರಾಹಕರಿಗೆ ನೀಡಲು ಈ ಒಪ್ಪಂದವು ಸಹಕಾರಿ ಆಗಲಿದೆ ಎಂದು ಪ್ರಕಟಣೆ ತಿಳಿಸಿದೆ.

ಈ ಒಪ್ಪಂದದ ಪ್ರಕಾರ ಇಂಡೆಲ್ ಮನಿ ಕಂಪನಿಯು ಸಾಲದ ಶೇಕಡ 20ರಷ್ಟು ಮೊತ್ತವನ್ನು, ಇಂಡಸ್‌ಇಂಡ್ ಬ್ಯಾಂಕ್ ಇನ್ನುಳಿದ ಶೇ 80ರಷ್ಟು ಮೊತ್ತವನ್ನು ನೀಡಲಿವೆ. ಸದ್ಯಕ್ಕೆ ಇದು ಪ್ರಾಯೋಗಿಕವಾಗಿ ಜಾರಿಗೆ ಬರಲಿದ್ದು, ನಂತರದಲ್ಲಿ ದೇಶದಾದ್ಯಂತ ವಿಸ್ತರಣೆ ಕಾಣಲಿದೆ.

'ಇಂಡಸ್‌ಇಂಡ್ ಬ್ಯಾಂಕ್ ಜೊತೆ ಒಪ್ಪಂದ ಮಾಡಿಕೊಳ್ಳುತ್ತಿರುವುದು ಸಂತಸ ತಂದಿದೆ. ಪಾಲುದಾರಿಕೆಯಲ್ಲಿ ಸಾಲ ನೀಡುವ ಈ ಒಪ್ಪಂದವು ನಮ್ಮ ಮೇಲೆ ಹೆಚ್ಚಿನ ಜವಾಬ್ದಾರಿಯನ್ನು ಹೊರಿಸುತ್ತದೆ. ಇದು ಬ್ಯಾಂಕ್ ನಮ್ಮ ಮೇಲೆ ಇರಿಸಿರುವ ವಿಶ್ವಾಸವನ್ನು ಕೂಡ ತೋರಿಸುತ್ತದೆ' ಎಂದು ಇಂಡೆಲ್ ಮನಿ ಕಂಪನಿಯ ಕಾರ್ಯನಿರ್ವಾಹಕ ನಿರ್ದೇಶಕ ಮತ್ತು ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿ ಉಮೇಶ್ ಮೋಹನನ್ ಹೇಳಿದ್ದಾರೆ.

ಚಾಹಲ್, ಶಾಬಾಜ್‌ಗೆ ಎರಡು, ಹರ್ಷಲ್‌ಗೆ ಮೂರು ವಿಕೆಟ್: ಬೆಂಗಳೂರಿಗೆ ಜಯ

ಮ್ಯಾಕ್ಸ್‌ವೆಲ್, ಭರತ್ ಮಿಂಚು

ದುಬೈ (ಪಿಟಿಐ): ಅರ್ಧಶತಕ ಗಳಿಸಿದ ಗ್ಲೆನ್ ಮ್ಯಾಕ್ಸ್‌ವೆಲ್ ಮತ್ತು ಯುವ ಆಟಗಾರ ಶ್ರೀಕರ್ ಭರತ್, ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ಬೌಲರ್‌ಗಳ ಶ್ರಮ ವ್ಯರ್ಥವಾಗದಂತೆ ನೋಡಿಕೊಂಡರು.

ಬುಧವಾರ ಇಲ್ಲಿ ನಡೆದ ಪಂದ್ಯದಲ್ಲಿ ರಾಜಸ್ಥಾನ್ ರಾಯಲ್ಸ್ ಎದುರು ಆರ್‌ಸಿಬಿಯು 7 ವಿಕೆಟ್‌ಗಳಿಂದ ಜಯಿಸಲು ಮ್ಯಾಕ್ಸ್‌ವೆಲ್ (ಔಟಾಗದೆ 50; 30ಎ) ಮತ್ತು ಭರತ್ (44; 35ಎ) ಅವರ ಆಟ ಕಾರಣವಾಯಿತು.

ಟಾಸ್ ಗೆದ್ದ ಆರ್‌ಸಿಬಿ ತಂಡದ ನಾಯಕ ವಿರಾಟ್ ಕೊಹ್ಲಿ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡರು. ತಂಡದ ಸ್ಪಿನ್ನರ್ ಯಜುವೇಂದ್ರ ಚಾಹಲ್, ಶಾಬಾಜ್ ಅಹಮ್ಮದ್ ಮತ್ತು ಹರ್ಷಲ್ ಪಟೇಲ್ ಅವರ ಬೌಲಿಂಗ್ ಮುಂದೆ ರಾಜಸ್ಥಾನ್ 20 ಓವರ್‌ಗಳಲ್ಲಿ 9 ವಿಕೆಟ್‌ಗಳಿಗೆ 149 ರನ್ ಗಳಿಸಿತು. ಗುರಿ ಬೆನ್ನತ್ತಿದ ಬೆಂಗಳೂರು ತಂಡವು 17.1 ಓವರ್‌ಗಳಲ್ಲಿ 3 ವಿಕೆಟ್‌ಗಳಿಗೆ 153 ರನ್ ಗಳಿಸಿತು. ಈ ಜಯದೊಂದಿಗೆ ವಿರಾಟ್ ಬಳಗವು 14 ಅಂಕ ಗಳಿಸಿ ಪಾಯಿಂಟ್ ಪಟ್ಟಿಯಲ್ಲಿ ಮೂರನೇ ಸ್ಥಾನಕ್ಕೇರಿತು.

ಸಾಧಾರಣ ಗುರಿ ಬೆನ್ನತ್ತಿದ ಆರ್‌ಸಿಬಿ ತಂಡಕ್ಕೆ ವಿರಾಟ್ ಮತ್ತು ದೇವದತ್ತ ಜೋಡಿಯು ಉತ್ತಮ ಆರಂಭವನ್ನೇ ನೀಡಿತು. ಮೊದಲ ವಿಕೆಟ್‌ಗೆ 48 ರನ್ ಸೇರಿಸಿದರು. ಆರನೇ ಓವರ್‌ನಲ್ಲಿ ಮುಸ್ತಫಿಜುರ್ ಎಸೆತವನ್ನು ಸರಿಯಾಗಿ ಅಂದಾಜಿಸದ ದೇವದತ್ತ ಕ್ಲೀನ್‌ಬೌಲ್ಡ್ ಆದರು. ನಂತರದ ಓವರ್‌ನಲ್ಲಿ ವಿರಾಟ್ ರನ್‌ಔಟ್ ಆದರು. ಕಳೆದೆರಡೂ ಪಂದ್ಯಗಳಲ್ಲಿ ವಿರಾಟ್ ಅರ್ಧಶತಕ ಗಳಿಸಿದ್ದರು.

ಕ್ರೀಸ್‌ನಲ್ಲಿದ್ದ ಭರತ್ ಜೊತೆಗೂಡಿದ ಮ್ಯಾಕ್ಸ್‌ವೆಲ್ ಎದುರಾಳಿ ಬೌಲರ್‌ಗಳಿಗೆ ಕಠಿಣ ಸವಾಲೊಡ್ಡಿದರು. ಭರತ್ ಅವರೊಂದಿಗೆ ಮೂರನೇ ವಿಕೆಟ್ ಜೊತೆಯಾಟದಲ್ಲಿ 69 ರನ್ ಸೇರಿಸಿದರು. ಇದರಿಂದಾಗಿ ಜಯದ ಹಾದಿ ಸುಲಭವಾಯಿತು.


ಗ್ಲೆನ್ ಮ್ಯಾಕ್ಸ್‌ವೆಲ್ ಆಟದ ವೈಖರಿ– ಪಿಟಿಐ ಚಿತ್ರ

ಲೂಯಿಸ್ ಅರ್ಧಶತಕ: ರಾಜಸ್ಥಾನ್ ತಂಡದ ಆರಂಭಿಕ ಜೋಡಿ ಎವಿನ್ ಲೂಯಿಸ್ (58 ರನ್) ಮತ್ತು ಯಶಸ್ವಿ ಜೈಸ್ವಾಲ್ (31 ರನ್) ಮೊದಲ ವಿಕೆಟ್‌ಗೆ 77 ರನ್ ಕಲೆಹಾಕಿದರು. ಆದರೆ ಒಂಬತ್ತನೇ ಓವರ್‌ನಲ್ಲಿ ಡ್ಯಾನ್ ಕ್ರಿಸ್ಟಿಯನ್ ಬೌಲಿಂಗ್‌ನಲ್ಲಿ ಜೈಸ್ವಾಲ್ ಔಟಾದ ನಂತರ ತಂಡದ ಬ್ಯಾಟಿಂಗ್ ಕುಸಿತ ಆರಂಭವಾಯಿತು.

ಐಪಿಎಲ್‌ನಲ್ಲಿ ಮೊದಲ ಬಾರಿ ಆಡುತ್ತಿರು ಜಾರ್ಜ್ ಗಾರ್ಟನ್, ಲೂಯಿಸ್ ವಿಕೆಟ್ ಕಬಳಿಸಿದರು. ಇದರ ನಂತರ ಆರ್‌ಸಿಬಿ ಬೌಲರ್‌ಗಳ ಉತ್ತಮ ಬೌಲಿಂಗ್‌ನಿಂದಾಗಿ ರಾಜಸ್ಥಾನ್ ತಂಡವು 49 ರನ್‌ಗಳ ಅಂತರದಲ್ಲಿ ಏಳು ವಿಕೆಟ್‌ಗಳನ್ನು ಕಳೆದುಕೊಂಡಿತು. ಸಂಜು ಸ್ಯಾಮ್ಸನ್ (19 ರನ್) ಮತ್ತು ಕ್ರಿಸ್ ಮೊರಿಸ್ (14 ರನ್) ಅವರಿಬ್ಬರನ್ನು ಬಿಟ್ಟರೆ ಉಳಿದವರು ವಿಫಲರಾದರು.

ಸ್ಕೋರ್ ಕಾರ್ಡ್

ರಾಜಸ್ಥಾನ್ ರಾಯಲ್ಸ್ 9ಕ್ಕೆ 149 (20 ಓವರ್)

ಎವಿನ್ ಸಿ ಭರತ್ ಬಿ ಗಾರ್ಟನ್ 58 (37 ಎ, 4x5, 6x3), ಯಶಸ್ವಿ ಸಿ ಸಿರಾಜ್ ಬಿ ಕ್ರಿಸ್ಟಿಯನ್ 31 (22 ಎ, 4x3, 6x2), ಸಂಜು ಸಿ ದೇವದತ್ತ ಬಿ ಶಹಬಾಜ್ 19 (15 ಎ, 6x2), ಮಹಿಪಾಲ್ ಸ್ಟಂಪ್ಡ್ ಭರತ್ ಬಿ ಚಾಹಲ್ 3 (4 ಎ), ಲಿವಿಂಗ್‌ಸ್ಟೋನ್ ಸಿ ಡಿವಿಲಿಯರ್ಸ್ ಬಿ ಚಾಹಲ್ 6 (9 ಎ), ತೇವಾಟಿಯ ಸಿ ದೇವದತ್ತ ಬಿ ಶಹಬಾಜ್ 2 (3 ಎ), ಪರಾಗ್ ಸಿ ಕೊಹ್ಲಿ ಬಿ ಪಟೇಲ್ 9 (16 ಎ), ಮೊರಿಸ್ ಸಿ ದೇವದತ್ತ ಬಿ ಹರ್ಷಲ್ 14 (11 ಎ, 4x2), ಸಕಾರಿಯ ಸಿ ಡಿವಿಲಿಯರ್ಸ್ ಬಿ ಹರ್ಷಲ್ 2 (2 ಎ), ತ್ಯಾಗಿ ಔಟಾಗದೆ 1 (1 ಎ)

ಇತರೆ (ಲೆಗ್ ಬೈ 1, ವೈಡ್ 3) 4

ವಿಕೆಟ್ ಪತನ: 1-77 (ಯಶಸ್ವಿ ಜೈಸ್ವಾಲ್, 8.2), 2-100 (ಎವಿನ್ ಲೂಯಿಸ್, 11.1), 3-113 (ಮಹಿಪಾಲ್ ಲೊಮ್ರೊರ್, 12.5), 4-113 (ಸಂಜು ಸ್ಯಾಮ್ಸನ್, 13.1), 5-117 (ರಾಹುಲ್ ತೇವಾಟಿಯ, 13.6), 6-127 (ಲಿಯಾಮ್ ಲಿವಿಂಗ್‌ಸ್ಟೋನ್, 16.2), 7-146 (ರಿಯಾನ್ ಪರಾಗ್, 19.2), 8-146 (ಕ್ರಿಸ್ ಮೊರಿಸ್, 19.3), 9-149 (ಚೇತನ್ ಸಕಾರಿಯ, 19.6).

ಬೌಲಿಂಗ್: ಜಾರ್ಜ್ ಗಾರ್ಟನ್ 3-0-30-1, ಮೊಹಮ್ಮದ್ ಸಿರಾಜ್ 3-0-18-0, ಗ್ಲೆನ್ ಮ್ಯಾಕ್ಸ್‌ವೆಲ್ 2-0-17-0, ಹರ್ಷಲ್ ಪಟೇಲ್ 4-0-34-3, ಡ್ಯಾನ್ ಕ್ರಿಸ್ಟಿಯನ್ 2-0-21-1, ಯಜುವೇಂದ್ರ ಚಾಹಲ್ 4-0-18-2, ಶಹಬಾಜ್ ಅಹಮ್ಮದ್ 2-0-10-2

ರಾಯಲ್ ಚಾಲೆಂಜರ್ಸ್ ಬೆಂಗಳೂರು 3ಕ್ಕೆ 153 (17.1)

ವಿರಾಟ್ ರನೌಟ್ 25 (20 ಎ, 4X1), ದೇವದತ್ತ ಬಿ ಮುಸ್ತಫಿಜುರ್ ರೆಹಮಾನ್ 22 (17ಎ, 4X4), ಭರತ್ ಸಿ ಅನುಜ್ (ಬದಲಿ) ಬಿ ಮುಸ್ತಫಿಜುರ್ 44 (35ಎ, 4X3, 6X1), ಮ್ಯಾಕ್ಸ್‌ವೆಲ್ ಔಟಾಗದೆ 50 (30ಎ, 4X6, 6X1), ಡಿವಿಲಿಯರ್ಸ್ ಔಟಾಗದೆ 4 (1ಎ, 4X1)

ಇತರೆ (ಬೈ 2, ವೈಡ್ 6)8

ವಿಕೆಟ್ ಪತನ: 1-48 (ದೇವದತ್ತ ಪಡಿಕ್ಕಲ್, 5.2), 2-58 (ವಿರಾಟ್ ಕೊಹ್ಲಿ, 6.5), 3-127 (ಶ್ರೀಕರ್ ಭರತ್, 15.6).

ಬೌಲಿಂಗ್: ಕ್ರಿಸ್ ಮೊರಿಸ್ 4-0-50-0, ಕಾರ್ತಿಕ್ ತ್ಯಾಗಿ 2-0-23-0, ಚೇತನ್ ಸಕಾರಿಯಾ 3-0-18-0, ಮುಸ್ತಫಿಜುರ್ ರೆಹಮಾನ್ 3-0-20-2, ರಾಹುಲ್ ತೇವಾಟಿಯಾ 3-0-23-0, ಮಹಿಪಾಲ್ ಲೊಮ್ರೊರ್ 2-0-13-0, ರಿಯಾನ್ ಪರಾಗ್ 0.1-0-4-0

ಫಲಿತಾಂಶ: ರಾಯಲ್ ಚಾಲೆಂಜರ್ಸ್ ಬೆಂಗಳೂರಿಗೆ 7 ವಿಕೆಟ್ ಜಯ

ಪಾಯಿಂಟ್ ಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಟೈ	ಅಂಕ
ಚೆನ್ನೈ ಸೂಪರ್ ಕಿಂಗ್ಸ್	10	8	2	00	00	16
ಡೆಲ್ಲಿ ಕ್ಯಾಪಿಟಲ್ಸ್	11	8	3	00	00	16
ಬೆಂಗಳೂರು	11	7	4	00	00	14
ಕೋಲ್ಕತ್ತ ನೈಟ್ ರೈಡರ್ಸ್	11	5	6	00	00	10
ಮುಂಬೈ ಇಂಡಿಯನ್ಸ್	11	5	6	00	00	10
ಪಂಜಾಬ್	11	4	7	00	00	8
ರಾಜಸ್ಥಾನ	11	4	7	00	00	8
ಹೈದರಾಬಾದ್	10	2	8	00	00	4

* ಬುಧವಾರದ ಪಂದ್ಯದ ಅಂತ್ಯಕ್ಕೆ

ಐಪಿಎಲ್ ಮತ್ತು ಕ್ರೀಡಾ ಸುದ್ದಿಗಳ ವಿಸ್ತೃತ ವರದಿ, ಮಾಹಿತಿಗಾಗಿ ಭೇಟಿ ನೀಡಿ
https://www.prajavani.net/cricket

ಪರ್ಪಲ್ ಕ್ಯಾಪ್ (ಹೆಚ್ಚು ವಿಕೆಟ್ ಗಳಿಸಿದವರು)

ಆಟಗಾರ	ತಂಡ	ವಿಕೆಟ್
ಹರ್ಷಲ್	ಆರ್‌ಸಿಬಿ	26
ಆವೇಶ್ ಖಾನ್	ಡೆಲ್ಲಿ	18
ಬೂಮ್ರಾ	ಮುಂಬೈ	16

ಆರೆಂಜ್ ಕ್ಯಾಪ್ (ಹೆಚ್ಚು ರನ್ ಗಳಿಸಿದವರು)

ಆಟಗಾರ	ತಂಡ	ರನ್
ಶಿಖರ್ ಧವನ್	ಡೆಲ್ಲಿ	454
ಸಂಜು ಸ್ಯಾಮ್ಸನ್	ರಾಜಸ್ಥಾನ್	452
ಕೆ.ಎಲ್.ರಾಹುಲ್	ಪಂಜಾಬ್	422

ವಿಶ್ವ ಟಿಟಿ: ಅನರ್ಘ್ಯಾಗೆ ಪ್ರಶಸ್ತಿ

ಬೆಂಗಳೂರು: ಶ್ರೇಷ್ಠ ಸಾಮರ್ಥ್ಯ ತೋರಿದ ಕರ್ನಾಟಕದ ಅನರ್ಘ್ಯಾ ಮಂಜುನಾಥ್ ಅವರು ವಿಶ್ವ ಟೇಬಲ್ ಟೆನಿಸ್ ಕಂಟೆಂಡರ್ ಟೂರ್ನಿಯಲ್ಲಿ ಪ್ರಶಸ್ತಿಗೆ ಮುತ್ತಿಟ್ಟಿದ್ದಾರೆ.


ಸರ್ಬಿಯಾದ ಬೆಲ್‌ಗ್ರೇಡ್‌ನಲ್ಲಿ ಮಂಗಳವಾರ ರಾತ್ರಿ ನಡೆದ 17 ವರ್ಷದೊಳಗಿನವರ ಸಿಂಗಲ್ಸ್ ವಿಭಾಗದ ಫೈನಲ್‌ನಲ್ಲಿ ಅವರು 11-6, 7-11,11-4,8-11,11-6ರಿಂದ ಹಂಗರಿಯ ಟೊಲ್ಗೆಸ್ ದೊರೊತಿ ಅವರನ್ನು ಪರಾಭವಗೊಳಿಸಿದರು.

ಮೊದಲ ಗೇಮ್‌ನಲ್ಲಿ ಸುಲಭವಾಗಿ ಗೆದ್ದ ಭಾರತದ ಆಟಗಾರ್ತಿಗೆ ಎದುರಾಳಿ ಟೊಲ್ಗೆಸ್ ಎರಡನೇ ಗೇಮ್‌ನಲ್ಲಿ ತಿರುಗೇಟು ನೀಡಿ ತಮ್ಮದಾಗಿಸಿಕೊಂಡರು. ಬಳಿಕ ರಂಗೇರಿದ ಆಟದಲ್ಲಿ ಮೂರನೇ ಗೇಮ್ ಅನರ್ಘ್ಯಾ ವಶವಾದರೆ, ನಂತರದ ಗೇಮ್‌ನಲ್ಲಿ ಹಂಗರಿ ಆಟಗಾರ್ತಿ ಪ್ರಾಬಲ್ಯ ಮೆರೆದರು.

ಐದನೇ ಮತ್ತು ನಿರ್ಣಾಯಕ ಗೇಮ್‌ನಲ್ಲಿ ಜಯಿಸಿದ ಅನರ್ಘ್ಯಾ ಪಂದ್ಯವನ್ನೂ ತಮ್ಮದಾಗಿಸಿಕೊಂಡು ಸಂತಸದಲ್ಲಿ ಮಿಂದೆದ್ದರು.

ನಾಲ್ಕರ ಘಟ್ಟದಲ್ಲಿ ಸ್ವಿಟ್ಜರ್ಲೆಂಡ್‌ನ ಬ್ಯಾಸನ್ ನೊಮಿನ್ ಅವರನ್ನು ಅನರ್ಘ್ಯಾ 11-4,11-7,12-10 ಮಣಿಸಿದ್ದರು.

ಇದೇ ಟೂರ್ನಿಯಲ್ಲಿ ಸ್ಪರ್ಧಿಸಿದ್ದ ಕರ್ನಾಟಕದ ಕರುಣಾ ಗಜೇಂದ್ರನ್ ಕ್ವಾರ್ಟರ್‌ಫೈನಲ್‌ನಲ್ಲಿ ಅನರ್ಘ್ಯಾ ವಿರುದ್ಧವೇ ಸೋತಿದ್ದರು.


ಪ್ರಶಸ್ತಿಯೊಂದಿಗೆ ಸಂಭ್ರಮಿಸಿದ ಅನರ್ಘ್ಯಾ ಮಂಜುನಾಥ್

ಅಶ್ವಿನ್ – ಇಯಾನ್ ಮಾರ್ಗನ್ ಜಟಾಪಟಿ

ದುಬೈ: ಮಂಗಳವಾರ ನಡೆದ ಪಂದ್ಯದಲ್ಲಿ ಡೆಲ್ಲಿ ಕ್ಯಾಪಿಟಲ್ಸ್ ತಂಡದ ಆಟಗಾರ ಆರ್. ಅಶ್ವಿನ್ ಮತ್ತು ಕೋಲ್ಕತ್ತ ನೈಟ್ ರೈಡರ್ಸ್ ನಾಯಕ ಇಯಾನ್ ಮಾರ್ಗನ್ ನಡುವೆ ಮಾತಿನ ಚಕಮಕಿ ನಡೆಯಿತು.

ಅಶ್ವಿನ್ ಔಟಾಗಿ ಪೆವಿಲಿಯನ್‌ಗೆ ಹೋಗುವ ಮುನ್ನ ಈ ಘಟನೆ ನಡೆದಿತ್ತು. ನಂತರದ ಇನಿಂಗ್ಸ್‌ನಲ್ಲಿ ಏಯಾನ್ ಮಾರ್ಗನ್ ವಿಕೆಟ್ ಪತನವಾದಾಗ, ಅಶ್ವಿನ್ ಕೂಡ ಮರಳಿ ಕಟಕಿಯಾಡಿದ್ದರು.

ಈ ನಡವಳಿಕೆಯು ಕ್ರೀಡಾಸ್ಫೂರ್ತಿಗೆ ವಿರುದ್ಧವಾದುದು ಎಂದು ಆಸ್ಟ್ರೇಲಿಯಾ ಮಾಧ್ಯಮಗಳು ಟೀಕಿಸಿವೆ. ಮಾಜಿ ಕ್ರಿಕೆಟಿಗ ಶೇನ್ ವಾರ್ನ್ ಮತ್ತು ಏಯಾನ್ ಮಾರ್ಗನ್ ಕೂಡ ಅಶ್ವಿನ್ ಅವರನ್ನು ಟೀಕಿಸಿ ಟ್ವೀಟ್ ಮಾಡಿದ್ದಾರೆ.

ಇದಕ್ಕೆ ತಿರುಗೇಟು ನೀಡಿರುವ ಭಾರತದ ಮಾಜಿ ಕ್ರಿಕೆಟಿಗ ವೀರೇಂದ್ರ ಸೆಹ್ವಾಗ್, '2019ರ ಏಕದಿನ ವಿಶ್ವಕಪ್ ಫೈನಲ್‌ನಲ್ಲಿ ಚೆಂಡು ಬ್ಯಾಟ್ಸ್‌ಮನ್ ಬೆನ್ ಸ್ಟೋಕ್ಸ್‌ಗೆ ಬಡಿದು ಹೋಗಿತ್ತು. ಆಗ ಲಾರ್ಡ್ಸ್ ಹೊರಗೆ ಮಾರ್ಗನ್ ಧರಣಿ ಕುಳಿತು, ನ್ಯೂಜಿಲೆಂಡ್‌ಗೆ ವಿಶ್ವಕಪ್ ಕೊಡಬೇಕು ಎಂದು ಒತ್ತಾಯಿಸಿದ್ದರಲ್ಲವೇ?' ಎಂದು ವ್ಯಂಗ್ಯವಾಡಿದ್ದಾರೆ.

ಪ್ಲೇ ಆಫ್‌ನತ್ತ ಚೆನ್ನೈ ಚಿತ್ತ

ಶಾರ್ಜಾ (ಪಿಟಿಐ): ಅಂಕಪಟ್ಟಿಯ ಅಗ್ರಸ್ಥಾನದಲ್ಲಿರುವ ಚೆನ್ನೈ ಸೂಪರ್ ಕಿಂಗ್ಸ್ ಮತ್ತು ಕೊನೆಯ ಸ್ಥಾನದಲ್ಲಿರುವ ಸನ್‌ರೈಸರ್ಸ್ ಹೈದರಾಬಾದ್ ಗುರುವಾರ ನಡೆಯಲಿರುವ ಪಂದ್ಯದಲ್ಲಿ ಮುಖಾಮುಖಿಯಾಗಲಿವೆ.

ಈಗಾಗಲೇ 16 ಅಂಕಗಳನ್ನು ಗಳಿಸಿರುವ ಮಹೇಂದ್ರಸಿಂಗ್ ಧೋನಿ ನಾಯಕತ್ವದ ಚೆನ್ನೈ ತಂಡವು ಈ ಪಂದ್ಯದಲ್ಲಿ ಗೆದ್ದರೆ ಪ್ಲೇ ಆಫ್ ಪ್ರವೇಶಿಸಲಿದೆ. ಆದರೆ, ಕೇವಲ ನಾಲ್ಕು ಅಂಕಗಳಿಸಿರುವ ಸನ್‌ರೈಸರ್ಸ್ ತಂಡ ಈಗಾಗಲೇ ಈ ಹಾದಿಯಿಂದ ಹೊರಬಿದ್ದಿದೆ. ಎರಡು ದಿನಗಳ ಹಿಂದೆ ರಾಜಸ್ಥಾನ್ ರಾಯಲ್ಸ್ ಎದುರು ಗೆದ್ದಿರುವ ಹುಮ್ಮಸ್ಸಿನಲ್ಲಿರುವ ಸನ್‌ರೈಸರ್ಸ್ ಬಲಿಷ್ಠ ಚೆನ್ನೈಗೆ ಪೈಪೋಟಿಯೊಡ್ಡಲು ಸಿದ್ಧವಾಗಿದೆ. 14ನೇ ಆವೃತ್ತಿಯ ಎರಡನೇ ಹಂತದಲ್ಲಿ ಧೋನಿ ಬಳಗವು ಇನ್ನೂ ಒಂದು ಪಂದ್ಯವನ್ನೂ ಸೋತಿಲ್ಲ. ಅದರ ಓಟಕ್ಕೆ ತಡೆಯೊಡ್ಡುವ ಛಲ ಕೇನ್ ವಿಲಿಯಮ್ಸನ್ ಅವರದ್ದು.

ಹೈದರಾಬಾದ್ ತಂಡದಲ್ಲಿ ಸ್ಥಿರವಾದ ಲಯದಲ್ಲಿರುವವರು ಕೇನ್ ವಿಲಿಯಮ್ಸನ್ ಒಬ್ಬರೇ. ಉಳಿದ ಬ್ಯಾಟ್ಸ್‌ಮನ್‌ಗಳಿಂದ ನಿರೀಕ್ಷಿತ ಸಾಮರ್ಥ್ಯ ಮೂಡಿಬರುತ್ತಿಲ್ಲ. ಬೌಲಿಂಗ್ ವಿಭಾಗದಿಂದಲೂ ಸಂಘಟಿತ ಪ್ರಯತ್ನ ಒಡಮೂಡುತ್ತಿಲ್ಲ. ಹೋದ ಪಂದ್ಯದಲ್ಲಿ ಡೇವಿಡ್ ವಾರ್ನರ್ ಸ್ಥಾನ ಪಡೆದಿರಲಿಲ್ಲ. ಈ ಪಂದ್ಯಕ್ಕೂ ಅವರನ್ನೂ ಪರಿಗಣಿಸುವ ಸಾಧ್ಯತೆ ಕಡಿಮೆ.

ಆದರೆ, ಚೆನ್ನೈ ತಂಡದಲ್ಲಿ ಸೋಲುವ ಹಂತದಲ್ಲಿಯೂ ಪುಟಿದೇಳುವ ಛಲವಿರುವ ಆಟಗಾರರಿದ್ದಾರೆ. ಆರಂಭಿಕ ಬ್ಯಾಟ್ಸ್‌ಮನ್ ಋತುರಾಜ್ ಗಾಯಕವಾಡ್, ಅನುಭವಿ ಅಂಬಟಿ ರಾಯುಡು, ಫಫ್ ಡುಪ್ಲೆಸಿ, ದೀಪಕ್ ಚಾಹರ್ ಮತ್ತು ರವೀಂದ್ರ ಜಡೇಜ ಅವರ ಆಟದಿಂದಾಗಿ ತಂಡವು ಅಗ್ರಸ್ಥಾನಕ್ಕೇರಿದೆ. ಧೋನಿ ಬ್ಯಾಟಿಂಗ್‌ನಲ್ಲಿ ಮಿಂಚುತ್ತಿಲ್ಲ. ಆದರೆ ತಮ್ಮ ನಾಯಕತ್ವದ ತಂತ್ರಗಳಿಂದ ಎದುರಾಳಿಗಳ ನಿದ್ದೆಗೆಡಿಸಿದ್ದಾರೆ. ಮೊದಲ ಸುತ್ತಿನ ಪಂದ್ಯದಲ್ಲಿ ಚೆನ್ನೈ ತಂಡವು ಸನ್‌ರೈಸರ್ಸ್ ವಿರುದ್ಧ ಜಯಗಳಿಸಿತ್ತು. ಅದೇ ಲಯವನ್ನು ಇಲ್ಲಿಯೂ ಮುಂದುವರಿಸುವ ಛಲದಲ್ಲಿದೆ.

ಪಂದ್ಯ ಆರಂಭ: ರಾತ್ರಿ 7.30
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್


ರವೀಂದ್ರ ಜಡೇಜ ಮತ್ತು ಮಹೇಂದ್ರಸಿಂಗ್ ಧೋನಿ

ಏಕಕಾಲಕ್ಕೆ ಎರಡು ಪಂದ್ಯ

ದುಬೈ (ಪಿಟಿಐ): ಐಪಿಎಲ್ ಟೂರ್ನಿಯ ಗುಂಪುಹಂತದ ಕೊನೆಯ ಎರಡು ಪಂದ್ಯಗಳು ಒಂದೇ ಸಮಯಕ್ಕೆ ನಡೆಯಲಿವೆ ಎಂದು ಆಡಳಿತ ಸಮಿತಿ ತಿಳಿಸಿದೆ.

ವಾರಾಂತ್ಯದ ದಿನಗಳಲ್ಲಿ ದಿನಕ್ಕೆ ಎರಡು ಪಂದ್ಯ (ಡಬಲ್ ಹೆಡರ್) ಆಯೋಜಿಸಲಾಗುತ್ತಿದೆ. ಮಧ್ಯಾಹ್ನ 3.30ರಿಂದ ಒಂದು ಮತ್ತು ರಾತ್ರಿ 7.30ರಿಂದ ಮತ್ತೊಂದು ಪಂದ್ಯವನ್ನು ಆಯೋಜಿಸುವುದು ಇಲ್ಲಿಯವರೆಗೆ ನಡೆದುಕೊಂಡು ಬಂದಿರುವ ವಾಡಿಕೆ.

ಆದರೆ ಇದೇ ಮೊದಲ ಬಾರಿಗೆ ಎರಡೂ ಪಂದ್ಯಗಳನ್ನು ಒಂದೇ ಸಮಯಕ್ಕೆ ನಡೆಸಲು ನಿರ್ಧರಿಸಲಾಗಿದೆ

'ಅ. 8ರಂದು ಲೀಗ್ ಹಂತದ ಕೊನೆಯ ಎರಡು ಪಂದ್ಯಗಳಿವೆ. ಆ ಎರಡೂ ಪಂದ್ಯಗಳನ್ನು ಭಾರತೀಯ ಕಾಲಮಾನದ ಪ್ರಕಾರ ರಾತ್ರಿ 7.30ಕ್ಕೆ ಆರಂಭಿಸಲಾಗುವುದು' ಎಂದು ಬಿಸಿಸಿಐ ಕಾರ್ಯದರ್ಶಿ ಜಯ್ ಶಾ ತಿಳಿಸಿದ್ದಾರೆ.

ರಾಜ್ಯ ಸಂಸ್ಥೆಗಳಿಗೆ ಬಿಸಿಸಿಐ ಆಹ್ವಾನ

ಮುಂಬೈ (ಪಿಟಿಐ): ಯುಎಇಯಲ್ಲಿ ನಡೆಯುತ್ತಿರುವ ಇಂಡಿಯನ್ ಪ್ರೀಮಿಯರ್ ಲೀಗ್ ಟೂರ್ನಿಯ ಎರಡನೇ ಕ್ವಾಲಿಫೈಯರ್ ಮತ್ತು ಫೈನಲ್ ಪಂದ್ಯಗಳನ್ನು ವೀಕ್ಷಿಸಲು ರಾಜ್ಯ ಕ್ರಿಕೆಟ್ ಸಂಸ್ಥೆಗಳ ಪದಾಧಿಕಾರಿಗಳಿಗೆ ಬಿಸಿಸಿಐ ಆಹ್ವಾನ ನೀಡಿದೆ.

ಈ ಕುರಿತು ಬಿಸಿಸಿಐ ಕಾರ್ಯದರ್ಶಿ ಜಯ್ ಶಾ ಅವರು ರಾಜ್ಯ ಸಂಸ್ಥೆಗಳ ಅಧ್ಯಕ್ಷರು ಮತ್ತು ಕಾರ್ಯದರ್ಶಿಗಳಿಗೆ ಪತ್ರ ಬರೆದಿದ್ದಾರೆ.

ಅ.13ರಂದು ಕ್ವಾಲಿಫೈಯರ್ ಮತ್ತು 15ರಂದು ಫೈನಲ್ ನಡೆಯಲಿದೆ.

ರಾಜ್ಯ 'ವುಶು' ಸ್ಪರ್ಧೆ ನಾಳೆಯಿಂದ

ಮೂಡುಬಿದಿರೆ: ರಾಜ್ಯ 'ವುಶು' ಸ್ಪರ್ಧೆ ಅಕ್ಟೋಬರ್ 1ರಿಂದ 4ರವರೆಗೆ ಇಲ್ಲಿನ ಆಳ್ವಾಸ್ ನುಡಿಸಿರಿ ಸಭಾಂಗಣದಲ್ಲಿ ನಡೆಯಲಿದೆ.

ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದ ದಕ್ಷಿಣ ಕನ್ನಡ ವುಶು ಸಂಸ್ಥೆ ಗೌರವ ಅಧ್ಯಕ್ಷ ಎಂ.ಮೋಹನ ಆಳ್ವ 'ವಿವಿಧ ಜಿಲ್ಲೆಗಳಿಂದ 600 ಕ್ರೀಡಾಪಟುಗಳು 69 ವಿಭಾಗಗಳಲ್ಲಿ ಸ್ಪರ್ಧಿಸಲಿದ್ದಾರೆ. ಜಿಲ್ಲೆಯಲ್ಲಿ ಈಗಾಗಲೇ ಎರಡು ಬಾರಿ ವುಶು ಕೂಟ ನಡೆದಿದೆ. ಕಳೆದ ಬಾರಿ ಕೋವಿಡ್ ಪರಿಸ್ಥಿತಿಯಲ್ಲೂ ಜಿಲ್ಲಾ ತಂಡ ರಾಜ್ಯ ಮತ್ತು ರಾಷ್ಟ್ರಮಟ್ಟದಲ್ಲಿ ಸಮಗ್ರ ತಂಡ ಪ್ರಶಸ್ತಿ ಗೆದ್ದುಕೊಂಡಿದೆ' ಎಂದು ತಿಳಿಸಿದರು.

ಶಾಸಕ ಉಮಾನಾಥ ಕೋಟ್ಯಾನ್ ಕ್ರೀಡಾಕೂಟ ಉದ್ಘಾಟಿಸುವರು. ರಾಜ್ಯ ವುಶು ಸಂಸ್ಥೆ ಅಧ್ಯಕ್ಷ ವಿ.ಸಿ.ಚರಂತಿಮಠ ಮತ್ತು ಮಂಗಳೂರು ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಸಿ ಸುಬ್ರಹ್ಮಣ್ಯ ಯಡಪಡಿತ್ತಾಯ ಅವರು ಉದ್ಘಾಟನಾ ಸಮಾರಂಭದಲ್ಲಿ ಭಾಗವಹಿಸುವರು ಎಂದು ಮೋಹನ ಆಳ್ವ ಅವರು ವಿವರಿಸಿದರು.

ಉದಕಮಂಡಲ ರೇಸ್

ಎಂಜೆಲಿಕಾಜಿ ಗೆಲ್ಲುವ ನಿರೀಕ್ಷೆ

ಉದಕಮಂಡಲಮ್ ಕಪ್ ಗುರುವಾರ ಚೆನ್ನೈನಲ್ಲಿ ಏರ್ಪಡಿಸಿರುವ ಉದಕಮಂಡಲ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಎಂಜೆಲಿಕಾಜಿ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 2.00ಕ್ಕೆ ಪ್ರಾರಂಭವಾಗಲಿರುವ ದಿನದ ಎಂಟು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿದೆ:

1ನೇ ರೇಸ್: ಅಮೇಜಿಂಗ್ ಕಿಟ್ಟನ್ 2, ಕಿಂಗ್ಸ್ ಪ್ರೈಡ್ 5, ಡ್ರಿಫ್ಟ್‌ವುಡ್ ಪೆಸಿಫಿಕ್ 10
2ನೇ ರೇಸ್: ಹಲ್ಲುಸಿನೇಟ್ 5, ಮಿಸ್ಟರ್ ಮೂನ್‌ಲೈಟ್ 1, ಸ್ವಿಸ್ ಅಗಟ್ಟ 12
3ನೇ ರೇಸ್: ಮ್ಯಾನ್‌ಜೋನಿ 8, ರಾಯಲ್ ಬ್ಲೂಸ್ 7, ಆಯೂರ್ ಶಕ್ತಿ 3
4ನೇ ರೇಸ್: ಕಾರ್ಟೆಲ್ 1, ಪ್ರೊಪ್ರೊಸ್ಡ್ 2, ಸ್ಪೆಶಲ್ ಡೆಲಿವರಿ 7
5ನೇ ರೇಸ್: ಲಕ್ಷನಮ್ 7, ಅಂಬರ್ ಲೈಟ್ನಿಂಗ್ 4, ಅಮರೋನೆ 3
6ನೇ ರೇಸ್: ಎಂಜೆಲಿಕಾಜಿ 1, ನೈಟ್ ಹಂಟ್ 3, ಅಪ್ಸರ್ ಸ್ಟಾರ್ 7
7ನೇ ರೇಸ್: ಮೆಜ್ಕಾಲ್ 5, ಲೇಡಿ ಲಾಯಲ್ 2, ನೈಟ್ ಎನ್ವೀಡ್ 3
8ನೇ ರೇಸ್: ಫಿಯಾಟ್ ಜಸ್ಟೀಟಿಯಾ 4, ಅಥ್‌ಮೆಟಿಕ 3, ಶೀಲ್ಡ್ ಮೇಡನ್ 1

ಉತ್ತಮ ಬೆಟ್: ಲಕ್ಷನಮ್

ಜಾಕ್‌ಪಾಟ್	ಮಿನಿ ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್	3ನೇ ಟ್ರಿಬಲ್
4,5,6,7,8	5,6,7,8	1,2,3	4,5,6	6,7,8

ರೋಹಿತ್, ಕೃಣಾಲ್ ಕ್ರೀಡಾಸ್ಫೂರ್ತಿಗೆ ಮೆಚ್ಚುಗೆ

ಅಬುಧಾಬಿ: ಪಂಜಾಬ್ ಕಿಂಗ್ಸ್ ತಂಡದ ಎದುರು ಮಂಗಳವಾರ ನಡೆದ ಪಂದ್ಯದಲ್ಲಿ ಕ್ರೀಡಾಸ್ಫೂರ್ತಿ ಮೆರೆದ ಮುಂಬೈ ಇಂಡಿಯನ್ಸ್ ತಂಡದ ನಾಯಕ ರೋಹಿತ್ ಶರ್ಮಾ ಮತ್ತು ಆಲ್‌ರೌಂಡರ್ ಕೃಣಾಲ್ ಪಾಂಡ್ಯ ಅವರ ನಡೆಗೆ ಸಾಮಾಜಿಕ ಜಾಲತಾಣಗಳಲ್ಲಿ ಅಪಾರ ಮೆಚ್ಚುಗೆ ವ್ಯಕ್ತವಾಗಿದೆ.

ಅವರಿಬ್ಬರು ಪಂಜಾಬ್ ತಂಡದ ನಾಯಕ ಕೆ.ಎಲ್. ರಾಹುಲ್ ಅವರನ್ನು ರನೌಟ್ ಮಾಡಿರುವ ಮನವಿಯನ್ನು ಮರಳಿ ಪಡೆದಿದ್ದರು. ಕೃಣಾಲ್ ಬೌಲಿಂಗ್ ಮಾಡಿದ ಆರನೇ ಓವರ್‌ನ ಕೊನೆಯ ಎಸೆತವನ್ನು ಬ್ಯಾಟ್ಸ್‌ಮನ್ ಕ್ರಿಸ್ ಗೇಲ್ ನೇರವಾಗಿ ಹೊಡೆದರು. ನಾನ್‌ಸ್ಟ್ರೈಕರ್‌ನಲ್ಲಿದ್ದ ಕೆ.ಎಲ್. ರಾಹುಲ್ ತಮಗೆ ಚೆಂಡು ಬಡಿಯುವುದನ್ನು ತಪ್ಪಿಸಿಕೊಳ್ಳಲು ಪ್ರಯತ್ನಿಸಿದರು. ಆಗ ಕ್ರೀಸ್‌ನಿಂದ ತುಸು ಹೊರಗೆ ಸರಿದರು. ಆದರೆ ರಾಹುಲ್‌ಗೆ ಬಡಿದ ಚೆಂಡು ಪಕ್ಕದಲ್ಲೇ ಇದ್ದ ಕೃಣಾಲ್ ಕೈಸೇರಿತ್ತು. ಅವರು ವಿಕೆಟ್‌ಗೆ ಚೆಂಡು ಒಗೆದುರನೌಟ್‌ಗೆ ಮನವಿ ಸಲ್ಲಿಸಿದರು. ಫೀಲ್ಡ್ ಅಂಪೈರ್ ಮನವಿ ಸ್ವೀಕರಿಸಿ, 3ನೇ ಅಂಪೈರ್‌ಗೆ ಸಲ್ಲಿಸುವಷ್ಟರೊಳಗೆ ಕೃಣಾಲ್ ಮತ್ತು ರೋಹಿತ್ ಮಾಡನಾಡಿಕೊಂಡರು. ಮನವಿಯನ್ನು ಹಿಂಪಡೆದರು.

ಇದರಿಂದಾಗಿ ರಾಹುಲ್ ಬ್ಯಾಟಿಂಗ್ ಮುಂದುರಿಸಲು ಸಾಧ್ಯವಾಯಿತು. ರಾಹುಲ್ ಬಳಿ ತೆರಳಿದ ಕೃಣಾಲ್, ಗಾಯದ ಬಗ್ಗೆ ವಿಚಾರಿಸಿದರು.



ಸಂಕ್ಷಿಪ್ತ ಸುದ್ದಿ

ಆ್ಯಂಡಿ ಮರೆ ಮುನ್ನಡೆ


ಆ್ಯಂಡಿ ಮರೆ

ಸ್ಯಾನ್ ಡಿಯಾಗೊ (ಎಪಿ): ಬ್ರಿಟನ್‌ನ ಆ್ಯಂಡಿ ಮರೆ ಸ್ಯಾನ್ ಡಿಯಾಗೊ ಓಪನ್ ಟೆನಿಸ್ ಟೂರ್ನಿಯ ಪ್ರಥಮ ಸುತ್ತಿನಲ್ಲಿ ಜಯಿಸಿದರು. 34 ವರ್ಷದ ಆ್ಯಂಡಿ 6–3, 6–2ರಿಂದ ಅಮೆರಿಕದ ಡೆನಿಸ್ ಕುಡ್ಲಾ ವಿರುದ್ಧ ಜಯಿಸಿದರು. ಇನ್ನೊಂದು ಪಂದ್ಯದಲ್ಲಿ ಅಮೆರಿಕದ ಸೆಬಾಸ್ಟಿಯನ್ ಕೊರ್ಡಾ 6–3, 5–7, 6–1ರಿಂದ ಟಾಮಿ ಪಾಲ್ ವಿರುದ್ಧ ಜಯಿಸಿದರು.

ಕುಲದೀಪ್‌ಗೆ ಶಸ್ತ್ರಚಿಕಿತ್ಸೆ

ಮುಂಬೈ (ಪಿಟಿಐ): ಭಾರತ ಕ್ರಿಕೆಟ್ ತಂಡದ ಚೈನಾಮನ್ ಬೌಲರ್ ಕುಲದೀಪ್ ಯಾದವ್ ಬುಧವಾರ ಮೊಣಕಾಲಿನ ಶಸ್ತ್ರಚಿಕಿತ್ಸೆ ಮಾಡಿಸಿಕೊಂಡರು.

ಯುಎಇಯಲ್ಲಿ ನಡೆಯುತ್ತಿರುವ ಐಪಿಎಲ್‌ನಲ್ಲಿ ಗಾಯಗೊಂಡಿದ್ದ ಅವರು ಈಚೆಗೆ ಭಾರತಕ್ಕೆ ಮರಳಿದ್ದರು.

'ವೈದ್ಯಕೀಯ ತಂಡವು ಶಸ್ತ್ರಚಿಕಿತ್ಸೆಯನ್ನು ಯಶಸ್ವಿಯಾಗಿ ಮಾಡಿದೆ. ಎಲ್ಲರ ಬೆಂಬಲಕ್ಕೆ ಧನ್ಯವಾದಗಳು. ಚೇತರಿಸಿಕೊಂಡ ನಂತರ ಮತ್ತೆ ನನ್ನ ಪ್ರೀತಿಯ ಕ್ರಿಕೆಟ್ ಅಂಗಳಕ್ಕೆ ಶೀಘ್ರದಲ್ಲಿ ಮರಳುತ್ತೇನೆ' ಎಂದು 27 ವರ್ಷದ ಕುಲದೀಪ್ ಟ್ವೀಟ್ ಮಾಡಿದ್ದಾರೆ.

ನನಗೆ ಹೃದಯಾಘಾತ ಆಗಿಲ್ಲ: ಹಕ್

ಕರಾಚಿ (ಪಿಟಿಐ): 'ನನಗೆ ಹೃದಯಾಘಾತವಾಗಿಲ್ಲ. ಹೊಟ್ಟೆನೋವಿಗಾಗಿ ಆರೋಗ್ಯ ತಪಾಸಣೆ ಮಾಡಿಸಿಕೊಂಡಾಗ ಹೃದಯದ ತೊಂದರೆ ಇರುವುದು ತಿಳಿದುಬಂದಿತ್ತು. ಆದ್ದರಿಂದ ಆ್ಯಂಜಿಯೋಗ್ರಫಿ ಮಾಡಲಾಗಿದೆ. ನಾನು ಚೆನ್ನಾಗಿದ್ದೇನೆ' ಎಂದು ಪಾಕಿಸ್ತಾನ ಕ್ರಿಕೆಟ್ ತಂಡದ ಮಾಜಿ ನಾಯಕ ಇಂಜಮಾಮ್ ಉಲ್ ಹಕ್ ಹೇಳಿದ್ದಾರೆ.

51 ವರ್ಷದ ಹಕ್ ಬುಧವಾರ ತಮ್ಮ ಯೂಟ್ಯೂಬ್ ವಾಹಿನಿಯಲ್ಲಿ ಪೋಸ್ಟ್ ಮಾಡಿರುವ ವಿಡಿಯೊದಲ್ಲಿ, 'ಅಭಿಮಾನಿಗಳ ಪ್ರೀತಿ, ಕಾಳಜಿಯ ಸಂದೇಶಗಳನ್ನು ನೋಡಿ ಭಾವುಕನಾಗಿದ್ದೇನೆ. ಅವರಿಗೆಲ್ಲ ನಾನು ಋಣಿ. ನನ್ನ ಆರೋಗ್ಯ ಚೆನ್ನಾಗಿದೆ' ಎಂದಿದ್ದಾರೆ.

ಉಸಿರಾಟದ ತೊಂದರೆ ಮತ್ತು ಎದೆನೋವಿನಿಂದಾಗಿ ಇಂಜಮಾಮ್ ಅವರು ಸೋಮವಾರ ರಾತ್ರಿ ಖಾಸಗಿ ಆಸ್ಪತ್ರೆಗೆ ದಾಖಲಾಗಿದ್ದರೆಂದು ವರದಿಯಾಗಿತ್ತು.